ವಿಶ್ವವಾಣಿ
ವಿಶ್ವಾಸವೇ ವಿಶ್ವ

ಜಿರಲೆ ಪಾರ್ಟಿ ತರಲೆ

ಆಪ್ ಕಾರ್ಯಕರ್ತ ಅಭಿಜಿತ್ ದೀಪ್ಕೆಯ 'ಕಾಕ್ರೋಚ್ ಜನತಾ ಪಾರ್ಟಿ'ಯ ಇನ್‌ಸ್ಟಾಗ್ರಾಂ ಖಾತೆ ಫಾಲೋವರ್ಸ್ ಸಂಖ್ಯೆ ಎರಡು ಕೋಟಿ ದಾಟಿದ್ದು ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ. ಸಾಮಾಜಿಕ ಜಾಲತಾಣದಲ್ಲಿ ಸಿಜೆಪಿಯ ಸಾವಿರಾರು ಮೀಮ್ಸ್‌ಗಳು ಹರಿದಾಡುತ್ತಿವೆ. ಈ ಮಧ್ಯೆ, ಕೇಂದ್ರ ಸರಕಾರದ ಸೂಚನೆ ಮೇರೆಗೆ 'ಎಕ್ಸ್' ಖಾತೆಯನ್ನು ನಿರ್ಬಂಧಿಸಲಾಗಿದೆ.

COCKROACH JANTA PARTY

ದಾರಿದೀಪೋಕ್ತಿ

ನಿಮ್ಮ ಬಗ್ಗೆ ಆಸಕ್ತಿಯಿಲ್ಲದ ಯಾರನ್ನೂ ಯಾವ ಕೆಲಸಕ್ಕೂ ಎಂದಿಗೂ ಒತ್ತಾಯಿಸಬಾರದು. ಅಸೂಯೆ ಪಟ್ಟ ಜನರನ್ನು ನಿಮ್ಮ ಜೀವನದಿಂದ ತೆಗೆದುಹಾಕಬೇಕು. ನಿಮ್ಮ ಜೀವನದ ಶಕ್ತಿಯನ್ನು ಇತರರಿಗೆ ನೀಡಬಾರದು. ಇದು ಸರಳ ಜೀವನ ಸೂತ್ರ.

ವಕ್ರತುಂಡೋಕ್ತಿ

ನಿಮ್ಮ ಹತ್ತಿರ ಯಾರೂ ಸುಳಿಯಬಾರದು ಅಂದ್ರೆ, ನೀವು ರಸ್ತೆಗುಂಡಿ ಆಗಬೇಕು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ವಸತಿ ಇಲಾಖೆ

ಕರ್ನಾಟಕ ಗೃಹ ಮಂಡಳಿ
ಸಮುದಾಯ ನಿರ್ಮಾಣದತ್ತ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರ್ನಾಟಕ ಗೃಹ ಮಂಡಳಿ

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು
ಸೂರ್ಯನಗರ 4ನೇ ಹಂತ, ಕೆ.ಹೆಚ್.ಬಿ. ಸೂರ್ಯ ಕ್ರೀಡಾ ಗ್ರಾಮದಲ್ಲಿ

ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆ ಸಮಾರಂಭ



ಸನ್ಮಾನ್ಯ ಮುಖ್ಯಮಂತ್ರಿಗಳ 'ನಮ್ಮ ಮನೆ' ಯೋಜನೆಗೆ ಚಾಲನೆ

'ಸೂರ್ಯ ಶೈನ್' ಮತ್ತು 'ಸೂರ್ಯ ಡಿವೈನ್' ವಸತಿ ಸಮುಚ್ಚಯ ಕಾಮಗಾರಿಗಳಿಗೆ ಶಂಕುಸ್ಥಾಪನೆ

ವಸತಿ ಯೋಜನೆಗೆ ಭೂಮಿ ನೀಡಿದ ಭೂಮಾಲೀಕರುಗಳಿಗೆ ಸಾಂಕೇತಿಕ ನಿವೇಶನ ಹಂಚಿಕೆ

ಮುಖ್ಯಮಂತ್ರಿಯವರ ಅಮೃತ ಹಸ್ತದಿಂದ ಸಾರ್ವಜನಿಕ ಅರ್ಜಿದಾರರಿಗೆ ನಿವೇಶನ ಹಂಚಿಕೆ

ದಿನಾಂಕ 23ನೇ ಮೇ, 2026 ಶನಿವಾರ
ಸಮಯ ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಇಂಡ್ಲವಾಡಿ ಗ್ರಾಮ, 4ನೇ ಹಂತ, ಕೆ.ಹೆಚ್.ಬಿ. ಸೂರ್ಯ ಕ್ರೀಡಾ ಗ್ರಾಮ, ಬೆಂಗಳೂರು

ಸಮಾರಂಭದ ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಜಲಸಂಪನ್ಮೂಲ ಇಲಾಖೆ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ** ಅವರನ್ನು ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಾದ **ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್** ಅವರು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾದ **ಶ್ರೀ ಕೆ.ಎಂ. ಶಿವಲಿಂಗೇಗೌಡ** ಹಾಗೂ ಆನೇಕಲ್ ವಿಧಾನಸಭಾ ಕ್ಷೇತ್ರದ ಶಾಸಕರಾದ **ಶ್ರೀ ಬಿ. ಶಿವಣ್ಣ** ಅವರೊಂದಿಗೆ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿರುವ ಸಂದರ್ಭ.

ಸಾರ್ವಜನಿಕ ಹಂಚಿಕೆ ಪತ್ರ ವಿತರಣೆ
ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್
ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ರೈತರಿಗೆ ಹಂಚಿಕೆ ಪತ್ರ ವಿತರಣ
ಶ್ರೀ ಕೆ.ಎಂ. ಶಿವಲಿಂಗೇಗೌಡ
ಮಾನ್ಯ ಅಧ್ಯಕ್ಷರು
ಕರ್ನಾಟಕ ಗೃಹ ಮಂಡಳಿ

ಅಧ್ಯಕ್ಷತೆ
ಶ್ರೀ ಬಿ. ಶಿವಣ್ಣ
ಮಾನ್ಯ ಶಾಸಕರು
ಆನೇಕಲ್ ವಿಧಾನಸಭಾ ಕ್ಷೇತ್ರ

ಗೌರವ ಅತಿಥಿ
ಡಾ|| ಸಿ.ಎನ್. ಮಂಜುನಾಥ್
ಮಾನ್ಯ ಸಂಸದರು
ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ

ಶ್ರೀ ಎಂ. ಕೃಷ್ಣಪ್ಪ
ಮಾನ್ಯ ಶಾಸಕರು
ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ

ಗೌರವ ಉಪಸ್ಥಿತಿ
ಶ್ರೀ ಡಿ.ಕೆ. ಸುರೇಶ್
ಮಾನ್ಯ ಅಧ್ಯಕ್ಷರು
ಬೆಂಗಳೂರು ಹಾಲು ಒಕ್ಕೂಟ

ರಾಜ್ಯದ ಎಲ್ಲಾ ಮಾನ್ಯ ಸಚಿವರು, ಸಂಸದರು, ವಿಧಾನಸಭಾ ಮತ್ತು ವಿಧಾನ ಪರಿಷತ್ತಿನ ಶಾಸಕರುಗಳು ಹಾಗೂ ಎಲ್ಲಾ ಆಯೋಗ, ನಿಗಮ ಮಂಡಳಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ಆತ್ಮೀಯ ಸ್ವಾಗತ

ಸರ್ವರಿಗೂ ಆದರದ ಸುಸ್ವಾಗತ

ಡಾ. ಶಾಲಿನಿ ರಜನೀಶ್, ಭಾ.ಆ.ಸೇ
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

ಶ್ರೀ ಕೆ.ಪಿ. ಮೋಹನ್ ರಾಜ್, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ

ಶ್ರೀ ಕೆ.ಎ. ದಯಾನಂದ, ಭಾ.ಆ.ಸೇ
ಆಯುಕ್ತರು, ಕರ್ನಾಟಕ ಗೃಹ ಮಂಡಳಿ

ಹಾಗೂ **ಸಮಸ್ತ ಕರ್ನಾಟಕ ಗೃಹ ಮಂಡಳಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ**

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಸಮಾಚಾರ ಸಣ್ಣದಲ್ಲ

ಮರಗಳ ಅವಶೇಷ ತೆರವಿಗೆ ಸೂಚನೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಪಾದಚಾರಿ ಮಾರ್ಗಗಳಲ್ಲಿ ಸಂಗ್ರಹವಾಗಿರುವ ಮರದ ಕೊಂಬೆ, ರೆಂಬೆ ಹಾಗೂ ಇತರೆ ಅವಶೇಷಗಳನ್ನು ತ್ವರಿತವಾಗಿ ತೆರವುಗೊಳಿಸಿ ಸಾರ್ವಜನಿಕರಿಗೆ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ನಗರ ಪಾಲಿಕೆಗಳಿಗೆ ಸೂಚನೆ ನೀಡಿದ್ದಾರೆ. ಈ ಕುರಿತು ಸುತ್ತೋಲೆ ಹೊರಡಿಸಿರುವ ಅವರು, ಇತ್ತೀಚಿನ ಭಾರೀ ಮಳೆಯಿಂದಾಗಿ ಜಿಬಿಎ ವ್ಯಾಪ್ತಿಯಲ್ಲಿ ಅನೇಕ ಮರಗಳು ಧರೆಗುರುಳಿದ್ದು, ಮರದ ಕೊಂಬೆಗಳು ಸಹ ಬಿದ್ದಿವೆ. ಟ್ರಿ ಕ್ಯಾನೋಪಿ ಮಾನೇಜ್‌ಮೆಂಟ್ ತಂಡಗಳು ಅವುಗಳನ್ನು ತೆರವುಗೊಳಿಸುತ್ತಿದ್ದರೂ, ಸಣ್ಣಪುಟ್ಟ ಕೊಂಬೆಗಳು ಹಾಗೂ ಎಲೆಗಳನ್ನು ಹಲವೆಡೆ ಪಾದಚಾರಿ ಮಾರ್ಗಗಳಲ್ಲೇ ಬಿಟ್ಟು ಹೋಗಿರುವುದು ಗಮನಕ್ಕೆ ಬಂದಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಎಲ್ಲಾ ನಗರ ಪಾಲಿಕೆಗಳು ತಮ್ಮ ವ್ಯಾಪ್ತಿಯಲ್ಲಿರುವ ಮರದ ಅವಶೇಷಗಳನ್ನು ಶ್ರೆಡಿಂಗ್ ಯಂತ್ರಗಳ ಮೂಲಕ ಪುಡಿ ಮಾಡಿ, ನಂತರ ಅದನ್ನು ಕಾಂಪೋಸ್ಟ್ ಘಟಕಗಳಿಗೆ ಸಾಗಿಸುವ ಮೂಲಕ ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು ಎಂದು ಸೂಚಿಸಲಾಗಿದೆ. ಗುರುವಾರ ಸುರಿದ ಮಳೆಯಿಂದಾಗಿ ಜಿಬಿಎ ವ್ಯಾಪ್ತಿಯಲ್ಲಿ ಒಟ್ಟು 131 ಮರಗಳು ಹಾಗೂ 192 ಮರದ ರೆಂಬೆ ಮತ್ತು ಕೊಂಬೆಗಳು ಧರೆಗುರುಳಿವೆ. ಈ ಸಂಬಂಧ ಮರ ತೆರವು ತಂಡಗಳು ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದು, ಶುಕ್ರವಾರ 10.30ರ ವೇಳೆಗೆ 63 ಮರಗಳು ಹಾಗೂ 95 ರೆಂಬೆಗಳನ್ನು ತೆರವುಗೊಳಿಸಲಾಗಿದೆ. ಉಳಿದ ಮರ ಮತ್ತು ಕೊಂಬೆಗಳ ತೆರವು ಕಾರ್ಯವೂ ವೇಗವಾಗಿ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ ಎಂದರು.

ಸಿಕ್ಕ ಅವಕಾಶಗಳನ್ನು ಬಳಸಿಕೊಳ್ಳಿ: ಕರಿಗಾರ್



ಬೆಂಗಳೂರು: ನಾವು ಕಾಲೇಜಿನಲ್ಲಿ ಓದುವಾಗ ಅವಕಾಶಗಳು ಕಡಿಮೆ ಇತ್ತು. ಆದರೆ ಇಂದಿನ ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣ ಮುಂದುವರಿಸಲು ಸಾಕಷ್ಟು ಅವಕಾಶಗಳಿವೆ ಅವುಗಳನ್ನು ಸದುಪಯೋಗ ಪಡೆದುಕೊಳ್ಳಬೇಕು. ಪೋಷಕರು ಮಕ್ಕಳು ಶಿಕ್ಷಣ ನೀಡಲು ಸಾಕಷ್ಟು ಉತ್ಸುಕರಾಗಿದ್ದಾರೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ (ಮೌಲ್ಯಮಾಪನ) ಡಾ. ಚಂದ್ರಶೇಖರ್ ಎಸ್. ಕರಿಗಾರ್ ತಿಳಿಸಿದರು. ಅರಿಹಂತ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜೆಂಟ್ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಅಂತಿಮ ಪದವಿ ವಿದ್ಯಾರ್ಥಿಗಳ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಡ ಮತ್ತು ಹಿಂದುಳಿದ ವಿದ್ಯಾರ್ಥಿಗಳಿಗೆ ಬೋಧನೆ ನೀಡುವ ಮೂಲಕ ಶಿಕ್ಷಣ ಸೇವೆಯ ಕಾರ್ಯ ಶ್ಲಾಘನೀಯ. ಪ್ರಸ್ತುತ ವರ್ಷದಲ್ಲಿ 50ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ ಎಂದರು. ಈ ವೇಳೆ ಸಂಸ್ಥೆಯ ಅಧ್ಯಕ್ಷ ಅಶೋಕ್ ಎಸ್. ನಗೋರಿ, ಸಹಾಯಕ ನಿರ್ದೇಶಕಿ ಡಾ.ಅಶ್ವಿನಿ, ಪ್ರಾಂಶುಪಾಲ ಡಾ.ಗುರುದತ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಡವರ ಮತಗಳ ಕಡಿತವೇ ಎಸ್‌ಐಆರ್

ಬೆಂಗಳೂರು: ಬಡವರ ಮತಗಳನ್ನು ತೆಗೆಯಲು ಎಸ್ ಐಆರ್ ಮೂಲಕ ಸಂಚು ಮಾಡಲಾಗಿದೆ. ನಾವುಗಳು ಬಹಳ ಎಚ್ಚರಿಕೆಯಿಂದ ಇರಬೇಕು ಎಂದು ನಮ್ಮ ಪಕ್ಷದ ಕಾರ್ಯಕರ್ತರಿಗೆ ಹೇಳಿದ್ದೇನೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಸಕರು, ಬಿಎಲ್‌ಎಗಳಿಗೆ ಎಸ್‌ಐಆರ್ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದೇವೆ. ಆದ ಕಾರಣಕ್ಕೆ ಸಭೆ ಕರೆಯಲಾಗುತ್ತಿದೆ. ಏಕೆಂದರೆ ಈಗಾಗಲೇ ದಿನಾಂಕ ಘೋಷಣೆಯಾಗಿದೆ. ಆದ ಕಾರಣಕ್ಕೆ ನಾವು ಜಾಗೃತಿಗೆ ಮುಂದಾಗಿದ್ದೇವೆ. ಪ್ರತಿಯೊಬ್ಬರೂ ಸಹ ಅರ್ಜಿ ಸಲ್ಲಿಸಬೇಕಿದೆ. ಇಲ್ಲದಿದ್ದರೆ ನಾಗರಿಕರು ತಮ್ಮ ಮತವನ್ನು ಕಳೆದುಕೊಳ್ಳುತ್ತಾರೆ. ಬೇರೆ ರಾಜ್ಯಗಳಲ್ಲಿ ಇದೇ ರೀತಿ ಆಗಿದ್ದನ್ನು ನೋಡಿದ್ದೇವೆ. ಮತದಾನದ ಹಕ್ಕು ಹೋದರೆ ಪಿಂಚಣಿ, ಗೃಹಲಕ್ಷ್ಮಿ ಯೋಜನೆ ಸೇರಿದಂತೆ ಅನೇಕ ಅನುಕೂಲಗಳಿಂದ ನಾಗರಿಕರು ವಂಚಿತರಾಗುತ್ತಾರೆ ಎಂದು ತಿಳಿಸಿದರು.

ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿತ ಎಂಜಿನಿಯರ್ ಅಮಾನತು ರದ್ದು

ಬೆಂಗಳೂರು: ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಕಾಂಪೌಂಡ್ ಕುಸಿದು ಏಳು ಜನರು ಸಾವನ್ನಪ್ಪಿದ ಪ್ರಕರಣದ ನಂತರ ಕರ್ತವ್ಯಲೋಪ ಆರೋಪದ ಮೇಲೆ ಕಾರ್ಯನಿರ್ವಾಹಕ ಎಂಜಿನಿಯರ್ ಎಂ.ಬಿ.ನಾಗರಾಜ್ ಅವರನ್ನು ಅಮಾನತುಗೊಳಿಸಿ ರಾಜ್ಯ ಸರಕಾರ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೇ 1ರಂದು ಹೊರಡಿಸಿದ ಅಮಾನತು ಆದೇಶ ಪ್ರಶ್ನಿಸಿ ಎಂ.ಬಿ.ನಾಗರಾಜ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರಜ್ ಗೋವಿಂದರಾಜ್ ಮತ್ತು ಕೆ.ಎಸ್.ಮನ್ಮಥ ರಾವ್ ಅವರಿದ್ದ ರಜಾಕಾಲದ ನ್ಯಾಯಪೀಠ ಈ ಆದೇಶ ನೀಡಿತು.

ಪ್ರಕರಣದಲ್ಲಿ ಆವರಣದ ಗೋಡೆ ಬಿದ್ದ ಘಟನೆಯೇ ಅರ್ಜಿದಾರರ ವಿರುದ್ಧ ಮೇಲ್ನೋಟಕ್ಕೆ ಸಂಪೂರ್ಣ ನಿರ್ಲಕ್ಷ್ಯ ತೋರಿದ್ದಕ್ಕೆ ಯಾವುದೇ ಪುರಾವೆಗಳನ್ನು ಸೃಷ್ಟಿಸುವುದಿಲ್ಲ. ಆದರೆ, ಇದು ಆವರಣ ಗೋಡೆ ಬಿದ್ದಿದ್ದಕ್ಕೆ ಕೇವಲ ಸಾಕ್ಷಿಯಾಗಿದೆ. ಇದು ದುರಂತವಾಗಿದ್ದರೂ, ಪ್ರಸ್ತುತ ಇದನ್ನು ಅರ್ಜಿದಾರರಿಗೆ ಸಂಪೂರ್ಣ ನಿರ್ಲಕ್ಷ್ಯ ತೋರಲು ಸಾಧ್ಯವಿಲ್ಲ ಎಂದು ಪೀಠ ಹೇಳಿದೆ.

ಅಲ್ಲದೆ, ಕರ್ನಾಟಕ ನಾಗರಿಕ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ(ಸಿಸಿಎ) 10(1)ರ ಪ್ರಕಾರ ಯಾವುದೇ ಸರಕಾರದ ಅಧಿಕಾರಿಯನ್ನು ಅಮಾನತುಗೊಳಿಸುವ ಮುನ್ನ ತನಿಖೆ ನಡೆಸಿ ಮೇಲ್ನೋಟಕ್ಕೆ ಕರ್ತವ್ಯಲೋಪ ಸಾಬೀತಾಗಿದ್ದರೆ ಮಾತ್ರ ಅಮಾನತು ಮಾಡಬಹುದಾಗಿದೆ. ಆದರೆ, ಈ ಪ್ರಕರಣದಲ್ಲಿ ಇನ್ನೂ ತನಿಖೆ ಪ್ರಗತಿಯಲ್ಲಿದೆ. ಆಗಲೇ ಮೇಲ್ನೋಟಕ್ಕೆ ನಿರ್ಲಕ್ಷ್ಯ ಸಾಬೀತಾಗಿದೆ ಎಂದು ಅಮಾನತುಗೊಳಿಸಲಾಗದು ಎಂದು ತಿಳಿಸಿದ ನ್ಯಾಯಾಲಯ, ಅಮಾನತು ಆದೇಶ ರದ್ದುಗೊಳಿಸಿದೆ. ಅಲ್ಲದೆ, ಒಂದು ವೇಳೆ ತನಿಖೆಯಲ್ಲಿ ಅರ್ಜಿದಾರರು ಮೇಲ್ನೋಟಕ್ಕೆ ಕರ್ತವ್ಯಲೋಪ ಎಸಗಿರುವುದು ಸಾಬೀತಾದರೆ, ಆಗ ಅವರ ವಿರುದ್ಧ ಸರಕಾರ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲು ಸ್ವತಂತ್ರವಾಗಿದೆ ಎಂದು ನ್ಯಾಯಪೀಠ ಹೇಳಿದೆ.

ಇದಕ್ಕೂ ಮುನ್ನ ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಸಿಸಿಎ ನಿಯಮ 10(1)ರ ಪ್ರಕಾರ ಯಾವುದೇ ಸರಕಾರಿ ಉದ್ಯೋಗಿಯನ್ನು ಅಮಾನತುಗೊಳಿಸಬೇಕಾದರೆ, ತನಿಖೆಯಲ್ಲಿ ಆತನ ಕರ್ತವ್ಯಲೋಪ ಅಥವಾ ನಿರ್ಲಕ್ಷ್ಯ ಸಾಬೀತಾಗಿರಬೇಕು. ಆದರೆ, ಈ ಪ್ರಕರಣದಲ್ಲಿ ಮೇಲ್ನೋಟಕ್ಕೆ ಯಾವುದೇ ಆರೋಪ ಸಾಬೀತಾಗಿಲ್ಲ, ತನಿಖೆ ಇನ್ನೂ ಪ್ರಗತಿಯಲ್ಲಿದೆ. ಅಷ್ಟರಲ್ಲಿಯೇ ಅಮಾನತುಗೊಳಿಸಿರುವುದು ಕಾನೂನುಬಾಹಿರ ಕ್ರಮವಾಗಿದೆ. ಹಾಗಾಗಿ ಅಮಾನತು ಆದೇಶ ರದ್ದುಗೊಳಿಸಬೇಕು ಎಂದು ನ್ಯಾಯಪೀಠವನ್ನು ಕೋರಿದರು. ಸರಕಾರದ ಪರ ವಕೀಲರು, ಅರ್ಜಿದಾರರು ಸಂಬಂಧಪಟ್ಟ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿರುವುದು ಅವರ ಕರ್ತವ್ಯಲೋಪಕ್ಕೆ ಪ್ರಾಥಮಿಕ ಸಾಕ್ಷಿಯಾಗಿದೆ ಎಂದು ವಾದಿಸಿದ್ದರು.

> **ಪ್ರಕರಣದ ಹಿನ್ನೆಲೆ**
>
> **ಏಪ್ರಿಲ್ 29ರಂದು ಬೆಂಗಳೂರು ನಗರದಲ್ಲಿ ಬಿದ್ದಿದ್ದ ಭಾರೀ ಮಳೆಯಿಂದಾಗಿ ಇಲ್ಲಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಕಾಂಪೌಂಡ್ ಗೋಡೆ ಕುಸಿದು ಏಳು ಜನರು ಸಾವನ್ನಪ್ಪಿದ್ದರು. ಆನಂತರ ಕಾರ್ಯನಿರ್ವಾಹಕ ಎಂಜಿನಿಯರ್ ಎಂ.ಬಿ.ನಾಗರಾಜ್ ಅವರೇ ಮೇಲ್ನೋಟಕ್ಕೆ ಕಾರಣ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೇ 1ರಂದು ಅಮಾನತು ಆದೇಶ ಹೊರಡಿಸಿದ್ದರು. ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯು ಮೇ 6ರಂದು ನೀಡಿದ ತನ್ನ ಆದೇಶದಲ್ಲಿ ಅಮಾನತು ಆದೇಶಕ್ಕೆ ಮಧ್ಯಂತರ ತಡೆಯಾಜ್ಞೆ ನೀಡಲು ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೊರೆ ಹೋಗಿದ್ದರು.**

ಲೋಕಾಯುಕ್ತರಿಂದ ತನಿಖೆಯ ವರದಿ ಸಿದ್ಧ

ಬೆಂಗಳೂರು: ಕಳೆದ ತಿಂಗಳು 29ರಂದು ಸುರಿದ ಭಾರೀ ಮಳೆಗೆ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಗೋಡೆ ಕುಸಿದು 7 ಮಂದಿ ಮೃತಪಟ್ಟಿರುವ ಕುರಿತು ಲೋಕಾಯುಕ್ತ ಅಧಿಕಾರಿಗಳು ದೂರು ದಾಖಲಿಸಿಕೊಂಡು ತನಿಖೆ ನಡೆಸಿದ್ದರು. ಇದೀಗ ತನಿಖೆ ಪೂರ್ಣಗೊಂಡಿದ್ದು, ಲೋಕಾಯುಕ್ತ ಅಧಿಕಾರಿಗಳು ವರದಿ ತಯಾರಿಸಿದ್ದಾರೆ.

ಗೋಡೆ ಕುಸಿತದ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದ ಲೋಕಾಯುಕ್ತ ಅಧಿಕಾರಿಗಳು, ಸರಕಾರದ ಮುಖ್ಯ ಕಾರ್ಯದರ್ಶಿ ಮತ್ತು ಸಂಬಂಧಿತರ ಮೇಲೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿದ್ದರು. ಬಳಿಕ ಓರ್ವ ಜಿಲ್ಲಾ ನ್ಯಾಯಾಧೀಶರು, ಇಂಜಿನಿಯರ್ ಮತ್ತು ಪೊಲೀಸರ ತಂಡದಿಂದ ತನಿಖೆ ನಡೆಸಿದ್ದು, ಘಟನೆಗೆ ಪ್ರಮುಖ ಕಾರಣಗಳನ್ನು ಪತ್ತೆಹಚ್ಚಿದ್ದಾರೆ.

ಕಾರಣಗಳೇನು?: ಭಾರತೀಯ ಕಟ್ಟಡ ಸಂಹಿತೆ ಪ್ರಕಾರ, ಸಾರ್ವಜನಿಕ ಕಟ್ಟಡಗಳ ಸುತ್ತ 1.5 ಮೀ ನಿಂದ 2.4 ಮೀ ಎತ್ತರದ ಗೋಡೆ ಇರಬಹುದು, ಆದರೆ ಕುಸಿದು ಬಿದ್ದಿರುವ ಗೋಡೆಯ ಎತ್ತರವು ಸರಿಸುಮಾರು 2.8 ಮೀಟರ್ ಆಗಿತ್ತು. ಅವೈಜ್ಞಾನಿಕವಾಗಿ ಗೋಡೆ ಹಿಂದೆ 1.8 ಮೀ ಎತ್ತರಕ್ಕೆ ಮಣ್ಣು ತುಂಬಲಾಗಿತ್ತು, ಇದನ್ನ ತಡೆಯುವ ಸಾಮರ್ಥ್ಯ ಇರಲಿಲ್ಲ. ಭೂಮಿಯ ಉಳಿಸಿಕೊಳ್ಳುವ ರಚನೆ ರೀತಿ ಗೋಡೆ ಇರಲಿಲ್ಲ, ಬದಲಾಗಿ ಸ್ವಯಂ ತೂಕ ತಡೆಯುವ ಸಾಮರ್ಥ್ಯ ಮಾತ್ರ ಇತ್ತು. ನೀರು ಹರಿವಿಗೆ ವ್ಯವಸ್ಥೆ ಇರಲಿಲ್ಲ, ಮಳೆನೀರು ಹರಿದು ಹೋಗಲು ಚರಂಡಿ ಇಲ್ಲ, ನೀರು ಇಂಗಿ ರಂಧ್ರದ ಒತ್ತಡ ಹೆಚ್ಚಾಗಿ ಗೋಡೆ ಕುಸಿತವಾಗಿದೆ ಎಂದು ವರದಿಯಲ್ಲಿ ಉಲ್ಲೇಖವಾಗಿದೆ.

2008-09ರಲ್ಲಿ ಲಾರಿ ಗುದ್ದಿ ಕಾಂಪೌಂಡ್ ಬಿದ್ದಿದ್ದು, ಹಾನಿಗೊಳಗಾದ ಗೋಡೆ ಮೇಲೆಯೇ ಮರುನಿರ್ಮಾಣ ಮಾಡಿದ್ದರು. 2009 -16 ಅವಧಿಯಲ್ಲಿ ಖಾಲಿ ಜಾಗದಲ್ಲಿ ಗಿಡ ಬೆಳೆದಿದ್ದು, ಕಟ್ಟಡದ ಅವಶೇಷಗಳನ್ನು ಅಲ್ಲಿ ತುಂಬಲಾಗಿತ್ತು. ಸಂಸ್ಥೆಯಲ್ಲಿ ಇಂಜಿನಿಯರ್ ಹುದ್ದೆ ಇರಲಿಲ್ಲ, ಹುದ್ದೆ ನೇಮಕಕ್ಕೆ ಅವಕಾಶ ಇದ್ದರೂ ನೇಮಕ ಮಾಡಿರುವುದಿಲ್ಲ. ಫುಟ್‌ಪಾತ್ ಅತಿಕ್ರಮಣವಾಗಿದ್ದು, ಪಾದಚಾರಿ ಮಾರ್ಗದಲ್ಲಿ ಅಂಗಡಿ-ಮುಂಗಟ್ಟು ಇಟ್ಟುಕೊಂಡರೂ ಬಿಬಿಎಂಪಿ ಅಧಿಕಾರಿಗಳು ತೆರವು ಮಾಡಿಲ್ಲ. ಈ ಹಿಂದೆ ನ್ಯಾಯಾಲಯದಲ್ಲಿ ಬದಲಿ ವ್ಯವಸ್ಥೆ ಕಲ್ಪಿಸುವುದಾಗಿ ಅಧಿಕಾರಿಗಳು ಹೇಳಿದ್ದರು. ಜಿಬಿಎ ಅಧಿಕಾರಿಗಳು ಸಂಬಂಧಪಟ್ಟ ಕ್ರಮ ತೆಗೆದುಕೊಳ್ಳುವ ಅವಕಾಶ ಇದ್ದರೂ ತೆಗೆದುಕೊಂಡಿರುವುದಿಲ್ಲ ಎಂದು ಲೋಕಾಯುಕ್ತ ವರದಿಯಿಂದ ತಿಳಿದು ಬಂದಿದೆ.

ಗುತ್ತಿಗೆದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದು ಲೋಕಾಯುಕ್ತ ಅಧಿಕಾರಿಗಳಿಗೆ ಮುಖ್ಯಕಾರ್ಯದರ್ಶಿಗಳು ತಿಳಿಸಿದ್ದಾರೆ. ಒಂದು ತಿಂಗಳಲ್ಲಿ ಹೈಕೋರ್ಟ್ ಆದೇಶದಂತೆ ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ನೀಡುವುದಾಗಿ ನಗರಾಭಿವೃದ್ಧಿ ಅಪರ ಮುಖ್ಯ ಕಾರ್ಯದರ್ಶಿ ಮಾಹಿತಿ ನೀಡಿದ್ದಾರೆ. ಈ ಸಂದರ್ಭದಲ್ಲಿ ನಗರದಾದ್ಯಂತ ಈ ರೀತಿ ಕಟ್ಟಡಗಳನ್ನ ಗುರುತಿಸಿ ಮುಂದೆ ಈ ರೀತಿ ಅವಘಡ ಆಗದಂತೆ ಎಚ್ಚರಿಕೆ ವಹಿಸಲು ಲೋಕಾಯುಕ್ತ ಅಧಿಕಾರಿಗಳು ಸೂಚನೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಡಾಕ್ಟರ್ ಎಂದೇಳಿ ಹತ್ತಕ್ಕೂ ಹೆಚ್ಚು ಯುವತಿಯರಿಗೆ ವಂಚನೆ

ಬೆಂಗಳೂರು: ಮ್ಯಾಟ್ರಿಮೋನಿಯಲ್ ವೆಬ್ ಸೈಟ್‌ಗಳಲ್ಲಿ ತಾನು ಪಿಎಚ್‌ಡಿ ಪದವೀಧರ, ಡಾಕ್ಟರ್ ಎಂದು ಸುಳ್ಳು ಪ್ರೊಫೈಲ್ ಸೃಷ್ಟಿಸಿ, ಮದುವೆಯಾಗುವುದಾಗಿ ನಂಬಿಸಿ ಮೈಸೂರು ಮತ್ತು ಬೆಂಗಳೂರಿನ ಹತ್ತಕ್ಕೂ ಹೆಚ್ಚು ಯುವತಿಯರಿಗೆ ಲಕ್ಷಾಂತರ ರುಪಾಯಿ ವಂಚಿಸಿರುವ ಘಟನೆ ಬೆಳಕಿಗೆ ಬಂದಿದೆ.

ಈ ವಂಚನೆ ಜಾಲದ ಸೂತ್ರಧಾರ ಪ್ರದೀಪ್ ಸೋಲೋಮನ್ ಹಾಗೂ ಆತನಿಗೆ ಸಾತ್ ನೀಡಿದ ತಾಯಿ ಕಲಾವತಿ ವಿರುದ್ಧ ಬೆಂಗಳೂರಿನ ಆಡುಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸದ್ಯ ಪೊಲೀಸರ ಬಂಧನ ಭೀತಿಯಲ್ಲಿ ಅಮ್ಮ-ಮಗ ಇಬ್ಬರೂ ಎಸ್ಕೇಪ್ ಆಗಿದ್ದಾರೆ.

ಆರೋಪಿ ಪ್ರದೀಪ್ ಸೋಲೋಮನ್ ಮ್ಯಾಟ್ರಿಮೋನಿಯಲ್ ಸೈಟ್‌ಗಳಲ್ಲಿ ಡಾ.ಪ್ರದೀಪ್ ಸೋಲೋಮನ್ ಹೆಸರಿನಲ್ಲಿ ಹೈಫೈ ಪ್ರೊಫೈಲ್ ತೆರೆದಿದ್ದನು. ಮಗನ ಈ ವಂಚನೆ ಆಟಕ್ಕೆ ತಾಯಿ ಕಲಾವತಿ ಕೂಡ ಸಂಪೂರ್ಣ ಸಾತ್ ನೀಡಿದ್ದಳು. ಇವರಿಬ್ಬರು ಮೈಸೂರಿನಲ್ಲಿ ದೊಡ್ಡದೊಂದು ಐಷಾರಾಮಿ ಬಂಗಲೆ ಬಾಡಿಗೆಗೆ ಪಡೆದು, ತಾವು ದೊಡ್ಡ ಶ್ರೀಮಂತರು ಎಂಬಂತೆ ಸಮಾಜದಲ್ಲಿ ಬಿಲ್ಡಪ್ ಕೊಡುತ್ತಿದ್ದರು. ಈ ಬಂಗಲೆ ಮತ್ತು ಅವರ ಜೀವನಶೈಲಿ ನೋಡಿ ಮದುವೆ ಸಂಬಂಧ ಬೆಳೆಸಲು ಮುಂದೆ ಬರುವ ವಧುವಿನ ಕುಟುಂಬಸ್ಥರನ್ನು ತಮ್ಮ ಬಣ್ಣದ ಮಾತುಗಳ ಮೂಲಕ ಬಲೆಗೆ ಬೀಳಿಸಿಕೊಳ್ಳುತ್ತಿದ್ದರು. ಯುವತಿಯರ ಕುಟುಂಬದ ನಂಬಿಕೆ ಗಳಿಸಿದ ನಂತರ, ನನ್ನ ದೊಡ್ಡ ಮೊತ್ತದ ಹಣ ತಾಂತ್ರಿಕ ಕಾರಣಗಳಿಂದ ಬ್ಯಾಂಕ್‌ನಲ್ಲಿ ಬಿಡಿಸಿಕೊಳ್ಳಲು ಆಗುತ್ತಿಲ್ಲ,

ಇನ್ನು ಕೆಲವೇ ದಿನಗಳಲ್ಲಿ ಹಣ ವಾಪಸ್ ಬರುತ್ತದೆ, ಸದ್ಯಕ್ಕೆ ಅರ್ಜೆಂಟ್ ಇದೆ ಎಂದು ಹೇಳಿ ಲಕ್ಷ ಲಕ್ಷ ರುಪಾಯಿಗೆ ಡಿಮ್ಯಾಂಡ್ ಮಾಡುತ್ತಿದ್ದನು. ಪ್ರದೀಪನ ಮಾತು ನಂಬಿ ಇತ್ತೀಚೆಗೆ ಬೆಂಗಳೂರು ಮೂಲದ ಶ್ರೀಮಂತ ಕುಟುಂಬವೊಂದು ಲಕ್ಷಾಂತರ ರುಪಾಯಿ ಹಣ ನೀಡಿತ್ತು.

ಹಣ ಕೈ ಸೇರಿದ ಬೆನ್ನಲ್ಲೇ ಅಮ್ಮ-ಮಗ ಇಬ್ಬರೂ ನಾಪತ್ತೆಯಾಗಿದ್ದಾರೆ.

ಪ್ರದೀಪ್‌ನಿಂದ ಮೋಸ ಹೋದ ಮೈಸೂರು ಮತ್ತು ಬೆಂಗಳೂರಿನ ಹಲವು ಯುವತಿಯರು ಹಾಗೂ ಅವರ ಕುಟುಂಬಸ್ಥರು ಈಗ ಮೈಸೂರಿನ ಆ ಬಂಗಲೆಯ ಮುಂದೆ ಬಂದು ತಮ್ಮ ಅಳಲು ತೋಡಿಕೊಳ್ಳುತ್ತಿದ್ದಾರೆ. ಇತ್ತ ಆಡುಗೋಡಿ ಪೊಲೀಸರು ಕಳೆದ ಎರಡು ದಿನಗಳಿಂದ ವಂಚಕ ಅಮ್ಮ-ಮಗನಿಗಾಗಿ ತೀವ್ರ ಶೋಧ ಕಾರ್ಯ ನಡೆಸುತ್ತಿದ್ದಾರೆ. ಬಂಧನ ಭೀತಿಯಿಂದ ತಲೆಮರೆಸಿಕೊಂಡಿರುವ ಈ ಖತರ್ನಾಕ್ ಜೋಡಿಯ ಪತ್ತೆಗಾಗಿ ಪೊಲೀಸರು ವಿಶೇಷ ತಂಡ ರಚಿಸಿದ್ದಾರೆ.

ಎಂಟು ವರ್ಷದ ನಂತರ ವಾಚ್ ಕಳ್ಳಿಯ ಬಂಧನ

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಅಂಗಡಿಗಳಲ್ಲಿ ದುಬಾರಿ ಬೆಲೆಯ ವಾಚ್, ಪವರ್ ಬ್ಯಾಂಕ್ ಹಾಗೂ ಹೇರ್ ಬ್ಯಾಂಡ್ ಕಳ್ಳತನ ಮಾಡಿದ ಆರೋಪ ಪ್ರಕರಣ ಸಂಬಂಧ ನ್ಯಾಯಾಲಯಕ್ಕೆ ಹಾಜರಾಗದೆ ಎಂಟು ವರ್ಷಗಳಿಂದ ತಲೆಮರೆಸಿಕೊಂಡಿದ್ದ ಯುವತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದ ಮನ್ಸೂನ್ ಹುಸೇನ್ (30) ಬಂಧಿತಳಾದ ಆರೋಪಿ. ಕಳ್ಳತನ ಪ್ರಕರಣದಲ್ಲಿ ಆರೋಪಿತೆಯಾಗಿ ನಿರಂತರವಾಗಿ ನ್ಯಾಯಾಲಯದ ವಿಚಾರಣೆಗೆ ಗೈರು ಹಾಜರಾಗಿದ್ದರಿಂದ ಈಕೆಯ ವಿರುದ್ಧ ಜಾಮೀನುರಹಿತ ವಾರಂಟ್ ಜಾರಿಯಾಗಿತ್ತು. ಇತ್ತೀಚೆಗೆ ಇಂದಿರಾನಗರದಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಯುವತಿಯನ್ನು ಕಂಡು ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಆಕೆಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ 8 ವರ್ಷಗಳ ಹಿಂದೆ ಕಳ್ಳತನ ಪ್ರಕರಣದ ಆರೋಪಿತೆ ಎಂಬುದನ್ನು ಕಂಡುಕೊಂಡಿದ್ದರು. ಈ ಕುರಿತು ಬಿಐಎಎಲ್ ಠಾಣೆಗೆ ಇಂದಿರಾನಗರ ಪೊಲೀಸರು ಮಾಹಿತಿ ನೀಡಿದ್ದರು. ಸ್ಥಳಕ್ಕೆ ತೆರಳಿ ಪರಿಶೀಲಿಸಿ ಆಕೆಯನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಕೈ ಗಡಿಯಾರ ಕದ್ದಿದ್ದ ಯುವತಿ: 2018ರಲ್ಲಿ ದೆಹಲಿಗೆ ಹೋಗಲು ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದಿದ್ದ ಯುವತಿ ಅಂಗಡಿಯೊಂದಕ್ಕೆ ತೆರಳಿ ಸುಮಾರು 21 ಸಾವಿರ ರೂ ಬೆಲೆಯ ದುಬಾರಿ ವಾಚ್, ಮತ್ತೊಂದು ಅಂಗಡಿಯಲ್ಲಿ ಪವರ್ ಬ್ಯಾಂಕ್ ಹಾಗೂ ಹೇರ್ ಬ್ಯಾಂಡ್ ಕಳ್ಳತನ ಮಾಡಿದ್ದಳು. ಅಂಗಡಿ ಮಾಲೀಕ ಜೆ. ರವೀಂದ್ರ ಎಂಬವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಸಿಸಿಟಿವಿ ಪರಿಶೀಲಿಸಿದಾಗ ಕಳ್ಳತನ ಎಸಗಿರುವ ದೃಶ್ಯ ಸೆರೆಯಾಗಿತ್ತು. ಈ ಮಾಹಿತಿ ಆಧರಿಸಿ ಹಲಸೂರಿನಲ್ಲಿ ವಾಸವಾಗಿದ್ದ ಯುವತಿಯನ್ನು ಪೊಲೀಸರು ಬಂಧಿಸಿದ್ದರು. ಬಳಿಕ ಈಕೆ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಆರಂಭದಲ್ಲಿ ನ್ಯಾಯಾಲಯ ವಿಚಾರಣೆಗೆ ಹಾಜರಾಗುತ್ತಿದ್ದ ಯುವತಿ, ತದನಂತರ ಗೈರಾಗಿದ್ದರು. ಹಲವು ಬಾರಿ ಸಮನ್ಸ್ ಜಾರಿ ಮಾಡಿದ್ದರೂ ಹಾಜರಾಗಿರಲಿಲ್ಲ. ಈ ಸಂಬಂಧ ಈಕೆಯ ವಿರುದ್ಧ ಜಾಮೀನು ರಹಿತ ವಾರಂಟ್ ಜಾರಿ ಮಾಡಿ ಬಂಧಿಸುವಂತೆ ನ್ಯಾಯಾಲಯ ಆದೇಶಿಸಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

> **ಚಿನ್ನಾಭರಣ ಕಳ್ಳರ ಬಂಧನ**
>
> **ಬೆಂಗಳೂರಿನ ಹೆಸರಘಟ್ಟ ರಸ್ತೆಯ ಹಾವನೂರು ಬಡಾವಣೆಯ ಎಂ.ಬಿ.ಜ್ಯುವೆಲ್ಲರಿ ಮಳಿಗೆಯ ಹಿಂಭಾಗದ ಇತ್ತೀಚೆಗೆ ಗೋಡೆ ಕೊರೆದು 70 ಕೆ.ಜಿ ಮೌಲ್ಯದ ಬೆಳ್ಳಿ ಕಳ್ಳತನ ಮಾಡಿದ್ದ ಮೂವರು ಆರೋಪಿಗಳನ್ನು ಬಾಗಲಗುಂಟೆ ಪೊಲೀಸರು ಬಂಧಿಸಿದ್ದರು. ಮಳಿಗೆ ಮಾಲೀಕ ಕೆ.ಮಹೇಂದ್ರ ಕುಮಾರ್ ನೀಡಿದ ದೂರಿನ ಮೇರೆಗೆ ಸುರೇಶ್, ಧನರಾಮ್, ನೇಮಿಚಂದ್ರ ಎಂಬವರನ್ನು ಬಂಧಿಸಿ ಸದ್ಯ 29 ಕೆ.ಜಿ ಚಿನ್ನಾಭರಣ ವಶಕ್ಕೆ ಪಡೆಯಲಾಗಿತ್ತು. ಮಳಿಗೆ ಹಿಂಬದಿ ಗೋಡೆ ಕೊರೆದು ಆರೋಪಿಗಳು ಒಳ ಪ್ರವೇಶಿಸಿದ್ದರು. ಅಲ್ಲದೇ ಮಳಿಗೆಯಲ್ಲಿದ್ದ ಸುಮಾರು 70 ಕೆ.ಜಿ ಬೆಳ್ಳಿ ಆಭರಣ, 5 ಲಕ್ಷ ನಗದು ಹಾಗೂ ಇತರೆ ವಸ್ತುಗಳು ಸೇರಿದಂತೆ 1.20 ಕೋಟಿ ಮೌಲ್ಯದ ವಸ್ತುಗಳನ್ನು ಕಳ್ಳತನ ಮಾಡಿ ಪರಾರಿಯಾಗಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದರು.**

ಸ್ನೇಹಿತನ ಮನೆಯಲ್ಲೇ ದರೋಡೆ ಮಾಡಿಸಿದ್ದ ಮೇಸ್ತ್ರಿ ಬಂಧನ

ಬೆಂಗಳೂರು: ಸ್ನೇಹಿತನ ಮನೆಯಲ್ಲೇ ದರೋಡೆ ಮಾಡಿಸಿದ್ದ ಮೇಸ್ತ್ರಿ ಸೇರಿದಂತೆ ಮೂವರು ಆರೋಪಿಗಳನ್ನು ಚಿಕ್ಕಜಾಲ ಠಾಣೆ ಪೊಲೀಸರು ಬಂಧಿಸಿದ್ದಾರೆ. ಗುರುಪ್ರಸಾದ್, ಅರ್ಬಾಜ್ ಹಾಗೂ ಜಿಬ್ರಾನ್ ಬಂಧಿತ ಆರೋಪಿಗಳು. ಚಿಕ್ಕಜಾಲದ ಹುಣಸಮಾರನಹಳ್ಳಿಯಲ್ಲಿರುವ ಕೃಷ್ಣಾಚಾರಿ ಎಂಬುವವರ ಮನೆಗೆ ಏಪ್ರಿಲ್ 18ರಂದು ರಾತ್ರಿ ನುಗ್ಗಿದ್ದ ಅರ್ಬಾಜ್ ಹಾಗೂ ಜಿಬ್ರಾನ್, ಮನೆಯವರಿಗೆ ಚಾಕು ತೋರಿಸಿ 79 ಗ್ರಾಂ ಚಿನ್ನ, 64 ಗ್ರಾಂ ಬೆಳ್ಳಿ ಹಾಗೂ 12 ಲಕ್ಷ ರೂಪಾಯಿ ನಗದು ದೋಚಿ ಪರಾರಿಯಾಗಿದ್ದರು. ಕೃಷ್ಣಾಚಾರಿ ಅವರ ಪುತ್ರ ಸುದರ್ಶನ್ ಹಾಗೂ ಆರೋಪಿ ಗುರುಪ್ರಸಾದ್ ಗೆಳೆಯರು. ತಂದೆ ಹೊಸದಾಗಿ ಕಟ್ಟಿಸುತ್ತಿದ್ದ ಮನೆಯ ಕಾಮಗಾರಿ ಕೆಲಸವನ್ನು ಸುದರ್ಶನ್ ತನ್ನ ಸ್ನೇಹಿತ ಗುರುಪ್ರಸಾದ್‌ಗೆ ಕೊಡಿಸಿದ್ದ. ಸ್ನೇಹಿತನ ಮನೆಯೆಂದು ಕಡಿಮೆ ಹಣಕ್ಕೆ ಒಪ್ಪಿಕೊಂಡಿದ್ದ ಗುರುಪ್ರಸಾದ್ ಕೆಲಸ ಮಾಡಿಸುತ್ತಿದ್ದ. ಕಾಮಗಾರಿ ಬಗ್ಗೆ ತಂದೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದರು. ಪೂರ್ತಿ ಹಣ ಕೊಡಲ್ಲ ಎಂಬ ಕ್ಯಾತೆ ತೆಗೆದಿದ್ದರು. ಇದರಿಂದಾಗಿ ಬೇಸತ್ತಿದ್ದ ಗುರುಪ್ರಸಾದ್ ಸ್ನೇಹಿತನ ಮನೆಯಲ್ಲಿ ದರೋಡೆ ಮಾಡಿಸಿದ್ದನು.

ಎಣ್ಣೆ ಬಾಟಲ್ ಹಿಡಿದು ಕೋರ್ಟ್ ಆವರಣದಲ್ಲಿ ಓಡಾಟ: ಜಾಮೀನು ನಿರಾಕರಣೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮದ್ಯದ ಬಾಟಲ್ ತೆಗೆದುಕೊಂಡು ಕೋರ್ಟ್‌ಗೆ ಬರಲು ಆಗುತ್ತದೆ. ಆದರೆ, ವಿಚಾರಣೆಗೆ ಹಾಜರಾಗುವುದಕ್ಕೆ ಸಾಧ್ಯವಾಗುವುದಿಲ್ಲವೇ? ಒಂದೆರಡು ದಿನ ಜೈಲಿನಲ್ಲೇ ಇದ್ದರೆ ಎಲ್ಲವೂ ಅರ್ಥ ಆಗಲಿದೆ ಎಂದು ತಿಳಿಸಿರುವ ಹೈಕೋರ್ಟ್, ನ್ಯಾಯಾಲಯದ ಆವರಣದಲ್ಲಿ ಮದ್ಯದ ಬಾಟಲ್‌ನೊಂದಿಗೆ ತಿರುಗಾಡಿದ್ದ ಕೊಲೆಗೆ ಯತ್ನಿಸಿದ್ದ ಆರೋಪಿಗೆ ಜಾಮೀನು ನೀಡಲು ನಿರಾಕರಿಸಿದೆ. ಕೊಲೆ ಯತ್ನ ಪ್ರಕರಣದಲ್ಲಿ ಪದೇ ಪದೆ ವಿಚಾರಣೆಗೆ ಹಾಜರಾಗದ ಹಿನ್ನೆಲೆಯಲ್ಲಿ ಮಂಜೂರಾಗಿದ್ದ ಜಾಮೀನನ್ನು ರದ್ದುಪಡಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶ ರದ್ದು ಕೋರಿ ಮೈಸೂರು ತಾಲೂಕಿನ ಬೆಳವಾಡಿಯ ನಿವಾಸಿ ಶಿವಕುಮಾರ್ ಅಲಿಯಾಸ್ ಆರ್.ಎಸ್.ಶಿವು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರಿದ್ದ ರಜಾಕಾಲದ ನ್ಯಾಯಪೀಠ, ಜಾಮೀನು ನಿರಾಕರಿಸಿದೆ.

ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗಿಲ್ಲ ಎಂಬ ಆರೋಪವಿದೆ. ಆದರೂ, ನ್ಯಾಯಾಲಯದ ಆವರಣದಲ್ಲಿ ಮದ್ಯದ ಬಾಟಲ್ ಹಿಡಿದುಕೊಂಡು ಓಡಾಡಿದ್ದಾರೆ. ಅದಕ್ಕೆ ಸಿಸಿ ಟಿವಿ ದೃಶ್ಯಗಳು ಪುರಾವೆಗಳನ್ನು ಒದಗಿಸಿವೆ. ಅದನ್ನು ವಿಚಾರಣಾ ನ್ಯಾಯಾಲಯ ನ್ಯಾಯಾಧೀಶರು ಖುದ್ದು ಪರಿಶೀಲಿಸಿದ ಬಳಿಕ ಜಾಮೀನು ನಿರಾಕರಿಸಿದ್ದಾರೆ. ಮತ್ತಷ್ಟು ದಿನ ಜೈಲಿನಲ್ಲಿದ್ದರೆ ಎಲ್ಲವೂ ಸರಿಹೋಗಲಿದೆ ಎಂದು ಪೀಠ ತಿಳಿಸಿತು.

ಅಲ್ಲದೇ, ಅರ್ಜಿದಾರರ ವಿರುದ್ಧದ ಆರೋಪವನ್ನು ಮತ್ತೊಬ್ಬ ವ್ಯಕ್ತಿ ನ್ಯಾಯಾಲಯಕ್ಕೆ ವಿವರಿಸಿದ್ದರೆ ಬೇರೆ ರೀತಿಯಲ್ಲಿ ಇರುತ್ತಿತ್ತು. ಆದರೆ, ನ್ಯಾಯಾಧೀಶರೇ ಅದನ್ನು ಪರಿಶೀಲಿಸಿದ್ದಾರೆ. ಆದ್ದರಿಂದ ಆರೋಪವನ್ನು ಅಲ್ಲಗಳೆಯುವಂತಿಲ್ಲ ಎಂದು ಪೀಠ ಹೇಳಿ, ಜಾಮೀನು ನೀಡಲು ನಿರಾಕರಿಸಿತು.

ಇದಕ್ಕೂ ಮುನ್ನ ನಡೆದ ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಅರ್ಜಿದಾರರ ಜಾಮೀನನ್ನು ವಿಚಾರಣಾ ನ್ಯಾಯಾಲಯ ರದ್ದುಪಡಿಸಿದೆ. ಅದಕ್ಕೂ ಮುನ್ನ ನೋಟಿಸ್ ಜಾರಿ ಮಾಡಿಲ್ಲ. ಮದ್ಯದ ಬಾಟಲ್‌ನ್ನು ನ್ಯಾಯಾಲಯದ ಆವರಣಕ್ಕೆ ತಂದಿರುವ ಸಂಬಂಧ ಪ್ರತ್ಯೇಕ ಪ್ರಕರಣ ದಾಖಲಿಸಬಹುದಾಗಿತ್ತು. ಆರೋಪಿ ರೈತನಾಗಿದ್ದು, ಕಳೆದ ಒಂದು ತಿಂಗಳಿನಿಂದ ಜೈಲಿನಲ್ಲಿದ್ದಾರೆ. ಹೀಗಾಗಿ ಜಾಮೀನು ಮಂಜೂರು ಮಾಡಬೇಕು ಎಂದು ಪೀಠಕ್ಕೆ ಮನವಿ ಮಾಡಿದರು. ಅಲ್ಲದೇ, ಆರೋಪಿ ಮದ್ಯದ ಬಾಟಲಿ ತಂದಿದ್ದಾನೆ ಎಂಬ ಆರೋಪವಿದೆ. ಆದರೆ, ಬಾಟಲ್‌ನಲ್ಲಿ ಮದ್ಯ ಇತ್ತು ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ. ಹೀಗಾಗಿ ವಿಚಾರಣಾ ನ್ಯಾಯಾಲಯದ ಆದೇಶವನ್ನು ರದ್ದುಗೊಳಿಸಿ, ಜಾಮೀನು ಮಂಜೂರು ಮಾಡಬೇಕು ಎಂದು ಕೋರಿದರು.

ಇದಕ್ಕೆ ಪೀಠ, ಪ್ರಕರಣದಲ್ಲಿ ಕರೆದಾಗ ನ್ಯಾಯಾಧೀಶರ ಮುಂದೆ ಹಾಜರಾಗಲಿಲ್ಲ, ಆದರೂ ಮದ್ಯದ ಬಾಟಲಿಯ ಜತೆ ನ್ಯಾಯಾಲಯದ ಆವರಣಕ್ಕೆ ಬರುತ್ತಾರೆ ಎಂದರೆ ಹೇಗೆ? ಎಂದು ಪ್ರಶ್ನಿಸಿತು. ಇದಕ್ಕೆ ವಕೀಲರು, ವಿಚಾರಣೆಗೆ ಹಾಜರಾಗದಿರುವುದು ಬೇರೆ ಪ್ರಕರಣವಾಗಿದೆ ಎಂದು ತಿಳಿಸಿದರು.

ವಾದ ಮುಂದುವರಿಸಿದ ವಕೀಲರು, ಅರ್ಜಿದಾರರು ಮದ್ಯದ ಬಾಟಲಿ ತಂದಿದ್ದರು ಎಂಬ ಆರೋಪವಿದೆ. ಆದರೆ, ಅದರಲ್ಲಿ ಮದ್ಯ ಇತ್ತು ಎಂದು ಪೊಲೀಸರ ಹೇಳಿಕೆಯ ಮೇಲೆ ಆದೇಶ ಮಾಡಲಾಗಿದೆ ಎಂದರು. ಇದಕ್ಕೆ ಪೀಠ, ಸಿಸಿಟಿವಿ ಯಾರದ್ದಾಗಿತ್ತು? ಎಂದು ಪ್ರಶ್ನಿಸಿತು. ಆಗ ವಕೀಲರು, ಬಾಟಲಿಯಲ್ಲಿ ಮದ್ಯ ಇತ್ತು ಎಂದು ಸಿಸಿಟಿವಿಯಲ್ಲಿ ಹೇಗೆ ಗೊತ್ತಾಗಲಿದೆ? ಎಂದು ಪ್ರಶ್ನಿಸಿದರು. ಈ ವೇಳೆ ಪೀಠ, ಬಾಟಲಿಯಲ್ಲಿದ್ದುದು ಏನು ಎಂಬುದನ್ನು ತನಿಖೆಗೆ ಆದೇಶಿಸಿ, ತನಿಖೆ ಮುಗಿಯುವವರೆಗೂ ಅರ್ಜಿದಾರರನ್ನು ಜೈಲಿನಲ್ಲಿಯೇ ಇರಿಸೋಣ ಎಂದು ತಿಳಿಸಿ, ವಿಚಾರಣೆಯನ್ನು ಜೂನ್ ನಾಲ್ಕನೇ ವಾರಕ್ಕೆ ಮುಂದೂಡಿತು. ಬಳಿಕ ಪ್ರತಿಕ್ರಿಯಿಸಿದ ಪೀಠ, ನ್ಯಾಯಾಲಯದ ಅಧಿಕಾರಿಯಾಗಿ ನೀವು (ವಕೀಲರು) ಇಂಥದ್ದನ್ನು ಪ್ರೋತ್ಸಾಹಿಸಬಾರದು. ವಾದ ಮಾಡುವುದು ನಿಮ್ಮ ವೃತ್ತಿ. ಆದರೆ, ಕೋರ್ಟ್ ಬಗ್ಗೆ ಗಂಭೀರತೆಯೂ ಇರಬೇಕು ಎಂದು ತಿಳಿಸಿತು.

> **ಪ್ರಕರಣದ ಹಿನ್ನೆಲೆ**
>
> **ಅರ್ಜಿದಾರ ಶಿವಕುಮಾರ್ ಸೇರಿದಂತೆ ಇತರ ಇಬ್ಬರು ಆರೋಪಿಗಳು ಮೈಸೂರು ಜಿಲ್ಲೆಯ ಪ್ರಸನ್ನಕುಮಾರ್ ಎಂಬುವವರನ್ನು ಕೊಲೆ ಮಾಡುವುದಕ್ಕೆ ಮುಂದಾಗಿದ್ದರು. ಈ ಸಂಬಂಧ ದಾಖಲಾಗಿದ್ದ ಪ್ರಕರಣ ಸಂಬಂಧ ನ್ಯಾಯಾಲಯಕ್ಕೆ ಹಲವು ಬಾರಿ ವಿಚಾರಣೆಗೆ ಹಾಜರಾಗಿರಲಿಲ್ಲ. ಆದರೂ, ನ್ಯಾಯಾಲಯದ ಆವರಣದಲ್ಲಿ ಮದ್ಯದ ಬಾಟಲ್ ಹಿಡಿದುಕೊಂಡು ಓಡಾಡಿದ್ದರು. ಇದನ್ನು ಸಿಸಿಟಿವಿಯಲ್ಲಿ ಗಮನಿಸಿದ್ದ ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು, ಕೊಲೆ ಯತ್ನ ಪ್ರಕರಣದಲ್ಲಿ ಮಂಜೂರಾಗಿದ್ದ ಜಾಮೀನನ್ನು ರದ್ದುಪಡಿಸಿದ್ದರು. ಇದನ್ನು ಪ್ರಶ್ನಿಸಿ ಶಿವಕುಮಾರ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.**

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆರ್‌ಸಿಬಿ-ಗುಜರಾತ್: 1ನೇ ಕ್ವಾ.ಫೈಯರ್

ಕಿಶನ್, ಅಭಿಷೇಕ್, ಕ್ಲಾಸೆನ್ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಹೈದರಾಬಾದ್ ತಂಡ 55 ರನ್‌ಗಳಿಂದ ಶುಕ್ರವಾರ ಆರ್‌ಸಿಬಿಯನ್ನು ಮಣಿಸಿದೆ. ಸೋತರೂ ಅಗ್ರಸ್ಥಾನದಲ್ಲೇ ಉಳಿದ ಆರ್‌ಸಿಬಿ-ಗುಜರಾತ್ ನಡುವೆ ಮೇ 26ಕ್ಕೆ 1ನೇ ಕ್ವಾಲಿಫೈಯರ್ ನಡೆಯಲಿದೆ. ಇಲ್ಲಿ ಗೆದ್ದರೆ ಆರ್‌ಸಿಬಿ ಫೈನಲ್‌ಗೇರಲಿದೆ.

ಕರ್ನಾಟಕದ ನಾಲ್ಕು ಸ್ಥಾನ ಸೇರಿ ರಾಜ್ಯಸಭೆ 24 ಸ್ಥಾನಗಳಿಗೆ ಜೂನ್18ಕ್ಕೆ ಚುನಾವಣೆ

ಎಚ್.ಡಿ. ದೇವೇಗೌಡ, ಮಲ್ಲಿಕಾರ್ಜುನ ಖರ್ಗೆ, ಕೆ.ನಾರಾಯಣ, ಕಡಾಡಿ ನಿವೃತ್ತಿ

ಖರ್ಗೆ ಮರು ಆಯ್ಕೆ ಖಚಿತ,ಉಳಿದ ಸ್ಥಾನಕ್ಕೆ ಅಂಜಲಿ ನಿಂಬಾಳ್ಕರ್ ಸೇರಿ ಹಲವು ಹೆಸರು

ಮೇಲ್ಮನೆಗೆ ಮೇಲಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ದೆಹಲಿ

ಕರ್ನಾಟಕದ ನಾಲ್ಕು ಸ್ಥಾನಗಳು ಸೇರಿದಂತೆ ದೇಶದ 10 ರಾಜ್ಯಗಳನ್ನು ಪ್ರತಿನಿಧಿಸುವ 24 ರಾಜ್ಯಸಭಾ ಸದಸ್ಯರ ಅವಧಿ ಮುಕ್ತಾಯವಾಗುತ್ತಿರುವ ಬೆನ್ನಲ್ಲೇ, ಚುನಾವಣಾ ಆಯೋಗವು ಜೂನ್ 18ರಂದು ಚುನಾವಣೆ ನಿಗದಿ ಮಾಡಿ ಅಧಿಸೂಚನೆ ಹೊರಡಿಸಿದೆ. ಈ ಅಧಿಸೂಚನೆಯ ಬೆನ್ನಲ್ಲೇ, ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಲಿರುವ ನಾಲ್ವರು ಯಾರು ಎನ್ನುವ ಚರ್ಚೆ ಮುನ್ನೆಲೆಗೆ ಬಂದಿದೆ.

ಜೂನ್ 24ಕ್ಕೆ ಮುಕ್ತಾಯವಾಗಲಿರುವ ರಾಜ್ಯಸಭಾ ಸದಸ್ಯರಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಮತ್ತು ಬಿಜೆಪಿಯಿಂದ ಈರಣ್ಣ ಕಡಾಡಿ ಹಾಗೂ ಕೆ.ನಾರಾಯಣ ಅವರು ನಿವೃತ್ತಿಯಾಗಲಿದ್ದಾರೆ. ವಿಧಾನ ಮಂಡಲದ ಸದ್ಯದ ಬಲಾಬಲ ಗಮನಿಸಿದರೆ ತೆರವಾಗಲಿರುವ ಸ್ಥಾನಗಳಿಗೆ ಕಾಂಗ್ರೆಸ್‌ನಿಂದ ಮೂರು ಹಾಗೂ ಬಿಜೆಪಿ-ಜೆಡಿಎಸ್‌ನಿಂದ ಒಬ್ಬರನ್ನು ಆಯ್ಕೆ ಮಾಡಲು ಅವಕಾಶವಿದೆ.

ರಾಜ್ಯಸಭಾ ಪ್ರತಿಪಕ್ಷ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್‌ನಿಂದ ಮರುಆಯ್ಕೆಯಾಗುವುದು ಬಹುತೇಕ ನಿಶ್ಚಿತವಾಗಿದೆ. ಆದರೆ ಇನ್ನುಳಿದ ಎರಡು ಸ್ಥಾನಗಳಿಗೆ ಹಲವರ ಹೆಸರು ಕೇಳಿಬರುತ್ತಿದೆ. ಪ್ರಮುಖವಾಗಿ ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್, ವಿ.ಆರ್. ಸುದರ್ಶನ್, ಮುದ್ದಹನುಮೇಗೌಡ ಸೇರಿದಂತೆ ಏಳೆಂಟು ಆಕಾಂಕ್ಷಿಗಳಿದ್ದಾರೆ. ಇವರಲ್ಲಿ ಹೈಕಮಾಂಡ್‌ಗೆ ಯಾರಿಗೆ ಮಣೆ ಹಾಕಲಿದೆ ಎನ್ನುವ ಕುತೂಹಲವಿದೆ. ಒಂದು ವೇಳೆ ಮಲ್ಲಿಕಾರ್ಜುನ ಖರ್ಗೆ ಅವರು ಪುನರಾಯ್ಕೆ ಬಯಸಿದ್ದರೆ, ರಾಜ್ಯ ಕಾಂಗ್ರೆಸ್‌ನ ಲೆಕ್ಕಾಚಾರಗಳೇ ಬದಲಾಗುವ ಮಾತುಗಳು ಕೇಳಿಬರುತ್ತಿದೆ. ಆದರೆ ಈ ರೀತಿಯಾಗುವ ಸಾಧ್ಯತೆ ತೀರಾ ಕಡಿಮೆ ಎನ್ನಲಾಗಿದೆ.

ದೇವೇಗೌಡರ ಮರು ಆಯ್ಕೆ?: ಇನ್ನು ಬಿಜೆಪಿ-ಜೆಡಿಎಸ್ ಮೈತ್ರಿಯಾಗಿ ಒಬ್ಬರನ್ನು ರಾಜ್ಯಸಭೆಗೆ ಕಳುಹಿಸುವ ಸಂಖ್ಯಾಬಲವಿದೆ. ದೇವೇಗೌಡರು ಮರು ಆಯ್ಕೆ ಬಯಸಿಲ್ಲ ಎನ್ನುವ ಮಾತನ್ನು ಹೇಳಿದ್ದರೂ, ಜೆಡಿಎಸ್ ನಾಯಕರು ಮತ್ತೊಮ್ಮೆ ದೇವೇಗೌಡರನ್ನು ದೆಹಲಿಗೆ ಕಳುಹಿಸುವ ಇರಾದೆ ವ್ಯಕ್ತಪಡಿಸಿದ್ದಾರೆ. ಬಿಜೆಪಿ ನಾಯಕರೂ, ಮತ್ತೊಮ್ಮೆ ದೇವೇಗೌಡರಿಗೆ ಮಣೆ ಹಾಕುವ ಲೆಕ್ಕಾಚಾರದಲ್ಲಿದ್ದಾರೆ. ಒಂದು ವೇಳೆ ಹಾಗಾದರೆ, ಬಿಜೆಪಿಯ ಯಾವ ನಾಯಕರಿಗೂ ಅವಕಾಶವಿಲ್ಲ. ದೇವೇಗೌಡರು ಮರು ಆಯ್ಕೆ ಬಯಸದೇ ಇದ್ದರೆ ಆಗ ಮಾಜಿ ಮುಖ್ಯಮಂತ್ರಿ ಸದಾನಂದಗೌಡ, ನಿರ್ಮಲ್ ಕುಮಾರ್ ಸುರಾನಾ ಸೇರಿದಂತೆ ಹಲವು ನಾಯಕರು ಅದೃಷ್ಟ ಪರೀಕ್ಷೆ ಮಾಡುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ದೇವೇಗೌಡ, ಖರ್ಗೆ ಹೊರತುಪಡಿಸಿ ಕೇಂದ್ರ ಸಚಿವರಾದ ರವನೀತ್ ಸಿಂಗ್ ಬಿಟ್ಟು (ರಾಜಸ್ಥಾನ) ಮತ್ತು ಜಾರ್ಜ್ ಕುರಿಯನ್ (ಮಧ್ಯಪ್ರದೇಶ), ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ದಿಗ್ವಿಜಯ ಸಿಂಗ್, ಕಾಂಗ್ರೆಸ್ ನಾಯಕ ಶಕ್ತಿಸಿಂಗ್ ಗೋಹಿಲ್ ಸೇರಿದಂತೆ ಹಲವು ನಾಯಕರು ನಿವೃತ್ತಿಯಾಗಲಿದ್ದಾರೆ.



ಯಾವ ರಾಜ್ಯದಲ್ಲಿ ಎಷ್ಟು ಸ್ಥಾನ ?

ಜೂನ್ 21 ರಿಂದ ಜುಲೈ 19ರವರೆಗಿನ ಅವಧಿಯಲ್ಲಿ ಆಂಧ್ರಪ್ರದೇಶ, ಗುಜರಾತ್ ಮತ್ತು ಕರ್ನಾಟಕದ ತಲಾ 4 ಸ್ಥಾನ, ಮಧ್ಯಪ್ರದೇಶ ರಾಜಸ್ಥಾನದ ತಲಾ ಮೂರು ಸ್ಥಾನ ಮತ್ತು ಜಾರ್ಖಂಡ್‌ನ ಎರಡು ಹಾಗೂ ಮಣಿಪುರ, ಮೇಘಾಲಯ, ಅರುಣಾಚಲ ಪ್ರದೇಶ ಮತ್ತು ಮಿಜೋರಾಂನ ತಲಾ ಒಂದು ಸ್ಥಾನಗಳು ತೆರವಾಗಲಿವೆ. ವಿವಿಧ ರಾಜ್ಯಗಳ ರಾಜ್ಯಸಭಾ ಸ್ಥಾನಗಳು ತೆರವಾಗಲಿವೆ.

ಕಾತರಕಿ ಬಗ್ಗೆ ಆಸಕ್ತಿ ತೋರಿದ ಕೈ

ಕರ್ನಾಟಕದಲ್ಲಿ ಕಾಂಗ್ರೆಸ್ ಪಾಲಿನ ಮೂರು ಸ್ಥಾನದ ಪೈಕಿ ಒಂದನ್ನು ದೆಹಲಿಯಲ್ಲಿ ಪ್ರಭಾವ ಹೊಂದಿರುವವರಿಗೆ ನೀಡಬೇಕು ಎನ್ನುವ ಚರ್ಚೆಗಳು ಶುರುವಾಗಿದೆ. ಆರಂಭದಲ್ಲಿ ಅಭಿಷೇಕ್ ಮನುಸಿಂಘ್ವಿ ಸೇರಿದಂತೆ ಹಲವು ನಾಯಕರ ಹೆಸರು ಮುನ್ನಲೆಗೆ ಬಂದಿವೆ. ಆದರೆ ಈ ನಡುವೆ ಕರ್ನಾಟಕದ ಜಲವಿವಾದಗಳನ್ನು ಕಳೆದ ಹಲವು ದಶಕಗಳಿಂದ ಸುಪ್ರೀಂ ಕೋರ್ಟ್ ಸೇರಿದಂತೆ ವಿವಿಧ ನ್ಯಾಯಾಲಯದಲ್ಲಿ ವಾದಿಸಿಕೊಂಡು ಬಂದಿರುವ ಮೋಹನ್ ಕಾತರಕಿ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಕಳುಹಿಸುವ ಚರ್ಚೆಯೂ ಕಾಂಗ್ರೆಸ್ ವಲಯದಲ್ಲಿ ಶುರುವಾಗಿದೆ. ಒಂದು ವೇಳೆ ಹೀಗಾದರೆ, ಮಲ್ಲಿಕಾರ್ಜುನ ಖರ್ಗೆ, ಕಾತರಕಿ ಹೊರತಾಗಿ ಒಂದು ಸ್ಥಾನ ಯಾರಿಗೆ ಸಿಗಲಿದೆ ಎನ್ನುವುದು ಸದ್ಯದ ಕುತೂಹಲ.

ಸೂರ್ಯನಗರ ಕ್ರಿಕೆಟ್ ಸ್ಟೇಡಿಯಂಗೆ ಇಂದು ಅಡಿಗಲ್ಲು

ಕೆಎಚ್‌ಬಿಯಿಂದ 76ಸಾವಿರ ಸೀಟುಗಳ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಾಣ

ಬೆಂಗಳೂರು: ಕರ್ನಾಟಕ ಗೃಹ ಮಂಡಳಿ ಆನೇಕಲ್ ತಾಲೂಕು ಸೂರ್ಯನಗರ 4ನೇ ಹಂತದಲ್ಲಿ ಕೆಎಚ್‌ಬಿ ಸೂರ್ಯ ಕ್ರೀಡಾಗ್ರಾಮದಲ್ಲಿ ನಿರ್ಮಿಸಲಿರುವ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ಸೇರಿ ವಿವಿಧ ಅಭಿವೃದ್ಧಿ ಕಾಮಗಾ ರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಬೆಳಗ್ಗೆ 11 ಗಂಟೆಗೆ ಚಾಲನೆ ನೀಡಲಿದ್ದಾರೆ.

'ನಮ್ಮ ಮನೆ' ಯೋಜನೆಯಡಿ ನಿವೇಶನಗಳು ಹಂಚಿಕೆಗೆ ಚಾಲನೆ, 'ಸೂರ್ಯ ಶೈನ್' ಮತ್ತು 'ಸೂರ್ಯ ಡಿವೈನ್' ವಸತಿ ಸಮುಚ್ಚಯ ನಿರ್ಮಾಣ ಕಾಮಗಾರಿಗಳಿಗೆ ಶಂಕುಸ್ಥಾಪನೆ, ವಸತಿ ಯೋಜನೆಗೆ ಭೂಮಿ ನೀಡಿದ ಭೂಮಾಲೀಕರಿಗೆ ಸಾಂಕೇತಿಕವಾಗಿ ನಿವೇಶನಗಳ ಹಂಚಿಕೆ, ಲಾಟರಿ ಮುಖಾಂತರ ಸಾರ್ವಜನಿಕ ಅರ್ಜಿದಾರರಿಗೆ ನಿವೇಶನಗಳನ್ನು ಇದೇ ವೇಳೆ ಹಂಚಿಕೆ ಮಾಡಲಾಗುತ್ತದೆ ಎಂದು ಕೆಎಚ್ ಬಿ ತಿಳಿಸಿದೆ. ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಸತಿ ಸಚಿವ ಜಮೀರ್ ಅಹ್ಮದ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸೇರಿ ಹಲವರು ಭಾಗವಹಿಸಿದ್ದಾರೆ.

ಬೃಹತ್ ಕ್ರೀಡಾಂಗಣ: 76,000 ಸೀಟುಗಳ ಸಾಮರ್ಥದ ನೂತನ ಕ್ರೀಡಾಂಗಣವೂ ಅತ್ಯಾಧುನಿಕ ಸೌಕರ್ಯಗಳನ್ನು ಒಳಗೊಂಡಿರಲಿದೆ. ಸ್ಟೇಡಿಯಂನ ಆಸನಗಳ ವಿನ್ಯಾಸವನ್ನು ಅಮೆರಿಕದ ಎಟಿ ಆ್ಯಂಡ್ ಟಿ ಸ್ಟೇಡಿಯಂ ಹಾಗೂ ಲ್ಯೂಕಾಸ್ ಆಯಿಲ್ ಸ್ಟೇಡಿಯಂ ಮಾದರಿಯಿಂದ ಪ್ರೇರಣೆ ಪಡೆದು ರೂಪಿಸಲಾಗುತ್ತಿದೆ.

→ 4

TRUALT BIOENERGY

TRUALT BIOENERGY LIMITED

One of India's largest biofuels producers(*)

Registered Address: Survey No. 166, Kulali Cross, Jamkhandi Mudhol Road, Bagalkot, Karnataka, India - 587313
Corporate Address: Unit No. N-1501, 15th Floor, World Trade Centre, Brigade Gateway Campus, Rajajinagar, Bangalore - 560055
Tel: +91 80 2325 5000 Email: ir@trualtbioenergy.com
Website: www.trualtbioenergy.com

Corporate Identity Number: L15400KA2021PLC145978

STATEMENT OF AUDITED FINANCIAL RESULTS
(STANDALONE AND CONSOLIDATED)
FOR THE QUARTER AND YEAR ENDED MARCH 31, 2026

The Board of Directors of the Company, at the meeting held on May 22, 2026 approved the Audited Financial Results (Standalone and Consolidated) of the Company for the Quarter and Year ended March 31, 2026 ("Financial Results")

The Financial Results along with Audit Report has been hosted on the Company website at https://www.trualtbioenergy.com/investor-relations and can be accessed by scanning the QR code

For and on behalf of the Board of Directors
TruAlt Bioenergy Limited
Sd/-
Vijaykumar Murugesh Nirani
Managing Director
(DIN: 07413777)

Date : May 22, 2026
Place : Bangalore

Note: The above information is in accordance with Regulation 33 read with Regulation 47 of the SEBI (Listing obligations and Disclosure Requirement) Regulations, 2015.

(*) Source: CRISIL Report

ತುಡುವೆ ಜೇನಿಗೆ ರಾಜ್ಯ ಕೀಟದ ಸ್ಥಾನಮಾನ

ಬೆಂಗಳೂರು: ತುಡುವೆ ಜೇನು ಮತ್ತು ಮಲೆನಾಡಿನ ಮರಗಂತಿ ಕಪ್ಪೆಯನ್ನು ಅನುಕ್ರಮವಾಗಿ ರಾಜ್ಯ ಕೀಟ ಮತ್ತು ರಾಜ್ಯ ಉಭಯ ಜೀವಿ ಎಂದು ಅಧಿಕೃತವಾಗಿ ಘೋಷಿಸುವ ಪ್ರಕ್ರಿಯೆ ಪ್ರಗತಿಯ ಲ್ಲಿದೆ ಎಂದು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶುಕ್ರವಾರ ನಡೆದ ವಿಶ್ವ ಜೀವವೈವಿಧ್ಯದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಈ ವಿಷಯ ತಿಳಿಸಿದ್ದಾರೆ.ನರಾಜ್ಯ ಸರಕಾರ ಕೂಡ ಶ್ರೀಗಂಧವನ್ನು ತನ್ನ ರಾಜ್ಯ ವೃಕ್ಷವೆಂದು, ಆನೆಯನ್ನು ರಾಜ್ಯ ಪ್ರಾಣಿ ಎಂದು ನೀಲಕಂಠ ಪಕ್ಷಿಯನ್ನು ರಾಜ್ಯ ಪಕ್ಷಿ ಎಂದು ಘೋಷಿಸಿದೆ, ಇದರ ಜತಗೆ ಹಳದಿ ಕೆಂಪು ಬಣ್ಣದ ರೆಕ್ಕೆಯ ದೊಡ್ಡ ಚಿಟ್ಟೆಯನ್ನು ರಾಜ್ಯ ಚಿಟ್ಟೆ ಎಂದು ಘೋಷಣೆ ಮಾಡಿದೆ ಎಂದರು.

ಫನ್‌ತರಂಗ

- ರಘುಪತಿ ಶೃಂಗೇರಿ -

ಸೋಷಿಯಲ್ ಮೀಡಿಯಾದಲ್ಲಿ 'ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ)' ಅಬ್ಬರ

ಸುದ್ದಿ

ಸೊಂಪಾದ ಪುಟಗಳು

ಯುದ್ಧದ ಬೆಂಕಿಯಲ್ಲಿ ದುಬೈ ರಿಯಲ್ ಎಸ್ಟೇಟ್!

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ 6

ಜಾಗತಿಕ ಅನಿಶ್ಚಿತತೆ ಎದುರು ನಾಗರಿಕರ ಜವಾಬ್ದಾರಿ

ಸಕಾಲಿಕ
ನಂದೀಶ್ ಜಿ ಹೊಯ್ಸನಹಳ್ಳಿ 7

ಇಬ್ಬರು ಎವರೆಸ್ಟ್ ಚಾರಣಿಗರ ಸಾವು

ದೆಹಲಿ: ಮೌಂಟ್ ಎವರೆಸ್ಟ್ ಶಿಖರವನ್ನು ಒಂದೇ ದಿನ 274 ಪರ್ವತಾರೋಹಿಗಳು ಏರುವ ಮೂಲಕ ದಾಖಲೆ ಬರೆದ ಬೆನ್ನಿಗೇ ಭಾರತದ ಇಬ್ಬರು ಪರ್ವತಾರೋಹಿಗಳು ಇಳಿಯುವ ಸಂದರ್ಭ ತೀವ್ರ ಬಳಲಿಕೆಯಿಂದ ಮೃತಪಟ್ಟಿದ್ದಾರೆ. ಮೃತ ಪರ್ವತಾರೋಹಿಗಳನ್ನು ಅರುಣ್ ಕುಮಾರ್ ತಿವಾರಿ ಮತ್ತು ಸಂದೀಪ್ ಅರೆ ಎಂದು ಗುರುತಿಸಲಾಗಿದೆ. ಸಾವಿಗೆ ಅತಿಯಾದ ಬಳಲಿಕೆ ಕಾರಣ ಎಂದು ಹೇಳಲಾಗಿದೆ.

ಅನ್ನಭಾಗ್ಯ

ಪ್ರತಿ ತಿಂಗಳು ಪಡಿತರದಾರರಿಗೆ
10 ಕೆಜಿ ಉಚಿತ ಆಹಾರಧಾನ್ಯ

ಯಾರೂ ಹಸಿವಿನಿಂದ ಮಲಗಬಾರದು ಎಂಬ ಸಂಕಲ್ಪದೊಂದಿಗೆ, ಕೋಟ್ಯಂತರ ಕುಟುಂಬಗಳಿಗೆ ಪೌಷ್ಟಿಕ ಆಹಾರದ ಭದ್ರತೆ ನೀಡುವ ಮೂಲಕ ಕರ್ನಾಟಕದ ಗ್ಯಾರಂಟಿ ಸರ್ಕಾರವು ಕಳೆದ ಮೂರು ವರ್ಷಗಳಿಂದ ಆರೋಗ್ಯವಂತ ಸಮಾಜಕ್ಕೆ ಆಧಾರವಾಗಿದೆ

ಅನ್ನಭಾಗ್ಯ ಯೋಜನೆಯಡಿ ಉಚಿತ ಆಹಾರಧಾನ್ಯ ವಿತರಿಸಲು ಈವರೆಗೆ
₹18,897 ಕೋಟಿ
ವೆಚ್ಚ ಮಾಡಲಾಗಿದ್ದು, ಹಸಿವು ಮುಕ್ತ ಕರ್ನಾಟಕದ ಗುರಿಯನ್ನು ತಲುಪಿದ್ದೇವೆ

ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಅನ್ನಭಾಗ್ಯ ಯೋಜನೆಯಡಿ
4.26 ಕೋಟಿ
ಪಡಿತರದಾರರು (ಪ್ರತಿ ತಿಂಗಳು) ಮೂರು ಹೊತ್ತು ನೆಮ್ಮದಿಯಿಂದ ಊಟ ಮಾಡುತ್ತಿದ್ದಾರೆ

ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

'ಅನ್ನಭಾಗ್ಯ'ದಿಂದಾಗಿರುವ ಬದಲಾವಣೆ ತಿಳಿಯಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಮಾನ್ಯ ಸಚಿವರಾದ ಶ್ರೀ ಕೆ.ಹೆಚ್. ಮುನಿಯಪ್ಪರವರು ಅನ್ನಭಾಗ್ಯ ಯೋಜನೆಗೆ ಚಾಲನೆ ನೀಡುತ್ತಿರುವುದು

ಶಕ್ತಿ ಗೃಹ ಜ್ಯೋತಿ ಗೃಹಲಕ್ಷ್ಮಿ ಯುವನಿಧಿ
CMofKarnataka https://dipr.karnataka.gov.in/
ಕರ್ನಾಟಕ ವಾರ್ತೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-480/25-26/624/2026-27(E-193290) ದಿನಾಂಕ: 21.05.2026

ತಿದ್ದುಪಡಿ ಪ್ರಕಟಣೆ

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಸೂಲಿಕುಂಟೆ ಗ್ರಾಮದ ಸರ್ವೆ ನಂ, 28/2, 28/3, 28/4, 28/5, 28/6, 29/14 29/15ರಲ್ಲಿ ಒಟ್ಟು 5ಎ-25ಗುಂಟೆ ವಿಸ್ತೀರ್ಣದ ಪ್ರದೇಶದ ಭೂಉಪಯೋಗ ಬದಲಾವಣೆ ಕುರಿತು ದಿನಾಂಕ 08.04.2026 ರಂದು ಪ್ರಕಟಿಸಲಾಗಿದ್ದ ಪ್ರಕಟಣೆಯ ಪರಿಷ್ಕೃತ ಮಹಾಯೋಜನೆ-2015 ರ ಪ್ರಕಾರ ಭೂಉಪಯೋಗ ಕಲಂ ನಲ್ಲಿ "ವ್ಯವಸಾಯ" ವಲಯ ಎಂಬುದರ ಬದಲಾಗಿ **"ಭಾಗಶಃ ವ್ಯವಸಾಯ ಹಾಗೂ ಭಾಗಶಃ ವ್ಯಾಲಿ ಬಫರ್ (Cartographic error)"** ಎಂದು ತಿದ್ದಿ ಓದಿಕೊಳ್ಳತಕ್ಕದ್ದು. ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ.
ಸಹಾಯವಾಣಿ/ವಾಟ್ಸಪ್: 94831 66622 (24x7). @BDAOfficialGoK

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬೆ.ಅ.ಪ್ರಾ/ಕಾಇಂ(ವಿ)/183/2026-27 ದಿನಾಂಕ: 22.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ವಿದ್ಯುತ್ ಸಂಬಂಧಿತ ಕಾಮಗಾರಿಗಳಿಗೆ (ಇಂಡೆಂಟ್ ಸಂಖ್ಯೆ: BDA/2026-27/EL/WORK_INDENT247) ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ ಕೆಳಕಂಡಂತೆ ಇರುತ್ತದೆ: **ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ: (1)** ಟೆಂಡರ್ ದಾಖಲಾತಿಗಳು ಇ-ಪೋರ್ಟಲ್‌ನಲ್ಲಿ ಲಭ್ಯವಾಗುವ **ದಿನಾಂಕ: 23.05.2026. (2)** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **29.05.2026, 17.00 ಗಂಟೆಗೆ. (3)** ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ: **30.05.2026, 17.10 ಗಂಟೆಗೆ. (4)** ಟೆಂಡರ್‌ನ ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ: Refer to e-proc. ಆಸಕ್ತ ಗುತ್ತಿಗೆದಾರರು ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಲ್ಲಿ ವಿವರ ವೀಕ್ಷಿಸಬಹುದಾಗಿದೆ ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿದ್ಯುತ್ ವಿಭಾಗ, ಬೆ.ಅಂ.ಪ್ರಾ. ಸಂಪರ್ಕಿಸಲು ಕೋರಿದೆ.

ಸೂಚನೆ: ಯಾವುದೇ ಕಾರಣಾಂತರಗಳಿಂದಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಾಖಲಾತಿಗಳನ್ನು Upload ಮಾಡಲು ವಿಳಂಬವಾದಲ್ಲಿ ಪರಿಷ್ಕೃತ/ಮಾರ್ಪಡಿತ ಟೆಂಡರ್ ವೇಳಾಪಟ್ಟಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು.

ಸಹಾಯವಾಣಿ/ ವಾಟ್ಸಪ್: 94831 66622 (24x7). @BDAOfficialGoK

ಸಹಿ/- ಕಾರ್ಯಪಾಲಕ ಅಭಿಯಂತರರು(ವಿದ್ಯುತ್),
ವಿದ್ಯುತ್ ವಿಭಾಗ, ಬೆಂಅಪ್ರಾ, ಬೆಂಗಳೂರು.

ಕರ್ನಾಟಕ ಅರಣ್ಯ ಇಲಾಖೆ

ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ತಿಪಟೂರು ಉಪವಿಭಾಗ, (ಪ್ರಾದೇಶಿಕ), ವಿದ್ಯಾನಗರ, ಕಲ್ಪತರು ಕಾಲೇಜು ಎದುರು, ಬಿ.ಹೆಚ್. ರಸ್ತೆ, ತಿಪಟೂರು - 572 201, ಇ-ಮೇಲ್ : acftipaturu@gmail.com

ಸಂಖ್ಯೆ : ಸ.ಅ.ಸಂ./ತಿ.ಉ.ವಿ./ಇ-ಟೆಂಡರ್/ಸಿಆರ್-09/2026-27
ದಿನಾಂಕ : 14-05-2026

ಇ-ಟೆಂಡರ್ ಪ್ರಕಟಣೆ

2026-27 ನೇ ಸಾಲಿನಲ್ಲಿ KFDF, DDF, AOA, CAMPA ಯೋಜನೆಯಡಿ **ತುಮಕೂರು ಪ್ರಾದೇಶಿಕ ವಿಭಾಗ, ತಿಪಟೂರು ಉಪ ವಿಭಾಗದ, ಪ್ರದೇಶದಲ್ಲಿ ಹೊಸ ಕಾಮಗಾರಿ ಹಾಗೂ ಇನ್ನಿತರೆ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳಲು** 2026-27 ನೇ ಸಾಲಿಗೆ ನೋಂದಾಯಿಸಿದ ಅರಣ್ಯ ಗುತ್ತಿಗೆದಾರರಿಂದ ಇ-ಟೆಂಡರ್‌ಗಳನ್ನು ದಾಖಲಿಸಲು ಕೋರಿ ಟೆಂಡರ್ ಆಹ್ವಾನಿಸಲಾಗಿದೆ.

ಒಟ್ಟು 63 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ. 27,00,750/- ಗಳಿಗೆ ಇ.ಎಂ.ಡಿ. ಮೊತ್ತ : ರೂ. 67,519/- ಮತ್ತು ಕನಿಷ್ಠ ಅಂದಾಜು ಮೊತ್ತ : ರೂ. 1,21,550/- ಗಳಿಗೆ ಇ.ಎಂ.ಡಿ. ಮೊತ್ತ : ರೂ. 1,519/- ಗಳಾಗಿರುತ್ತದೆ. ದಿನಾಂಕ : 26-05-2026 ರ ಅಪರಾಹ್ನ 3.00 ಗಂಟೆಯು ವರೆಗೆ ಟೆಂಡರ್ ಸಲ್ಲಿಸಬಹುದಾಗಿದೆ ಹಾಗೂ ದಿನಾಂಕ : 27-05-2026 ರ ಅಪರಾಹ್ನ 3.00 ಗಂಟೆಗೆ ತಾಂತ್ರಿಕ ಬಿಡ್ಡುಗಳನ್ನು ತೆರೆಯಲಾಗುವುದು. ಪರಿಮಾಣ, ಇ.ಎಂ.ಡಿ. ಹಾಗೂ ಇನ್ನಿತರೆ ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ.

ವೆಬ್‌ಸೈಟ್ ವಿಳಾಸ : http://www.kppp.karnataka.gov.in

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ತಿಪಟೂರು ಉಪ ವಿಭಾಗ, ತಿಪಟೂರು.

ಡಿಐಪಿಆರ್/ತುಮಕೂರು/15/ಮಣಿಪಾಲ್/2026-27

ಕರ್ನಾಟಕ ಸರ್ಕಾರ

ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಅಸಂ/ಟೆಂಡರ್-ಕಾಂಪಾ/ಸಿಆರ್-3/2025-26/1 ದಿ:20.05.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ)

2026-27 ನೇ ಸಾಲಿನಲ್ಲಿ ಕಾಂಪಾ ಲೆಕ್ಕ ಶೀರ್ಷಿಕೆಯಡಿ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಅನುಬಂಧದಲ್ಲಿ ನಮೂದಿಸಲಾದ, "ಮುಂಗಡ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000 ರ ಅನ್ವಯ 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರದಲ್ಲಿ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಕಾಲ್ -2 ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

1. ಇ-ಟೆಂಡರು ಸಲ್ಲಿಸಲು ಕೊನೆಯ ದಿನಾಂಕ: 29.05.2026 ಅಪರಾಹ್ನ 4.00 ಗಂಟೆಯವರೆಗೆ **2.** ಟೆಂಡರು ತೆರೆಯುವ ದಿನಾಂಕ: 30.05.2026 ಅಪರಾಹ್ನ 4.30 ಗಂಟೆ

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/96/05/274

ಕರ್ನಾಟಕ ಸರ್ಕಾರ

ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಅಸಂ/ಟೆಂಡರ್-ಕಾಂಪಾ/ಸಿಆರ್-3/2025-26/1 ದಿ:20.05.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ)

2026-27 ನೇ ಸಾಲಿನಲ್ಲಿ ಕಾಂಪಾ ಲೆಕ್ಕ ಶೀರ್ಷಿಕೆಯಡಿ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಅನುಬಂಧದಲ್ಲಿ ನಮೂದಿಸಲಾದ, "ಮುಂಗಡ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000 ರ ಅನ್ವಯ 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರದಲ್ಲಿ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಕಾಲ್ -2 ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

1. ಇ-ಟೆಂಡರು ಸಲ್ಲಿಸಲು ಕೊನೆಯ ದಿನಾಂಕ: 29.05.2026 ಅಪರಾಹ್ನ 4.00 ಗಂಟೆಯವರೆಗೆ **2.** ಟೆಂಡರು ತೆರೆಯುವ ದಿನಾಂಕ: 30.05.2026 ಅಪರಾಹ್ನ 4.30 ಗಂಟೆ

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/96/05/274

ಮೇ 26ರಿಂದ ಸಿಇಟಿ ಪ್ರಕ್ರಿಯೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ವಿಶೇಷ ಚೇತನರ ಕೋಟಾದಡಿ ಕ್ಲೇಮ್ ಮಾಡಿರುವ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ ಮೇ 26ರಿಂದ ಜೂನ್ 2ರವರೆಗೆ ನಡೆಯಲಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ತಿಳಿಸಿದೆ.ಅರ್ಜಿಯಲ್ಲಿ ಕ್ಲೇಮ್ ಮಾಡಿರುವ ಅಭ್ಯರ್ಥಿಗಳು ಕೆಇಎ ವೆಬ್‌ಸೈಟ್‌ನಲ್ಲಿ ಇರುವ ಲಿಂಕ್ ಮೂಲಕ ಮುಂಗಡವಾಗಿ ದಿನಾಂಕ ನಿಗದಿಪಡಿಸಿಕೊಂಡು ತಪಾಸಣೆಗೆ ಆಸ್ಪತ್ರೆಗಳಿಗೆ ಹೋಗಲು ತಿಳಿಸಿದೆ.

ಸಮಗ್ರ ಶಿಕ್ಷಣ ಕರ್ನಾಟಕ

"ಬದಲಾವಣೆಯ ಶಿಕ್ಷಣ ಭವಿಷ್ಯದ ನಿರ್ಮಾಣ" 2025-26
ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಶಾಲಾ ಶಿಕ್ಷಣ ಇಲಾಖೆ
ಸಮಗ್ರ ಶಿಕ್ಷಣ-ಕರ್ನಾಟಕ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
ssa16chikkaballapur@gmail.com, Phone No : 08156-273395

ಸಂಖ್ಯೆ:ಸಶಿಕ/ಕೆ.ಜಿ.ಬಿ.ವಿ/ಸಿ.ಆ.ಪೂ/01/2025-26 ದಿನಾಂಕ: 20.05.2026

ಟೆಂಡರ್ ಪ್ರಕಟಣೆ

2025-26ನೇ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿಯಲ್ಲಿ ಕೆಜಿಬಿವಿ ಟೈಪ್-1 ವಸತಿ ಶಾಲೆಗಳಾದ ಜಿ.ಮದ್ದೇಪಲ್ಲಿ-ಬಾಗೇಪಲ್ಲಿ ತಾ. ಇರಗಂಪಲ್ಲಿ-ಚಿಂತಾಮಣಿ ತಾ. ವಿದುರಾಶ್ವತ್ಥ-ಗೌರಿಬಿದನೂರು ತಾ. ಜೆ.ಪಿ.ನಗರ-ಗುಡಿಬಂಡೆ ತಾ. ಹಾಗೂ ಕೆಜಿಬಿವಿ ಟೈಪ್-4 ವಸತಿ ನಿಲಯಗಳಾದ (ಆರ್.ಎಂ.ಎಸ್.ಎ. ಹೆಣ್ಣು ಮಕ್ಕಳ ವಸತಿ ನಿಲಯ) ಜಿ.ಮದ್ದೇಪಲ್ಲಿ-ಬಾಗೇಪಲ್ಲಿ ತಾ. ದೊಡ್ಡಗಂಜೂರು-ಚಿಂತಾಮಣಿ ತಾ. ವಿದುರಾಶ್ವತ್ಥ-ಗೌರಿಬಿದನೂರು ತಾ. ಜೆ.ಪಿ.ನಗರ-ಗುಡಿಬಂಡೆ ತಾ. ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಸಿದ್ಧಪಡಿಸಿದ ಆಹಾರ ಪೂರೈಕೆಗಾಗಿ ಅರ್ಹ ಹೊರಗುತ್ತಿಗೆ ಏಜೆನ್ಸಿಯ/ಕಂಪನಿ ಸಂಸ್ಥೆಯನ್ನು ಆಯ್ಕೆ ಮಾಡಿ ಆಹಾರ ಪೂರೈಸುವ ಸಂಬಂಧ ಮರು ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ **http://www.eproc.karnataka.gov.in** ನಲ್ಲಿ ಮಾಹಿತಿ ಪಡೆಯಬಹುದು. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 05.06.2026 ಸಮಯ: 5:00 ಗಂಟೆ.**

ಸಹಿ/- ಉಪನಿರ್ದೇಶಕರು(ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ-ಕರ್ನಾಟಕ, ಚಿಕ್ಕಬಳ್ಳಾಪುರ ಜಿಲ್ಲೆ.

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:69/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ರಾಜ್ಯ ನಗರಾಭಿವೃದ್ಧಿ ಸಂಸ್ಥೆ,

ಆಡಳಿತ ತರಬೇತಿ ಸಂಸ್ಥೆ ಆವರಣ, ಲಲಿತ್‌ಮಹಲ್ ರಸ್ತೆ, ಮೈಸೂರು-570011
ದೂರವಾಣಿ ಸಂಖ್ಯೆ: 0821-2520116, 163, ಫ್ಯಾಕ್ಸ್ ನಂ. 0821-2520164
e-mail: directorsiud@gmail.com, website: www.siudmysore.gov.in

ಸಂಖ್ಯೆ: SIUD/ADMN0HOST/15/2025 ದಿನಾಂಕ : 21.05.2026

ಟೆಂಡರ್ ಪ್ರಕಟಣೆ (Through KPP Portal Only)

ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಆಡಳಿತ ತರಬೇತಿ ಸಂಸ್ಥೆ ಆವರಣ, ಲಲಿತ ಮಹಲ್ ರಸ್ತೆ, ಮೈಸೂರು ಇಲ್ಲಿಗೆ ಒಂದು ವರ್ಷದ ಅವಧಿಗೆ ಕುಕ್ಕಿಂಗ್ ಮತ್ತು ಕೇಟರಿಂಗ್ ಸೇವೆ ಒದಗಿಸಲು KPPP ಮೂಲಕ ಅರ್ಹ ಏಜೆನ್ಸಿಗಳಿಂದ ಈ ಕೆಳಕಂಡ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.1: ಟೆಂಡರ್ ಸಂಖ್ಯೆ: SIUD/2025-26/SE0003/CALL-2, ಸೇವಾ ವಿವರ: ರಾಜ್ಯ ನಗರಾಭಿವೃದ್ಧಿ ಸಂಸ್ಥೆಯಲ್ಲಿ ನಡೆಯುವ ತರಬೇತಿ ಕಾರ್ಯಕ್ರಮಗಳಿಗೆ ಹಾಜರಾಗುವ ಪ್ರಶಿಕ್ಷಣಾರ್ಥಿಗಳಿಗೆ ಊಟೋಪಚಾರ ಒದಗಿಸಲು ಕುಕ್ಕಿಂಗ್ ಮತ್ತು ಕೇಟರಿಂಗ್ ಸೇವೆಯನ್ನು ಒದಗಿಸುವ ಬಗ್ಗೆ. ಅಂದಾಜು ಮೊತ್ತ 90,00,000/-, ಇಎಂಡಿ ರೂ.1,80,000/-

ಟೆಂಡರ್ ದಸ್ತಾವೇಜನ್ನು KPPP ಪೋರ್ಟಲ್ **https://kppp.karnataka.gov.in** ರಲ್ಲಿ ವೀಕ್ಷಿಸಬಹುದು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ **04.06.2026** ರ ಸಂಜೆ 4.00 ರವರೆಗೆ, ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸಬಹುದಾಗಿದೆ

ಸಹಿ/- ಉಪ ನಿರ್ದೇಶಕರು,
ವಾಸಾಸಂಇ/ಮೈಸೂರು/ಎಸ್‌ಎಸ್‌ಸಿ/222/2026-27 **ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು**

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 25536567/26096832/910 ಫ್ಯಾಕ್ಸ್: 080-25536105
E-mail: purchase@kmf.coop

ಸಂ. ಕಹಾಮ/ಖರೀದಿ/ಟೆಂಡರ್-895/2025-26/Call-3 ದಿನಾಂಕ:22.05.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರ ಹಾಲು ಮಹಾ ಮಂಡಳ, ಬೆಂಗಳೂರು ಈ ಕೆಳಗೆ ತಿಳಿಸಿದ ಸೇವೆಪಡೆಯಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Description	Approximate Quantity for (two years)	EMD (Rs)
1	Production and Supply of Carbonated Flavoured Drinks brand Name Nandini Bounce (inclusive of processing,, standardization, packing, dispatch following FIFO) in Pet Bottles 200 Ml all Variants Bottle all including GST & Cess	10,80,000/- Bottle	1,88,000/-
2	Production and Supply of Carbonated Flavoured Drinks brand Name Nandini Bounce (inclusive of processing, standardization, packing, dispatch following FIFO) in Pet Bottles 500 Ml all Variants Bottle all including GST & Cess	7,200/- Bottle	
3	Production and Supply of Carbonated Flavoured Drinks brand Name Nandini Bounce (inclusive of processing, standardization, packing, dispatch following FIFO) in Pet Bottles 1ltr all Variants Bottle all including GST & Cess	7,200/- Bottle	

ಇ-ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ಮೂಲಕ ಟೆಂಡರ್ ಅನ್ನು ದಿನಾಂಕ 29.05.2026 ರಂದು 17.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಹಾಲು ಮಹಾ ಮಂಡಳ ಪರವಾಗಿ
ಸಹಿ/-
ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ

ಮೀನುಗಾರಿಕೆ ಇಲಾಖೆ

ಬೆಂಗಳೂರು ನಗರ ಜಿಲ್ಲಾಪಂಚಾಯಿತಿ ಮೀನುಗಾರಿಕೆ ಉಪ ನಿರ್ದೇಶಕರರವರ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಕಬ್ಬನ್ ಪಾರ್ಕ್, ಕೆ.ಆರ್.ಸರ್ಕಲ್, ಬೆಂಗಳೂರು-560 001
ದೂ:080-22350078, ಫ್ಯಾಕ್ಸ್: 080-22375660. E-mail: urbanadf@gmail.com

ಸಂಖ್ಯೆ: ಮೀಇ/ಪಿ.ಎಂ.ಎಸ್.ವೈ/01/2026-27 ದಿನಾಂಕ: 22.05.2026

"ಪ್ರಕಟಣೆ"

ವಿಷಯ: ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ವಿವಿಧ ಯೋಜನೆಗಳ ಸಹಾಯಧನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆ 2020-21 ರಿಂದ 2025-26 ನೇ ಸಾಲಿನವರೆಗೆ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯ ಉಳಿಕೆಯಾದ ಘಟಕಗಳಿಗೆ ಹಾಗೂ 2026-27 ನೇ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಫಲಾನುಭವಿ ಆಧಾರಿತ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ 2026-27 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಒಳನಾಡು ಮೀನುಗಾರಿಕೆಗೆ ಸಂಬಂಧಿಸಿದ ಯೋಜನೆಗಳಾದ ಮೀನುಕೃಷಿ ಕೊಳಗಳ ನಿರ್ಮಾಣ, ಮಧ್ಯಮ ಗಾತ್ರದ ಆರ್.ಎ.ಎಸ್/ಬಯೋ ಫ್ಲಾಕ್ ಘಟಕ 0.1 ಹೆಕ್ಟೇರ್ ಬಯೋಫ್ಲಾಕ್ ಘಟಕ, , ಮೀನು/ಅಕ್ವೇರಿಯಂ ಕಿಯೋಸ್ಕ್‌ಗಳ ಸ್ಥಾಪನೆ ಮತ್ತು ಇತರೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ನಿಯಮಾನುಸಾರ ಸಹಾಯಧನ ನೀಡಲಾಗುವುದು, ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಉಪನಿರ್ದೇಶಕರು, ಬೆಂಗಳೂರು ನಗರ ಜಿಲ್ಲಾ ಕಛೇರಿ ಹಾಗೂ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿಗಳನ್ನು ಸಂಪರ್ಕಿಸಲು ಈ ಮೂಲಕ ತಿಳಿಯಪಡಿಸಿದ ಸದರಿ ಯೋಜನೆಯ ಪ್ರಯೋಜನ ಪಡೆಯಲು ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 08.06.2026**

ಮುಂದುವರೆದು 2026-27 ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಕೇಂದ್ರವಲಯ/ರಾಜ್ಯವಲಯ/ಜಿಲ್ಲಾವಲಯದ ವಿವಿಧ ಯೋಜನೆಗಳಲ್ಲಿ ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಖರೀದಿ, ಮೀನುಮರಿ ಖರೀದಿಗೆ ಸಹಾಯ ಧನ, ಮತ್ಸ್ಯವಾಹಿನಿ ಯೋಜನೆ ಹಾಗು ಇತರೆ ಯೋಜನೆಗಳಿಗೆ ಸಹಾಯಧನ ಪಡೆಯಲು ಅಸಕ್ತ ಒಳನಾಡು ಮೀನುಗಾರರು/ ಮೀನುಕೃಷಿಕರು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿಗಳನ್ನು ಸಂಪರ್ಕಿಸಿ, ಅರ್ಜಿಗಳನ್ನು ಸಲ್ಲಿಸಲು ಈ ಮೂಲಕ ತಿಳಿಯಪಡಿಸಿದೆ.

ಹೆಚ್ಚಿನ ಮಾಹಿತಿಗಾಗಿ

1	ಮೀನುಗಾರಿಕೆ ಉಪ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ	9972189781
2	ಮೀನುಗಾರಿಕೆ ಸಹಾಯಕ ನಿರ್ದೇಶಕರು, ಬೆಂಗಳೂರು ದಕ್ಷಿಣ /ಪೂರ್ವ ತಾಲ್ಲೂಕು	9980873350
3	ಮೀನುಗಾರಿಕೆ ಸಹಾಯಕನಿರ್ದೇಶಕರು, ಬೆಂಗಳೂರು ಉತ್ತರ/ಯಲಹಂಕ ತಾಲ್ಲೂಕು	9590135993
4	ಮೀನುಗಾರಿಕೆ ಸಹಾಯಕ ನಿರ್ದೇಶಕರು, ಆನೇಕಲ್ ತಾಲ್ಲೂಕು	9980873350

ಸಹಿ/-ಮೀನುಗಾರಿಕೆ ಉಪ ನಿರ್ದೇಶಕರು
ಬೆಂಗಳೂರುನಗರ ಜಿಲ್ಲೆ.

ವಾಸಾಸಂಇ/ವಾ.ಪ್ರ/789/ಶಿರಡಿ ಸಾಯಿ/2026-27

ನೂರಕ್ಕೆ ನೂರು ಅಂಕದ ಕನಸಿಗೆ ತಣ್ಣೀರು | ಮರು ಮೌಲ್ಯಮಾಪನಕ್ಕಾಗಿ 1,200 ರು. ಬೃಹತ್ ಮೊತ್ತ

ಪ್ರತಿಭಾವಂತರಿಗೆ ಕೀ ಉತ್ತರಗಳ ಕಂಟಕ

ಡಾ.ವೆಂಕಟೇಶ ಗುಡೆಪ್ಪನವರ, ಮುಧೋಳ

ಶಿಕ್ಷಣ ಇಲಾಖೆಯ ಅಧಿಕೃತ 'ಕೀ' ಉತ್ತರಗಳ ಅಸ್ಪಷ್ಟತೆ ಹಾಗೂ ಮೌಲ್ಯಮಾಪಕರ ಯಾಂತ್ರಿಕ ಧೋರಣೆಯಿಂದಾಗಿ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳು ಅಂಕಗಳ ಸಮರದಲ್ಲಿ ಹಿನ್ನಡೆ ಅನುಭವಿಸುತ್ತಿದ್ದಾರೆ.



ವಿಶೇಷವಾಗಿ ಪ್ರಥಮ ಭಾಷೆ ಕನ್ನಡ ಪತ್ರಿಕೆಯಲ್ಲಿ ನೂರಕ್ಕೆ ನೂರು ಅಂಕ ಗಳಿಸಬೇಕಿದ್ದ ವಿದ್ಯಾರ್ಥಿ ಗಳು, ಮೌಲ್ಯ ಮಾಪನದ ಸಣ್ಣಪುಟ್ಟ ತಾಂತ್ರಿಕ ಎಡವಟ್ಟುಗಳಿಂದಾಗಿ 99 ಅಂಕಕ್ಕೆ ತೃಪ್ತಿಪಡುವಂತಾಗಿದೆ.

ವರ್ಷವಿಡೀ ಶ್ರದ್ಧೆಯಿಂದ ಓದಿ ಪರಿಪೂರ್ಣ ಅಂಕಗಳ ಕನಸು ಕಂಡಿದ್ದ ಪ್ರತಿಭಾವಂತರಿಗೆ ಈ ಒಂದು ಅಂಕದ ಕಡಿತವು ಭಾರಿ ಮಾನಸಿಕ ಹಿಂಸೆಯಾಗಿ ಪರಿಣಮಿಸಿದ್ದು, ಪೋಷಕರಲ್ಲಿ ಇಲಾಖೆಯ ಕಾರ್ಯವೈಖರಿಯ ಬಗ್ಗೆ ತೀವ್ರ ಆಕ್ರೋಶ ಮೂಡಿಸಿದೆ.

ಇತ್ತೀಚಿನ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ 'ಪತ್ರ ಲೇಖನ' ವಿಭಾಗವು ಗೊಂದಲದ ಗೂಡಾಗಿರುವುದು ಬೆಳಕಿಗೆ ಬಂದಿದೆ. ಶಿಕ್ಷಣ ಸಚಿವರಿಗೆ ಪತ್ರ ಬರೆಯುವ ಪ್ರಶ್ನೆಯಲ್ಲಿ ಸಚಿವರ ಕಾರ್ಯಾಲಯದ ಪೂರ್ಣ ವಿಳಾಸವನ್ನೇ ನೀಡಿರುವುದಿಲ್ಲ. ಆದರೂ ಮೌಲ್ಯಮಾಪಕರು 'ಕೀ' ಉತ್ತರವನ್ನು ಕುರುಡಾಗಿ ಅನುಸರಿಸಿ, ಕೇವಲ 'ಶಿಕ್ಷಣ ಸಚಿವರು ಚಿಕ್ಕಮಗಳೂರು' ಎಂದು ಬರೆದ ವಿದ್ಯಾರ್ಥಿಗಳ ಅಂಕಗಳನ್ನು ಕಡಿತಗೊಳಿಸುತ್ತಿದ್ದಾರೆ. ಇಲಾಖೆಯ ಮಾರ್ಗಸೂಚಿಯಂತೆ 'ಇಂದ', 'ಗೆ', 'ವಿಷಯ' ಮತ್ತು 'ಸಂಬೋಧನೆ'ಯನ್ನು ವಿದ್ಯಾರ್ಥಿಗಳು ಸಮರ್ಪಕವಾಗಿ ಬರೆದಿದ್ದರೂ, ಪ್ರಶ್ನೆಯಲ್ಲಿ ಇಲ್ಲದ ವಿಳಾಸದ ನೆಪವೊಡ್ಡಿ ಅಂಕ ಕಡಿತಗೊಳಿಸಿರುವುದು ಮೌಲ್ಯಮಾಪನದ ಮೂಲ ಮಾನದಂಡಗಳ ಉಲ್ಲಂಘನೆಯಾಗಿದೆ.

ಮೌಲ್ಯಮಾಪಕರ ಈ ಅಚಾತುರ್ಯದಿಂದಾಗಿ ಅಂಕ ಕಳೆದುಕೊಂಡ ಬಡ ವಿದ್ಯಾರ್ಥಿಗಳು ಈಗ ಮರುಮೌಲ್ಯಮಾಪನದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಒಂದು ಅಂಕದ ಮರುಮೌಲ್ಯಮಾಪನಕ್ಕಾಗಿ 1,200 ರು. ಬೃಹತ್ ಮೊತ್ತವನ್ನು ಪಾವತಿಸಿದ್ದು, ಇದು ಸಾಮಾನ್ಯ ಕುಟುಂಬಗಳಿಗೆ ಭರಿಸಲಾಗದ ಹೊರೆಯಾಗಿದೆ.

ಇಲಾಖೆಯ ಅಸ್ಪಷ್ಟ ಮಾಹಿತಿಗೆ ವಿದ್ಯಾರ್ಥಿಗಳು ದಂಡ ಕಟ್ಟಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇಷ್ಟೆಲ್ಲಾ ಕಷ್ಟಪಟ್ಟು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದರೂ ಸಹ, ನಿರೀಕ್ಷಿತ ಅಂಕ ಸಿಗದೆ ಜಾಣ ವಿದ್ಯಾರ್ಥಿಗಳು ಮರುಕ ಪಡುವಂತಾಗಿದೆ. ವಿದ್ಯಾರ್ಥಿಗಳ ಈ ಪರಿಸ್ಥಿತಿಗೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಉತ್ತರಿಸಬೇಕು ಎಂಬ ಒತ್ತಾಯ ಕೇಳಿಬರುತ್ತಿದೆ.

> **ನಾವು ಇಲಾಖೆಯ ಮಾರ್ಗಸೂಚಿಯಂತೆಯೇ ಪತ್ರ ಬರೆದಿದ್ದೇವೆ. ಪ್ರಶ್ನೆಯಲ್ಲಿ ವಿಳಾಸದ ಅಸ್ಪಷ್ಟತೆ ಇದ್ದಾಗ ಅದಕ್ಕೆ ವಿದ್ಯಾರ್ಥಿಗಳನ್ನು ಹೊಣೆ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಇದು ನಮ್ಮ ಪರಿಶ್ರಮಕ್ಕೆ ಸಿಕ್ಕ ಪ್ರತಿಫಲವೇ? ಕೂಡಲೇ ಸಂಬಂಧಿಸಿದ ಅಧಿಕಾರಿಗಳು ನಮಗೆ ನ್ಯಾಯ ಒದಗಿಸಬೇಕಾಗಿದೆ.**
> **-ನೊಂದ ವಿದ್ಯಾರ್ಥಿಗಳು**

ಅನ್ಯಾಯಕ್ಕೊಳಗಾದ ವಿದ್ಯಾರ್ಥಿಗಳ ಪರವಾಗಿ ನಿಂತಿರುವ ಕನ್ನಡ ಭಾಷಾ ಶಿಕ್ಷಕರು, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಮರುಮೌಲ್ಯಮಾಪನಕ್ಕೆ ಬೆಂಬಲ ನೀಡುತ್ತಿದ್ದಾರೆ.

ಮರುಮೌಲ್ಯಮಾಪನದ ಹಂತದಲ್ಲಾದರೂ ಇಲಾಖೆಯು ತನ್ನ ತಪ್ಪು ತಿದ್ದಿಕೊಂಡು, ವಿದ್ಯಾರ್ಥಿಗಳಿಗೆ ನ್ಯಾಯಯುತವಾದ ಅಂಕಗಳನ್ನು ನೀಡುವ ಮೂಲಕ ಅವರ ಮಾನಸಿಕ ಸ್ಥಿತಿಯನ್ನು ಸುಧಾರಿಸಬೇಕಿದ್ದ ಮರು ಮೌಲ್ಯಮಾಪಕರೂ ಸಹ ಅನ್ಯಾಯ ವೆಸಗಿದ್ದು ಅವರು ಸಹ ಅಂಕ ನೀಡದೆ 1200 ರೂ ಖರ್ಚು ಮಾಡಿದರೂ ವಿದ್ಯಾರ್ಥಿ ಪೆಚ್ಚು ಮೋರೆ ಹಾಕಿಕೊಂಡು ಕುಳಿತು ಕೊಳ್ಳುವಂತಾಗಿದೆ.

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ವಿಜಯನಗರ

E-mail:dhovijayanagara21@gmail.com. Telephone: 08394-227040

ಸಂಖ್ಯೆ:ಜಿಆಕುಕ/ಟೆಂಡರ್ ಪ್ರಕಟಣೆ/ಜಿ.ಆ/02/2025-26 ದಿನಾಂಕ:21.05.2026

ಮರು ಇ-ಟೆಂಡರ್ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ವಿಜಯನಗರ ಇದರ ಅಧೀನದ ನೂತನ 250 ಹಾಸಿಗೆ ಸಾಮರ್ಥ್ಯದ ಜಿಲ್ಲಾ ಆಸ್ಪತ್ರೆ, ಹೊಸಪೇಟೆಗೆ 2024-25 ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಅನುದಾನದಡಿಯಲ್ಲಿ ಅರವಳಿಕೆ ಶಾಸ್ತ್ರ ವಿಭಾಗಕ್ಕೆ ಮತ್ತು ಶಸ್ತ್ರ ಚಿಕಿತ್ಸಾ ಕೊಠಡಿಗೆ ಅವಶ್ಯ ವಿರುವ ವಿವಿದ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲು ಇ-ಸಂಗ್ರಹಣ ಕೋಶದ ವೆಬ್ ಸೈಟ್**(https://kppp.karnataka.gov.in)** ಮೂಲಕ ಮರು ಇ-ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಟೆಂಡರ್‌ದಾರರು **ದಿನಾಂಕ:22.05.2026ರಿಂದ ದಿನಾಂಕ:30.05.2026** ರ ಸಮಯ ಸಾಯಂಕಾಲ 05:00 ವರೆಗೆ ಅರ್ಜಿಗಳನ್ನು ಅಪ್‌ಲೋಡ್ ಮಾಡಬಹುದಾಗಿದೆ. (ಟೆಂಡರ್ ಮೊತ್ತ ರೂ.170.90ಲಕ್ಷ) **(INDENT NUMBER:DHFWS/2025-26/IND2111/CALL-2)**

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 08394-227040 ಕಛೇರಿ ಅವಧಿಯಲ್ಲಿ ಸಂಪರ್ಕಿಸ ಬಹುದಾಗಿದೆ ಅಥವಾ ಮುದ್ದಾಂ ಪಡೆಯಬಹುದಾಗಿದೆ.

ಸಹಿ/-ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ವಿಜಯನಗರ

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/92

ನದಿಯಲ್ಲಿ ಮುಳುಗಿ ಇಬ್ಬರು ಸಾವು

ಮಂಡ್ಯ: ಕಾವೇರಿ ನದಿಯಲ್ಲಿ ಈಜಲು ಹೋಗಿದ್ದ ಇಬ್ಬರು ಯುವಕರು ಸಾವನ್ನಪ್ಪಿರುವ ಘಟನೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಬಲಮುರಿಯಲ್ಲಿ ಜರುಗಿದೆ.



ಮೈಸೂರು ನಗರದ ಬೆಳಗೊಳ ಕೈಗಾರಿಕಾ ಪ್ರದೇಶದಲ್ಲಿರುವ ಕೇನ್ಸ್ ಟೆಕ್ನಾಲಜಿಯಲ್ಲಿ ಕೆಲಸ ಮಾಡುತ್ತಿದ್ದ ಚಾಮರಾಜನಗರ ಜಿಲ್ಲೆಯ ಸಂತೆಮರಳಿ ಬಳಿಯ ತಮರವಾಡಿ ಗ್ರಾಮದ ಮೋಹನ್ ಕುಮಾರ್(21) ಹಾಗೂ ಮೈಸೂರಿನ ಜಯಪುರ ಬಳಿಯ ಕೆಳಹಳ್ಳಿ ಗ್ರಾಮದ ರವಿಚಂದ್ರ (21) ಸಾವನಪ್ಪಿದ ಯುವಕರು.

ಈ ಇಬ್ಬರು ಐಟಿಐ ಮುಗಿಸಿ ಕೇನ್ಸ್ ಟೆಕ್ನಾಲಜಿಯಲ್ಲಿ ಕೆಲಸ ಮಾಡುತ್ತಿದ್ದು, ತನ್ನ ಮತ್ತೊಬ್ಬ ಸ್ನೇಹಿತ ವಿಕಾಸ್ ಜೊತೆಗೂಡಿ ಮೂವರು ಬಲಮುರಿ ಪ್ರವಾಸಿ ತಾಣಕ್ಕೆ ಬಂದಿದ್ದ ವೇಳೆ ದುರ್ಘಟನೆ ನಡೆದಿದೆ.

ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಶವಗಳನ್ನು ನದಿಯಿಂದ ಹೊರತೆಗೆಯಲಾಗಿದೆ.

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.

Email:itstaff_ulb_channarayapatna@yahoo.co.in, Phone:08176-255411

ನಂ:ಪು.ಸ.ಚ./ಪಅ/ಟೆಂಡರ್/02/2026-27 ದಿನಾಂಕ: 20-05-2026

"ಇ-ಪ್ರೂಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ"

ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯ 15ನೇ ಹಣಕಾಸು ಆಯೋಗದ ಆರೋಗ್ಯ ಅನುದಾನ ಮತ್ತು ಪುರಸಭಾ ಅನುದಾನದ ಕೆಳಕಂಡ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ 1999 ಮತ್ತು 2000 ನಿಯಮದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ, ಮತ್ತು ಇ-ಪ್ರೊಕೊರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ-ಪ್ರೊಕೊರ್‌ಮೆಂಟ್ (Visit:https://kppp.karnataka.gov.in/) ಪೋರ್ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ವೆಬ್ ಸೈಟ್ www.channarayapatnatown.mrc.gov.in ನಲ್ಲಿ ವೀಕ್ಷಿಸಬಹುದು. ಇ-ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ : 20-05-2026 to 04-06-2026 up to 17.30 hrs ಅಫ್‌ಲೋಡ್ ಮಾಡಲು ಕೊನೆಯ ದಿನಾಂಕ 1)ಟೆಂಡರ್‌ಗಳನ್ನು ತೆರೆಯುವ ದಿನಾಂಕ : 06-06-2026 at 11.00 hrs 2)ಟೆಂಡರ್ ಫಾರಂ ಬೆಲೆ: : ಇ-ಪೋರ್ಟಲ್‌ನಲ್ಲಿರುವಂತೆ ಕ್ರ.ಸಂ.ಇ-ಪೋರ್ಟಲ್‌ನಲ್ಲಿನ ಟೆಂಡರ್ ಇಂಡೆಂಟ್ 1)DMA/2026-27/IND6262 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)5.00 ಇಎಂಡಿ ಮೊತ್ತ (ರೂ ಗಳಲ್ಲಿ)12500/- 2)DMA/2026-27/IND6240 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)8.00 ಇಎಂಡಿ ಮೊತ್ತ (ರೂ ಗಳಲ್ಲಿ)20000/- 3)DMA/2026-27/IND6241 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)6.00 ಇಎಂಡಿ ಮೊತ್ತ (ರೂ ಗಳಲ್ಲಿ)15000/- 4)DMA/2026-27/IND6239 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)8.00 ಇಎಂಡಿ ಮೊತ್ತ (ರೂ ಗಳಲ್ಲಿ)20000/- 5)DMA/2026-27/IND6247 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)8.00 ಇಎಂಡಿ ಮೊತ್ತ (ರೂ ಗಳಲ್ಲಿ)20000/- 6)DMA/2026-27/IND6236 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)11.00 ಇಎಂಡಿ ಮೊತ್ತ (ರೂ ಗಳಲ್ಲಿ)27500/- 7)DMA/2025-26/IND6086/CALL-3 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)2.44 ಇಎಂಡಿ ಮೊತ್ತ (ರೂ ಗಳಲ್ಲಿ)6100/-

ಸಹಿ/-ಶ್ರೀ ಜಗದೀಶ ಗಂಗಣ್ಣನವರ್, ಕೆ.ಎ.ಎಸ್ ಉಪವಿಭಾಗಾಧಿಕಾರಿಗಳು ಹಾಸನ, ಹಾಗೂ ಆಡಳಿತಾಧಿಕಾರಿಗಳು, ಪುರಸಭೆ ಚನ್ನರಾಯಪಟ್ಟಣ

ಸಹಿ/-ಶ್ರೀ ಆರ್.ಯತೀಶ್ ಕುಮಾರ್ **K.M.A.S** ಮುಖ್ಯಾಧಿಕಾರಿ ಪುರಸಭೆ, ಚನ್ನರಾಯಪಟ್ಟಣ

ವಾಸಾಸಂಇ/ಹಿಸನಿ/ಹಾಸನ/155/ಕೆಎಸ್‌ಎಂಸಿಎ/2026-27

ತುಮಕೂರು ಮಹಾನಗರ ಪಾಲಿಕೆ, ತುಮಕೂರು

ದೂ-0816-2272200, ಸಹಾಯವಾಣಿ-9449872599
ಇ-ಮೇಲ್: ka.tumakuru.cc@gmail.com. ವೆಬ್‌ಸೈಟ್: www.tumakurucity.mrc.gov.in

ಸಂ:ತುಮಪಾ:ಆಶಾ/ಸಿಆರ್- /2026-27 ದಿನಾಂಕ: 19.05.2026

ಅಲ್ಪಾವಧಿ ಮರು ಟೆಂಡರ್ & ಇಓಐ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್2000ರ ನಿಯಮದಂತೆ ಈ ಕೆಳಕಂಡ ವಿವಿಧ ಕಾಮಗಾರಿಗೆ ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಮಾಹಿತಿಯನ್ನು kppp.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಪಾಲಿಕೆಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)
1	ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುವ ಸಭೆ ಸಮಾರಂಭಗಳಿಗೆ ಅವಶ್ಯಕವಿರುವ ಶಾಮಿಯಾನ, ಕುರ್ಚಿ, ಧ್ವನಿವರ್ಧಕ ಮತ್ತು ಪೀಠೋಪಕರಣಗಳನ್ನು ಬಾಡಿಗೆ ಆಧಾರದಲ್ಲಿ ಸರಬರಾಜು ಪಡೆಯುವ ಕಾಮಗಾರಿ	19.75
ಆಸಕ್ತರಿಂದ ಪ್ರಸ್ತಾವನೆ ಕೋರಿ ಪ್ರಕಟಣೆ		
1	ತುಮಕೂರು ಮಹಾನಗರ ಪಾಲಿಕೆ ಮಾಲಿಕತ್ವದ 3ಟಿಪಿಡಿ ಸಾಮಾರ್ಥ್ಯದ ಬಯೋ ಮಿಥನೇಷನ್ ಘಟಕವನ್ನು ಪಿಪಿಪಿ ಮಾದರಿಯಲ್ಲಿ ದುರಸ್ಥಿಪಡಿಸಿ ನಿರ್ವಹಿಸುವ ಕುರಿತು ಪ್ರಸ್ತಾವನೆ ಸಲ್ಲಿಸಲು	-
2	ತುಮಕೂರು ಮಹಾನಗರ ಪಾಲಿಕೆ ಮಾಲಿಕತ್ವದ ವಾಹನಗಳಿಗೆ ಅಳವಡಿಸಿರುವ ಜಿ.ಪಿ.ಎಸ್ ಯಂತ್ರಗಳಿಗೆ ಸಾಫ್ಟ್‌ವೇರ್ ನೀಡಿ ನಿರ್ವಹಿಸುವ ಕಾಮಗಾರಿ	-
3	ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಿಯಾವಾಕಿ ಅರಣ್ಯವನ್ನು ಸಿಎಸ್‌ಆರ್ ಅನುದಾನದಡಿ ನಿರ್ಮಿಸಲು, ನಿರ್ವಹಿಸುವ ಕುರಿತು ಪ್ರಸ್ತಾವನೆ ಸಲ್ಲಿಸಲು	
4	ಪಾಲಿಕೆ ಆರೋಗ್ಯ ಶಾಖೆಗೆ ಅವಶ್ಯಕವಿರುವ ರಸ್ತೆಗುಡಿಸಿದ ತ್ಯಾಜ್ಯ ತೆರವುಗೊಳಿಸಲು/ ಸಾಗಿಸಲು ಪುಷ್ ಕಾರ್ಟ ಸರಬರಾಜು ಮಾಡುವ ಕುರಿತು	

: ಅಲ್ಪಾವಧಿ ಟೆಂಡರ್ ಷೆಡ್ಯೂಲ್ ಹಾಗೂ ಇಓಐ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ :
1. ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ:20.05.2026
2. ಟೆಂಡರ್ ಸಲ್ಲಿಸುವ ಕೊನೆ ದಿನಾಂಕ:29-5-2026 ಸಾಯಂಕಾಲ 4.30 ಗಂಟೆವರೆಗೆ.
3. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 30-5-2026 ಸಾಯಂಕಾಲ 4.45 ಗಂಟೆಗೆ

ವಿ.ಸೂ- ಇಓಐ ಸಲ್ಲಿಸಲು ಆಸಕ್ತರು ಪಾಲಿಕೆಯ ಆರೋಗ್ಯ ಶಾಖೆಯಲ್ಲಿ ಇಓಐ ಫಾರ್ಮೆಟ್ ಪಡೆಯಬಹುದಿದೆ ಹಾಗೂ ತಮ್ಮ ಪ್ರಸ್ತಾವನೆಗಳನ್ನು ಮುಚ್ಚಿದ ಲಕೋಟೆಯಲ್ಲಿ ಈ ಕೆಳಗೆ ಸಹಿ ಮಾಡಿರುವವರಿಗೆ ನೀಡುವುದು.

ಸಹಿ/-ಕಾರ್ಯಪಾಲಕ ಅಭಿಯಂತರರು,
ತುಮಕೂರು ಮಹನಗರ ಪಾಲಿಕೆ, ತುಮಕೂರು.

DIPR/TUM/82/KSMCA/2026-27

ಹಾವೇರಿಯಲ್ಲಿ ಕಾಲು ಜಾರಿ ಬಿದ್ದು ತಂದೆ ಮಗ ಸಾವು

ಹಾವೇರಿ: ಕಾಲು ಜಾರಿ ನೀರಿನ ಹೊಂಡಕ್ಕೆ ಬಿದ್ದಿದ್ದ ವಿಶೇಷಚೇದನ ಮಗನನ್ನು ರಕ್ಷಿಸಲು ಹೋಗಿ ತಂದೆ ಮತ್ತು ಮಗ ಇಬ್ಬರೂ ಸಾವನ್ನಪ್ಪಿರುವ ದಾರುಣ ಘಟನೆ ಹಾವೇರಿಯ ಆಲದಕಟ್ಟಿ ಗ್ರಾಮದಲ್ಲಿ ಶುಕ್ರವಾರ ಬೆಳಗ್ಗೆ ನಡೆದಿದೆ. ಮೃತರನ್ನು 40 ವರ್ಷದ ಶಂಬುಲಿಂಗಪ್ಪ ಹಂಸಬಾವಿ ಮತ್ತು 8 ವರ್ಷದ ಶರತ ಹಂಸಬಾವಿ ಎಂದು ಗುರುತಿಸಲಾಗಿದೆ. ಮುಂಜಾನೆ ವಾಕಿಂಗ್‌ಗೆಂದು ಮಗುವನ್ನು ತಂದೆ ಕರೆದುಕೊಂಡು ಹೋಗಿದ್ದರು. ಗ್ರಾಮದ ಮಧ್ಯದಲ್ಲಿರುವ ಹೊಂಡ ಹಸಿರು ಪಾಚಿಯಿಂದ ಕೂಡಿದ್ದು ಇದು ತಿಳಿಯದೇ ಶರತ್ ನೀರಿಗೆ ಬಿದ್ದಿದ್ದನು. ಮಗನ ಪ್ರಾಣ ಉಳಿಸಲು ಹೋದ ತಂದೆಯೂ ನೀರಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ಸೂರ್ಯನಗರ ಕ್ರಿಕೆಟ್ ಸ್ಟೇಡಿಯಂಗೆ ಇಂದು ಅಡಿಗಲ್ಲು

← ಮೊದಲಪುಟದಿಂದ

ಸ್ಟೇಡಿಯಂನ ಮುಂಭಾಗದ ವಿನ್ಯಾಸ ಕರ್ನಾಟಕದ ಸಾಂಸ್ಕೃತಿಕ ಪರಂಪರೆ ಹಾಗೂ ಕ್ರಿಕೆಟ್ ಇತಿಹಾಸ ಬಿಂಬಿಸಲಿದೆ. ಇದರೊಂದಿಗೆ ದಿಗ್ಗಜ ಆಟಗಾರರ ನೆನಪಿಗಾಗಿ 'ಹಾಲ್ ಆಫ್ ಫೇಮ್' ಕೂಡ ಇರಲಿದೆ. ಎರಡನೇ ಹಂತದಲ್ಲಿ ಒಳಾಂಗಣ ಕ್ರೀಡಾಂಗಣ, ಈಜುಕೊಳ ಮತ್ತು ಬೃಹತ್ ಸಮಾವೇಶ ಸಭಾಂಗಣ ನಿರ್ಮಾಣವಾಗಲಿದ್ದು, ಇದನ್ನು ಕೆಎಚ್‌ಬಿ ಸೂರ್ಯ ಕ್ರೀಡಾಗ್ರಾಮ ಎಂದು ಕರೆಯಲಾಗುತ್ತದೆ. ಈ ಸ್ಟೇಡಿಯಂ ಪೂರ್ಣಗೊಂಡರೆ, ಅಹಮದಾಬಾದ್‌ನ ಮೋದಿ ಸ್ಟೇಡಿಯಂ ನಂತರ ಭಾರತದ ಎರಡನೇ ಅತಿ ದೊಡ್ಡ ಹಾಗೂ ವಿಶ್ವದ ಪ್ರಮುಖ ಬೃಹತ್ ಕ್ರಿಕೆಟ್ ಕ್ರೀಡಾಂಗಣಗಳ ಪಟ್ಟಿಗೆ ಸೇರಲಿದೆ. ಬೊಮ್ಮಸಂದ್ರ ಮತ್ತು ಎಲೆಕ್ಟ್ರಾನಿಕ್ ಸಿಟಿ ಐಟಿ ಕಾರಿಡಾರ್‌ಗೆ ಹತ್ತಿರವಿರುವುದರಿಂದ ಇದು ಬೆಂಗಳೂರಿನ ಕ್ರೀಡಾ ಮೂಲಸೌಕರ್ಯಕ್ಕೆ ಹೊಸ ದಿಕ್ಸೂಚಿಯಾಗಲಿದೆ ಎಂದು ಹೇಳಲಾಗಿದೆ.

ಸಮಾಚಾರ ಸಣ್ಣದಲ್ಲ

ದುಬಾರೆ ದುರಂತ: ಲೋಕಾದಲ್ಲಿ ದೂರು



ಮಡಿಕೇರಿ: ದುಬಾರೆ ಸಾಕಾನೆ ಶಿಬಿರದಲ್ಲಿ ಮೇ18 ರಂದು ಆನೆ ತುಳಿತಕ್ಕೆ ಮಹಿಳೆಯೊಬ್ಬರು ಸಾವನ್ನಪ್ಪಿದ ಘಟನೆ ಸಂಬಂಧ ರಾಜ್ಯ ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ, ಸ್ವಯಂ ಪ್ರೇರಿತ ದೂರು ದಾಖಲು ಮಾಡಿಕೊಂಡಿದ್ದಾರೆ. ದುಬಾರೆ ಸಾಕಾನೆ ಶಿಬಿರದಲ್ಲಿ ನಡೆದ ದುರಂತದಲ್ಲಿ ಮಹಿಳೆ ಮೃತಪಟ್ಟ ಸಂಬಂಧ ಅಧಿಕಾರಿಗಳ ನಿರ್ಲಕ್ಷ್ಯದ ಆರೋಪದಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ(7(2) ಮತ್ತು ಕಲಂ 9(3)(ಎ) ಪ್ರಕಾರ ಅಧಿಕಾರ ಚಲಾಯಿಸಿ ಸ್ವಯಂ ಪ್ರೇರಿತ ಪ್ರಕ್ರಿಯೆ ಪ್ರಾರಂಭಿಸಲಾಗುತ್ತದೆ. ಈ ಕ್ರಮವನ್ನು ಸುಮೊಟೊ ಪ್ರಕ್ರಿಯೆಗಳಿಗೆ ನೋಂದಾಯಿಸಲು ಕಚೇರಿಗೆ ನಿರ್ದೇಶಿಸಲಾಗಿದೆ. ಘಟನೆ ಸಂಬಂಧ ಕುಂದುಕೊರತೆ ಪರಿಹಾರ ಉದ್ದೇಶಕ್ಕಾಗಿ ಮತ್ತು ರಾಜ್ಯದ ಸಂಬಂಧಪಟ್ಟ ಅಧಿಕಾರಿಗಳ ನಿರ್ಲಕ್ಷ್ಯ ಅಥವಾ ದುರಾಡಳಿತ ವಿದೆಯೇ ಎಂದು ಪರಿಶೀಲಿಸಲು ಸೋಮವಾರ ಪೇಟೆ ಉಪ ವಲಯದ ಎಸಿಎಫ್ ಗೋಪಾಲ್ ಎ.ಎ ಮತ್ತು ಕುಶಾಲನಗರ ವಲಯ ಅರಣ್ಯ ಆರ್ ಎಫ್ಒ ರಕ್ಷಿತ್ ಅವರನ್ನು ಎದುರುದಾರರು ಎಂದು ಉಲ್ಲೇಖಿಸಿ ನೋಟೀಸ್ ನೀಡಲು ಕೆ.ಎನ್. ಫಣೀಂದ್ರ, ಅವರು ನಿರ್ದೇಶನ ನೀಡಿದ್ದಾರೆ.

ತಾಂಡಾದ ಯುವತಿ ಶಂಕಾಸ್ಪದ ಸಾವು

ಹಗರಿಬೊಮ್ಮನಹಳ್ಳಿ: ಪಟ್ಟಣದ ಹೊರ ವಲಯದ ಬಳಿ ಯುವತಿಯೊಬ್ಬರು ಗುರುವಾರ ರಾತ್ರಿ ಅನುಮಾನಸ್ಪದವಾಗಿ ಸಾವನ್ನಪ್ಪಿದ್ದಾರೆ. ಹೊಸಪೇಟೆ ತಾಲೂಕಿನ ಗರಗ ನಾಗಲಾಪುರ ತಾಂಡಾದ ಪ್ರಿಯಾಂಕ (27) ಸಾವನ್ನಪ್ಪಿದ ಯುವತಿ. ಯುವತಿಯನ್ನು ಆನೇಕಲ್ ತಾಂಡಾದ ಇಬ್ಬರು ಬೈಕ್‌ನಲ್ಲಿ ಕರೆದುಕೊಂಡು ಹೋಗಿದ್ದರು, ಅಗ್ನಿಶಾಮಕ ಠಾಣೆಯ ಬಳಿಯ ರಾಜ್ಯ ಹೆದ್ದಾರಿಯಲ್ಲಿ ಘಟನೆ ನಡೆದಿದೆ, ಯುವತಿ ತಲೆಗೆ ತೀವ್ರ ಪೆಟ್ಟಾಗಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಾವಿಗೆ ನಿಖರ ಕಾರಣ ತಿಳಿದಿಲ್ಲ, ಬೈಕ್ ಸವಾರರು ಪರಾರಿಯಾಗಿದ್ದಾರೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ಭೇಟಿ ನೀಡಿದ್ದು ತನಿಖೆ ನಡೆಸುತ್ತಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ದಿನ ವಿಶೇಷ

23 ಮೇ 2026 ಶನಿವಾರ

- » ಸೂರ್ಯೋದಯ : 5-44
- » ಸೂರ್ಯಾಸ್ತ : 7-03
- » ತಿಥಿ : ಸಪ್ತಮಿ
- » ನಕ್ಷತ್ರ : ಮಾಘಾ
- » ಸಂವತ್ಸರ : ಪರಾಭವ
- » ಅಯನ : ಉತ್ತರಾಯನ
- » ಋತು : ಗ್ರೀಷ್ಮ
- » ಮಾಸ : ಅಧಿಕ ಜ್ಯೇಷ್ಠ
- » ಪಕ್ಷ : ಶುಕ್ಲಪಕ್ಷ

ದಶಕಗಳಿಂದ ಜಲವ್ಯಾಜ್ಯಗಳಲ್ಲಿ ರಾಜ್ಯದ ಪರ ಕಾನೂನು ತಜ್ಞ ಮೋಹನ್ ಕಾತರಕಿ ವಕಾಲತ್ತು | ಕಾಂಗ್ರೆಸ್‌ನಿಂದ ಪ್ರವೇಶ ಸಾಧ್ಯತೆ

ಕಾತರಕಿಗೆ ಒಲಿಯುವುದೇ ರಾಜ್ಯಸಭೆ ಸದಸ್ಯತ್ವ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸೇರಿ ನಾಲ್ವರ ನಿವೃತ್ತಿಯಿಂದ ತೆರವಾಗಲಿರುವ ರಾಜ್ಯಸಭಾ ಸ್ಥಾನಗಳ ಪೈಕಿ ಒಂದಕ್ಕೆ ದಶಕಗಳಿಂದ ಕರ್ನಾಟಕದ ಜಲ ವಿವಾದಗಳ ಪರವಾಗಿ ವಾದಿಸುತ್ತಿರುವ ಹಿರಿಯ ವಕೀಲ, ಕಾನೂನು ತಜ್ಞ ಮೋಹನ್ ಕಾತರಕಿ ಅವರಿಗೆ ಒಲಿಯಲಿದೆ ಎನ್ನುವ ಮಾತುಗಳು ಶುರುವಾಗಿದೆ.

ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಪ್ರಧಾನಿ ದೇವೇಗೌಡ, ಬಿಜೆಪಿಯ ಈರಣ್ಣ ಕಡಾಡಿ ಮತ್ತು ನಾರಾಯಣ ಕೆ.ಅವರ ಅವಧಿ ಪೂರ್ಣಗೊಳ್ಳುತ್ತಿದ್ದು, ಈ ನಾಲ್ಕು ಸ್ಥಾನ ತುಂಬಲು ಜೂನ್ 18ರಂದು ಚುನಾವಣೆ ನಡೆಯಲಿದೆ. ಖರ್ಗೆ ಮತ್ತು ದೇವೇಗೌಡರು ರಾಜ್ಯಸಭೆಗೆ ಮರು ಪ್ರವೇಶ ಬಗ್ಗೆ ಚರ್ಚೆಗಳು ನಡೆಯುತ್ತಿರುವ ಮಧ್ಯೆ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ, ಕಾನೂನು-ಸಂವಿಧಾನ ತಜ್ಞ, ದೆಹಲಿಯಲ್ಲಿ ಕಳೆದ ನಾಲ್ಕೈದು ದಶಕಗಳಿಂದ ರಾಜ್ಯದ ಜಲವ್ಯಾಜ್ಯಗಳ ಹಿರಿಯ ವಕೀಲರಾಗಿ ಸೇವೆ ಸಲ್ಲಿಸುತ್ತಿರುವ ಮೋಹನ್ ಕಾತರಕಿ ಅವರ ಹೆಸರೂ ಕಾಂಗ್ರೆಸ್ ಪಾಳೆಯದಲ್ಲಿ ಚರ್ಚೆಗೆ ಬಂದಿರುವುದು ಕುತೂಹಲ ಕೆರಳಿಸಿದೆ.

ಚಿಂತಕರ ಚಾವಡಿ ಎಂದೇ ಗುರುತಿಸಿಕೊಂಡಿರುವ ರಾಜ್ಯಸಭೆಗೆ ರಾಜಕೀಯ ಹಿನ್ನೆಲೆಯಿರುವವರ ಆಯ್ಕೆ ಹೆಚ್ಚಾಗುತ್ತಿದೆ. ಕಾನೂನು, ಆಡಳಿತ ನೀತಿ, ಯೋಜನೆಗಳ ಬಗ್ಗೆ ವ್ಯಾಪಕ ಚರ್ಚೆಗಳಾಗಬೇಕಿರುವ ಮೇಲ್ಮನೆಯಲ್ಲಿ ಈಗ ಚರ್ಚೆ-ಸಂವಾದಗಳು ಕಾಣುವುದು ಕಡಿಮೆ. ಜ್ಞಾನವಂತರ ಬದಲಿಗೆ ಹಣಬಲ, ತೋಳ್ಬಲವುಳ್ಳ ವ್ಯಕ್ತಿಗಳು, ಪಕ್ಷ ಸಂಘಟನೆಗಳಲ್ಲಿ ಸೇವೆ ಸಲ್ಲಿಸಿರುವವರನ್ನು ಸಂಸತ್ತಿನ ಚಿಂತನಾ ವೇದಿಕೆಗೆ ಕಳುಹಿಸಿಕೊಡುತ್ತಿರುವುದರಿಂದ ರಾಜ್ಯಸಭೆಯಲ್ಲಿ ಬೌದ್ಧಿಕ ಸೆಣೆಸಾಟ ತಗ್ಗಿದೆ.

ಕರ್ನಾಟಕದಿಂದ ಆಯ್ಕೆಯಾದವರ ರಾಜ್ಯಸಭೆ ಸದನದೊಳಗಿನ ನಿರ್ವಹಣೆ ನೋಡಿದರೇ ಇದು ಅರ್ಥವಾಗುತ್ತದೆ. ಅಲ್ಲದೆ, ಕೆಲ ರಾಜ್ಯಸಭೆ ಸದಸ್ಯರಿಗೆ ಅಲ್ಲಿ ಚರ್ಚೆಗಳಾಗುವ ವಿಷಯಗಳ ಬಗ್ಗೆ ಕನಿಷ್ಠ ಅರಿವೂ ಇರುವುದಿಲ್ಲ. ಕರ್ನಾಟಕದಿಂದ ಆಯ್ಕೆಯಾಗಿರುವ ಸದಸ್ಯರಲ್ಲಿ ಅನೇಕರು ಬರೀ ಮೇಜು ಕುಟ್ಟುವುದಕ್ಕೆ ಸೀಮಿತಗೊಂಡಿರುವುದು ಅಲ್ಲಿನ ಪರಿಸ್ಥಿತಿಗೆ ಕನ್ನಡಿ ಹಿಡಿದಿದೆ. ಹೀಗಿರುವಾಗ, ಕೃಷಿ, ರಾಷ್ಟ್ರೀಯ- ಅಂತಾರಾಷ್ಟ್ರೀಯ ಜಲತಜ್ಞ, ಕರ್ನಾಟಕದ ಜಲ- ವ್ಯಾಜ್ಯಗಳ ಬಗ್ಗೆ ಹಲವು ದಶಕಗಳಿಂದ ಕಾನೂನು ಹೋರಾಟ ಮಾಡಿರುವ ಮೋಹನ್ ಕಾತರಕಿ ಅವರ ಹೆಸರು ಮುನ್ನೆಲೆಗೆ ಬಂದಿರುವುದು ಗಮನಸೆಳೆದಿದೆ.

ಸುಪ್ರೀಂಕೋರ್ಟ್‌ನ ಹಿರಿಯ ವಕೀಲರಾಗಿರುವ ಕಾತರಕಿ, ಕರ್ನಾಟಕ, ಕೇರಳ, ಒಡಿಶಾ ಮತ್ತು ಪಂಜಾಬ್ ಸೇರಿ ಹಲವಾರು ರಾಜ್ಯಗಳ ಅಂತಾರಾಜ್ಯ ನದಿ ವಿವಾದಗಳಲ್ಲಿ (ಕಾವೇರಿ, ಕೃಷ್ಣಾ, ಮಹಾದಾಯಿ, ಮಹಾನದಿ, ವಂಶಧಾರ ಮತ್ತು ರಾವಿ-ಬಿಯಾಸ್) ಸಾಂವಿಧಾನಿಕ ಪೀಠ ಮತ್ತು ಅಂತಾರಾಜ್ಯ ನ್ಯಾಯಮಂಡಳಿಗಳ ಮುಂದೆ ತಾಂತ್ರಿಕ-ಕಾನೂನು ವಿಷಯಗಳ ಬಗ್ಗೆ ಹಲವು ದಶಕಗಳಿಂದ ವಾದ ಮಂಡಿಸಿದ್ದಾರೆ. ಅದೇ ರೀತಿ ಪಾಟಿ ಸವಾಲು ಮಾಡುವ ಮೂಲಕ ತೀಕ್ಷ್ಣವಾದ, ವಿಶ್ಲೇಷಣಾತ್ಮಕ, ವಿಮರ್ಶಾತ್ಮಕ ಚಿಂತನಾ ಕೌಶಲ್ಯ ಪ್ರದರ್ಶಿಸಿದ್ದಾರೆ. ಸಿಂಧೂ ಜಲ ಒಪ್ಪಂದದ ದುರ್ಬಲತೆಗಳು, ಬ್ರಹ್ಮಪುತ್ರ ಚೀನೀ ಅಣೆಕಟ್ಟುಗಳು, ಫರಕ್ಕಾ ಹೂಳು/ಪ್ರವಾಹ ಸಮಸ್ಯೆಗಳು, ನೀರಾವರಿ ಆಧುನೀಕರಣ, ಕೃಷಿ, ಹವಾಮಾನ ಬದಲಾವಣೆಯ ಪರಿಣಾಮಗಳು, ಪರಿಸರ ವಿಷಯಗಳ ಕುರಿತ ಕಾನೂನು ದೃಷ್ಟಿಕೋನ ಗಳ ಕುರಿತು ಆಳವಾದ ಜ್ಞಾನ ಹೊಂದಿರುವ ಮೋಹನ್ ಕಾತರಕಿ ಅವರಿಗೆ ಸ್ಥಳೀಯ ಮಟ್ಟದಿಂದಲೂ ಬೆಂಬಲ ಸಿಕ್ಕಿದೆ.

ಅಂಜಲಿ ನಿಂಬಾಳ್ಕರ್ ಹೆಸರು ಮುನ್ನೆಲೆಗೆ

ರಾಜ್ಯಸಭೆ ಸ್ಥಾನಕ್ಕೆ ಬೆಳಗಾವಿ ಮೂಲದ ಅಂಜಲಿ ನಿಂಬಾಳ್ಕರ್ ಅವರ ಹೆಸರೂ ಸೇರಿ ಮತ್ತಿತರ ಕೆಲ ಹೆಸರುಗಳು ಕೇಳಿಬರುತ್ತಿದೆ. ಕೃಷಿ, ನೀರಾವರಿ, ಆಡಳಿತ ನೀತಿ, ಕಾನೂನು, ಸಂವಿಧಾನದ ಬಗ್ಗೆ ತಿಳಿದುಕೊಂಡಿರುವವರಿಗೆ ಕಾಂಗ್ರೆಸ್ ನಾಯಕರು ಮಣೆ ಹಾಕುತ್ತಾರೋ ಅಥವಾ ಜಾತಿ, ಆರ್ಥಿಕ ಲಾಭ ಲೆಕ್ಕಾಚಾರಕ್ಕೆ ಪೂರಕವಾಗಿ ಅಭ್ಯರ್ಥಿ ಆಯ್ಕೆ ಮಾಡುತ್ತಾರೋ ಎನ್ನುವ ಕುತೂಹಲ ಅನೇಕರಲ್ಲಿದೆ.

ಕಾತರಕಿಗೆ ಬೆಂಬಲ ಸೂಚಿಸಿ ಸಂಘಟನೆಗಳಿಂದ ಪತ್ರ

ಬೆಳಗಾಗಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ, ಕೃಷ್ಣಾ ಮೇಲ್ದಂಡೆ ಯೋಜನೆ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಹೋರಾಟ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳು ಕಾತರಕಿ ಅವರ ಹೆಸರಿಗೆ ಬೆಂಬಲ ಸೂಚಿಸಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರವನ್ನೂ ಬರೆದಿವೆ. ಕರ್ನಾಟಕದ ಕೃಷ್ಣಾ ನದಿಗೆ ಸಂಬಂಧಿಸಿದ ಆಲಮಟ್ಟಿ ಜಲಾಶಯದ ಎತ್ತರವನ್ನು 519ರಿಂದ 524 ಮೀಟರ್ ಎತ್ತರಕ್ಕೆ ಏರಿಸಬೇಕೆಂದು ಕೃಷ್ಣಾ ನ್ಯಾಯಾಧಿಕರಣ ತೀರ್ಪು ನೀಡುವುದರ ಹಿಂದೆ ಕಾತರಕಿ ಅವರ ಪರಿಶ್ರಮ ತುಂಬಾ ಇದೆ ಎಂದು ಸಂಘಟನೆಗಳು ಪತ್ರದಲ್ಲಿ ದಾಖಲು ಮಾಡಿವೆ.

ಎದೆನೋವು ತಾಳದೇ ಗುಂಡಿಕ್ಕಿಕೊಂಡು ಸಾವು

ಕೆಎಲ್‌ಇ ವೈದ್ಯ ಡಾ.ದಿನೇಶ್ ಆತ್ಮಹತ್ಯೆ



ಬೆಳಗಾವಿ: ಕಳೆದ 40 ವರ್ಷಗಳಿಂದ ಬೆಳಗಾವಿಯ ಕೆಎಲ್‌ಇ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಹಿರಿಯ ವೈದ್ಯ ಡಾ. ದಿನೇಶ್ ಭಟ್ಕಳ್ ಅವರು ಶುಕ್ರವಾರ ಮಂಡೋಳಿ ರಸ್ತೆಯಲ್ಲಿರುವ ತಮ್ಮ ಮನೆಯಲ್ಲಿ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ದಿನೇಶ್ ಭಟ್ಕಳ ಅವರು ಶುಕ್ರವಾರ ಬೆಳಗ್ಗೆ ತಮ್ಮ ವೈಯಕ್ತಿಕ ಪಿಸ್ತೂಲಿನಿಂದ ಗುಂಡು ಹಾರಿಸಿಕೊಂಡು ಸಾವಿಗೆ ಶರಣಾಗಿದ್ದಾರೆ. ಸಾವಿಗೂ ಮುನ್ನ ಕೆಎಲ್‌ಇ ಮಾಜಿ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅವರಿಗೆ ಸಂದೇಶ ಕಳುಹಿಸಿದ್ದಾರೆ. ಶ್ವಾಸಕೋಶದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ದಿನೇಶ್ ಅವರು ಅಂಕೋಲಾ ಮೂಲದವರು ಮತ್ತು ಅಂಕೋಲಾದಲ್ಲಿರುವ ಕೆಎಲ್‌ಇ ಸಂಸ್ಥೆಯ ಆಸ್ಪತ್ರೆಯ ಆಡಳಿತಾಧಿಕಾರಿಯಾಗಿದ್ದರು. ಈಚೆಗೆ ಅವರು ಬೆಳಗಾವಿಯ ಮನೆಗೆ ಬಂದು ನೆಲೆಸಿದ್ದರು. ಶ್ವಾಸಕೋಶ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು ಸಹಿಸಲಾಗದ ನೋವನ್ನು ಅನುಭವಿಸುತ್ತಿದ್ದರು ಎನ್ನಲಾಗಿದೆ. ತಮಗಾಗುತ್ತಿರುವ ನೋವಿನ ಕುರಿತು ಆಗಾಗ ತಮ್ಮ ಸ್ನೇಹಿತರೊಡನೆ ಹಂಚಿಕೊಳ್ಳುತ್ತಿದ್ದರು. ಶುಕ್ರವಾರ ಸಹ ಬೆಳಗ್ಗೆ ಎದ್ದ ತಕ್ಷಣ ದಿನೇಶ್ ಅವರಿಗೆ ಎದೆಯಲ್ಲಿ ಸಹಿಸಲಾಗದ ನೋವು ಕಾಣಿಸಿಕೊಂಡಿದೆ. ಹೀಗಾಗಿ, ಅವರು ತಮ್ಮ ಮನೆಯಲ್ಲಿದ್ದ ರಿವಾಲ್ವಾರ್ ತೆಗೆದುಕೊಂಡು ಮನೆಯ ಗ್ಯಾಲರಿ ಬಳಿ ಹೋಗಿ ಅಲ್ಲಿಯೇ ತಲೆಗೆ ಶೂಟ್ ಮಾಡಿಕೊಂಡು ಪ್ರಾಣ ಬಿಟ್ಟಿದ್ದಾರೆ.

ಪ್ರಭಾಕರ್ ಕೋರೆಗೆ ಕೊನೆ ಸಂದೇಶ

ವೈದ್ಯ ದಿನೇಶ್ ಆತ್ಮಹತ್ಯೆಗೆ ಶರಣಾಗುವ ಮುನ್ನ ತಮ್ಮ ಹಿತೈಷಿಗಳು ಹಾಗೂ ಮಾರ್ಗದರ್ಶಕರಿಗೆ ವಾಟ್ಸಾಪ್ ಸಂದೇಶ ರವಾನಿಸಿದ್ದಾರೆ. ಅದರಲ್ಲಿ ಕೆಎಲ್‌ಇ ಮಾಜಿ ಕಾರ್ಯಾಧ್ಯಕ್ಷ ಡಾ.ಪ್ರಭಾಕರ್ ಕೋರೆಯವರಿಗೂ ಸಹ ವಾಟ್ಸಾಪ್ ಸಂದೇಶ ಕಳಿಸಿದ್ದಾರೆ. ನನಗೆ ನೀವು ಇಷ್ಟು ವರ್ಷ ಸಹಾಯ ಮಾಡಿದ್ದೀರಿ. ಆದರೆ, ನನಗೆ ತೀವ್ರವಾದ ಎದೆ ನೋವಿದೆ. ನಾನು ನೋವಿನಿಂದ ಬೇಸತ್ತು ಕಠಿಣ ನಿರ್ಧಾರ ತೆಗೆದುಕೊಳ್ಳುತ್ತಿದ್ದೇನೆ. ದಯವಿಟ್ಟು ನನ್ನ ಕುಟುಂಬಕ್ಕೆ ಸಹಾಯ ಮಾಡಿ. ನಗರ ಪೊಲೀಸ್ ಆಯುಕ್ತರಿಗೂ ಮಾಹಿತಿ ನೀಡಿ ಎಂದು ಸಂದೇಶ ಕಳುಹಿಸಿದ್ದಾರೆ.

ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಮಾಡಲು ಆಗ್ರಹಿಸಿ ಚಕ್ಕಡಿಯಲ್ಲಿ ಕುಳಿತು ಹೋರಾಟ ಮಾಡಲಾಯಿತು.

ಹು-ಧಾ ಪ್ರತ್ಯೇಕ ಪಾಲಿಕೆಗಾಗಿ ಹೋರಾಟ

ಧಾರವಾಡ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜಿಸಿ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆ ಪ್ರಸ್ತಾವಕ್ಕೆ ರಾಜ್ಯಪಾಲರು ಅನುಮೋದನೆ ನೀಡಬೇಕು ಎಂದು ಧಾರವಾಡ ಮಹಾನಗರ ಪಾಲಿಕೆ ಹೋರಾಟ ವೇದಿಕೆಯಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಪ್ರತಿಭಟನೆ ಎಂಟನೇ ದಿನಕ್ಕೆ ಕಾಲಿಟ್ಟಿದೆ.

ಹೋರಾಟಗಾರರು ಪಾಲಿಕೆ ಮುಂಭಾಗ ದಿಂದ ಜುಬಿಲಿ ವೃತ್ತದವರೆಗೆ ಚಕ್ಕಡಿಯಲ್ಲಿ ಮೆರವಣಿಗೆ ನಡೆಸಿದರು. ಪ್ರತಿಭಟನಾಕಾರು ಜುಬಿಲಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಕೆಲ ಹೊತ್ತು ರಸ್ತೆ ತಡೆ ನಡೆಸಿದರು. 'ಎಚ್ ಡಿಎಂಸಿ' ಸಾಕು 'ಡಿಎಂಸಿ' ಬೇಕು, 'ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಬೇಕೇ ಬೇಕು' ಘೋಷಣೆ ಕೂಗಿದರು. ಜುಬಿಲಿ ವೃತ್ತದಲ್ಲಿ ಕೆಲ ಹೊತ್ತು ವಾಹನಗಳು ಸಾಲುಗಟ್ಟಿ ನಿಂತಿದ್ದವು. ಸಂಚಾರಕ್ಕೆ ತೊಡಕಾಯಿತು. ಪ್ರತಿ ಭಟನಾ ಮೆರವಣಿಗೆ ವೃತ್ತದಿಂದ ಸಾಗಿದ ನಂತರ ವಾಹನಗಳು ಸಂಚರಿಸಿದವು.

ಶಾಸಕ ಪ್ರಭು ಚವ್ಹಾಣ್ ವಿರುದ್ಧದ ಅರ್ಜಿ ವಜಾಗೊಳಿಸಿದ ಸುಪ್ರೀಂ

ದೆಹಲಿ: ಮಾಜಿ ಸಚಿವ, ಔರಾದ್ ಶಾಸಕ ಪ್ರಭು ಚವ್ಹಾಣ್ ವಿರುದ್ಧ ಮೂಲನಿವಾಸ ಸ್ಥಳ ಹಾಗೂ ಜಾತಿ ಮೂಲ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ವಜಾಗೊಳಿಸಿರುವ ಸುಪ್ರೀಂ ಕೋರ್ಟ್, ಇವರು ಪರಿಶಿಷ್ಟ ಜಾತಿಗೆ ಸೇರಿದವರಲ್ಲ, ಚುನಾವಣೆಯಲ್ಲಿ ಅಕ್ರಮವಾಗಿ ಸ್ಪರ್ಧಿಸಿದ್ದಾರೆ ಎಂಬ ವಾದವನ್ನು ತಳ್ಳಿ ಹಾಕಿದೆ.

ಪ್ರಕರಣವೇನು?: ಶಾಸಕ ಪ್ರಭು ಚವ್ಹಾಣ್ ಅವರು ಮಹಾರಾಷ್ಟ್ರ ಮೂಲದವರು. ಮಹಾರಾಷ್ಟ್ರದಲ್ಲಿ ಲಂಬಾಣಿ ಸಮಾಜವು ವಿಮುಕ್ತ ಜಾತಿ (ವಿಜೆ-ಎ) ಮೀಸಲಾತಿ ಹೊಂದಿದೆ. ಆದರೆ, ಇವರು ಬೀದರ್ ಜಿಲ್ಲೆಯ ಬೋಂತಿ ತಾಂಡಾ ಮೂಲದವರೆಂದು ರಹವಾಸಿ ಪತ್ರ ಪಡೆದು, ಲಂಬಾಣಿ ಸಮಾಜ ಇಲ್ಲಿ ಹೊಂದಿರುವ ಪರಿಶಿಷ್ಟ ಜಾತಿ (ಎಸ್‌ಸಿ) ಮೀಸಲು ಸೌಲಭ್ಯದ ಮೇಲೆ 2008ರಿಂದ ಔರಾದ್ ಕ್ಷೇತ್ರದ ಶಾಸಕರಾಗುತ್ತಿದ್ದಾರೆ. ಮೀಸಲು ಸೌಲಭ್ಯ ದುರ್ಬಳಕೆ ಮಾಡಿಕೊಂಡ ಇವರ ಶಾಸಕತ್ವ ಅನರ್ಹಗೊಳಿಸಬೇಕೆಂದು ನರಸಿಂಗ ತುಕಾರಾಮ ಎಂಬುವರು ಹೈಕೋರ್ಟ್‌ನ ಕಲಬುರಗಿ ಪೀಠಕ್ಕೆ ಅರ್ಜಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್ ಪೀಠ, ಅವರ ಅರ್ಜಿಯನ್ನು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ತುಕಾರಾಮ ಅವರು, ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತಾ, ಸತೀಶಚಂದ್ರ ಶರ್ಮಾ ಅವರನ್ನೊಳಗೊಂಡ ದ್ವಿಸದಸ್ಯ ಪೀಠ, ಈ ಮೇಲ್ಮನವಿ ಅರ್ಜಿಯನ್ನು (2026ರ ಮೇ 6ರಂದು) ವಜಾಗೊಳಿಸಿದೆ.

> ನಾನು ಕನ್ನಡಿಗ, ಕರ್ನಾಟಕದವನು. ಇಲ್ಲೇ ಹುಟ್ಟಿ, ಬೆಳೆದಿದ್ದೇನೆ. ವಿನಾಕಾರಣ ನನ್ನ ಜಾತಿ, ನಿವಾಸದ ಮೂಲ ಕೆದಕಿ ವಿವಾದ ಸೃಷ್ಟಿಸುವ ಕೆಲಸ ಮಾಡಲಾಗುತ್ತಿದೆ. ಹೈಕೋರ್ಟ್ ಎರಡು ಸಲ ನನ್ನ ಪರವಾಗಿ ತೀರ್ಪು ಕೊಟ್ಟಿದೆ. ಇದೀಗ ಸುಪ್ರೀಂಕೋರ್ಟ್ ಸಹ ಮತ್ತೊಮ್ಮೆ ನನ್ನ ವಿರುದ್ಧದ ಅರ್ಜಿ ವಜಾಗೊಳಿಸಿದೆ. ಇದು ಸತ್ಯಮೇವ ಜಯತೆ.
>
> **ಪ್ರಭು ಚವ್ಹಾಣ್**, ಶಾಸಕ

ಕನ್ನಡ ಪರ ಹೋರಾಟಗಾರರ ಹೆಸರಲ್ಲಿ ತುಷ್ಟೀಕರಣ

ಕೋಮು ಗಲಭೆ: ಕೇಸ್ ವಾಪಾಸ್‌ಗೆ ಬಿಜೆಪಿ ಕಿಡಿ

ಮಂಗಳೂರು: ಕಾಂಗ್ರೆಸ್ ಸರಕಾರ ಕನ್ನಡಪರ ಹೋರಾಟಗಾರರ ಕೇಸ್ ಮುಂದಿಟ್ಟುಕೊಂಡು ಕೋಮು ಗಲಭೆಕೋರರ ಖುಲಾಸೆಗೆ ಮುಂದಾಗಿರುವುದು ತುಷ್ಟೀಕರಣಕ್ಕಾಗಿ ಸಂವಿಧಾನ ಮತ್ತು ದೇಶದ ಕಾನೂನನ್ನೇ ಬಲಿ ಕೊಡುತ್ತಿದೆ ಎಂದು ಬಿಜೆಪಿ ಆರೋಪಿಸಿದ್ದು, ಈ ಸಂಬಂಧ ಹೋರಾಟ ನಡೆಸಲಾಗುವುದು ಎಂದಿದೆ.

ರಾಜ್ಯದಲ್ಲಿ ಪ್ರತಿಭಟನೆ-ಗಲಭೆ ಮೇಲಿನ 52 ಕ್ರಿಮಿನಲ್ ಪ್ರಕರಣ ಹಿಂಪಡೆಯಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದ್ದು, ಇದು ಕನ್ನಡ ಪರ ಹೋರಾಟಗಾರರ ಮೇಲಿನ ಕಾಳಜಿಗಿಂತ ಮುಸ್ಲಿಂ ಗಲಭೆಕೋರರ ಮೇಲಿನ ಹಿತಾಸಕ್ತಿಗಾಗಿ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಕಲಬುರಗಿ ಜಿಲ್ಲೆ ಆಳಂದ ಮಾತ್ರವಲ್ಲದೆ, ಹುಬ್ಬಳ್ಳಿ ಗಲಭೆ ಪ್ರಕರಣದಲ್ಲೂ ಆರೋಪಿಗಳ ಮೇಲಿನ ಕ್ರಿಮಿನಲ್ ಕೇಸ್ ಹಿಂಪಡೆದ ಕಾಂಗ್ರೆಸ್ ದೇಶಕ್ಕೆ ದೊಡ್ಡ ಗಂಡಾಂತರವಾಗಿ ಪರಿಣಮಿಸಿದೆ ಎಂದಿದ್ದಾರೆ. ಆಳಂದ ಕೋಮು ಗಲಭೆಯಲ್ಲಿ 100ಕ್ಕೂ ಹೆಚ್ಚು ಆರೋಪಿಗಳ ಮೇಲಿದ್ದ ಕ್ರಿಮಿನಲ್ ಕೇಸ್‌ಗಳನ್ನು ಹಿಂಪಡೆದಿರುವುದು ಅತ್ಯಂತ ಖಂಡನೀಯ. ಕೋಮು ಗಲಭೆ ಸೃಷ್ಟಿಸಿ ಪೊಲೀಸರ ಮೇಲೇ ಮಾರಣಾಂತಿಕ ಹಲ್ಲೆ ನಡೆಸಿದ್ದ ಗುಂಪಿನ ಮೇಲಿನ ಕ್ರಿಮಿನಲ್ ಕೇಸ್ ಹಿಂಪಡೆದ ಕಾಂಗ್ರೆಸ್ ಸರಕಾರದ ತುಷ್ಟೀಕರಣ ಮತ್ತು ಓಲೈಕೆ ರಾಜಕಾರಣ ಎಲ್ಲೆ ಮೀರಿದೆ ಎಂದಿದ್ದಾರೆ.

> ವೋಟ್ ಬ್ಯಾಂಕ್ ರಾಜಕೀಯ, ಅಲ್ಪಸಂಖ್ಯಾತರ ತುಷ್ಟೀಕರಣದ ಪರಮಾವಧಿಯ ನಿರ್ಲಜ್ಜ ಪ್ರದರ್ಶನಕ್ಕೆ ರಾಜ್ಯ ಸಾಕ್ಷಿಯಾಗಿದೆ. ಜವಾಬ್ದಾರಿ ಇಲ್ಲದೆ, ನೈತಿಕತೆ, ಗೌರವಗಳೆಲ್ಲವನ್ನೂ ಕಾಂಗ್ರೆಸ್ ಗಾಳಿಗೆ ತೂರಿದೆ.
>
> - **ಬಿ.ವೈ.ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

ಕ್ರಿಮಿನಲ್ ಪ್ರಕರಣ ವಾಪಸ್ ವಿರುದ್ಧ ಹೋರಾಟ

ಕ್ರಿಮಿನಲ್ ಹಿನ್ನೆಲೆಯಲ್ಲಿ ವ್ಯಕ್ತಿಗಳ ಮೇಲೆ ದಾಖಲಾಗಿದ್ದ ಪ್ರಕರಣಗಳನ್ನು ವಾಪಸ್ ಪಡೆದಿರುವ ರಾಜ್ಯ ಸರಕಾರ ತನ್ನ ನಿರ್ಧಾರ ಪುನರ್‌ಪರಿಶೀಲನೆ ಮಾಡದಿದ್ದರೆ ರಾಜ್ಯಾದ್ಯಂತ ಹೋರಾಟ ನಡೆಸುವುದು ಅನಿವಾರ್ಯ ಎಂದು ವಿಧಾನಪರಿಷತ್‌ನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಎಚ್ಚರಿಕೆ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ರಿಮಿನಲ್ ಪ್ರಕರಣಗಳನ್ನು ವಾಪಸ್ ಪಡೆಯಲು ಸರಕಾರಕ್ಕೆ ಅಧಿಕಾರ ಇಲ್ಲ. ಇಂತಹ ಪ್ರಕರಣಗಳನ್ನು ಹಿಂಪಡೆಯುತ್ತಾರೆ ಎಂದರೆ ಸರಕಾರವೇನು ನ್ಯಾಯಾಲಯವೆ ಎಂದು ಪ್ರಶ್ನೆ ಮಾಡಿದರು. ಸರಕಾರ ಇಂಥ ದುಂಡಾವರ್ತಿ ತೋರಬಾರದು ಎಂದರು.

ನೀಟ್ ಬದಲು ಸಿಇಟಿ ನಡೆಯಲಿ: ಸಚಿವ ದಿನೇಶ್

ಮಂಗಳೂರು: ರಾಷ್ಟ್ರ ಮಟ್ಟದ ಪರೀಕ್ಷೆಯಲ್ಲಿ ಸಾಕಷ್ಟು ಬಾರಿ ಹಗರಣಗಳು ನಡೆದಿವೆ. ನಮ್ಮಲ್ಲಿ ಸಿಇಟಿ ವ್ಯವಸ್ಥೆ ಇದ್ದಾಗ ಈ ರೀತಿ ತೊಂದರೆ ಆಗಿರಲಿಲ್ಲ. ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ನೀಟ್ ಬದಲಾಗಿ ಮೊದಲಿನಂತೆ ಸಿಇಟಿ ಪರೀಕ್ಷೆ ನಡೆಯಲಿ, ಅದನ್ನು ರಾಜ್ಯಕ್ಕೆ ಬಿಟ್ಟು ಬಿಡಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಚುನಾವಣೆ ಗೆಲ್ಲಲು ಬಿಜೆಪಿ ಚುನಾವಣಾ ಆಯೋಗವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ ಎಂದರು. ಪಶ್ಚಿಮ ಬಂಗಾಳ ಸೇರಿದಂತೆ ದೇಶದ ವಿವಿಧೆಡೆ ನಡೆದ ಚುನಾವಣೆ ವೇಳೆ ಚುನಾವಣಾ ಆಯೋಗದ ನಡೆ ಸಂಶಯಾಸ್ಪದವಾಗಿದೆ. ವಿರೋಧ ಪಕ್ಷಗಳಿಗೆ ಚುನಾವಣಾ ಆಯೋಗದ ಮೇಲೆ ನಂಬಿಕೆ ಹೋಗುವಂತಾಗಿದೆ. ನಿಷ್ಪಕ್ಷಪಾತವಾಗಿ ನಿರ್ವಹಣೆ ಮಾಡುವ ಚುನಾವಣಾ ಆಯೋಗದ ಮೇಲೆ ಈ ಹಿಂದೆ ದೇಶದಲ್ಲಿ ಯಾರಿಗೂ ಸಂಶಯ ಇರಲಿಲ್ಲ. ಆದರೆ ಇಂದು ಪರಿಸ್ಥಿತಿ ಹಾಗಿಲ್ಲ. ಚುನಾವಣೆ ಗೆಲ್ಲಲು ಏನು ಮಾಡಬೇಕೋ ಅದನ್ನು ಬಿಜೆಪಿ ಮಾಡುತ್ತಿದೆ ಎಂದು ಆರೋಪಿಸಿದರು.

ಪಂಜಾಬ್ ಚುನಾವಣೆ ಬಂದಿರುವುದರಿಂದ ಇ.ಡಿ, ಐ.ಟಿ.ಯವರು ಅತ್ತ ಮುಖ ಮಾಡಿದ್ದಾರೆ. ಪಂಜಾಬ್ ಚುನಾವಣೆ ಮುಗಿಯುತ್ತಿದ್ದಂತೆ ಕರ್ನಾಟಕಕ್ಕೆ ಬರುತ್ತಾರೆ. ಇ.ಡಿ, ಐಟಿಯವರು ಬಿಜೆಪಿಗೆ ಸಹಾಯ ಮಾಡುತ್ತಿದ್ದಾರೆ. ಇವರು ಎಲ್ಲಾ ಸಂಸ್ಥೆಗಳನ್ನು ಚುನಾವಣೆ ಗೆಲ್ಲುವುದಕ್ಕೆ ಬಳಸುತ್ತಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಶಿವಮೊಗ್ಗದ ಅಲ್ಲಮ ಪ್ರಭು ಮೈದಾನದಲ್ಲಿ ಕಾರ್ಯಕ್ರಮ: ಮಧು ಬಂಗಾರಪ್ಪ

ಸಾವಿರ ಕೆಪಿಎಸ್ ಶಾಲೆಗಳಿಗೆ ಜೂ.1ರಂದು ಸಿಎಂ ಶಂಕು

ಶಿವಮೊಗ್ಗ: ಇಡೀ ದೇಶಕ್ಕೇ ಮಾದರಿ ಯಾಗಿ ನಮ್ಮ ರಾಜ್ಯ ನೀಡುತ್ತಿದ್ದು ಜೂ.1 ರಂದು ಒಂದು ಸಾವಿರ ಕೆಪಿಎಸ್ ಶಾಲೆ ಗಳಿಗೆ ಶಿವಮೊಗ್ಗದ ಅಲ್ಲಮ ಪ್ರಭು ಮೈದಾನದಲ್ಲಿ ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರು ಶಂಕುಸ್ಥಾಪನೆ ನೆರವೇ ರಿಸುವರು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ನಗರದ ಅಲ್ಲಮ ಪ್ರಭು ಮೈದಾನ ಕ್ಕೆ ಭೇಟಿ ನೀಡಿ, ಮುಖ್ಯಮಂತ್ರಿಗಳ ಕಾರ್ಯಕ್ರಮದ ಪೂರ್ವಸಿದ್ಧತೆ ಕುರಿತು ಪರಿಶೀಲಿಸಿದರು. ಈ ವೇಳೆ ಮಾತನಾಡಿದ ಅವರು, ರಾಜ್ಯದಲ್ಲಿ ತಲಾ ಅಂದಾಜು 3.5 ಕೋಟಿ ರು. ವೆಚ್ಚದಲ್ಲಿ 1000 ಕರ್ನಾ ಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸುತ್ತಿರು ವುದು ಒಂದು ದೊಡ್ಡ ಸಾಧನೆ. ಈ ಶಾಲೆ ಗಳಲ್ಲಿ ಒಂದೇ ಸೂರಿನಡಿ ಸಕಲ ಸೌಲಭ್ಯ ಒದಗಲಿದ್ದು, ಇದೊಂದು ಬ್ರಾಂಡ್ ಆಗಿದೆ. ಹಾಗೂ ಮಕ್ಕಳ ಭವಿಷ್ಯದ ಆಶಾ ಕಿರಣವಾಗಿದೆ ಎಂದರು. 800 ಶಾಲೆ ಗಳನ್ನು ಶಿಕ್ಷಣ ಇಲಾಖೆ ಹಾಗೂ 200 ಶಾಲೆಗಳನ್ನು ಅಲ್ಪಸಂಖ್ಯಾ ತರ ಕಲ್ಯಾಣ ಇಲಾಖೆ ವತಿಯಿಂದ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದು. ಪಿಯುಸಿ ಪರೀಕ್ಷೆ-2 ರಲ್ಲಿ ಶೇ.45 ಫಲಿತಾಂಶ ಬಂದಿದೆ. ಈಗ ಪಿಯುಸಿ ಫಲಿತಾಂಶ ಶೇ. 92.25 ಕ್ಕೆ ಏರಿದ್ದು ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರಿಗೆ ಅಭಿನಂದಿ ಸುತ್ತೇನೆ ಎಂದರು.

ಸಭೆಯಲ್ಲಿ ವಿಧಾನ ಪರಿಷತ್ ಶಾಸಕರಾದ ಬಲ್ಕೀಶ್ ಬಾನು, ಜಿಲ್ಲಾ ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷ ರಾದ ಚಂದ್ರಭೂಪಾಲ್, ಮಾಜಿ ವಿಧಾನ ಪರಿಷತ್ ಶಾಸಕರಾದ ಆಯನೂರು ಮಂಜುನಾಥ್ ಸೇರಿ ಹಲವರಿದ್ದರು.

ಹಳೆ ಪಿಂಚಣಿ ಯೋಜನೆ ಜಾರಿಗೆ ಸರಕಾರ ಬದ್ಧ

ಕಳೆದ ವಿಧಾನಸಭಾ ಚುನಾವಣೆ ಕಾಂಗ್ರೆಸ್ ಪಕ್ಷ ಕೊಟ್ಟ ಪ್ರಣಾಳಿಕೆಯಲ್ಲಿ ಭರವಸೆ ಯಂತೆ ಒಪಿಎಸ್(ಹಳೆ ಪಿಂಚಣಿ ಯೋಜನೆ) ಜಾರಿ ಮಾಡಲು ಬದ್ಧ ಎಂದು ಸಚಿವ ಮಧು ಬಂಗಾರಪ್ಪ ಪುನರುಚ್ಚರಿಸಿದರು. ಈಗಾಗಲೇ ಕೊಟ್ಟ ಭರವಸೆಯಂತೆ ಎನ್‌ಪಿಎಸ್ ರದ್ದು ಮಾಡಿ ಒಪಿಎಸ್ ಜಾರಿಗೊಳಿಸಬೇಕಾಗಿತ್ತು. ಆದರೆ, ಪಂಚ ಗ್ಯಾರಂಟಿಗೆ ವಾರ್ಷಿಕ ಸುಮಾರು 56 ಸಾವಿರ ಕೋಟಿ ರು.ವೆಚ್ಚ ಮಾಡುತ್ತಿರುವುದರಿಂದ ಒಪಿಎಸ್ ಜಾರಿ ಮಾಡಲಾಗುತ್ತಿಲ್ಲ. ಮುಂಬರುವ ದಿನಗಳಲ್ಲಿ ಖಂಡಿತವಾಗಿಯೂ ನಾವು ನೌಕರರ ಹಿತದೃಷ್ಟಿಯಿಂದ ಒಪಿಎಸ್ ಜಾರಿ ಮಾಡಿಯೇ ಸಿದ್ಧ ಎಂದು ತಿಳಿಸಿದರು.

ಸಚಿವ ಮಧು ಬಂಗಾರಪ್ಪ ಅವರು ಶಿವಮೊಗ್ಗ ನಗರದ ಅಲ್ಲಮ ಪ್ರಭು ಮೈದಾನಕ್ಕೆ ಶುಕ್ರವಾರ ಭೇಟಿ ನೀಡಿ ಸಿಎಂ ಕಾರ್ಯಕ್ರಮದ ಪೂರ್ವಸಿದ್ಧತೆ ಕುರಿತು ಪರಿಶೀಲಿಸಿದರು.

> ಈ ತಿಂಗಳ ಕೊನೆಯಲ್ಲಿ ಎಸ್‌ಎಸ್‌ಎಲ್‌ಸಿ ಎರಡನೇ ಪರೀಕ್ಷೆ ಫಲಿತಾಂಶ ಬರಲಿದ್ದು ಉತ್ತಮ ಫಲಿತಾಂಶ ಬರಲಿದೆ. ಶಿಕ್ಷಣದಲ್ಲಿ ಗುಣಮಟ್ಟ ಹೆಚ್ಚಿತ್ತಿದ್ದು ಶೇ.60 ಅಂಕ ಗಳಿಸಿದ ಶೇ. 62 ಮಕ್ಕಳಿದ್ದರು. ಇದೀಗ ಶೇ. 60 ಅಂಕ ಗಳಿಸಿದ ಶೇ.66.5 ಮಕ್ಕಳಿದ್ದು 4.5% ರಷ್ಟು ಹೆಚ್ಚಳ ಆಗಿದೆ. ಪಿಯುಸಿ ಪರೀಕ್ಷೆ-2ರಲ್ಲಿ ಶೇ.45 ಫಲಿತಾಂಶ ಬಂದಿದೆ. ಈಗ ಪಿಯುಸಿ ಫಲಿತಾಂಶ ಶೇ. 92.25ಕ್ಕೆ ಏರಿಕೆ ಆಗಿದ್ದು ಎಲ್ಲರನ್ನು ಅಭಿನಂದಿಸುತ್ತೇನೆ.
>
> **-ಮಧು ಬಂಗಾರಪ್ಪ**, ಸಚಿವ

ತುಮಕೂರಿಗೆ ಮೆಟ್ರೋ ಡಿಪಿಆರ್ ಸಲ್ಲಿಕೆ: ಪರಂ

ತುಮಕೂರು: ತುಮಕೂರು ಮತ್ತು ಬೆಂಗಳೂರು ನಡುವಿನ ಸಂಪರ್ಕವನ್ನು ಮತ್ತಷ್ಟು ಸುಲಭಗೊಳಿಸಲು ಯೋಜಿಸಲಾಗಿರುವ ಮೆಟ್ರೋ ರೈಲು ಯೋಜನೆಯು ಈಗ ಅಧಿಕೃತ ಹಂತಕ್ಕೆ ತಲುಪಿದ್ದು, ಡಿಪಿಆರ್ ಸಲ್ಲಿಕೆಯಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಹೇಳಿದರು. ನಗರದಲ್ಲಿ ಮಾತನಾಡಿ, ತುಮಕೂರಿಗೆ ಮೆಟ್ರೋ ರೈಲನ್ನು ತರುವ ಉದ್ದೇಶದ ವಿವರವಾದ ಯೋಜನಾ ವರದಿಯನ್ನು ಸರಕಾರಕ್ಕೆ ಸಲ್ಲಿಸಲಾಗಿದೆ. ಈ ವರದಿಯ ಸಲ್ಲಿಕೆಯೊಂದಿಗೆ ಯೋಜನೆಯ ಆಡಳಿತಾತ್ಮಕವಾಗಿ ಮುಂದಿನ ಹಂತಕ್ಕೆ ಜಿಗಿದಿದೆ ಎಂದರು.

ಪಿಪಿಪಿ ಮಾದರಿಯಲ್ಲಿ ಅನುಷ್ಠಾನ: ಈ ಬೃಹತ್ ಯೋಜನೆಯನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ. ಯೋಜನೆಯ ಅಂದಾಜು ವೆಚ್ಚ ಸುಮಾರು 20,000 ಕೋಟಿ ರುಪಾಯಿಗಳಾಗಿದ್ದು, ಆಸಕ್ತ ಹೂಡಿಕೆದಾರರು ಈ ಯೋಜನೆ ಯಲ್ಲಿ ಪಾಲ್ಗೊಳ್ಳಲು ಅವಕಾಶವಿದೆ ಎಂದು ತಿಳಿಸಲಾಗಿದೆ. ಡಿಪಿಆರ್ ಸಲ್ಲಿಕೆಯಾಗಿರುವುದರಿಂದ, ಇನ್ನು ಮುಂದೆ ಕ್ಯಾಬಿನೆಟ್‌ನಲ್ಲಿ ಈ ಕುರಿತು ಚರ್ಚೆ ನಡೆಯಲಿದೆ ಎಂದರು.

ಬ್ರಿಮ್ಸ್ ವೈದ್ಯರ ಮೇಲೆ ಹಲ್ಲೆ: 7 ಮಂದಿ ಸೆರೆ

ಬೀದರ್: ಒಪಿಡಿ ಚೀಟಿ ತರಲು ಹೇಳಿದ ಬ್ರಿಮ್ಸ್ ವೈದ್ಯರ ಮೇಲೆ ಹಲ್ಲೆ ನಡೆಸಿದ 7 ಪುಂಡರನ್ನು ಬಂಧಿಸಲಾಗಿದೆ. ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದ ವಿಜಯ್ ಸಿಂಗ್ ಎಂಬಾತನನ್ನು ಸ್ನೇಹಿತರು ಚಿಕಿತ್ಸೆಗಾಗಿ ಬ್ರಿಮ್ಸ್ ಆಸ್ಪತ್ರೆಗೆ ಕರೆತಂದಿದ್ದರು. ಈ ವೇಳೆ ಒಪಿಡಿ ಚೀಟಿ ತರದೇ ಚಿಕಿತ್ಸೆ ಕೊಡಲು ಆಗಲ್ಲ ಅಂತ ನೈಟ್‌ಶಿಫ್ಟ್ ವೈದ್ಯ ತುಕಾರಾಂ ಅವರು ನಿರಾಕರಿಸಿದ್ದಾರೆ. ಇದರಿಂದ ರೊಚ್ಚಿಗೆದ್ದ 7ಮಂದಿ ವೈದ್ಯರ ಮೇಲೆ ಹಲ್ಲೆ ನಡೆಸಿದ್ದರು. ಘಟನೆ ಕುರಿತು ನ್ಯೂ ಟೌನ್ ಠಾಣೆಗೆ ಡಾ.ತುಕಾರಾಂ ಭಾಲ್ಕೆ ದೂರು ದಾಖಲಿಸಿದ್ದರು.



ಸಂಪಾದಕೀಯ

ಎಸ್‌ಐಆರ್ ಘರ್ಷಣೆಗೆ ಕಾರಣವಾಗದಿರಲಿ

ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಕೇಂದ್ರ ಚುನಾವಣಾ ಆಯೋಗ ಮುಂದಾಗಿದ್ದು, ಪ್ರಕ್ರಿಯೆ ಜೂನ್ 20ರಿಂದ ಆರಂಭವಾಗಲಿದೆ. 2025ರ ಪಟ್ಟಿಯ ಪ್ರಕಾರ ರಾಜ್ಯದಲ್ಲಿ 5.55 ಕೋಟಿ ಅರ್ಹ ಮತದಾರರು ಇದ್ದಾರೆ. ಪರಿಶೀಲನೆ, ಪರಿಷ್ಕರಣೆಗೆ ಆಯೋಗ ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದೆ. ಈ ನಡುವೆ, ಈ ಪ್ರಕ್ರಿಯೆಯ ವಿರುದ್ಧ ಸುಪ್ರೀಂ ಕೋರ್ಟ್ ಮೊರೆ ಹೋಗಲು ರಾಜ್ಯ ಸರಕಾರ ಚಿಂತನೆ ನಡೆಸುತ್ತಿದೆ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ವಿಸ್ತೃತ ಚಿಂತನೆ ನಡೆದಿದೆ. ಈ ಪ್ರಕ್ರಿಯೆಯ ಪಾರದರ್ಶಕತೆ ಬಗ್ಗೆ ಸರಕಾರ ಅನುಮಾನ ವ್ಯಕ್ತಪಡಿಸಿದೆ. ಮತದಾರರ ಹಕ್ಕುಗಳ ರಕ್ಷಣೆಯ ಕುರಿತು ಸರಕಾರದ ಕಾಳಜಿ ಶ್ಲಾಘನೀಯ. ಆದರೆ ಸುಪ್ರೀಂ ಕೋರ್ಟ್ ಮೊರೆ ಹೋಗುವ ಸರಕಾರದ ನಡೆಗೆ ಮನ್ನಣೆ ಸಿಗುವುದು ಅನುಮಾನ. ಯಾಕೆಂದರೆ ಈ ಹಿಂದೆ ಮಮತಾ ಬ್ಯಾನರ್ಜಿ ನೇತೃತ್ವದ ಪಶ್ಚಿಮ ಬಂಗಾಳ ಸರಕಾರ ಕೂಡ ಇದನ್ನು ವಿರೋಧಿಸಿ ಸುಪ್ರೀಂ ಮೊರೆ ಹೋಗಿತ್ತು. ಕೆಲ ರಾಜ್ಯಗಳು ಎಸ್‌ಐಆರ್ ಪ್ರಕ್ರಿಯೆಗೆ ಸಹಕಾರ ನೀಡದೆ ಇರುವುದನ್ನು ಗಂಭೀರವಾಗಿ ಪರಿಗಣಿಸಿದ್ದ ಸುಪ್ರೀಂ ಕೋರ್ಟ್ ನ್ಯಾಯಪೀಠ, ಎಲ್ಲಾ ರಾಜ್ಯಗಳು ಆಯೋಗದ ಈ ಪ್ರಕ್ರಿಯೆಗೆ ಸಹಕರಿಸಬೇಕು ಎಂದು ಹೇಳಿದ್ದು, ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಹಾಗೂ ಚೀಫ್ ಸೆಕ್ರೆಟರಿಗೆ ಮಾಹಿತಿಯನ್ನು ರವಾನಿಸಲು ತಿಳಿಸಿತ್ತು. ಎಸ್‌ಐಆರ್ ಪ್ರಕ್ರಿಯೆಗೆ ಯಾವುದೇ ಅಡ್ಡಿಯಾಗಲು ನಾವು ಬಿಡುವುದಿಲ್ಲ ಎಂದು ಕೋರ್ಟ್ ಹೇಳಿತ್ತು. ರಾಜಕೀಯ ಕಾರಣಗಳಿಂದಾಗಿ ಎಸ್‌ಐಆರ್ ಪ್ರಕ್ರಿಯೆಯನ್ನು ಕಾಂಗ್ರೆಸ್ ಸರಕಾರ ವಿರೋಧಿಸುತ್ತಿರಬಹುದು. ಆದರೆ ಚುನಾವಣಾ ಆಯೋಗ ಕೂಡ ನ್ಯಾಯಾಂಗದಂತೆಯೇ ಒಂದು ಸ್ವತಂತ್ರ, ನಿಷ್ಪಕ್ಷಪಾತಿ ಸಾಂವಿಧಾನಿಕ ವ್ಯವಸ್ಥೆ. ಅದರ ಕಾರ್ಯವನ್ನು ಮಾಡಲು ಬಿಡುವುದು ಎಲ್ಲ ದೃಷ್ಟಿಯಿಂದ ಒಳಿತು. ಚುನಾವಣಾ ಆಯೋಗದ ಈ ಕಾರ್ಯಕ್ಕೆ ಕಾರ್ಯಾಂಗ ಸಹಕರಿಸಬೇಕಾಗುತ್ತದೆ. ಹೀಗಾಗಿ ರಾಜ್ಯ ಸರಕಾರದ ಸಹಾಯ ಈ ಪ್ರಕ್ರಿಯೆಯಲ್ಲಿ ಅಗತ್ಯ. ಇದರ ವಿರುದ್ಧ ಕಾನೂನು ಸಮರ ಕೈಗೊಂಡಿದ್ದ ಮಮತಾ ಬ್ಯಾನರ್ಜಿ ಅವರು ಗೆಲುವು ಸಾಧಿಸಿಲ್ಲ. ಪಶ್ಚಿಮ ಬಂಗಾಳದಲ್ಲಿ ದಾಖಲೆ ಪ್ರಮಾಣದಲ್ಲಿ ಮತದಾರರ ಹೆಸರು ಯಾದಿಯಿಂದ ಅಳಿಸಿಹೋದುದಕ್ಕೆ ಕಾರಣಗಳಿವೆ. ಕರ್ನಾಟಕದಲ್ಲಿ ಅಂಥ ಆತಂಕವಿಲ್ಲ ಅನಿಸುತ್ತದೆ. ಈ ಬಗ್ಗೆ ಆಯೋಗ ಹಾಗೂ ರಾಜ್ಯ ಸರಕಾರ ಒಮ್ಮತಕ್ಕೆ ಬಂದು, ಪಾರದರ್ಶಕ ರೀತಿಯಲ್ಲಿ ಪ್ರಕ್ರಿಯೆ ನಡೆಸಲು ಅನುವು ಮಾಡಿಕೊಡುವುದು ಅಗತ್ಯ.

ಸೊಂಪಾದಕೀಯ

ಆನೆಯ ಹಲ್ಲು ಮುರಿದ ಶಿಕ್ಷಕಿ

ಮಹಿಳೆಯರ ಡ್ರೈವಿಂಗ್ ಪರಿಣತಿಯ ಬಗ್ಗೆ ನಾನಾ ಜೋಕುಗಳು ಇರುವುದು ನಿಜ. ಆದರೆ ಇದು ಜೋಕಲ್ಲ, ವೈರಲ್ ಆಗಿರುವ ಒಂದು ಸುದ್ದಿ. ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಒಂದು ಅನಾಹುತವೇ ನಡೆದುಹೋಗಿದೆ. ದಾರಿಗೆ ದಿಢೀರ್ ಅಡ್ಡ ಬಂದ ಕಾಡಾನೆಯೊಂದಕ್ಕೆ ಶಾಲಾ ಶಿಕ್ಷಕಿಯೊಬ್ಬರು ಚಲಾಯಿಸುತ್ತಿದ್ದ ಸ್ಕೂಟರ್ ಡಿಕ್ಕಿ ಹೊಡೆದಿದೆ. ಪರಿಣಾಮ ಕಾಡಾನೆಯ ದಂತವೇ ಚಕ್ಕುಲಿಯಂತೆ ಮುರಿದು ರಸ್ತೆಗೆ ಬಿದ್ದಿದೆ. ಶಿಕ್ಷಕಿಗೂ ಗಾಯವಾಗಿದೆ. ರಸ್ತೆಯಲ್ಲಿ ಇದ್ದಕ್ಕಿದ್ದಂತೆ ಆನೆ ಎದುರಾದರೆ ಎಂತಹವರಾದರೂ ಒಂದು ಕ್ಷಣ ದಂಗಾಗುವುದು, ಹಿಡಿತ ತಪ್ಪುವುದು ಸಹಜ. ಅದರಲ್ಲಿ ಮಹಿಳೆಯೇನು, ಪುರುಷರಾದರೂ ಹಾಗೇ ಆಗುವುದು ಸಹಜ. ಆದರೆ ಆನೆಯ ಪ್ರತಿಕ್ರಿಯೆ ಏನಿತ್ತು ಎಂಬುದು ಕುತೂಹಲಕರ. ಅದು ಮಾತ್ರ ಯಾವುದೇ ವಿಡಿಯೋದಲ್ಲಿ ದಾಖಲಾಗಿಲ್ಲ. ದಂತವೇ ಮುರಿದುಹೋಗಿದೆ ಎಂದ ಮೇಲೆ ಆನೆಗೆ ಗಣನೀಯವಾದ ಏಟು ಬಿದ್ದಿರಲೇಬೇಕು. ಆನೆಯನ್ನೂ ಮಕಾಡೆ ಮಲಗಿಸುವ ಸ್ಕೂಟರ್ ನಮ್ಮದು ಎಂದು ಆ ಸ್ಕೂಟರ್ ಕಂಪನಿ ಎದೆ ತಟ್ಟಿಕೊಳ್ಳಲು ಅಡ್ಡಿ ಇಲ್ಲ. ಇರಲಿ, ಶಿಕ್ಷಕಿಗೆ ಯಾವುದೇ ತೊಂದರೆ ಕೊಡದೆ ಕಾಡಾನೆ ಬಿದ್ದಲ್ಲಿಂದ ಎದ್ದು ಕಾಡಿನೊಳಗೆ ಪರಾರಿ ಆಗಿದೆ. ಶಿಕ್ಷಕಿಯ ದಂತ ಉದುರಿದೆಯೇ ಹಾಗೇ ಇದೆಯೇ ಗೊತ್ತಾಗಿಲ್ಲ. ಉದುರಿದ ಆನೆದಂತವನ್ನು ಈ 'ಶೌರ್ಯ ಪ್ರದರ್ಶನ'ದ ನೆನಪಿಗಾಗಿ ಆ ಶಿಕ್ಷಕಿಗೆ ಕೊಟ್ಟು ಗೌರವಿಸಬಹುದಿತ್ತು. ಮಹಿಳೆಯರು ವಾಹನ ಚಲಾಯಿಸುತ್ತಿದ್ದರೆ ಇತರ ವಾಹನ ಚಾಲಕರು ಮಾತ್ರವಲ್ಲ, ಕಾಡಾನೆಗಳು ಕೂಡ ಇನ್ನು ಮುಂದೆ ಅಡ್ಡ ಬರದಂತೆ ಹುಷಾರಾಗಿರಬೇಕು ಎಂದು ಜೋಕ್ ಮಾಡುವುದು ಮಾತ್ರ ಮಹಿಳಾ ಅವಹೇಳನದ ಸಾಲಿಗೆ ಸೇರುತ್ತದೆ ಎಂದು ನಾವು ಹೇಳಲೇಬೇಕಿದೆ.

ಸಂಪಾದಕರ ಸದ್ಯಶೋಧನೆ

ಗಟಾರದ ಜಿರಳೆ

ಸಾಮಾಜಿಕ ಜಾಲತಾಣಗಳಲ್ಲಿ ಎಲ್ಲೆಡೆ ಜಿರಳೆ ಸದ್ದು ಮಾಡುತ್ತಿದೆ. ಜಿರಳೆ ಕಂಡರೆ ಅಸಹ್ಯಪಡುತ್ತಿದ್ದವರು ಈಗ ಆ ಪ್ರಾಣಿಯ ಹೆಸರಿನಲ್ಲಿ ಇಂಟರ್ನೆಟ್‌ನಲ್ಲಿ ಬಿರುಗಾಳಿ ಎದ್ದಿರುವುದನ್ನು ಕಂಡು ಅಚ್ಚರಿಪಡುತ್ತಿದ್ದಾರೆ. ಈ ಸಂದರ್ಭದಲ್ಲಿ ನನಗೆ ಒಂದು ಪ್ರಸಂಗ ನೆನಪಾಗುತ್ತಿದೆ. ಅಮಿತಾಭ್ ಬಚ್ಚನ್ ಅವರು ಬಾಲಿವುಡ್‌ನ ಅಪ್ರತಿಮ 'ಆಂಗ್ರಿ ಯಂಗ್ ಮ್ಯಾನ್' ಆಗಿ ಮೆರೆಯುತ್ತಿದ್ದ ಕಾಲವದು. ಆಗಿನ ಕಾಲದ ಪ್ರಸಿದ್ಧ ನಿರ್ಮಾಣ ಸಂಸ್ಥೆ 'ಈಗಲ್ ಫಿಲ್ಮ್ಸ್' ಮತ್ತು ಅದರ ಮಾಲೀಕರಾದ ಎಫ್.ಸಿ. ಮೆಹ್ರಾ ಹಾಗೂ ಅಮಿತಾಭ್ ನಡುವೆ ನಡೆದ ಒಂದು ಘರ್ಷಣೆ ಇಂದಿಗೂ ಚಿತ್ರರಂಗದ ಇತಿಹಾಸದಲ್ಲಿ ಚರ್ಚೆಯಾಗುವಂಥದ್ದು. ಈ ವಿವಾದ ಎಷ್ಟು ತಾರಕಕ್ಕೇರಿತ್ತೆಂದರೆ, ಅಮಿತಾಭ್ ಅವರು ನಿರ್ಮಾಪಕರನ್ನು 'ಗಟಾರದ ಜಿರಳೆ' ಎಂದು ಕರೆದಿದ್ದು ದೊಡ್ಡ ಸುದ್ದಿಯಾಗಿತ್ತು. ಈ ಘರ್ಷಣೆಯ ಮೂಲವಿದ್ದುದು ಅಮಿತಾಭ್ ಮತ್ತು ಜೀನತ್ ಅಮಾನ್ ನಟಿಸಬೇಕಿದ್ದ 'ಪಾಪಿ' ಎಂಬ ಚಲನಚಿತ್ರದಲ್ಲಿ. ಈ ಚಿತ್ರವನ್ನು ಈಗಲ್ ಫಿಲ್ಮ್ಸ್ ನಿರ್ಮಿಸುತ್ತಿತ್ತು. ಆ ಸಮಯದಲ್ಲಿ ಅಮಿತಾಭ್ ಅವರ ಜನಪ್ರಿಯತೆ ಗಗನಕ್ಕೇರಿತ್ತು. ಚಿತ್ರದ ಚಿತ್ರೀಕರಣದ ನಡುವೆ ಸಂಭಾವನೆಯ ವಿಷಯದಲ್ಲಿ ಅಥವಾ ಕಾಲ್‌ಶೀಟ್ ಹಂಚಿಕೆಯ ವಿಚಾರದಲ್ಲಿ ಬಿಗ್ ಬಿ ಮತ್ತು ಮೆಹ್ರಾ ಕುಟುಂಬದ ನಡುವೆ ಭಿನ್ನಾಭಿಪ್ರಾಯ ತಲೆದೋರಿತು. ವಿವಾದದ ಸಮಯದಲ್ಲಿ ಪತ್ರಕರ್ತರು ಅಮಿತಾಭ್ ಅವರನ್ನು ಈ ಗಲಾಟೆಯ ಬಗ್ಗೆ ಪ್ರಶ್ನಿಸಿದಾಗ,



ಸಿಟ್ಟಿನಲ್ಲಿದ್ದ ಅಮಿತಾಭ್ ಅವರು ನಿರ್ಮಾಪಕರನ್ನು ಉದ್ದೇಶಿಸಿ ಬಹಳ ಕಟುವಾದ ಶಬ್ದಗಳನ್ನು ಬಳಸಿದ್ದರು. 'ನಿರ್ಮಾಪಕರು ತಮ್ಮನ್ನು ತಾವು ಏನೆಂದು ಕೊಂಡಿದ್ದಾರೆ? ಅವರು ಕೇವಲ ಗಟಾರದ ಜಿರಳೆಗಳು' ಎಂಬರ್ಥದ ಹೇಳಿಕೆಯನ್ನು ನೀಡಿದರು. ಈ ಮಾತು ಅಂದಿನ ಚಿತ್ರರಂಗದ ನಿಯತಕಾಲಿಕೆಗಳಲ್ಲಿ (ಸಿನಿ ಬ್ಲಿಟ್ಜ್ ಮತ್ತು ಸ್ಟಾರ್ ಡಸ್ಟ್) ಮುಖಪುಟದ ಸುದ್ದಿಯಾಯಿತು. ಅಮಿತಾಭ್ ಅವರಂಥ ಶಿಸ್ತಿನ ಮತ್ತು ಘನವಂತ ನಟನಿಂದ ಇಂಥ ಮಾತು ಬಂದಿದ್ದು ಎಲ್ಲರಿಗೂ ಅಚ್ಚರಿ ತಂದಿತ್ತು. ಆ ಸಮಯದಲ್ಲಿ ಈಗಲ್ ಫಿಲ್ಮ್ಸ್ ಬಾಲಿವುಡ್‌ನಲ್ಲಿ ಬಹಳ ಪ್ರಭಾವಶಾಲಿಯಾಗಿದ್ದ ಸಿನಿಮಾ ನಿರ್ಮಾಣ ಸಂಸ್ಥೆಯಾಗಿತ್ತು. ಅಮಿತಾಭ್ ಅವರ ಈ 'ಜಿರಳೆ' ಪದದ ಪ್ರಯೋಗದಿಂದ ಎಫ್.ಸಿ. ಮೆಹ್ರಾ ಅವರು ತೀವ್ರವಾಗಿ ಆಕ್ರೋಶಗೊಂಡರು. ನನ್ನಂಥ ಒಬ್ಬ ಪ್ರತಿಷ್ಠಿತ ನಿರ್ಮಾಪಕನನ್ನು ಸಾರ್ವಜನಿಕವಾಗಿ ಇಷ್ಟು ಕೀಳಾಗಿ ನಿಂದಿಸಿದ್ದು ತಮ್ಮ ಘನತೆಗೆ ಧಕ್ಕೆ ತಂದಿತು ಎಂದು ಅವರು ಭಾವಿಸಿದರು. ತಕ್ಷಣವೇ ಅವರು ಅಮಿತಾಭ್ ಬಚ್ಚನ್ ವಿರುದ್ಧ ಮಾನನಷ್ಟ ಮೊಕದ್ದಮೆ (Defamation Case) ಹೂಡಲು ಸಿದ್ಧತೆ ನಡೆಸಿದರು. ವಕೀಲರ ಮೂಲಕ ನೋಟಿಸ್ ಕಳುಹಿಸುವ ಪ್ರಕ್ರಿಯೆಯೂ ಆರಂಭವಾಯಿತು. ಒಂದು ವೇಳೆ ಈ ಕೇಸ್ ನ್ಯಾಯಾಲಯಕ್ಕೆ ಹೋಗಿದ್ದರೆ, ಅಮಿತಾಭ್ ಅವರ ವೃತ್ತಿಜೀವನದ ಮೇಲೆ ಅದು ದೊಡ್ಡ ಪರಿಣಾಮ ಬೀರುವ ಸಾಧ್ಯತೆಯಿತ್ತು. 'ಚಿತ್ರರಂಗ ಎನ್ನುವುದು ಒಂದು ಸಣ್ಣ ಕುಟುಂಬದಂತೆ. ಇಲ್ಲಿ ಪರಸ್ಪರರ ವೈಮನಸ್ಸಿನಿಂದ ಕೋರ್ಟಿಗೆ ಹೋದರೆ ಕುಟುಂಬದ ವಿಷಯ ಬೀದಿಗೆ ಬಂದಂತಾಗುತ್ತದೆ. ಅಲ್ಲಿ ಜಗಳಗಳಿಗಿಂತ ವ್ಯವಹಾರ ಮುಖ್ಯವಾಗುತ್ತದೆ' ಎಂದು ಕೆಲವು ಹಿರಿಯರು ಪಂಚಾಯತಿ ಮಾಡಿದರು. ಅಂತಿಮವಾಗಿ, ಉದ್ಯಮದ ಹಿರಿಯರು ಮತ್ತು ಮಿತ್ರರ ಮಧ್ಯಸ್ಥಿಕೆಯಿಂದ ಈ ವಿವಾದ ಬಗೆಹರಿಯಿತು. ಅಮಿತಾಭ್ ಅವರು ತಮ್ಮ ಹೇಳಿಕೆಯನ್ನು ಹಿಂದಕ್ಕೆ ಪಡೆದರು. ಅಷ್ಟೇ ಅಲ್ಲ, ವಿಷಯವನ್ನು ತಣ್ಣಗಾಗಿಸಲು ಪ್ರಯತ್ನಿಸಿದರು. ಮುಂದೆ ಇದೇ ಈಗಲ್ ಫಿಲ್ಮ್ಸ್ ನಿರ್ಮಾಣದ 'ಕಸ್ಮೆ ವಾದೆ' ಚಿತ್ರದಲ್ಲಿ ಅಮಿತಾಭ್ ನಟಿಸಿದರು. ಅಮಿತಾಭ್ ಅವರ 'ಜಿರಳೆ' ಎಂಬ ಆ ಕಟು ಟೀಕೆ ಇಂದಿಗೂ ಅವರ ಜೀವನದ 'ಆಂಗ್ರಿ ಯಂಗ್ ಮ್ಯಾನ್' ಸ್ವಭಾವಕ್ಕೆ ಒಂದು ಉದಾಹರಣೆಯಾಗಿ ಉಳಿದಿದೆ. ಜಿರಳೆ ಎಷ್ಟೇ ತಿರಸ್ಕೃತ ಪ್ರಾಣಿಯಾದರೂ, ಅದು ಬಾಲಿವುಡ್‌ನ ಮಹಾಶಕ್ತಿಯನ್ನು ನ್ಯಾಯಾಲಯದ ಮೆಟ್ಟಿಲು ಹತ್ತುವಂತೆ ಮಾಡಿತ್ತು ಎನ್ನುವುದು ಇಲ್ಲಿನ ವಿಶೇಷ! ಎಂ.ಜಿ. ರಾಮಚಂದ್ರನ್ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ, ಅವರು ವಿರೋಧಿಗಳನ್ನು ಹೀಯಾಳಿಸುವಾಗ 'ಜಿರಳೆ' ಎಂಬ ರೂಪಕ ಬಳಸುತ್ತಿದ್ದರು. 'ಬೆಳಕು (ಅಧಿಕಾರ) ಕಂಡ ಕೂಡಲೇ ಸಂದಿ-ಗೊಂದಿಗಳಲ್ಲಿ ಅಡಗಿಕೊಳ್ಳುವ ಜಿರಳೆ ಬುದ್ಧಿಯ ರಾಜಕಾರಣಿಗಳು' ಎಂದು ಅವರು ಟೀಕಿಸುತ್ತಿದ್ದರು.

ಯುದ್ಧದ ಬೆಂಕಿಯಲ್ಲಿ ದುಬೈ ರಿಯಲ್ ಎಸ್ಟೇಟ್!

ಯುದ್ಧ ತೀವ್ರಗೊಂಡಾಗ ಜಾಗತಿಕ ಹೂಡಿಕೆ ಮಾರುಕಟ್ಟೆಗಳಲ್ಲಿ ಭಯ ವ್ಯಾಪಿಸಿತು. ಗಲ್ಫ್ ನಗರಗಳ ಮೇಲೆ ಕ್ಷಿಪಣಿ ದಾಳಿಯ ಆತಂಕ, ತೈಲ ಸರಬರಾಜು ವ್ಯತ್ಯಯ ಮತ್ತು ಮಧ್ಯಪ್ರಾಚ್ಯದಲ್ಲಿ ದೊಡ್ಡ ಮಟ್ಟದ ಯುದ್ಧದ ಭೀತಿ ಹೆಚ್ಚಿತು. ಜಗತ್ತಿನ ಸುಮಾರು ಶೇ.20ರಷ್ಟು ತೈಲ ಸರಬರಾಜು ಸಾಗುವ ಹೊರ್ಮುಜ್ ಸಮುದ್ರ ಮಾರ್ಗವೇ ಯುದ್ಧದ ಪ್ರಮುಖ ಕೇಂದ್ರವಾಗಿ ಪರಿಣಮಿಸಿತು.

ಮಧ್ಯಪ್ರಾಚ್ಯದ ಆರ್ಥಿಕ ಮತ್ತು ಐಷಾರಾಮಿ ಕೇಂದ್ರವೆಂದು ಹೆಸರುವಾಸಿಯಾಗಿರುವ ದುಬೈ, ಹಲವು ದಶಕಗಳಿಂದ ಜಗತ್ತಿನ ಹೂಡಿಕೆದಾರರಿಗೆ ಸಂಪತ್ತು, ಭದ್ರತೆ ಮತ್ತು ಅಭಿವೃದ್ಧಿಯ ಪ್ರತೀಕವಾಗಿ ಕಾಣಿಸಿಕೊಂಡಿದೆ. ಗಗನಚುಂಬಿ ಕಟ್ಟಡಗಳು, ಅತಿ ಐಷಾರಾಮಿ ವಿಲ್ಲಾಗಳು, ಕೃತಕ ದ್ವೀಪಗಳು ಮತ್ತು ತೆರಿಗೆ ರಹಿತ ವ್ಯವಹಾರ ನೀತಿಗಳು ದುಬೈಯನ್ನು ಜಗತ್ತಿನ ಅತ್ಯಂತ ಆಕರ್ಷಕ ರಿಯಲ್ ಎಸ್ಟೇಟ್ ಕೇಂದ್ರಗಳಲ್ಲಿ ಒಂದಾಗಿ ರೂಪಿಸಿವೆ.

ಭಾರತ, ಯುರೋಪ್, ರಷ್ಯಾ, ಚೀನಾ ಮತ್ತು ಗಲ್ಫ್ ರಾಷ್ಟ್ರಗಳ ಹೂಡಿಕೆದಾರರು ದುಬೈ ಆಸ್ತಿ ಮಾರುಕಟ್ಟೆಯಲ್ಲಿ ಕೋಟ್ಯಂತರ ಡಾಲರ್ ಹೂಡಿಕೆ ಮಾಡಿದ್ದಾರೆ. ದುಬೈ ರಿಯಲ್ ಎಸ್ಟೇಟ್ ಹೂಡಿಕೆಯನ್ನು 'ಭದ್ರತೆ ಮತ್ತು ಲಾಭದಾಯಕ' ಹೂಡಿಕೆ ಎಂದು ಜಗತ್ತಿನ ಅನೇಕ ಶ್ರೀಮಂತರು ಪರಿಗಣಿಸಿದ್ದರು. ಆದರೆ, 2026ರಲ್ಲಿ ಉಲ್ಬಣಗೊಂಡ ಅಮೆರಿಕ ಮತ್ತು ಇರಾನ್ ಯುದ್ಧ ಈ ನಂಬಿಕೆಗೆ ಭಾರೀ ಹೊಡೆತ ನೀಡಿದ್ದು, ದುಬೈ ರಿಯಲ್ ಎಸ್ಟೇಟ್ ಕ್ಷೇತ್ರವನ್ನು ದೊಡ್ಡ ಸಂಕಷ್ಟದತ್ತ ತಳ್ಳಿದೆ.

ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧ ಗಲ್ಫ್ ಪ್ರದೇಶದ ಸ್ಥಿರತೆಯನ್ನು ಕದಡಿತು. ಕ್ಷಿಪಣಿ ದಾಳಿ, ಡ್ರೋನ್ ದಾಳಿ, ಹೊರ್ಮುಜ್ ಜಲಸಂಧಿ ಮುಚ್ಚುವ ಬೆದರಿಕೆ ಮತ್ತು ತೈಲ ಮೂಲಸೌಕರ್ಯಗಳ ಮೇಲೆ ದಾಳಿಗಳ ಭೀತಿ ಹೂಡಿಕೆದಾರರಲ್ಲಿ ಆತಂಕ ಹುಟ್ಟಿಸಿತು. ಸುರಕ್ಷಿತ ಹೂಡಿಕೆ ತಾಣ ಎಂದು ಪರಿಗಣಿಸಲ್ಪಟ್ಟ ಯುಎಇ, ಯುದ್ಧದ ನಂತರ ಅಪಾಯದ ಪ್ರದೇಶವೆಂದು ಕಾಣಿಸಿಕೊಳ್ಳಲು ಆರಂಭಿಸಿದೆ. ಪಾಮ್ ದ್ವೀಪ ಮತ್ತು ಬುರ್ಜ್ ಖಲೀಫಾ ಸುತ್ತಮುತ್ತಲಿನ ಐಷಾರಾಮಿ ಮನೆಗಳನ್ನು ಖರೀದಿಸಲು ಸ್ಪರ್ಧಿಸುತ್ತಿದ್ದ ಹೂಡಿಕೆದಾರರು ಹಿಂಜರಿಯುತ್ತಿದ್ದಾರೆ. ಯುದ್ಧದ ಮೊದಲು ದುಬೈ ರಿಯಲ್ ಎಸ್ಟೇಟ್ ಮಾರುಕಟ್ಟೆ ಐತಿಹಾಸಿಕ ಏರಿಕೆಯನ್ನು ಕಂಡಿತ್ತು, ಕೋವಿಡ್ ನಂತರದ ಪುನಶ್ಚೇತನದಿಂದ ಆಸ್ತಿ ಬೆಲೆಗಳು ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದ್ದವು. 2025ರಲ್ಲಿ ದುಬೈನಲ್ಲಿ ಸುಮಾರು AED 917 ಶತ ಕೋಟಿ ಮೌಲ್ಯದ ಆಸ್ತಿ ವ್ಯವಹಾರಗಳು ನಡೆದಿತ್ತು. 2021 ರಿಂದ 2025 ರವರೆಗೆ ವಸತಿ ಆಸ್ತಿಗಳ ಬೆಲೆ ಸುಮಾರು ಶೇ.60 ರಿಂದ 75ರವರೆಗೆ ಏರಿಕೆಯಾಗಿದ್ದವು. ದುಬೈ ಸರಕಾರದ 'ಗೋಲ್ಡನ್ ವೀಸಾ' ಯೋಜನೆಯೂ ಈ ಏರಿಕೆಗೆ ಪ್ರಮುಖ ಕಾರಣವಾಯಿತು. ಆಸ್ತಿ ಖರೀದಿಸುವ ಮೂಲಕ ದೀರ್ಘಕಾಲದ ವಾಸ ಅನುಮತಿ ಪಡೆಯುವ ಅವಕಾಶ ಹೂಡಿಕೆದಾರರನ್ನು ಆಕರ್ಷಿಸಿತು. ಭಾರತೀಯ ಹೂಡಿಕೆದಾರರು ದುಬೈ ವಿದೇಶಿ ಆಸ್ತಿ ಖರೀದಿಗಳಲ್ಲಿ ಸುಮಾರು ಶೇ.20ರಷ್ಟು ಪಾಲು ಹೊಂದಿದ್ದರು ಎಂದು ಅಂದಾಜಿಸಲಾಗಿದೆ. 'ಎಮ್ಮಾರ್' ಮತ್ತು 'ಡಾಮಾಕ್' ನಿರ್ಮಾಣ ಕಂಪನಿಗಳು ಸಾವಿರಾರು ಕೋಟಿ ರುಪಾಯಿ ಮೌಲ್ಯದ ಹೊಸ ಯೋಜನೆಗಳನ್ನು ಘೋಷಿಸುತ್ತಿದ್ದವು. ಆದರೆ ಅಮೆರಿಕ ಮತ್ತು ಇರಾನ್ ಯುದ್ಧ ಈ ಚೇತರಿಕೆಯನ್ನು ಕ್ಷಣಾರ್ಧದಲ್ಲಿ ಕುಸಿತದತ್ತ ತಳ್ಳಿತು.

ಮೋಹನ್ ವಿಶ್ವ
ವೀಕೆಂಡ್ ವಿತ್ ಮೋಹನ್
vveditoped@gmail.com

2026ರ ಆರಂಭದಲ್ಲಿ ಯುದ್ಧ ತೀವ್ರಗೊಂಡಾಗ ಜಾಗತಿಕ ಹೂಡಿಕೆ ಮಾರುಕಟ್ಟೆಗಳಲ್ಲಿ ಭಯ ವ್ಯಾಪಿಸಿತು. ಗಲ್ಫ್ ನಗರಗಳ ಮೇಲೆ ಕ್ಷಿಪಣಿ ದಾಳಿಗಳು ನಡೆಯಬಹುದೇ ಎಂಬ ಆತಂಕ, ತೈಲ ಸರಬರಾಜು ವ್ಯತ್ಯಯ ಮತ್ತು ಮಧ್ಯಪ್ರಾಚ್ಯದಲ್ಲಿ ದೊಡ್ಡ ಮಟ್ಟದ ಯುದ್ಧದ ಭೀತಿ ಹೂಡಿಕೆದಾರರಲ್ಲಿ ಹೆಚ್ಚಿತು. ಜಗತ್ತಿನ ಸುಮಾರು ಶೇ.20ರಷ್ಟು ತೈಲ ಸರಬರಾಜು ಸಾಗುವ ಹೊರ್ಮುಜ್ ಸಮುದ್ರ ಮಾರ್ಗವೇ ಯುದ್ಧದ ಪ್ರಮುಖ ಕೇಂದ್ರವಾಗಿ ಪರಿಣಮಿಸಿತು. ಇದರ ಪರಿಣಾಮವಾಗಿ ಜಾಗತಿಕ ತೈಲ ಬೆಲೆಗಳು ಏರಿಕೆ ಕಂಡವು, ಕಚ್ಚಾತೈಲದ ಬೆಲೆ ಬ್ಯಾರಲ್‌ಗೆ 106 ಡಾಲರ್ ತಲುಪಿದೆ.

ಈ ಯುದ್ಧದ ತಕ್ಷಣದ ಪರಿಣಾಮ ದುಬೈ ಷೇರು ಮತ್ತು ಆಸ್ತಿ ಮಾರುಕಟ್ಟೆಯಲ್ಲಿ ಗೋಚರಿಸಿತು, ದುಬೈ ಹಣಕಾಸು ಮಾರುಕಟ್ಟೆ ರಿಯಲ್ ಎಸ್ಟೇಟ್ ಸೂಚ್ಯಂಕವು ಕೆಲವೇ ವಾರಗಳಲ್ಲಿ ಸುಮಾರು ಶೇ.20ರಿಂದ 30ರವರೆಗೆ ಕುಸಿತ ಕಂಡಿತು. ಕೆಲವು ವರದಿಗಳ ಪ್ರಕಾರ ಸೂಚ್ಯಂಕವು ಸುಮಾರು 16,900 ಅಂಕಗಳಿಂದ 11,500 ಅಂಕಗಳವರೆಗೆ ಕುಸಿದಿತ್ತು. 2026ರಲ್ಲಿ ಗಳಿಸಿದ್ದ ಲಾಭಗಳು ಸಂಪೂರ್ಣವಾಗಿ ಅಳಿಸಿಹೋಗುವ ಸ್ಥಿತಿ ನಿರ್ಮಾಣವಾಯಿತು. ಈ ಕುಸಿತ ಹೂಡಿಕೆದಾರರಲ್ಲಿ ಭಾರೀ ಆತಂಕ ಉಂಟುಮಾಡಿತು, ಪ್ರಮುಖ ರಿಯಲ್ ಎಸ್ಟೇಟ್ ಕಂಪನಿಗಳ ಷೇರುಗಳು ಭಾರೀ ಪ್ರಮಾಣದಲ್ಲಿ ಕುಸಿದವು. ಜಾಗತಿಕ ಹೂಡಿಕೆದಾರರು ಹೊಸ ಹೂಡಿಕೆ ಮಾಡುವ ಬದಲು ಕಾದು ನೋಡುವ ನೀತಿಯನ್ನು ಅನುಸರಿಸಲು ಪ್ರಾರಂಭಿಸಿದರು. ಆಸ್ತಿ ಖರೀದಿ ಮತ್ತು ಮಾರಾಟ ವ್ಯವಹಾರಗಳಲ್ಲಿಯೂ ತೀವ್ರ ಕುಸಿತ ಕಂಡು ಬಂದಿದೆ. ವರದಿಗಳ ಪ್ರಕಾರ 2026ರ ಮಾರ್ಚ್ ಆರಂಭದಲ್ಲಿ ಯುಎಇ ರಿಯಲ್ ಎಸ್ಟೇಟ್ ವ್ಯವಹಾರಗಳು ವರ್ಷದಿಂದ ವರ್ಷಕ್ಕೆ ಸುಮಾರು ಶೇ.37ಕ್ಕೆ ಕುಸಿದಿತ್ತು. ತಿಂಗಳ ಆಧಾರದ ಮೇಲೆ ನೋಡಿದರೆ ವ್ಯವಹಾರ ಪ್ರಮಾಣ ಸುಮಾರು ಶೇ.49ಕ್ಕೆ ಇಳಿಕೆಯಾಯಿತು. ಯುದ್ಧ ಇನ್ನಷ್ಟು ಉಲ್ಬಣವಾಗಬಹುದೆಂಬ ಭೀತಿಯಿಂದ ಅನೇಕ ಹೂಡಿಕೆದಾರರು ತಮ್ಮ ಖರೀದಿ ನಿರ್ಧಾರಗಳನ್ನು ಮುಂದೂಡಿದ್ದಾರೆ.

ಬುರ್ಜ್ ಖಲೀಫಾ, ದುಬೈ ಮರೀನಾ ಮತ್ತು ಪಾಮ್ ಜುಮೇರಾ ಪ್ರದೇಶಗಳ ಐಷಾರಾಮಿ ಆಸ್ತಿಗಳು ಮೊದಲಿಗೆ ಹೊಡೆತ ಅನುಭವಿಸಿದವು. ಕೆಲ ಪ್ರದೇಶಗಳಲ್ಲಿ ಶೇ.12ರಿಂದ 15ರವರೆಗೆ ರಿಯಾಯಿತಿಯಲ್ಲಿ ಮನೆಗಳನ್ನು ಮಾರಾಟಕ್ಕೆ ಇಡಲಾಗುತ್ತಿದೆ ಎಂಬ ವರದಿಗಳು ಹೊರಬಿದ್ದಿವೆ. ಹೂಡಿಕೆದಾರರು ಇನ್ನಷ್ಟು ನಷ್ಟವಾಗುವ ಭಯದಿಂದ ತ್ವರಿತವಾಗಿ ಆಸ್ತಿಗಳನ್ನು ಮಾರಾಟ ಮಾಡಲು ಯತ್ನಿಸಿದರು, ಈ ಪರಿಸ್ಥಿತಿ 2008ರ ಜಾಗತಿಕ ಆರ್ಥಿಕ ಸಂಕಷ್ಟದ ನೆನಪುಗಳನ್ನು ಮತ್ತೆ ಜೀವಂತಗೊಳಿಸಿದೆ. ಆ ಸಮಯದಲ್ಲಿ ದುಬೈ ರಿಯಲ್ ಎಸ್ಟೇಟ್ ಬೆಲೆಗಳು ಸುಮಾರು ಶೇ.50 ರಿಂದ 60ರವರೆಗೆ ಕುಸಿದಿದ್ದವು. ಅನೇಕ ನಿರ್ಮಾಣ ಯೋಜನೆಗಳು ಅರ್ಧದಲ್ಲೇ ನಿಂತುಹೋಗಿದ್ದವು ಮತ್ತು ಸರಕಾರ ದೊಡ್ಡ ಮಟ್ಟದ ಆರ್ಥಿಕ ನೆರವು ನೀಡಬೇಕಾದ ಪರಿಸ್ಥಿತಿ ಎದುರಿಸಿತ್ತು. ಈಗಿನ ಪರಿಸ್ಥಿತಿ ಅದೇ ಮಟ್ಟದಲ್ಲಿಲ್ಲದಿದ್ದರೂ, ದೀರ್ಘಕಾಲ ಯುದ್ಧ

ಮುಂದುವರಿದರೆ ದುಬೈ ಮತ್ತೆ ದೊಡ್ಡ ಆರ್ಥಿಕ ಒತ್ತಡಕ್ಕೆ ಸಿಲುಕಬಹುದು ಎಂದು ತಜ್ಞರು ಎಚ್ಚರಿಸುತ್ತಿದ್ದಾರೆ.

ದುಬೈ ಮಾರುಕಟ್ಟೆಯ ದೊಡ್ಡ ದುರ್ಬಲತೆ ಎಂದರೆ ವಿದೇಶಿ ಹೂಡಿಕೆಗಳ ಮೇಲಿನ ಅವಲಂಬನೆ, ಅನೇಕ ದೇಶಗಳಲ್ಲಿ ಸ್ಥಳೀಯ ಜನರು ಮನೆ ಖರೀದಿ ಮಾರುಕಟ್ಟೆಯನ್ನು ನಿಯಂತ್ರಿಸುತ್ತಾರೆ. ಆದರೆ ದುಬೈನಲ್ಲಿ ವಿದೇಶಿ ಹೂಡಿಕೆದಾರರು ಮುಖ್ಯ ಶಕ್ತಿ, ಆದ್ದರಿಂದ ಗಲ್ಫ್ ಪ್ರದೇಶದಲ್ಲಿ ಯಾವುದೇ ರಾಜಕೀಯ ಅಥವಾ ಸೈನಿಕ ಅಸ್ಥಿರತೆ ಉಂಟಾದರೂ ಅದರ ನೇರ ಪರಿಣಾಮ ದುಬೈ ಆಸ್ತಿ ಮಾರುಕಟ್ಟೆಯ ಮೇಲೆ ಬೀಳುತ್ತದೆ. ಇದಲ್ಲದೆ ದುಬೈ ಮಾರುಕಟ್ಟೆಯಲ್ಲಿ 'ಆಫ್-ಪ್ಲಾನ್' ಯೋಜನೆಗಳು ಹೆಚ್ಚಾಗಿರುವುದು ಮತ್ತೊಂದು ಸಮಸ್ಯೆಯಾಗಿದೆ, ಅಂದರೆ ಕಟ್ಟಡ ಪೂರ್ಣಗೊಳ್ಳುವ ಮೊದಲೇ ಹೂಡಿಕೆದಾರರು ಮನೆ ಖರೀದಿಸುವ ವ್ಯವಸ್ಥೆ. 2025ರಲ್ಲಿ ನಡೆದ ವ್ಯವಹಾರಗಳಲ್ಲಿ ಸುಮಾರು ಶೇ.63ರಷ್ಟು ಇಂತಹ ಯೋಜನೆಗಳಾಗಿದ್ದವು. ಭವಿಷ್ಯದ ನಿರೀಕ್ಷೆಗಳ ಮೇಲೆ ನಿರ್ಮಿತವಾಗಿರುವ ಇಂತಹ ಮಾರುಕಟ್ಟೆಗಳು ಯುದ್ಧ ಮತ್ತು ಅನಿಶ್ಚಿತತೆಯಿಂದ ಬೇಗನೆ ಕುಸಿಯುತ್ತವೆ. ದುಬೈ ಆರ್ಥಿಕತೆಯ ಇನ್ನೊಂದು ಪ್ರಮುಖ ಆಧಾರವಾದ ಪ್ರವಾಸೋದ್ಯಮವೂ ಯುದ್ಧದಿಂದ ಹೊಡೆತ ಅನುಭವಿಸಿತು. ಹೋಟೆಲ್ ಬುಕ್ಕಿಂಗ್‌ಗಳು ಕಡಿಮೆಯಾಗಿದ್ದು, ಅನೇಕ ಅಂತಾರಾಷ್ಟ್ರೀಯ ಸಮ್ಮೇಳನಗಳು ಮತ್ತು ಕಾರ್ಯಕ್ರಮಗಳು ರದ್ದುಗೊಂಡವು. ಇದರಿಂದ ಅಲ್ಪಾವಧಿ ಬಾಡಿಗೆ ಮನೆಗಳ ಬೇಡಿಕೆಯೂ ಕುಸಿಯಿತು. ಆದರೆ ಕೆಲ ತಜ್ಞರು ದುಬೈ ಸಂಪೂರ್ಣವಾಗಿ ಕುಸಿಯುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. 2008ರಿಗಿಂತ ಇಂದು ದುಬೈ ಹೆಚ್ಚು ಬಲವಾದ ಬ್ಯಾಂಕಿಂಗ್ ವ್ಯವಸ್ಥೆ, ಹೆಚ್ಚಿನ ವಿದೇಶಿ ವಿನಿಮಯ ಸಂಗ್ರಹ ಮತ್ತು ಉತ್ತಮ ಆರ್ಥಿಕ ನಿಯಂತ್ರಣ ಹೊಂದಿದೆ, ಆದ್ದರಿಂದ ಇದು ತಾತ್ಕಾಲಿಕ ಆಘಾತವಾಗಿರಬಹುದು ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

ಯುದ್ಧದ ನಂತರ ದುಬೈ ಮಾರುಕಟ್ಟೆ ಎರಡು ಭಾಗಗಳಾಗಿ ವಿಭಜನೆಯಾಗುವ ಸಾಧ್ಯತೆ ಇದೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ, ಅತಿ ಐಷಾರಾಮಿ ಮತ್ತು ಸಮುದ್ರ ತೀರ ಪ್ರದೇಶಗಳ ಆಸ್ತಿಗಳು ಬೇಗನೆ ಚೇತರಿಸಿಕೊಳ್ಳಬಹುದು. ಆದರೆ, ಊಹಾಪೋಹ ಆಧಾರಿತ ಯೋಜನೆಗಳು ಮತ್ತು ಹೊರವಲಯದ ಅಭಿವೃದ್ಧಿಗಳು ಹೆಚ್ಚು ಹೊಡೆತ ಅನುಭವಿಸಬಹುದು. ಮುಂದಿನ ದಿನಗಳಲ್ಲಿ ಅಮೆರಿಕ ಮತ್ತು ಇರಾನ್ ನಡುವಿನ ಉದ್ವಿಗ್ನತೆ ಕಡಿಮೆಯಾದರೆ ದುಬೈ ಮಾರುಕಟ್ಟೆ ನಿಧಾನವಾಗಿ ಚೇತರಿಸಿಕೊಳ್ಳಬಹುದು. ಕೋವಿಡ್ ನಂತರ ದುಬೈ ತೋರಿದ ವೇಗದ ಚೇತರಿಕೆ ಇದಕ್ಕೆ ಉದಾಹರಣೆ. ತೆರಿಗೆ ರಹಿತ ವ್ಯವಸ್ಥೆ, ಅತ್ಯಾಧುನಿಕ ಮೂಲಸೌಕರ್ಯ ಮತ್ತು ಜಾಗತಿಕ ಸಂಪರ್ಕಗಳು ಇನ್ನೂ ದುಬೈಗೆ ಬಲ ನೀಡುತ್ತಿವೆ. ಆದರೆ ಮಧ್ಯಪ್ರಾಚ್ಯದಲ್ಲಿ ಅಸ್ಥಿರತೆ ಮುಂದುವರಿದರೆ ದುಬೈ ಇನ್ನೂ ದೀರ್ಘಕಾಲದ ಆರ್ಥಿಕ ಸಂಕಷ್ಟವನ್ನು ಎದುರಿಸಬೇಕಾಗಬಹುದು. 2027 ಅಥವಾ 2028 ರವರೆಗೆ ಆಸ್ತಿ ಬೆಲೆಗಳು ಕುಸಿಯುವ ಸಾಧ್ಯತೆ ಇದೆ ಎಂದು ಕೆಲ ವಿಶ್ಲೇಷಕರು ಎಚ್ಚರಿಸಿದ್ದಾರೆ.

ಅಮೆರಿಕ ಮತ್ತು ಇರಾನ್ ಯುದ್ಧದ ಪರಿಣಾಮದಿಂದ ಉಂಟಾದ ದುಬೈ ರಿಯಲ್ ಎಸ್ಟೇಟ್ ಸಂಕಷ್ಟ ಜಾಗತಿಕ ಮಾರುಕಟ್ಟೆಗಳಲ್ಲಿ ಭೂರಾಜಕೀಯದ ಪ್ರಭಾವ ಎಷ್ಟು ದೊಡ್ಡದು ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಜಗತ್ತಿನ ಅತ್ಯಂತ ಐಷಾರಾಮಿ ನಗರಗಳಲ್ಲೊಂದು ಆಗಿದ್ದ ದುಬೈ ಕೂಡ ಯುದ್ಧ ಮತ್ತು ಅಸ್ಥಿರತೆಯ ಹೊಡೆತದಿಂದ ತಪ್ಪಿಸಿಕೊಳ್ಳಲಿಲ್ಲ ಎಂಬುದು ಈ ಘಟನೆ ತೋರಿಸಿದೆ.

ಭಾರತದ ಪ್ರಜಾಪ್ರಭುತ್ವ ಎಷ್ಟು ಪ್ರಬುದ್ಧ?

ಸುಮಾರು 100 ಕೋಟಿ ಮತದಾರರು ಇರುವ, ಜಗತ್ತಿನ ಪ್ರಮುಖ ಧರ್ಮಗಳ ಜನರನ್ನು ಹೊಂದಿರುವ, ನೂರಾರು ಬುಡಕಟ್ಟು ಜನರು, ಜಾತಿ, ಭಾಷೆ, ಸಂಸ್ಕೃತಿ ವೈವಿಧ್ಯತೆಯ ದೇಶ ಒಂದು ಸಂವಿಧಾನದ ಅಡಿಯಲ್ಲಿ ಕಾರ್ಯಾಚರಿಸುತ್ತಿದೆ ಎಂದರೆ ಅದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಯಶಸ್ಸಲ್ಲದೇ ಮತ್ತೇನು?

ಈ ಜಗತ್ತಿನಲ್ಲಿ ಅನೇಕ ರೀತಿಯ ಆಡಳಿತ ವ್ಯವಸ್ಥೆಗಳು ಪ್ರಯೋಗಿಸಲ್ಪಟ್ಟಿವೆ, ಮತ್ತು ಮುಂದೆಯೂ ಪ್ರಯೋಗಿಸಲ್ಪಡುವುವು. ಪ್ರಜಾಪ್ರಭುತ್ವವು ಪರಿಪೂರ್ಣವಾದುದು ಅಥವಾ ಸರ್ವಜ್ಞವಾದುದು ಎಂದು ಯಾರೂ ಹೇಳುವುದಿಲ್ಲ. ವಾಸ್ತವವಾಗಿ, ಇಂದಿನವರೆಗೆ ಪ್ರಯೋಗಿಸಲ್ಪಟ್ಟ ಇತರ ಎಲ್ಲ ಆಡಳಿತ ವ್ಯವಸ್ಥೆಗಳೊಂದಿಗೆ ಹೋಲಿಸಿದರೆ, ಪ್ರಜಾಪ್ರಭುತ್ವವೇ ಕನಿಷ್ಠ ಕೆಟ್ಟ ವ್ಯವಸ್ಥೆಯಾಗಿದೆ ಎಂದು ಪ್ರಜಾಪ್ರಭುತ್ವ ವ್ಯವಸ್ಥೆಯ ಕುರಿತು 'ವಿನ್ಸ್‌ಟನ್ ಚರ್ಚಿಲ್' ಹೇಳಿದ ಮಾತು ಬಹಳ ಪ್ರಸಿದ್ಧ.

ಪ್ರಜಾಪ್ರಭುತ್ವದ ಹೊರತಾಗಿ ಜಗತ್ತಿನಲ್ಲಿ ರಾಜಪ್ರಭುತ್ವ, ಮಿತ ಜನತಂತ್ರ, ಏಕಪಕ್ಷ ಆಡಳಿತ, ಸರ್ವಾಧಿಕಾರ ಮೊದಲಾದ ರೀತಿಯ ಆಡಳಿತ ವ್ಯವಸ್ಥೆಗಳು ಇವೆ.

ಸೌದಿ ಅರೇಬಿಯಾ, ಒಮಾನ್, ಬ್ರೂನೈ, ಜೋರ್ಡಾನ್, ಕುವೈತ್, ಭೂತಾನ್, ಕಾಂಬೋಡಿಯಾ, ಮಲೇಶಿಯಾ ಮೊದಲಾದ ದೇಶಗಳು ರಾಜಸತ್ತೆಯ ಅಡಿಯಲ್ಲಿ ಆಳಲ್ಪಡುತ್ತಿವೆ. ಈ ವ್ಯವಸ್ಥೆಯಡಿ ಆಡಳಿತದಲ್ಲಿ ರಾಜನ/ರಾಣಿಯ ತೀರ್ಮಾನವೇ ಅಂತಿಮ. ವಂಶಪಾರಂಪರ್ಯವಾಗಿ ರಾಜಾಡಳಿತ ಮುಂದು ವರಿಯುವುದು. ಯೋಗ್ಯತೆ ಹಾಗೂ ಸಾಮರ್ಥ್ಯ ಇಲ್ಲದಿದ್ದರೂ ಉತ್ತರಾಧಿಕಾರಿ ಅಧಿಕಾರಕ್ಕೆ ಏರುವುದು, ಏಕಪಕ್ಷೀಯ ನಿರ್ಣಯಗಳನ್ನು ಕೈಗೊಳ್ಳುವುದು, ಜನಾಭಿಪ್ರಾಯಕ್ಕೆ ಮನ್ನಣೆ ಕೊಡದಿರುವುದು, ಅಧಿಕಾರಸ್ಥನ ಸ್ವೇಚ್ಛಾಚಾರ, ಸರ್ವಾಧಿಕಾರ ಮೊದಲಾದ ಅಪಾಯಗಳು ಈ ವ್ಯವಸ್ಥೆಯಲ್ಲಿದೆ.

ಬ್ರಿಟನ್, ಕೆನಡಾ, ಆಸ್ಟ್ರೇಲಿಯಾಗಳು ಸಾಂಕೇತಿಕವಾಗಿ ರಾಜಾಡಳಿತವನ್ನು ಹೊಂದಿದ್ದಾವೆಯಾದರೂ ರಾಜರಿಗೆ ಅಲ್ಲಿ ಇರುವ ಅಧಿಕಾರ ಬಹಳ ಸೀಮಿತ. ಮಿತ ಜನತಂತ್ರ, ಏಕ ಪಕ್ಷ ಆಡಳಿತ ಹಾಗೂ ಸರ್ವಾಧಿಕಾರಕ್ಕೆ ಚೀನಾವೇ ಅತ್ಯಂತ ಸಮರ್ಪಕ ಉದಾಹರಣೆ. ಚೀನಾದ ಏಕೈಕ ರಾಜಕೀಯ ಪಕ್ಷವಾದ ಚೈನೀಸ್ ಕಮ್ಯುನಿಸ್ಟ್ ಪಾರ್ಟಿಯು ಸೂಚಿಸಿದ ಅಭ್ಯರ್ಥಿಯನ್ನು ಚೀನಾದ ನ್ಯಾಷನಲ್ ಪೀಪಲ್ಸ್ ಕಾಂಗ್ರೆಸ್‌ನ ಅಧ್ಯಕ್ಷನಾಗಿ ನೇಮಕಾತಿ ಮಾಡುತ್ತದೆ. ಚೀನಾದ ಕಮ್ಯುನಿಸ್ಟ್ ಪಕ್ಷದ ಗಣ್ಯ ಸದಸ್ಯರು ಮಾತ್ರ ಅಧ್ಯಕ್ಷನ ಆಯ್ಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ. ಚೀನಾದಲ್ಲಿ ಜನರಿಗೆ ಅಭಿಪ್ರಾಯ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ ಹಾಗೂ ಡಿಜಿಟಲ್ ಸ್ವಾತಂತ್ರ್ಯ ಇಲ್ಲ. ಇನ್ನು ಉತ್ತರ ಕೊರಿಯಾದ ಸರ್ವಾಧಿಕಾರ ಆಡಳಿತದ ಬಗ್ಗೆ ಹೇಳುವುದೇ ಬೇಡ. ಅಲ್ಲಿನ ಈ ಹಿಂದಿನ ಸರ್ವಾಧಿಕಾರಿ ಕಿಮ್ ಜಾಂಗ್ ಇಲ್ ಮತ್ತು ಆತನ ಮಗ ಇಂದಿನ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಇವರಿಬ್ಬರು ಸೇರಿ ಅಲ್ಲಿನ ಪ್ರಜೆಗಳ ಪಾಲಿಗೆ ದೇಶವನ್ನು ಜೈಲ್ ಆಗಿ ಪರಿವರ್ತಿಸಿದ್ದಾರೆ. ಆಶ್ಚರ್ಯವೇನೆಂದರೆ ಜಗತ್ತಿನ ಶೇ.55ಕ್ಕಿಂತಲೂ ಹೆಚ್ಚು ಜನರು ಪ್ರಜಾಪ್ರಭುತ್ವರಹಿತ ಆಡಳಿತ ವ್ಯವಸ್ಥೆಯಡಿಯಲ್ಲಿ ಜೀವಿಸುತ್ತಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೂ ತುಂಬಾ ಕುಂದುಕೊರತೆಗಳಿವೆ. ಇಲ್ಲಿ ಪ್ರಜಾಪ್ರಭುತ್ವ ಮಾದರಿಯಲ್ಲಿ ಬಹುಮತದ ಆಧಾರದಲ್ಲಿ ನಿರ್ಧಾರಗಳು ಕೈಗೊಳ್ಳಲ್ಪಡುತ್ತವೆ. ಇಲ್ಲಿ ಅಲ್ಪಮತಪಡೆದ ಅಭಿಪ್ರಾಯಗಳು ನಿರ್ಲಕ್ಷಿಸಲ್ಪಡುತ್ತವೆ ಎನ್ನುವ ಆರೋಪವಿದೆ. ಪ್ರತೀ ನಿರ್ಣಯಗಳು ಅಥವಾ ಕಾನೂನುಗಳನ್ನು ಜಾರಿಗೆ ತರಬೇಕಾದರೆ ಸುದೀರ್ಘವಾದ ಚರ್ಚೆಗಳು ನಡೆಯಬೇಕಾಗುತ್ತದೆ. ಇದರಿಂದಾಗಿ ಸರಕಾರಗಳು ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ತುಂಬಾ ನಿಧಾನವಾಗುತ್ತದೆ. ರಾಜಕೀಯ ಪಕ್ಷಗಳು ಅಧಿಕಾರಕ್ಕೇರುವ ಉದ್ದೇಶದಿಂದ ದೇಶದ ಆರ್ಥಿಕತೆಗೆ ಮಾರಕವಾದರೂ ಜನಪ್ರಿಯ ಯೋಜನೆಗಳನ್ನು ಘೋಷಿಸುತ್ತವೆ. ಚುನಾವಣೆಗಳಲ್ಲಿ ಮತದಾರರ ಮನಗೆಲ್ಲಲು ಹಣ ಹೆಂಡಗಳೂ ಹೇರಳವಾಗಿ ಬಳಸಲ್ಪಡುತ್ತವೆ. ಇವುಗಳೆಲ್ಲ ಪ್ರಜಾಪ್ರಭುತ್ವ ವ್ಯವಸ್ಥೆಯ ಮಿತಿಗಳಾಗಿವೆ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ 79 ವರ್ಷಗಳು ಸಂದರೂ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಪರಿಪೂರ್ಣವಾಗಿದೆಯೇ ಎನ್ನುವುದು ಆಗಾಗ ಚರ್ಚೆಗೆ ಬರುವ ವಿಷಯ. ಯುನೈಟೆಡ್ ಕಿಂಗ್ಡಮ್ ಮೂಲದ ಎಕನಾಮಿಸ್ಟ್ ಇಂಟೆಲಿಜೆನ್ಸ್ ಯುನಿಟ್ (ಇಐಯು) ಹೆಸರಿನ ಸಂಸ್ಥೆಯು ಜಾಗತಿಕ ಪ್ರಜಾಪ್ರಭುತ್ವ ಸೂಚ್ಯಂಕವನ್ನು ಪ್ರಕಟಿಸುತ್ತದೆ. ಚುನಾವಣಾ ಪ್ರಕ್ರಿಯೆಯ ಪಾರದರ್ಶಕತೆ, ಬಹುತ್ವ, ನಾಗರಿಕ ಸ್ವಾತಂತ್ರ್ಯ, ಚುನಾವಣಾ ಪ್ರಕ್ರಿಯೆಯಲ್ಲಿ ಜನರ ಭಾಗವಹಿಸುವಿಕೆಯ ಪ್ರಮಾಣ ಮೊದಲಾದ ವಿಷಯಗಳ ಆಧಾರದಲ್ಲಿ ಈ ಸೂಚ್ಯಂಕವನ್ನು ಇಐಯು ಸಂಸ್ಥೆಯು ಪ್ರಕಟಿಸುತ್ತದೆ. ಈ ಸಂಸ್ಥೆಯ ಪ್ರಕಾರ ನಾರ್ವೆ, ನ್ಯೂಜಿಲ್ಯಾಂಡ್, ಸ್ವೀಡನ್, ಐಸ್ಲ್ಯಾಂಡ್, ಡೆನ್ಮಾರ್ಕ್, ಆಸ್ಟ್ರೇಲಿಯಾ ಮೊದಲಾದ ದೇಶಗಳು ಪರಿಪೂರ್ಣ ಪ್ರಜಾಪ್ರಭುತ್ವ ದೇಶಗಳ ಅಡಿಯಲ್ಲಿ ಬರುತ್ತವೆ. ಅಮೆರಿಕ, ಭಾರತ, ಬ್ರೆಜಿಲ್ ಮೊದಲಾದ ದೇಶಗಳು ದೋಷಪೂರಿತ ಪ್ರಜಾಪ್ರಭುತ್ವ ವ್ಯವಸ್ಥೆಯ ಅಡಿಯಲ್ಲಿ ಗುರುತಿಸಲ್ಪಟ್ಟಿವೆ. ಪಾಕಿಸ್ತಾನ, ಬಾಂಗ್ಲಾದೇಶದಂತಹ ದೇಶಗಳು



ಗಣತಂತ್ರ
ಗಣೇಶ್ ಭಟ್
vveditoped@gmail.com

ಹೈಬ್ರಿಡ್ ಆಡಳಿತ ದೇಶಗಳ ವಿಭಾಗಕ್ಕೆ ಸೇರುತ್ತವೆ. ಚೀನಾ, ರಷ್ಯಾ, ಟರ್ಕಿ ಮೊದಲಾದ ದೇಶಗಳು ಸರ್ವಾಧಿಕಾರಿ ದೇಶಗಳ ಪಟ್ಟಿಗೆ ಸೇರಿಸಲ್ಪಟ್ಟಿವೆ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯೂ ಕೊರತೆಗಳಿಂದ ಹೊರತಾಗಿಲ್ಲ. ರಾಜಕೀಯ ಪಕ್ಷಗಳು ಮತದಾರರಿಗೆ ಹಣ, ಹೆಂಡಗಳನ್ನು, ಸೀರೆ, ಕುಕ್ಕರ್‌ಗಳನ್ನು ಹಂಚಿ ಮತ ಖರೀದಿ ಮಾಡುವುದು ಇಲ್ಲಿ ಹಿಂದಿನಿಂದಲೂ ನಡೆದುಕೊಂಡುಬಂದ ಪರಿಪಾಠ. ಇದಕ್ಕಾಗಿಯೇ ಚುನಾವಣೆಗಳಿಗಾಗಿ ಕಾಯುವ ಮತದಾರರಿದ್ದಾರೆ. ಇಂತಹ ಮತದಾರರಿಗೆ ಅಭ್ಯರ್ಥಿಯ ಯೋಗ್ಯತೆ ಅಥವಾ ಅಯೋಗ್ಯತೆ ಪರಿಗಣನೆಗೆ ಬರುವುದೇ ಇಲ್ಲ. ಆಮಿಷಗಳಿಗೆ ಬಲಿಯಾಗಿ ಮತದಾನ ಮಾಡುವ ಮತದಾರ ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿಹಿಡಿಯುವುದಾದರೂ ಎಂತು? ಇನ್ನು ಉಚಿತಗಳ ಭರವಸೆಗಳಿಗೆ ಬಲಿಯಾಗುವ ಮತದಾರರದ್ದು ಇನ್ನೊಂದು ಕಥೆ. ಇತ್ತೀಚೆಗಿನ ಕೆಲವು ವರ್ಷಗಳಲ್ಲಿ ಉಚಿತಗಳ ಭರವಸೆಯನ್ನು ನೀಡಿ ಮತದಾರರಿಗೆ ಆಮಿಷ ಒಡ್ಡುವುದು ಬಹಳ ಸರ್ವೇಸಾಮಾನ್ಯವಾದ ವಿಷಯ. ಮಹಿಳೆಯರಿಗೆ ಪ್ರತೀ ತಿಂಗಳು ಹಣ ಕಳುಹಿಸುವುದು, ಉಚಿತ ವಿದ್ಯುತ್, ಉಚಿತ ಬಸ್ ಪ್ರಯಾಣ ಇಂತಹ ಭರವಸೆಗಳಿಗೆ ಮತದಾರರು ಬಹಳ ಸುಲಭವಾಗಿ ಬಲಿಯಾಗುತ್ತಾರೆ. ಆದರೆ ಇಂತಹ ಉಚಿತ ಯೋಜನೆಗಳು ಸರಕಾರದ ಬೊಕ್ಕಸವನ್ನು ಬರಿದು ಮಾಡುವುದೇ ವಿನಃ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಯಾವುದೇ ಸಹಾಯ ಮಾಡುವುದಿಲ್ಲ. ಉದಾಹರಣೆಗೆ ಇತ್ತೀಚೆಗೆ ತಮಿಳುನಾಡಿನಲ್ಲಿ ಅಧಿಕಾರಕ್ಕೆ ಬಂದಿರುವ ಜೋಸೆಫ್ ವಿಜಯ್‌ನ ಪಕ್ಷ ನೀಡಿರುವ ಉಚಿತ ಭರವಸೆಗಳ ಪ್ರಮಾಣವನ್ನು ಗಮನಿಸಿದರೆ ಆ ಎಲ್ಲ ಭರವಸೆಗಳನ್ನು ಈಡೇರಿಸಲು ವಾರ್ಷಿಕವಾಗಿ ಸುಮಾರು 1.2 ಲಕ್ಷ ಕೋಟಿ ರುಪಾಯಿಗಳು ಬೇಕಾಗಬಹುದೆಂದು ಅಂದಾಜಿಸಲಾಗಿದೆ. ಈ ಮೊತ್ತ ತಮಿಳುನಾಡಿನ ವಾರ್ಷಿಕ ಆದಾಯದ ಮೂರನೇ ಒಂದರಷ್ಟಿದೆ! ಉಚಿತಗಳಿಗಾಗಿ ತಮಿಳುನಾಡು ಸರಕಾರವು ಇಷ್ಟು ಮೊತ್ತವನ್ನು ವ್ಯಯಿಸಿದರೆ ಶಿಕ್ಷಣ, ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಹಣ ಸಾಲುವುದಿಲ್ಲ. ರಾಜ್ಯದ ಸಾಲ ಇನ್ನಷ್ಟು ಹೆಚ್ಚಲಿದೆ. ಬಿಹಾರ, ಪಶ್ಚಿಮ ಬಂಗಾಳಗಳ ಚುನಾವಣೆಯ ಸಂದರ್ಭದಲ್ಲಿ ಮಹಿಳೆಯರಿಗೆ ಪ್ರತೀ ತಿಂಗಳು ಹಣ ಕೊಡುವ ಭರವಸೆಯನ್ನು ನೀಡಲಾಗಿತ್ತು. ಉಚಿತಗಳ ಭರವಸೆ ಮತದಾರರನ್ನು ಮರುಳು ಮಾಡಬಲ್ಲವೇ ವಿನಃ ದೇಶ ಅಥವಾ ರಾಜ್ಯಗಳ ಅಭಿವೃದ್ಧಿಗೆ ಒಂದಿಷ್ಟೂ ಸಹಾಯಕವಾಗಲಾರವು. ಉಚಿತಗಳ ಭರವಸೆಯೊಂದಿಗೆ ಚುನಾವಣೆಗಳನ್ನು ಗೆಲ್ಲುವುದು ಆರೋಗ್ಯಯುತ ಪ್ರಜಾಪ್ರಭುತ್ವದ ಲಕ್ಷಣ ಅಲ್ಲವೇ ಅಲ್ಲ.

ಇನ್ನು ಭಾರತದ ಚುನಾವಣೆಗಳಲ್ಲಿ ಜಾತಿ ಓಲೈಕೆ ಎನ್ನುವುದು ಹಾಸುಹೊಕ್ಕ ವಿಷಯವಾಗಿದೆ. ಕ್ಷೇತ್ರಗಳಲ್ಲಿ ಯಾವ ಜಾತಿಯ ಜನಸಂಖ್ಯೆ ಹೆಚ್ಚಿರುತ್ತದೋ ಆ ಜಾತಿಯ ವ್ಯಕ್ತಿಗೇ ರಾಜಕೀಯ ಪಕ್ಷಗಳು ಚುನಾವಣಾ ಟಿಕೆಟ್ ಕೊಡುತ್ತವೆ. ಇದಕ್ಕೆ ರಾಜಕೀಯ ಪಕ್ಷಗಳು ಸಾಮಾಜಿಕ ನ್ಯಾಯ, ಸೋಶಿಯಲ್ ಎಂಜಿನಿರಿಂಗ್ ಎಂದೆಲ್ಲ ವಿಶೇಷ ಪರಿಭಾಷೆಗಳನ್ನು ಕೊಟ್ಟರೂ, ಅದು ಓಟ್ ಬ್ಯಾಂಕ್ ರಾಜಕೀಯವಲ್ಲದೆ ಬೇರೇನೂ ಅಲ್ಲ. ಜನರು ಅಭ್ಯರ್ಥಿಯ ಸಾಮರ್ಥ್ಯವನ್ನು ಗ್ರಹಿಸದೆ ಕೇವಲ ಜಾತಿ ನೋಡಿ ಮತದಾನ ಮಾಡಿ ಆಯ್ಕೆ ಮಾಡುತ್ತಾರೆ ಎಂದರೆ ಪ್ರಜಾಪ್ರಭುತ್ವದ ಗುಣಮಟ್ಟವು ಉಳಿಯುವುದಾದರೂ ಹೇಗೆ? ಇದೇ ರೀತಿ ಅಭ್ಯರ್ಥಿಯ ಧರ್ಮವೂ ಚುನಾವಣೆಗಳಲ್ಲಿ ಪ್ರಭಾವ ಬೀರುತ್ತದೆ. ತುಷ್ಟೀಕರಣ ರಾಜಕೀಯವು ಧಾರ್ಮಿಕ ವಿಭಜನೆಗೆ ಕಾರಣವಾಗುತ್ತದೆ. ವಂಶಾಡಳಿತ ನಡೆಸುವ ಹಲವು ರಾಜಕೀಯ ಪಕ್ಷಗಳು ದೇಶದಲ್ಲಿವೆ. ದೇಶದ ಶೇ.21ರಷ್ಟು ಎಂಪಿ, ಎಂಎಲ್‌ಎಗಳು ಸ್ವಜನ ಪಕ್ಷಪಾತದಿಂದಲೇ ಅಧಿಕಾರಕ್ಕೆ ಬಂದವರು. ರಾಜಕೀಯ ಪಕ್ಷಗಳಲ್ಲಿನ ವಂಶಪಾರಂಪರ್ಯ ನಾಯಕತ್ವ ವ್ಯವಸ್ಥೆ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಂದು ಕಪ್ಪು ಚುಕ್ಕೆಯೇ ಸರಿ.

ಇಷ್ಟೆಲ್ಲ ಇದ್ದರೂ ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೊರತೆಗಳಿಂದಲೂ ಧನಾತ್ಮಕ ಅಂಶಗಳೇ ಹೆಚ್ಚಾಗಿವೆ. ಅತ್ಯಂತ ನಿಷ್ಪಕ್ಷಪಾತವಾಗಿ ಹಾಗೂ ಪಾರದರ್ಶಕವಾಗಿ ಚುನಾವಣೆ ನಡೆಸುವ ಸ್ವತಂತ್ರ ಚುನಾವಣಾ ಆಯೋಗವು ಭಾರತದಲ್ಲಿದೆ. ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವದಲ್ಲಿ ಇಷ್ಟು ವ್ಯವಸ್ಥಿತವಾಗಿ ಚುನಾವಣೆಗಳು ನಡೆಯುವುದೇ ಒಂದು ದೊಡ್ಡ ಸಾಧನೆ. ಇಲ್ಲಿ ಮತದಾರನಿಗೆ ಭಯಮುಕ್ತ ವಾತಾವರಣವನ್ನು ನಿರ್ಮಿಸಲು ಆಯೋಗವು ಸದಾ ಕಟಿಬದ್ಧ. ಇದು ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೆಯಲ್ಲಿ ಮತ್ತೊಮ್ಮೆ ಸಾಬೀತಾಗಿದೆ. ಮತದಾರರು ಮನೆಬಿಟ್ಟು ಮತಗಟ್ಟೆಗೆ ಬರಲು ಹೆದರುವ ವಾತಾವರಣವಿದ್ದ ಪಶ್ಚಿಮ ಬಂಗಾಳಕ್ಕೆ ಸಾಕಷ್ಟು ಪ್ರಮಾಣದಲ್ಲಿ ಕೇಂದ್ರ ಪಡೆಯನ್ನು ನಿಯೋಜಿಸಿ ಸರಿಸುಮಾರು ಶೇ.93ರಷ್ಟು ಮತದಾನವಾಗುವಂತೆ ಮಾಡುವಲ್ಲಿ ಆಯೋಗವು ಯಶಸ್ವಿಯಾಗಿದೆ. ವಿರೋಧ ಹಾಗೂ ಕಾನೂನು ಹೋರಾಟಗಳ ನಡುವೆಯೂ ಚುನಾವಣಾ ಆಯೋಗವು 10 ರಾಜ್ಯಗಳಲ್ಲಿ ಮತಪಟ್ಟಿಯನ್ನು ಎಸ್‌ಐಆರ್ ಮೂಲಕ ಪರಿಷ್ಕರಿಸಿ ನಕಲಿ ಮತದಾರರನ್ನು ಪಟ್ಟಿಯಿಂದ ಹೊರಹಾಕುವಲ್ಲಿ ಯಶಸ್ವಿಯಾಗಿದೆ. ಭಾರತದ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗವು ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಭಾರತದಲ್ಲಿ ಅಧಿಕಾರ ಹಸ್ತಾಂತರ ಪ್ರಕ್ರಿಯೆಯು ಬಹಳ ಸುಗಮವಾಗಿ ನಡೆಯುತ್ತದೆ. ಕೇಂದ್ರ ಸರಕಾರವಾಗಲಿ, ರಾಜ್ಯ ಸರಕಾರಗಳಾಗಲಿ, ಅಧಿಕಾರ ಕಳೆದುಕೊಂಡ ರಾಜಕೀಯ ಪಕ್ಷಗಳು ಯಾವುದೇ ತಗಾದೆಯನ್ನು ಮಾಡದೆ ಗೆದ್ದವರಿಗೆ ಅಧಿಕಾರವನ್ನು ಬಿಟ್ಟುಕೊಡುತ್ತವೆ. ಇಲ್ಲಿ ಕಡ್ಡಾಯವಾಗಿ ಐದು ವರ್ಷಕ್ಕೊಮ್ಮೆ ಚುನಾವಣೆ ನಡೆದೇ ನಡೆಯುತ್ತದೆ. ಬಹುತೇಕ ಸಂದರ್ಭಗಳಲ್ಲಿ ಕೆಲಸ ಮಾಡದ ಅಭ್ಯರ್ಥಿಗಳನ್ನು ಅಥವಾ ಸರಕಾರಗಳನ್ನು ಮತದಾರರು ತಿರಸ್ಕರಿಸಿ ಕೆಳಗಿಳಿಸುತ್ತಾರೆ. ಉತ್ತಮವಾಗಿ ಕೆಲಸಮಾಡುವ ಪಕ್ಷಗಳನ್ನು ಹಲವು ಅವಧಿಗಳವರೆಗೆ ಮುಂದುವರಿಸುವ ಪ್ರಜ್ಞಾವಂತಿಕೆಯೂ ಭಾರತೀಯ ಮತದಾರನಲ್ಲಿದೆ.

ಎಲ್ಲದಕ್ಕಿಂತಲೂ ಮಿಗಿಲಾಗಿ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯು ಸಂವಿಧಾನದ ಚೌಕಟ್ಟಿನೊಳಗೆ ಭದ್ರವಾಗಿದೆ ಎನ್ನಬಹುದು. ಸ್ವತಂತ್ರವಾಗಿರುವ ನ್ಯಾಯಾಂಗ ವ್ಯವಸ್ಥೆಯು ಪ್ರಜಾಪ್ರಭುತ್ವ ವ್ಯವಸ್ಥೆಗೆ ಯಾವುದೇ ಕುಂದು ಉಂಟಾಗದಂತೆ ಕಣ್ಗಾವಲಿಡುತ್ತದೆ. ಎಲ್ಲೋ ಒಂದು ಕಡೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕುಂದು ಉಂಟಾಗಿದೆ ಎಂದು ಯಾರಿಗಾದರೂ ಅನಿಸಿದರೆ ಅವರಿಗೆ ಅದನ್ನು ನ್ಯಾಯಾಲಯಗಳ ಮೂಲಕ ಪ್ರಶ್ನಿಸುವ ಹಾಗೂ ಸರಿಪಡಿಸಿಕೊಳ್ಳುವ ವ್ಯವಸ್ಥೆಯನ್ನು ನಮ್ಮ ನ್ಯಾಯಾಂಗವು ಕಲ್ಪಿಸಿದೆ.

ನಮ್ಮ ನೆರೆಹೊರೆಯ ದೇಶಗಳಲ್ಲಿ ದೇಶದ ಆಡಳಿತದಲ್ಲಿ ಆ ದೇಶಗಳ ಮಿಲಿಟರಿಯು ಸದಾ ಹಸ್ತಕ್ಷೇಪ ನಡೆಸುವುದನ್ನು ನಾವು ಕಾಣುತ್ತಿದ್ದೇವೆ. ಆದರೆ ಭಾರತದಲ್ಲಿ ಯಾವತ್ತೂ ಮಿಲಿಟರಿಯು ಆಡಳಿತದಲ್ಲಿ ತಲೆಹಾಕಲೇ ಇಲ್ಲ. ಇಂದಿರಾ ಗಾಂಧಿ ತುರ್ತುಪರಿಸ್ಥಿತಿಯನ್ನು ಹೇರಿ ಅರಾಜಕತೆಯನ್ನು ಸೃಷ್ಟಿಸಿದ ಸಂದರ್ಭದಲ್ಲಿ ಮಿಲಿಟರಿಗೆ ಆಡಳಿತ ವ್ಯವಸ್ಥೆಯನ್ನು ತನ್ನ ಕೈಗೆ ತೆಗೆದುಕೊಳ್ಳಬಹುದಿತ್ತು. 90ರ ದಶಕದಲ್ಲಿ ಕೇಂದ್ರದಲ್ಲಿ 5 ಸರಕಾರಗಳು ಉರುಳಿಹೋಗಿ ಉಂಟಾದ ನಾಯಕತ್ವದ ನಿರ್ವಾತ ಹಾಗೂ ರಾಜಕೀಯ ಅಸ್ಥಿರಗಳು ಉಂಟಾದ ಸಂದರ್ಭದಲ್ಲಿ ಮಿಲಿಟರಿಗೆ ಮಧ್ಯ ಪ್ರವೇಶಿಸುವ ಅವಕಾಶವಿತ್ತು. ಮನಮೋಹನ್ ಸಿಂಗ್ ಅವರ ಯುಪಿಎ ಸರಕಾರದ ಅವಧಿಯಲ್ಲಿ ಸಾಲು ಸಾಲು ಭ್ರಷ್ಟಾಚಾರ ನಡೆದು ಜನರು ಸರಕಾರದ ವಿರುದ್ಧ ದಂಗೆಯೆದ್ದ ಸಂದರ್ಭದಲ್ಲಿಯೂ ಮಿಲಿಟರಿಗೆ ಅವಕಾಶವಿತ್ತು. ಆದರೆ ಈ ಎಲ್ಲ ಸಂದರ್ಭಗಳಲ್ಲೂ ಸಂಯಮವನ್ನು ತೋರಿದ ಮಿಲಿಟರಿಯು ಅಧಿಕಾರದ ಪಡಸಾಲೆಗೆ ಪ್ರವೇಶಿಸುವ ಯಾವುದೇ ಪ್ರಯತ್ನವನ್ನು ಮಾಡದೆ ತನ್ನ ಸಾಂವಿಧಾನಿಕ ಬದ್ಧತೆಯನ್ನು ಮೆರೆಯಿತು. ಇದು ಭಾರತದ ಪ್ರಜಾಪ್ರಭುತ್ವದ ಬದ್ಧತೆಯನ್ನು ತೋರುತ್ತದೆ.

ಯಾವುದೋ ಒಂದು ಎಕನಾಮಿಸ್ಟ್ ಇಂಟೆಲಿಜೆನ್ಸ್ ಯುನಿಟ್ (ಇಐಯು) ಹೆಸರಿನ ಸಂಸ್ಥೆಯು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಸರಿ ಇಲ್ಲ ಎಂದು ಹೇಳಿದರೆ ನಾವು ತಲೆಕೆಡಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಅಂತಹ ಸಂಸ್ಥೆಗಳು ಇಲ್ಲಿನ ಎನ್‌ಜಿಒಗಳು ಕೊಡುವ ನಕಾರಾತ್ಮಕ ವರದಿಗಳು, ವಿರೋಧ ಪಕ್ಷಗಳು ಮಾಡುವ ಸುಳ್ಳೇ ಸುಳ್ಳು ಆರೋಪಗಳು ಮೊದಲಾದವುಗಳ ಆಧಾರದಲ್ಲಿ ಸೂಚ್ಯಂಕಗಳನ್ನು ಕೊಡುತ್ತಾರೆ. ಸರಿಸುಮಾರು 100 ಕೋಟಿ ಮತದಾರರು ಇರುವ, ಜಗತ್ತಿನ ಪ್ರಮುಖ ಧರ್ಮಗಳ ಜನರನ್ನು ಹೊಂದಿರುವ, ನೂರಾರು ಬುಡಕಟ್ಟು ಜನರು, ಜಾತಿ, ಭಾಷೆ, ಸಂಸ್ಕೃತಿ ವೈವಿಧ್ಯತೆಯ ದೇಶ ಒಂದು ಸಂವಿಧಾನದ ಅಡಿಯಲ್ಲಿ ಕಾರ್ಯಾಚರಿಸುತ್ತಿದೆ ಎಂದರೆ ಅದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಯಶಸ್ಸಲ್ಲದೇ ಮತ್ತೇನು?

ಸವಿಮಾತು

ಶಂಕರನಾರಾಯಣ ಭಟ್

ಮೆಲೋಡಿ ಸಿಹಿ, ವಿರೋಧಿಗಳಿಗೆ ಕಹಿ!

ರಾಜಕಾರಣಿಗಳಿಗೆ ಎಲ್ಲದರಲ್ಲೂ ಹುಳುಕು ಹುಡುಕುವ ಚಾಳಿ ಇದೆ ಎಂಬುದು ಮತ್ತೊಮ್ಮೆ ಸಾಬೀತಾಯಿತು. ಅಷ್ಟೇ ಅಲ್ಲ, ಅವರಲ್ಲಿ ಕಿಂಚಿತ್ ಜವಾಬ್ದಾರಿ ಮತ್ತು ವಿನೋದಪ್ರಜ್ಞೆ ಎಂಬುದೇ ಇಲ್ಲ ಎಂಬುದೂ ತಿಳಿದಂತಾಯಿತು.

ನಮ್ಮ ದೇಶದ ಪ್ರಧಾನಿ ಮೋದಿ, ಇಟಲಿಯ ಪ್ರವಾಸದ ವೇಳೆ ಅಲ್ಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರಿಗೆ, ಭಾರತದ ಪ್ರಸಿದ್ಧ ಬ್ರ್ಯಾಂಡ್ ಆದ ಪಾರ್ಲೆ ಅವರ 'ಮೆಲೋಡಿ' ಚಾಕಲೇಟ್ ಕೊಟ್ಟಿದ್ದೇ ಈಗ ವಿಪಕ್ಷ ಕಾಂಗ್ರೆಸ್ಸಿಗೆ ಗೇಲಿ ಮಾಡುವಂತಹ ವಿಷಯವಾಗಿಬಿಟ್ಟಿದೆ. ಇಲ್ಲಿ ನಿಜವಾಗಿ ಗಮನಿಸಬೇಕಾದ್ದು, ಮೋದಿ ಅವರ ವಿನೋದಪ್ರಜ್ಞೆ ಒಂದೆಡೆ ಆದರೆ, ಭಾರತದ ಉತ್ಪನ್ನವನ್ನು ವಿದೇಶದಲ್ಲಿ ಪರಿಚಯಿಸುವ ಕೆಲಸವೂ ಆಗಿದೆ.

ಅದನ್ನು ಇಟಲಿ ಪ್ರಧಾನಿಯೂ ಅತ್ಯಂತ ಸಂತೋಷ, ಸಡಗರದಿಂದ ಸ್ವೀಕರಿಸಿ, ಸೆಲ್ಫಿ ಸಹ ತೆಗೆದುಕೊಂಡಿದ್ದಾರೆ. ಇದು ಸಣ್ಣ ವಿಷಯವಲ್ಲ. ಮೋದಿ ಕೊಟ್ಟ ಉಡುಗೊರೆಯ ಬೆಲೆ ಕೇವಲ ರೂ.50! ಅದು ಮುಖ್ಯ ಅಲ್ಲವೇ ಅಲ್ಲ. ಒಂದೆಡೆ ಮೋದಿಯವರ ಸೃಜನಶೀಲ ಐಡಿಯಾವನ್ನು ಮೆಚ್ಚಬೇಕು.

ಇನ್ನೊಂದೆಡೆ, ಇಷ್ಟು ಸಣ್ಣ ಮೊತ್ತದ ಉಡುಗೊರೆ ಕೊಡು ವಾಗಲೂ ಯಾವುದೇ ಕೀಳರಿಮೆಯಾಗಲೀ, ಅಳುಕಾಗಲೀ ಇರಲಿಲ್ಲ, ಕಾರಣ, ಅದೊಂದು ಸೌಹಾರ್ದಯುತ ಭೆಟ್ಟಿ.

ಪಾರ್ಲೆ ಕಂಪನಿ, ಗುಜರಾತದ ಉದ್ಯಮಿಯೊಬ್ಬರದ್ದು, ನಮ್ಮ ರಾಜ್ಯದ ಉದ್ಯಮಿಯ ವಸ್ತುವನ್ನು ಪ್ರಚಾರ ಮಾಡಲು ಮೋದಿ ಯತ್ನ ಎಂಬೆಲ್ಲ ಮಾತುಗಳೂ ಕಾಂಗ್ರೆಸ್ಸಿನಿಂದ ಬರುತ್ತಿದೆ. ಒಂದು ವೇಳೆ ಅದೇ ಸರಿ ಅಂದು ಕೊಂಡರೂ ಅದರಲ್ಲೇನು ತಪ್ಪಿದೆ? ಅವರೇನು ಆ ವಸ್ತುವಿನ ರಾಯಭಾರಿ ಆಗಿಯೋ, ಮಾಡೆಲ್ ಆಗಿಯೋ ಕೊಟ್ಟಿದ್ದಲ್ಲವಲ್ಲ. ಹೆಸರಿನ ಕೂಡುವಿಕೆ - ಮೆಲೋನಿ- ಮೆಲೋಡಿ ! ಇದು ಮೋದಿ - ಮೆಲೋನಿ ಸೇರಿ ಆಗಿದ್ದೂ ಕಾಕತಾಳೀಯವೆ. ಇದನ್ನೇ ಮೋದಿ ಹೇಗೆ ಬಳಸಿಕೊಂಡಿದ್ದಾರೆ ಎಂಬುದರ ಶ್ಲಾಘನೆ ಮಾಡುವುದನ್ನು ಬಿಟ್ಟು ಲೇವಡಿಗೆ ಮುಂದಾಗಿರುವುದು ಮಾತ್ರ ಎಷ್ಟಕ್ಕೂ ಒಪ್ಪಿತವಲ್ಲ. ವಿರೋಧ ಪಕ್ಷ ಅಂದಕೂಡಲೇ ಎಲ್ಲವನ್ನೂ ವಿರೋಧಿಸಬೇಕೆಂದೇನಿಲ್ಲವಲ್ಲ. ಆದರೇನು, ಮೊಸರಲ್ಲೂ ಕಲ್ಲು ಹುಡುಕುವ ಸ್ವಭಾವದವರು ಎಂದೂ ಬದಲಾಗರು.

ಇನ್ನೂ ಚೋದ್ಯವೆಂದರೆ, ಪಾರ್ಲೆ ಮೆಲೋಡಿ ಚಾಕಲೇಟ್ ಕೊಟ್ಟ ವಿಷಯ ಸಾಮಾಜಿಕ ಜಾಲತಾಣದಲ್ಲಿ ಭರದಿಂದ ಹರಿದಾಡುತ್ತಿರುವಾಗಲೇ ಪಾರ್ಲೆ ಶೇರ್ ಬೆಲೆ 5% ಹೆಚ್ಚಾಗಿಬಿಟ್ಟಿದೆ! ಹೇಗಿದೆ ನೋಡಿ ಮಾರ್ಕೆಟ್ ಟ್ರೆಂಡ್? ಎರಡು ದೇಶದ ಪ್ರಧಾನಿಗಳ ಈ ಉಡುಗೊರೆ ಪ್ರಹಸನ ಶೇರ್ ಖರೀದಿದಾರರಲ್ಲೂ ಸಂಚಲನ ತಂದಂತಿದೆ. ಈ ಸೆನ್ಸೆಕ್ಸ್ ಎಂಬುದು ಬಹು ಸೆನ್ಸಿಟಿವ್ ಎಂಬುದೂ ತಿಳಿದಂತಾಯಿತು.

ಏನೇ ಇರಲಿ, ಎರಡೂ ದೇಶಗಳ ಮಧ್ಯೆ ಅತ್ಯಂತ ಉಪಯುಕ್ತ ಹೊಂದಾಣಿಕೆ ನಡೆದಿದೆ. ಇದು ಭಾರತದ ಮಟ್ಟಿಗೆ ಉತ್ತಮ ಸಂಕೇತವೇ. ಮೆಲೋಡಿ, ಕಿಲಾಡಿಗಳಿಗೆ ಏನು ಅನಿಸಿರಬಹುದು ಎಂಬುದು ಮುಖ್ಯವಲ್ಲವೇ ಅಲ್ಲ. ದೇಶದ ಹಿತ ದೃಷ್ಟಿಯಿಂದ ಇಂತಹ ಸಣ್ಣ - ಪುಟ್ಟ ವಿಷಯಗಳೂ ಹೇಗೆ ಪ್ರಯೋಜನಕಾರಿ ಆದೀತು ಎಂಬುದೇ ಮುಖ್ಯ.

ಉದ್ದೇಶ ಸ್ಪಷ್ಟವಿರುವಾಗ, ಯಾರು ಏನೆಂದುಕೊಳ್ಳುತ್ತಾರೆ ಎಂಬುದೂ ಗೌಣ !

ಭಟ್ಟರ್ ಸ್ಕಾಚ್

- **ಸಚಿನ್ ಶೆಟ್ಟಿ, ಉಡುಪಿ**
ಭಟ್ರೇ, ಮನುಷ್ಯನಿಗೆ ಎಷ್ಟು ಜನ್ಮ ಇರುತ್ತೆ ಅಂತ ನಿಮಗೆ ಗೊತ್ತಾ?
- **ಮದುವೆ ಆಗುವವರೆಗೂ ಒಂದೇ ಜನ್ಮ, ಮದುವೆ ಆದ ಮೇಲೆ ದಿನಕ್ಕೊಂದು ಹೊಸ ಜನ್ಮ!**

- **ರೂಪ ಚಂದ್ರು, ತುಮಕೂರು**
ಭಟ್ರೇ, ಎಷ್ಟೇ ಪ್ರಯತ್ನಪಟ್ಟರೂ ಹೆಚ್ಚು ಕೆಲಸ ಮಾಡಲು ಸಾಧ್ಯವಾಗದಿರುವುದು ಯಾವುದಕ್ಕೆ?
- **ಗಡಿಯಾರಕ್ಕೆ!**

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ಹೆಂಡತಿಯಾದವಳು ಒಂದೇ ಸ್ಥಳದಲ್ಲಿ ಇರುವುದಿಲ್ಲವಂತೆ, ಹೌದಾ?
- **ಹೂಂ...ಮದುವೆಗೆ ಮುಂಚೆ ಹೃದಯದಲ್ಲಿ ಇರ್ತಾಳೆ, ಮದುವೆ ಆದ ಮೇಲೆ ತಲೆ ಮೇಲೆ ಇರ್ತಾಳೆ!**

- **ನಾಗರಾಜ್ ಸಿ., ಹೊನ್ನಾಳಿ**
ಭಟ್ರೇ, ಎಕ್ಸಾಮ್ ಬರೆಯುವಾಗ ಸ್ಟೂಡೆಂಟ್ಸ್‌ಗೆ ಸಡನ್ ಆಗಿ ಶಕ್ತಿ ಎಲ್ಲಿಂದ ಬರುತ್ತೆ?
- **ಪಕ್ಕದವನು ಪೇಪರ್ ಸ್ವಲ್ಪ ಸರಿಸಿದಾಗ!**

- **ಸುಧಾ, (ಇಮೇಲ್ ಮೂಲಕ)**
ಭಟ್ರೇ, ವಾಕಿಂಗ್ ಸ್ಟಿಕ್ ಮತ್ತು ವೈಫ್ ನಡುವೆ ಇರೋ ವ್ಯತ್ಯಾಸ ಏನು?
- **ಸ್ಟಿಕ್ ನಮಗೆ ಬೀಳದಂತೆ ನೋಡಿಕೊಳ್ಳುತ್ತೆ, ವೈಫ್ ನಮಗೆ ಬೆದರದಂತೆ ನೋಡಿಕೊಳ್ಳುತ್ತೆ!**

- **ಪ್ರವೀಣ ನಾಯಕ, ಶಿರಸಿ**
ಭಟ್ರೇ, ಎಮ್ಮೆ ಕಪ್ಪಗಿದ್ದರೂ ಹಾಲು ಯಾಕೆ ಬಿಳಿಯಾಗಿ ಇರುತ್ತೆ?
- **ಅದು ಫೇರ್ ಅಂಡ್ ಲವ್ಲಿ ಹಚ್ಚಲ್ಲ, ಆದ್ರೆ ಕುಡಿಯುತ್ತೆ ಅಂತೀಯಾ?!**

- **ರಘು, ಹಾಸನ**
ಭಟ್ರೇ, ಬಸ್ ಹತ್ತಲು ಓಡ್ತಿರೋನಿಗೆ ಮತ್ತು ಬಸ್ ಕಂಡಕ್ಟರ್‌ಗೆ ಇರುವ ವ್ಯತ್ಯಾಸವೇನು?
- **ಒಬ್ಬ ಬಸ್ ಸಿಗಲಿ ಅಂತ ಓಡ್ತಾನೆ, ಇನ್ನೊಬ್ಬ ಚಿಲ್ಲರೆ ಸಿಗಲಿ ಅಂತ ಓಡ್ತಾನೆ!**

- **ಸಹನಾ ಶರ್ಮ, ಹೊನ್ನಾವರ**
ಭಟ್ರೇ, ಸಾಲ ಕೊಟ್ಟವನಿಗೂ ಮತ್ತು ದೇವರ ಭಕ್ತನಿಗೂ ಇರೋ ವ್ಯತ್ಯಾಸವೇನು?
- **ಭಕ್ತ 'ದೇವರೆಲ್ಲಿ?' ಅಂತ ಹುಡುಕ್ತಾನೆ, ಸಾಲ ಕೊಟ್ಟವನು 'ನನ್ನ ದುಡ್ಡೆಲ್ಲಿ?' ಅಂತ ಹುಡುಕ್ತಾನೆ!**

- **ನವೀನ ಸಿ.ರಾಯಕರ, ಬೆಂಗಳೂರು**
ಭಟ್ರೇ, ಶಾಲೆಗೂ, ಜೈಲಿಗೂ ಇರುವ ವ್ಯತ್ಯಾಸ ಏನು?
- **ಜೈಲಿಗೆ ಹೋದ್ರೆ ಕೆಲಸ ಮಾಡಬೇಕು, ಶಾಲೆಗೆ ಹೋದ್ರೆ ಮನೆ ಕೆಲಸ (ಹೋಮ್ ವರ್ಕ್) ಮಾಡಬೇಕು!**

ಜಾಗತಿಕ ಅನಿಶ್ಚಿತತೆ ಎದುರು ನಾಗರಿಕರ ಜವಾಬ್ದಾರಿ

ಒಂದು ಕುಟುಂಬದಲ್ಲಿ ಆರ್ಥಿಕ ಸಂಕಷ್ಟ ಬಂದಾಗ ಕುಟುಂಬದ ಸದಸ್ಯರು ಅನಗತ್ಯ ಖರ್ಚು ಕಡಿಮೆ ಮಾಡುವುದು, ವೈಭವಶಾಲಿ ಖರೀದಿಗಳನ್ನು ಮುಂದೂಡುವುದು, ಅಗತ್ಯಗಳಿಗೆ ಆದ್ಯತೆ ನೀಡುವುದು ಇದೇ ತತ್ವ ರಾಷ್ಟ್ರಕ್ಕೂ ಅನ್ವಯಿಸುತ್ತದೆ. ದೇಶವು ಜಾಗತಿಕ ಆರ್ಥಿಕ ಒತ್ತಡ ಎದುರಿಸುತ್ತಿರುವಾಗ ಕೆಲವು ಕಾಲ ಸಂಯಮದಿಂದ ನಡೆದುಕೊಳ್ಳುವುದು ತಪ್ಪೇನಲ್ಲ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಕ್ಕೆ ವಿದೇಶಿ ವಿನಿಮಯ ಸಂಗ್ರಹ ಅತ್ಯಂತ ಮಹತ್ವದ್ದು.

ಸಕಾಲಿಕ
ನಂದೀಶ್ ಜೆ ಹೊಯ್ಸನಹಳ್ಳಿ
vveditoped@gmail.com

ಪ್ರಸ್ತುತ ವಿಶ್ವ ಮತ್ತೊಮ್ಮೆ ಗಂಭೀರ ಆರ್ಥಿಕ ಮತ್ತು ಭೌಗೋಳಿಕ ಅನಿಶ್ಚಿತತೆಯ ಹಂತವನ್ನು ಎದುರಿಸುತ್ತಿದೆ. ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ರಾಜಕೀಯ ಸಂಘರ್ಷಗಳು, ಯುದ್ಧ ಪರಿಸ್ಥಿತಿಗಳು ಹಾಗೂ ಇಂಧನ ಮಾರುಕಟ್ಟೆಯ ಅಸ್ಥಿರತೆ ವಿಶ್ವದ ಬಹುತೇಕ ರಾಷ್ಟ್ರಗಳ ಆರ್ಥಿಕತೆಯ ಮೇಲೆ ಪರಿಣಾಮ ಬೀರಿವೆ. ಅಮೆರಿಕ ಸಂಯುಕ್ತ ಸಂಸ್ಥಾನ, ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧ ಪರಿಸ್ಥಿತಿಯು ಕೇವಲ ಆ ಪ್ರದೇಶದ ರಾಜಕೀಯ ಸ್ಥಿತಿಗತಿಗಳನ್ನಷ್ಟೇ ಅಲ್ಲ, ಜಾಗತಿಕ ವ್ಯಾಪಾರ ವ್ಯವಸ್ಥೆ, ಇಂಧನ ಸರಬರಾಜು ಮತ್ತು ಆರ್ಥಿಕ ಸಮತೋಲನವನ್ನು ಸಹ ಅಸ್ತವ್ಯಸ್ತಗೊಳಿಸಿದೆ. ಇಂತಹ ಪರಿಸ್ಥಿತಿಯಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಾದ ಭಾರತ ಹೆಚ್ಚು ಎಚ್ಚರಿಕೆಯಿಂದ ನಡೆದುಕೊಳ್ಳಬೇಕಾದ ಅಗತ್ಯ ಇದೆ.

ಯಾವುದೇ ದೇಶದ ಆರ್ಥಿಕ ವ್ಯವಸ್ಥೆಯ ಮೂಲ ಆಧಾರ ಇಂಧನ. ವಿಶೇಷವಾಗಿ ಪೆಟ್ರೋಲಿಯಂ ಮತ್ತು ಅದರ ಸಂಬಂಧಿತ ಉತ್ಪನ್ನಗಳು ದೇಶದ ಕೈಗಾರಿಕೆ, ಸಾರಿಗೆ, ಕೃಷಿ, ಉತ್ಪಾದನೆ ಮತ್ತು ದಿನನಿತ್ಯದ ಜೀವನದೊಂದಿಗೆ ನೇರವಾಗಿ ಸಂಬಂಧ ಹೊಂದಿವೆ. ಪೆಟ್ರೋಲಿಯಂ ಬೆಲೆಯಲ್ಲಿ ಉಂಟಾಗುವ ಏರಿಳಿತ ದೇಶದ ಸಂಪೂರ್ಣ ಆರ್ಥಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಭಾರತ ತನ್ನ ಅಗತ್ಯವಿರುವ ಕಚ್ಚಾತೈಲದ ಬಹುಪಾಲನ್ನು ಮಧ್ಯಪ್ರಾಚ್ಯದ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತದೆ. ಇಂತಹ ಸಮಯದಲ್ಲಿ ಮಧ್ಯಪ್ರಾಚ್ಯದಲ್ಲಿ ಯುದ್ಧ ಮತ್ತು ಉದ್ವಿಗ್ನತೆ ಹೆಚ್ಚಾದಾಗ ಅದರ ನೇರ ಪರಿಣಾಮ ಭಾರತ ಸೇರಿದಂತೆ ಅನೇಕ ರಾಷ್ಟ್ರಗಳ ಮೇಲೆ ಬೀಳುವುದು ಸಹಜ.

ಯುದ್ಧದ ಪರಿಣಾಮವಾಗಿ ಸಮುದ್ರ ಮಾರ್ಗದ ಸಾಗಣೆ ವ್ಯವಸ್ಥೆಯಲ್ಲಿ ತೊಂದರೆಗಳು ಉಂಟಾಗಿವೆ. ಪೆಟ್ರೋಲಿಯಂ ಸಾಗಿಸುವ ಹಡಗುಗಳ ಸಂಚಾರದ ಮೇಲೆ ಒತ್ತಡ ಹೆಚ್ಚಾಗಿದೆ. ಸಾಗಣೆ ವೆಚ್ಚ ಏರಿಕೆಯಾಗಿದೆ. ವಿಮಾ ವೆಚ್ಚಗಳು ಹೆಚ್ಚಾಗಿವೆ. ಇದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಏರಿಕೆಯಾಗಿದೆ. ಇದರ ಪರಿಣಾಮವಾಗಿ ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಮತ್ತು LPG ದರಗಳ ಮೇಲೆ ಒತ್ತಡ ಹೆಚ್ಚಾಗಿದೆ. ಇಂಧನ ಬೆಲೆ ಏರಿಕೆ ಎಂದರೆ ಕೇವಲ ವಾಹನ ಚಾಲಕರ ಸಮಸ್ಯೆಯಲ್ಲ. ಅದರ ಪರಿಣಾಮ ರೈತರಿಂದ ಹಿಡಿದು ವ್ಯಾಪಾರಿಗಳವರೆಗೆ, ಸಣ್ಣ ಕೈಗಾರಿಕೆಗಳಿಂದ ಹಿಡಿದು ದೊಡ್ಡ ಕಾರ್ಪೊರೇಟ್ ಸಂಸ್ಥೆಗಳವರೆಗೆ ಎಲ್ಲರ ಮೇಲೂ ಬೀಳುತ್ತದೆ.

ಸಾರಿಗೆ ವೆಚ್ಚ ಏರಿದಾಗ ಮಾರುಕಟ್ಟೆಯಲ್ಲಿ ಆಹಾರ ಪದಾರ್ಥಗಳ ಬೆಲೆ ಹೆಚ್ಚುತ್ತದೆ. ಕೃಷಿ ಉತ್ಪಾದನೆಯ ವೆಚ್ಚ ಏರಿಕೆಯಾಗುತ್ತದೆ. ಕೈಗಾರಿಕೆಗಳಲ್ಲಿ ಉತ್ಪಾದನಾ ವೆಚ್ಚ ಹೆಚ್ಚಾಗುತ್ತದೆ. ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತದೆ. ಇದೇ ದರ ಏರಿಕೆಯ ಸರಪಳಿ. ಇಂದು ಸಾಮಾನ್ಯ ಜನರು ಅನುಭವಿಸುತ್ತಿರುವ ಆರ್ಥಿಕ ಒತ್ತಡದ ಹಿಂದೆ ಜಾಗತಿಕ ಇಂಧನ ಅಸ್ಥಿರತೆಯೂ ಪ್ರಮುಖ ಕಾರಣವಾಗಿದೆ.

ಭಾರತ ಸರಕಾರವು ಈ ಪರಿಸ್ಥಿತಿಯನ್ನು ನಿಯಂತ್ರಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದೆ. ಸಾರ್ವಜನಿಕ ವಲಯದ ತೈಲ ಸಂಸ್ಥೆಗಳು ಹೆಚ್ಚಿದ ಕಚ್ಚಾತೈಲದ ವೆಚ್ಚವನ್ನು ಕೆಲಮಟ್ಟಿಗೆ ತಾವೇ ಭರಿಸುವ ಮೂಲಕ ದರ ಏರಿಕೆಯನ್ನು ನಿಯಂತ್ರಿಸಲು ಯತ್ನಿಸಿವೆ. ಆದರೆ ಯಾವುದೇ ದೇಶ ಅಥವಾ ಸಂಸ್ಥೆ ಜಾಗತಿಕ ಮಾರುಕಟ್ಟೆಯ ಪರಿಣಾಮವನ್ನು ದೀರ್ಘಕಾಲ ಸಂಪೂರ್ಣವಾಗಿ ತಡೆಹಿಡಿಯಲು ಸಾಧ್ಯವಿಲ್ಲ. ಆರ್ಥಿಕ ವಾಸ್ತವತೆಗಳನ್ನು ಒಪ್ಪಿಕೊಳ್ಳಲೇಬೇಕು.

ಈ ಹಿನ್ನೆಲೆ ಪ್ರಧಾನಮಂತ್ರಿಗಳು ದೇಶದ ನಾಗರಿಕರಿಗೆ ಕೆಲವು ಸಲಹೆಗಳನ್ನು ನೀಡಿದರು. ಅನಗತ್ಯ ವಿದೇಶ ಪ್ರವಾಸಗಳನ್ನು ಕೆಲವು ಕಾಲ ಮುಂದೂಡಲು, ಚಿನ್ನ ಖರೀದಿಯನ್ನು ನಿಯಂತ್ರಿಸಲು, ವಿದೇಶಗಳಲ್ಲಿ ನಡೆಯುವ ವೈಭವಶಾಲಿ ಮದುವೆಗಳನ್ನು ತಾತ್ಕಾಲಿಕವಾಗಿ ತಪ್ಪಿಸಲು ಹಾಗೂ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಹೆಚ್ಚು ಬಳಸಲು ಅವರು ಮನವಿ ಮಾಡಿದರು. ಜತೆಗೆ ಕಾರ್‌ಪೂಲಿಂಗ್, ಮೆಟ್ರೋ ಸೇವೆಗಳ ಬಳಕೆ ಮತ್ತು ವರ್ಕ್ ಫ್ರಮ್ ಹೋಮ್ ಮಾದರಿಯನ್ನು ಸಾಧ್ಯವಾದಲ್ಲಿ ಉತ್ತೇಜಿಸಲು ಸಲಹೆ ನೀಡಿದರು.

ದುರದೃಷ್ಟವಶಾತ್, ಈ ಸಲಹೆಗಳನ್ನು ಕೆಲವರು ರಾಜಕೀಯ ಕಣ್ಣಿನಿಂದ ನೋಡಿದರು. ಕೆಲವರು ಇದನ್ನು ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ಹಸ್ತಕ್ಷೇಪ ಎಂದು ಟೀಕಿಸಿದರು. ಆದರೆ, ವಾಸ್ತವದಲ್ಲಿ ಪ್ರಧಾನಮಂತ್ರಿಗಳು ಯಾವುದೇ ಕಾನೂನುಬದ್ಧ ನಿರ್ಬಂಧ ವಿಧಿಸಿಲ್ಲ. ಅವರು ಕೇವಲ ಪರಿಸ್ಥಿತಿಯನ್ನು ಮನಗಂಡು ನಾಗರಿಕರು ಸ್ವಯಂಪ್ರೇರಿತವಾಗಿ ಜವಾಬ್ದಾರಿಯುತ ನಡೆ ತಾಳಬೇಕೆಂದು ಮನವಿ ಮಾಡಿದ್ದಾರೆ.

ಒಂದು ಕುಟುಂಬದಲ್ಲಿ ಆರ್ಥಿಕ ಸಂಕಷ್ಟ ಬಂದಾಗ ಕುಟುಂಬದ ಸದಸ್ಯರು ಅನಗತ್ಯ ಖರ್ಚುಗಳನ್ನು ಕಡಿಮೆ ಮಾಡುತ್ತಾರೆ. ವೈಭವಶಾಲಿ ಖರೀದಿಗಳನ್ನು ಮುಂದೂಡುತ್ತಾರೆ. ಅಗತ್ಯಗಳಿಗೆ ಆದ್ಯತೆ ನೀಡುತ್ತಾರೆ. ಇದೇ ತತ್ವ ರಾಷ್ಟ್ರಕ್ಕೂ ಅನ್ವಯಿಸುತ್ತದೆ. ದೇಶವು ಜಾಗತಿಕ ಆರ್ಥಿಕ ಒತ್ತಡವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಕೆಲವು ಕಾಲ ಸಂಯಮದಿಂದ ನಡೆದುಕೊಳ್ಳುವುದು ತಪ್ಪೇನಲ್ಲ.

ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಕ್ಕೆ ವಿದೇಶಿ ವಿನಿಮಯ ಸಂಗ್ರಹ ಅತ್ಯಂತ ಮಹತ್ವದ್ದು. ಚಿನ್ನ ಖರೀದಿ ಮತ್ತು ಅನಗತ್ಯ ವಿದೇಶ ಪ್ರವಾಸಗಳಿಂದ ದೊಡ್ಡ ಪ್ರಮಾಣದ ವಿದೇಶಿ ವಿನಿಮಯ ಹೊರಹೋಗುತ್ತದೆ. ಚಿನ್ನವು ಉತ್ಪಾದಕ ಆಸ್ತಿ ಅಲ್ಲ. ಅದು ಆರ್ಥಿಕ ಚಟುವಟಿಕೆಗೆ ನೇರವಾಗಿ ಕೊಡುಗೆ ನೀಡುವುದಿಲ್ಲ. ಅದೇ ಹಣವನ್ನು ಭೂಮಿ, ಮನೆ, ವ್ಯಾಪಾರ, ಕೈಗಾರಿಕೆ, ಕೃಷಿ, ಮ್ಯೂಚುವಲ್ ಫಂಡ್ ಅಥವಾ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಅದು ದೇಶದ ಆರ್ಥಿಕ ಚಟುವಟಿಕೆಯನ್ನು ಉತ್ತೇಜಿಸುತ್ತದೆ.

ಇಂದು ಯುವಜನತೆ ಮತ್ತು ಮಧ್ಯಮ ವರ್ಗದವರು ವೈಭವಶಾಲಿ ಜೀವನಶೈಲಿಯತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳು ಮತ್ತು ಪ್ರದರ್ಶನದ ಸಂಸ್ಕೃತಿ ಜನರನ್ನು ಅನಗತ್ಯ ಖರ್ಚಿನತ್ತ ಒಯ್ಯುತ್ತಿದೆ. ವಿದೇಶ ಪ್ರವಾಸ, ದುಬಾರಿ ಮದುವೆಗಳು, ಪ್ರದರ್ಶನಾತ್ಮಕ ಜೀವನಶೈಲಿ ಇವೆಲ್ಲವೂ ಆರ್ಥಿಕವಾಗಿ ಎಲ್ಲರಿಗೂ ಅಗತ್ಯವಲ್ಲ. ಸಂಕಷ್ಟದ ಸಮಯದಲ್ಲಿ ಇಂತಹ ಖರ್ಚುಗಳನ್ನು ತಾತ್ಕಾಲಿಕವಾಗಿ ನಿಯಂತ್ರಿಸುವುದು ಜವಾಬ್ದಾರಿಯುತ ನಡೆ. ಸಾರ್ವಜನಿಕ ಸಾರಿಗೆ ಬಳಕೆಯ ಮಹತ್ವವೂ ಇದೇ ಸಂದರ್ಭದಲ್ಲಿ ಹೆಚ್ಚಾಗಿದೆ. ಒಂದು ಕಾರಿನಲ್ಲಿ ಒಬ್ಬನೇ ಪ್ರಯಾಣಿಸುವ ಬದಲು ಕಾರ್‌ಪೂಲಿಂಗ್ ಮಾಡಿದರೆ ಇಂಧನ ಉಳಿತಾಯವಾಗುತ್ತದೆ. ಮೆಟ್ರೋ ಮತ್ತು ಬಸ್ ಸೇವೆಗಳ ಬಳಕೆ

ಹೆಚ್ಚಾದರೆ ರಸ್ತೆ ಸಂಚಾರದ ಒತ್ತಡ ಕಡಿಮೆಯಾಗುತ್ತದೆ. ಮಾಲಿನ್ಯ ಕಡಿಮೆಯಾಗುತ್ತದೆ. ದೇಶದ ಇಂಧನ ಆಮದು ಮೇಲಿನ ಒತ್ತಡವೂ ಇಳಿಯುತ್ತದೆ. ಇದು ಕೇವಲ ಸರಕಾರದ ಹೊಣೆಗಾರಿಕೆ ಅಲ್ಲ; ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ.

ಕೊರೋನಾ ಅವಧಿಯಲ್ಲಿ ವರ್ಕ್ ಫ್ರಮ್ ಹೋಮ್ ವ್ಯವಸ್ಥೆಯ ಪರಿಣಾಮಕಾರಿತ್ವವನ್ನು ಜಗತ್ತು ಕಂಡಿದೆ. ಅನಗತ್ಯ ಪ್ರಯಾಣಗಳನ್ನು ಕಡಿಮೆ ಮಾಡುವ ಮೂಲಕ ಇಂಧನ ಉಳಿತಾಯ ಸಾಧ್ಯವೆಂಬುದು ಸಾಬೀತಾಗಿದೆ. ವರ್ಚುವಲ್ ಸಭೆಗಳು, ಆನ್ಲೈನ್ ಕಾರ್ಯವ್ಯವಸ್ಥೆಗಳು ಮತ್ತು ಡಿಜಿಟಲ್ ತಂತ್ರಜ್ಞಾನಗಳು ದೇಶದ ಆರ್ಥಿಕತೆಗೆ ಸಹಕಾರಿ ಆಗಬಹುದು.

ಪ್ರಜಾಪ್ರಭುತ್ವದಲ್ಲಿ ಟೀಕೆ ಸಹಜ. ಸರಕಾರದ ನಿರ್ಧಾರಗಳು ಮತ್ತು ಸಲಹೆಗಳ ಕುರಿತು ಪ್ರಶ್ನಿಸುವ ಹಕ್ಕು ಪ್ರತಿಯೊಬ್ಬ ನಾಗರಿಕನಿಗೂ ಇದೆ. ಆದರೆ ಟೀಕೆ ಮಾಡುವಾಗ ಪರಿಸ್ಥಿತಿಯ ಗಂಭೀರತೆಯನ್ನೂ ಅರ್ಥಮಾಡಿಕೊಳ್ಳಬೇಕು. ಜಾಗತಿಕ ಯುದ್ಧ ಪರಿಸ್ಥಿತಿ, ಇಂಧನ ಅಸ್ಥಿರತೆ ಮತ್ತು ಆರ್ಥಿಕ ಒತ್ತಡಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಕೇವಲ ರಾಜಕೀಯ ಲಾಭಕ್ಕಾಗಿ ಮಾತನಾಡುವುದು ದೇಶದ ಹಿತಾಸಕ್ತಿಗೆ ಸಹಕಾರಿ ಅಲ್ಲ.

ಭಾರತದ ಇತಿಹಾಸ ನೋಡಿದರೆ ಈ ದೇಶ ಅನೇಕ ಸಂಕಷ್ಟಗಳನ್ನು ಎದುರಿಸಿದೆ. ಯುದ್ಧಗಳು, ಆರ್ಥಿಕ ಮಂದಿಗಳು, ಪ್ರಕೃತಿ ವಿಕೋಪಗಳು, ಜಾಗತಿಕ ಆರ್ಥಿಕ ಕುಸಿತಗಳು ಇವೆಲ್ಲವನ್ನೂ ಭಾರತ ಕಂಡಿದೆ. ಆದರೆ, ಪ್ರತೀ ಬಾರಿ ದೇಶದ ಜನರು ಸಹನೆ, ಜವಾಬ್ದಾರಿ ಮತ್ತು ಏಕತೆಯಿಂದ ನಡೆದುಕೊಂಡಿದ್ದಾರೆ. ಅದೇ ಕಾರಣದಿಂದ ಭಾರತ ಇಂದು ವಿಶ್ವದ ಪ್ರಮುಖ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿ ಹೊರಹೊಮ್ಮುತ್ತಿದೆ.

ನಮ್ಮ ದೇಶದ ನಿಜವಾದ ಶಕ್ತಿ ಕೇವಲ ಸರಕಾರದಲ್ಲಿಲ್ಲ; ಅದು ಜನರಲ್ಲಿ ಇದೆ. ಜವಾಬ್ದಾರಿಯುತ ನಾಗರಿಕರೇ ಬಲಿಷ್ಠ ರಾಷ್ಟ್ರವನ್ನು ನಿರ್ಮಿಸುತ್ತಾರೆ. ಒಂದು ದೇಶದ ಆರ್ಥಿಕತೆ ಕೇವಲ ಹಣದಿಂದ ಬಲವಾಗುವುದಿಲ್ಲ; ಜನರ ನಡವಳಿಕೆ, ಸಂಯಮ ಮತ್ತು ರಾಷ್ಟ್ರಪ್ರೇಮದಿಂದ ಬಲವಾಗುತ್ತದೆ.

ಇಂದು ನಮಗೆ ಬೇಕಾಗಿರುವುದು ಭಯವಲ್ಲ, ಜಾಗೃತಿ. ನಿರಾಶೆಯಲ್ಲ, ಜವಾಬ್ದಾರಿ. ಸಂಕಷ್ಟದ ಸಮಯದಲ್ಲಿ ಅನಗತ್ಯ ವೆಚ್ಚಗಳನ್ನು ನಿಯಂತ್ರಿಸುವುದು ದುರ್ಬಲತೆಯಲ್ಲ; ಅದು ಆರ್ಥಿಕ ಪರಿಪಕ್ವತೆಯ ಲಕ್ಷಣ. ತಾತ್ಕಾಲಿಕ ಸಂಯಮವು ದೀರ್ಘಕಾಲಿಕ ಸ್ಥಿರತೆಯನ್ನು ತರುತ್ತದೆ.

ಭಾರತದ ಜನರಲ್ಲಿ ಅಪಾರ ಶಕ್ತಿ ಮತ್ತು ಹೊಂದಿಕೊಳ್ಳುವ ಸಾಮರ್ಥ್ಯ ಇದೆ. ಗ್ರಾಮೀಣ ಭಾರತದಿಂದ ನಗರ ಭಾರತವರೆಗೆ, ರೈತರಿಂದ ಉದ್ಯಮಿಗಳವರೆಗೆ, ಕಾರ್ಮಿಕರಿಂದ ಕಾರ್ಪೊರೇಟ್ ವಲಯದವರವರೆಗೆ ಪ್ರತಿಯೊಬ್ಬರೂ ತಮ್ಮ ಮಟ್ಟದಲ್ಲಿ ಜವಾಬ್ದಾರಿಯನ್ನು ತೋರಿಸಿದರೆ ದೇಶ ಯಾವುದೇ ಸಂಕಷ್ಟವನ್ನು ಎದುರಿಸಬಲ್ಲದು.

ಯುದ್ಧಗಳು ಶಾಶ್ವತವಲ್ಲ. ಜಾಗತಿಕ ಆರ್ಥಿಕ ಸಂಕಷ್ಟಗಳೂ ಶಾಶ್ವತವಲ್ಲ. ಆದರೆ ಒಂದು ರಾಷ್ಟ್ರದ ಇತಿಹಾಸ, ಸಂಸ್ಕೃತಿ ಮತ್ತು ಜನರ ದೇಶಭಕ್ತಿ ಶಾಶ್ವತ. ಭಾರತವು ಸಾವಿರಾರು ವರ್ಷಗಳ ನಾಗರಿಕ ಪರಂಪರೆಯನ್ನು ಹೊಂದಿರುವ ರಾಷ್ಟ್ರ. ಅನೇಕ ಸವಾಲುಗಳನ್ನು ಎದುರಿಸಿ ಮತ್ತೆ ಮತ್ತೆ ಎದ್ದು ನಿಂತ ದೇಶ ಇದು.

ಇಂದು ಮತ್ತೆ ದೇಶ ಒಂದು ಪರೀಕ್ಷೆಯ ಹಂತವನ್ನು ಎದುರಿಸುತ್ತಿದೆ. ಇಂತಹ ಸಮಯದಲ್ಲಿ ನಾವು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮೀರಿ ರಾಷ್ಟ್ರದ ಹಿತಾಸಕ್ತಿಯನ್ನು ಮೊದಲಿಗಾಗಿರಿಸಬೇಕು. ಅನಗತ್ಯ ಖರ್ಚುಗಳನ್ನು ಕಡಿಮೆ ಮಾಡುವುದು, ಉಳಿತಾಯದತ್ತ ಗಮನ ಹರಿಸುವುದು, ಉತ್ಪಾದಕ ಹೂಡಿಕೆಗಳನ್ನು ಉತ್ತೇಜಿಸುವುದು ಹಾಗೂ ಜವಾಬ್ದಾರಿಯುತ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದು ಇಂದಿನ ಅಗತ್ಯ.

ಕಷ್ಟದ ಸಮಯದಲ್ಲಿ ಸಂಯಮ ತಾಳುವುದು ದುರ್ಬಲತೆ ಅಲ್ಲ; ಅದು ಪ್ರೌಢತೆ. ರಾಷ್ಟ್ರದ ಭವಿಷ್ಯವನ್ನು ಮನಗಂಡು ನಡೆದುಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಏಕೆಂದರೆ ಬಲಿಷ್ಠ ರಾಷ್ಟ್ರಗಳು ಕೇವಲ ಸರಕಾರಗಳಿಂದ ನಿರ್ಮಾಣವಾಗುವುದಿಲ್ಲ – ಜಾಗೃತ, ಜವಾಬ್ದಾರಿಯುತ ಮತ್ತು ರಾಷ್ಟ್ರಭಕ್ತ ನಾಗರಿಕರಿಂದ ನಿರ್ಮಾಣವಾಗುತ್ತವೆ.

ಒದುಗರ ಒಣಿ
ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ದತ್ತು ತೆಗೆದುಕೊಳ್ಳುವ ಪ್ರಕ್ರಿಯೆಯಾಗಲಿ

ರಾಜ್ಯಾದ್ಯಂತ ಸರಕಾರಿ ಶಾಲೆಗಳು ಇದೆ ಮೇ 29ರಿಂದ ಪ್ರಾರಂಭವಾಗುತ್ತಿದೆ. ಸರಕಾರಿ ಶಾಲೆಗಳಲ್ಲಿ ರಾಜ್ಯ ಸರಕಾರ ಪ್ರತಿ ವರ್ಷ ಮಕ್ಕಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಶೂ ಸಾಕ್ಸ್, ಕ್ಷೀರಭಾಗ್ಯ, ಮಧ್ಯಾಹ್ನದ ಬಿಸಿಊಟ ಹೀಗೆ ಹತ್ತು ಹಲವು ಸೌಲಭ್ಯಗಳನ್ನು ಸರಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ನೀಡುತ್ತಿದ್ದು, ಹೀಗಿದ್ದರೂ ಸರಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕುಸಿಯುತ್ತಿರುವುದು ಆತಂಕದ ಸಂಗತಿ. ಸರಕಾರಿ ಶಾಲೆಗಳು ಭಾರತದ ಶೈಕ್ಷಣಿಕ ವ್ಯವಸ್ಥೆಯ ಪ್ರಮುಖ ಅಂಶ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವ ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಸರಕಾರಿ ಶಾಲೆಗಳ ಪಾತ್ರ ಅಮೂಲ್ಯ. ರಾಜ್ಯದ ಬಹುತೇಕ ಸರಕಾರಿ ಶಾಲೆಗಳು ಹಲವು ಮೂಲಭೂತ ಸೌಲಭ್ಯಗಳ ಕೊರತೆ ಅನುಭವಿಸುತ್ತಿವೆ. ಕುಡಿಯುವ ನೀರು ಸೇರಿದಂತೆ ಶೌಚಾಲಯ, ಆಸನ ವ್ಯವಸ್ಥೆ, ಆಟದ ಮೈದಾನ, ಉತ್ತಮ ಕಟ್ಟಡ, ಶೈಕ್ಷಣಿಕ ಉಪಕರಣಗಳು ಮತ್ತು ಶಿಕ್ಷಕರ ಕೊರತೆ ಮುಂತಾದವುಗಳು ಶಾಲೆಯಲ್ಲಿನ ಶಿಕ್ಷಣದ ಮಟ್ಟವನ್ನು ಕುಗ್ಗಿಸುತ್ತಿವೆ. ಅಲ್ಲದೆ ಈ ಕಾರಣಗಳಿಂದಲೇ ನಮ್ಮ ಸರಕಾರಿ ಶಾಲೆಗಳು, ವಿದ್ಯಾರ್ಥಿಗಳು ಹಾಗೂ ಪಾಲಕರನ್ನು ಸೆಳೆಯುವಲ್ಲಿ ವಿಫಲವಾಗುತ್ತಿವೆ. ಇಷ್ಟಕ್ಕೂ ಸರಕಾರಿ ಶಾಲಾ ಸಮಸ್ಯೆಗಳನ್ನು ಸರಕಾರವೇ ನಿವಾರಣೆ ಮಾಡಲಿ ಎಂಬ ಧೋರಣೆ ತಪ್ಪಬೇಕಿದೆ. ನಮ್ಮ ಸರಕಾರಿ ಶಾಲಾ ಮಕ್ಕಳ ಬಗ್ಗೆ ಕಾಳಜಿವಹಿಸಿ ಸರಕಾರಿ ಶಾಲೆಗಳ ಅಭಿವೃದ್ಧಿಗೆ ಸಮಾಜದ ಪ್ರತಿಯೊಬ್ಬರು ಸರಕಾರದೊಂದಿಗೆ ಕೈಜೋಡಿಸುವುದು ಅಗತ್ಯ. ರಾಜ್ಯದ ಪ್ರತಿಯೊಂದು ಹಳ್ಳಿಗಳಲ್ಲಿರುವ ಸರಕಾರಿ ಶಾಲೆಗಳನ್ನು ಪ್ರತಿಷ್ಠಿತ ವ್ಯಕ್ತಿಗಳು ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳು ದತ್ತು ಪಡೆದು ಶಾಲೆಗಳನ್ನು ಮುನ್ನಡೆಸುವ ಜವಾಬ್ದಾರಿ ತೆಗೆದುಕೊಂಡಾಗ ಈ ಶಾಲೆಗಳ ಸಬಲೀಕರಣ ಹೆಚ್ಚಾಗಿ ಶಾಲೆಗಳಲ್ಲಿ ದಾಖಲಾತಿ ಹಾಗೂ ಹಾಜರಾತಿ ವೃದ್ಧಿಸುತ್ತದೆ.

– ಹರಳಹಳ್ಳಿಪುಟ್ಟರಾಜು, ಪಾಂಡವಪುರ

ಕೌಶಲ್ಯಾಧಾರಿತ ಕೋರ್ಸ್‌ಗಳು ಹೆಚ್ಚಲಿ

ಪ್ರಸ್ತುತ ಜಗತ್ತು ತಂತ್ರಜ್ಞಾನದಲ್ಲಿ ಮುಂದುವರೆದಂತೆಲ್ಲ ವಿದ್ಯಾರ್ಥಿಗಳ ಅಂಕಗಳು ಮೌಲ್ಯ ಕಳೆದುಕೊಳ್ಳುತ್ತಾ, ಅವರಲ್ಲಿನ ಕೌಶಲ್ಯಗಳಿಗೆ ಮಾತ್ರ ಹೆಚ್ಚಾಗಿ ಬೆಲೆ ಸಿಗುವಂತಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆಯೇ ಆದರೂ ಇದಕ್ಕೆ ತಕ್ಕಂತೆ ಸರಕಾರಿ ಕಾಲೇಜುಗಳಲ್ಲಿ ಕೌಶಲ್ಯಾಧಾರಿತ ಕೋರ್ಸ್‌ಗಳು ಹೆಚ್ಚಾಗಿಬೇಕಿದೆ. ಪಿಯುಸಿ ಮತ್ತು ಪದವಿ ಮಟ್ಟದಿಂದಲೇ ಕೃತಕ ಬುದ್ಧಿಮತ್ತೆ, ಡಿಜಿಟಲ್ ಮೀಡಿಯಾ, ಕಂಪ್ಯೂಟರ್ ಆಧಾರಿತ ಉಪ ಕೋರ್ಸ್‌ಗಳು ಪರಿಚಯವಾಗಿಬೇಕಿದ್ದು, ಅದರಲ್ಲೂ ಬಿಎ ಓದುವ ವಿದ್ಯಾರ್ಥಿಗಳಿಗೆ ಈ ಕೋರ್ಸ್‌ಗಳ ಅಗತ್ಯತೆ ಹೆಚ್ಚಾಗಿದೆ. ಏಕೆಂದರೆ ಇಲ್ಲಿ ಗುಣಮಟ್ಟದ ಶಿಕ್ಷಣದ ಕೊರತೆ ಮತ್ತು ಕೌಶಲ್ಯದ ಅಭಾವ ಹಲವಾರು ಕಾಲೇಜುಗಳಲ್ಲಿ ತಾಂತ್ರಿಕ ಜ್ಞಾನಕ್ಕಿಂತ ಸೈದ್ಧಾಂತಿಕ ಜ್ಞಾನದ ಮೇಲೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತು ತಾಂತ್ರಿಕ ಜ್ಞಾನದ ಕೌಶಲ್ಯವನ್ನು ಬಯಸುತಿದೆ. ಆದ್ದರಿಂದ ವಿದ್ಯಾರ್ಥಿಗಳಿಗೆ ಸರಕಾರ ಮತ್ತು ಶಿಕ್ಷಣ ವ್ಯವಸ್ಥೆಯು ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಬೇಕು.

– ಗಾನವಿ ಎಚ್.ಆರ್., ತಿಪಟೂರು

ಒದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಜಾತಿಗಳ ಅಸ್ಮಿತೆಗೆ ಐಕಾನುಗಳು ಅವಶ್ಯವೇ?

ವಚನಾಮೃತ
ರವಿ ಹಂಜ್
vveditoped@gmail.com

ಭಾಗ- 1

ಒಂದೊಮ್ಮೆ ಜಾತಿನಾಶದಂತಹ ಪುರೋಗಾಮಿ ಆಂದೋಲನಗಳಲ್ಲಿ ತೊಡಗಿದ್ದ ಸಮಾಜವಾದಿ ಬುದ್ಧಿಜೀವಿಗಳೇ ಇಂದು ಅಸ್ಮಿತೆ ಎಂಬ ಹೆಸರಿನಲ್ಲಿ ಜಾತೀಯತೆಯ ವಿಷವರ್ತುಲ ನಿರ್ಮಿಸಿದ್ದಾರೆ. ಇಂದು ಜಾತಿ ಪ್ರೌಢಿಮೆಯು ಪಕ್ಷಗಳಲ್ಲಿನ ಸ್ಥಾನಮಾನ, ಸರಕಾರದ ಮಂತ್ರಿ ಸ್ಥಾನ, ಸಾಮಾಜಿಕ ಜೀವನ, ವ್ಯವಹಾರೋದ್ಯಮಗಳಲ್ಲದೆ ಪ್ರತಿಯೊಂದು ಆಟೋರಿಕ್ಷಾ, ಟ್ಯಾಕ್ಸಿ ವಾಹನಗಳ ಹಿಂಬರಹದವರೆಗೆ ಮೆರೆಯುತ್ತಿದೆ. ಅದಲ್ಲದೆ ಒಂದೊಂದು ಜಾತಿಗೆ ಕನಿಷ್ಠ ಮೂರ್ನಾಲ್ಕು ಐಕಾನುಗಳಿರಬೇಕೆಂಬ ಅಘೋಷಿತ ನಿಯಮ ನಿರ್ಮಾಣವಾಗಿಬಿಟ್ಟಿದೆ. ಹಾಗಾಗಿ ಕೆಲವು ಐತಿಹಾಸಿಕ ವ್ಯಕ್ತಿಗಳನ್ನು ಒಂದೊಂದು ಜಾತಿಗೆ ಸೀಮಿತಗೊಳಿಸಿ ಐಕಾನುಗಳನ್ನಾಗಿಸಲಾಗಿದೆ. ಹೀಗೆ ಐಕಾನುಗಳಾಗಿಸಿಕೊಳ್ಳುವ ಭರದಲ್ಲಿ ಕೆಲವು ಐತಿಹಾಸಿಕ ಮಹಾಪುರುಷರ ಎಲ್ಲ ಐತಿಹಾಸಿಕ ದಾಖಲೆಗಳನ್ನೂ ಉಪೇಕ್ಷಿಸಿ ಜಾತ್ಯಂತರಗೊಳಿಸಿ ಐಕಾನಿ ಅಪಹರಣಗಳಾಗುತ್ತಿವೆ. ಇದನ್ನು ಕೆಲವರು ಹೈಜಾಕ್ ಎನ್ನುತ್ತಾ ಇತ್ತೀಚೆಗೆ ಬಹಳಷ್ಟು ಸುದ್ದಿ ಮಾಡುತ್ತಿದ್ದಾರೆ.

ಇಂತಹ ಜಾತ್ಯಂತರದ ವಿಷಯವೇ ರೇವಣಸಿದ್ಧರು ಕುರುಬರೇ ಎಂಬ ಕಳೆದ ಬಾರಿಯ ನನ್ನ ಲೇಖನವಾಗಿತ್ತಷ್ಟೇ. ಈ ವೇಳೆ ಕುರಿತು ಇನ್ನೂ ಸಾಕ್ಷ್ಯ ಸ್ಪಷ್ಟವಾಗಿ ಹೇಳಬೇಕೆಂದರೆ, ಕರ್ನಾಟಕದ ಮೈಲಾರನ ಒಕ್ಕಲಿನವರು 'ಏಳು ಕೋಟಿ ಏಳು ಕೋಟಿ ಉಘೇ ಚಾಂಗು ಭಲೇ' ಎಂದು ಶಿವನ ಜಯಘೋಷ ಮಾಡುತ್ತಾರೆ. ಇದುವೇ ಪೂರ್ವದ 'ಲಾಕುಳಸಿದ್ಧಾಂತ' ವಿದ್ದಂತೆ ತೋರುವುದು. ಶಾಸನಗಳಲ್ಲಿ ಇದನ್ನು 'ಎಕ್ಕೋಟಿ' ಸಮಯವೆಂದು ಕರೆಯಲಾಗಿದೆ ಎಂದು ಕಪಟರಾಳ ಕೃಷ್ಣರಾಯರು ತಮ್ಮ 'ಕರ್ನಾಟಕ ಲಾಕುಳಶೈವ' ಇತಿಹಾಸದ ಪುಟ 85ರಲ್ಲಿ ತಿಳಿಸಿದ್ದಾರೆ. ಈವರೆಗಿನ ರೇವಣಸಿದ್ಧನ ಕುರಿತಾದ ಶಾಸನಗಳಲ್ಲಿ ಎಕ್ಕೋಟಿ ಸಮಯ ಎಂಬ ಪದವಾಗಲಿ ಅಥವಾ ಎಕ್ಕೋಟಿ ಸಮಯ ಎಂದಿರುವ ಶಾಸನಗಳಲ್ಲಿ ರೇವಣಸಿದ್ಧನ ಉಲ್ಲೇಖವಾಗಲಿ ಇಲ್ಲ. ಹಾಗಾಗಿ ರೇವಣಸಿದ್ಧ ಸ್ಪಷ್ಟವಾಗಿ ಬೀರಗೊಂಡನಿಗೆ ದೀಕ್ಷೆ ಕೊಟ್ಟ ಗುರುವೇ ಹೊರತು ಕುರುಬನಲ್ಲ. ಈಗ ಮುರುಘಾ ಶರಣರು ಜಾತಿಗೊಂದು ಪೀಠ ಮಾಡಿಕೊಟ್ಟಿರುವ ಕಾರಣ ಅವರ ಮೇಲೆ ಪ್ರೀತಿಯಿಂದ ಯಾವುದಾದರೂ ಒಂದು ಪೀಠ ಅವರನ್ನು ಕುಲಗುರು ಎಂದರೆ ಮುರುಘಾ ಶರಣರು ಆ ಜಾತಿಯವರಾಗುತ್ತಾರೆಯೇ? ಯಾರಾದರೂ ಶಿರಡಿ ಸಾಯಿಬಾಬಾನನ್ನು ಭಕ್ತಿಪೂರ್ವಕವಾಗಿ ತಮ್ಮ ಕುಲಗುರು ಎಂದರೆ ಅವರು ಭಕ್ತನ ಜಾತಿಯವರಾಗುತ್ತಾರೆಯೇ?

ಗುರುಪರಂಪರೆಗಳಲ್ಲಿ ವಂಶೀಯ ಎಂದರೆ ಅನುವಂಶೀಯವಾಗಿ ಹುಟ್ಟಿದವ ಎಂದಲ್ಲ. ಅದು ಉತ್ತರಾಧಿಕಾರಿ ಎಂದು ಇದು ಕೇವಲ ವೀರಶೈವ ಗುರು ವಿರಕ್ತರಲ್ಲದೆ ಇತರೆ ಪಂಥಗಳಲ್ಲಿಯೂ ಇದೇ ಅರ್ಥವನ್ನು ಹೊಂದಿದೆ. ವೀರಶೈವರಲ್ಲಿ, ನಿರಂಜನ ವಂಶ ರತ್ನಾಕರ ಎಂಬ ಉತ್ತರಾಧಿಕಾರಿಗಳ ಇತಿಹಾಸವಿದ್ದರೆ, ಶಂಕರಮಠವು ಗುರುವಂಶಕಾವ್ಯವನ್ನು ಹೊಂದಿದೆ. ಇಂತಹ ಯಾವುದೇ ಅರಿವಿಲ್ಲದೆ ನಾಡಿನ ಖ್ಯಾತ ಜನಪದ ತಜ್ಞ ವಡ್ಡಗೆರೆ ನಾಗರಾಜಯ್ಯನವರು ತಾಮ್ರಬಿಲ್ಲೆಯೊಂದರಲ್ಲಿ ರೇಣುಕಾಚಾರ್ಯ ವಂಶೀಯ ಎಂದಿರುವುದನ್ನು, ಇಟ್ಟುಕೊಂಡು ಬೇರಾವುದೇ ಸಾಕ್ಷಿ ಪುರಾವೆ ಕೊಡದೆ ಜನಪದದ ಕತೆಯೊಂದನ್ನು ಹೊಸೆದು ಲಂಗೋಟಿ ಧರಿಸಿ ಕಾಡುಮೇಡು ಅಲೆಯುವ ದ್ರಾವಿಡ ಸಿದ್ಧ ರೇವಣಸಿದ್ಧ ಎಂಬೆಲ್ಲ ಆರ್ಯ–ದ್ರಾವಿಡ, ವೈದಿಕ–ಅವೈದಿಕ, ಬಡವ–ಶ್ರೀಮಂತ ಶೋಷಕ–ಶೋಷಿತ ಎಂಬ ತಥಾಕಥಿತ ಕಮ್ಯುನಿಸ್ಟ್ ಸಂಕಥನವನ್ನು ರೇವಣಸಿದ್ಧನ ಇತಿಹಾಸವೆಂದು ಹೇಳುತ್ತಾರೆ.

ವೈದಿಕ ವೀರಶೈವರು ಅವೈದಿಕ ಕುರುಬರ ಮಠಗಳನ್ನು ಆಕ್ರಮಿಸಿಕೊಂಡಿದ್ದಾರೆ ಎನ್ನುತ್ತಾರೆ. ಆದರೆ, ಅವರ ಅನುಯಾಯಿ ಹಾಲುಮತಸ್ಥರು ಅವರಿಗೆ ಜೈಕಾರ ಹಾಕುತ್ತಲೇ ಅವರ ದ್ರಾವಿಡ ಸಿದ್ಧಾಂತಕ್ಕೆ ತದ್ವಿರುದ್ಧವಾಗಿ ನಾವು ಪಶುಪಾಲಕ ಆರ್ಯ ಕ್ಷತ್ರಿಯರು ಎನ್ನುತ್ತಾರೆ! ವಡ್ಡಗೆರೆಯವರ ಸಂಶೋಧನೆಗೆ ಸಾಕ್ಷ್ಯ ಕೇಳಿದರೆ, ರೇಣುಕಾಚಾರ್ಯ ಮತ್ತಿತರ ಪಂಚಾಚಾರ್ಯರ ಹುಟ್ಟು ಅಯೋ ನಿಜವಾದದ್ದು ಎಂಬುದೇ ಅವೈಜ್ಞಾನಿಕ ಎಂದು ಉತ್ತರಿಸುತ್ತಾರೆ. ರೇವಣಸಿದ್ಧ ರೇಣುಕನಲ್ಲ ಎನ್ನುವ ವಡ್ಡಗೆರೆಯವರು ತಮ್ಮ ಸಂಶೋಧನೆಗೆ ತಕ್ಕ ಸಾಕ್ಷ್ಯ ಕೊಡದೆ ಅವರೇ ರೇಣುಕಾಚಾರ್ಯರ ಅಯೋನಿಜ ಹುಟ್ಟನ್ನು ರೇವಣಸಿದ್ಧನೊಂದಿಗೆ ತಳುಕು ಹಾಕುತ್ತಾರೆ ಏಕೆ?

ಓರ್ವ ಜನಪದ ತಜ್ಞನಿಗೆ ಪೌರಾಣಿಕ ಬಿಡಿ ಜಾನಪದದಲ್ಲಿಯೇ ಹೇರಳವಾಗಿರುವ ರೂಪಕಾರ್ಥದ ಪವಾಡಗಳ, ಹುಟ್ಟಿನ, ಮರುಹುಟ್ಟಿನ ಸಂಕಥನಗಳು ಅರ್ಥವಾಗದಿದ್ದ ಮೇಲೆ ಇವರ ಜನಪದ ತಜ್ಞ ಎನ್ನುವ ಪೂರ್ವಪ್ರತ್ಯಯವು ನಿಜಕ್ಕೂ ಸಮಂಜಸವೇ ಎಂಬ ಅನುಮಾನ ಮೂಡಿಸುತ್ತದೆ. ಏಕೆಂದರೆ ರೋಚಕ ಸಂಕಥನದ ಮೌಖಿಕ ಇತಿಹಾಸದ ಒಂದು ಪ್ರಕಾರವೆನ್ನುವ ಜನಪದವಾಗಲಿ ಅಥವಾ ಅದೇ ರೀತಿಯ ಗ್ರಾಂಥಿಕ ರೂಪದ ಪುರಾಣಗಳಾಗಲಿ ಇತಿಹಾಸದ ಒಂದು ಆಕರವಾಗಿ ಮಹತ್ವ ಪಡೆಯಲು ಅವುಗಳಿಗೆ ತಾಳೆಯಾಗಬಲ್ಲ ಯಾವುದಾದರೂ ವೈಜ್ಞಾನಿಕ ಪ್ರಕಾರದ ಶಾಸನದಂತಹ ಪ್ರಾಮಾಣಿತ ಆಕರಗಳು ಮುಖ್ಯ. ಇಂತಹ ಯಾವ ಸಾಕ್ಷ್ಯಗಳನ್ನೂ ವಡ್ಡಗೆರೆಯವರು ಕೊಟ್ಟಿಲ್ಲ, ಕೊಡಲು ಸಾಧ್ಯವೂ ಇಲ್ಲ.

ಈ ಎಲ್ಲ ಹಿನ್ನೆಲೆಯಲ್ಲಿ 'ರೇವಣಸಿದ್ಧರ ಜಾತ್ಯಂತರ ಯಾನೆ ಹೈಜಾಕ್' ಎನ್ನುವ ಸುದ್ದಿ ಈಗೇಕೆ ಮುನ್ನೆಲೆಗೆ ಬರುತ್ತಿದೆ ಎಂದು ಪ್ರಶ್ನೆ ಹಾಕಿಕೊಂಡಾಗ ಅದರ ಉದ್ದೇಶ ಸ್ಫಟಿಕ ಸದೃಶವಾಗಿ ಅನಾವರಣಗೊಳ್ಳುತ್ತದೆ. ಅನಾದಿ ಕಾಲದಿಂದಲೂ ಗ್ರಾಂಥಿಕ ವೀರಶೈವ ಮತ್ತು ಆಡುಮಾತಿನ ಲಿಂಗಾಯತ ಪದಗಳು ಒಂದೇ ಧರ್ಮವನ್ನು ಬಿಂಬಿಸುತ್ತಿದ್ದರೂ ಅದನ್ನು 2018ರಲ್ಲಿ ವೀರಶೈವ ಬೇರೆ, ಲಿಂಗಾಯತ ಬೇರೆ ಎಂಬ ಧರ್ಮಭಂಜನೆಗೆ ಈಡಾಗಿಸಿ ಛಿದ್ರಿಸಲಾಯಿತು. ಆದರೆ, ಅಂದಿನ ಸರಕಾರದೊಂದಿಗೆ ಈ ವಾದವೂ ಪತನಗೊಂಡರೂ ಕೆಲವು ಲಿಂಗಾಯತ ದುಷ್ಟಶಕ್ತಿಗಳು ಅದನ್ನು ಮತ್ತದೇ ಪಕ್ಷದ ಸರಕಾರ ಬಂದಾಗ ಜೀವಂತಗೊಳಿಸುತ್ತಿವೆ. ಈ ಧರ್ಮ ಭಂಜನೆಯು ಆ ಪಕ್ಷದ ಕಾರ್ಯಸೂಚಿಯೇ ಆಗಿದ್ದರೂ ಅಧಿಕೃತವಾಗಿ ಆ ಪಕ್ಷವು ಅದನ್ನು ನಿರಾಕರಿಸುತ್ತಿದೆ. 'ವಿಶ್ವವಾಣಿಯ ಬಸವ ಮಂಟಪ ಅಂಕಣವು' ಆ ಎಲ್ಲ ಪೊಳ್ಳುವಾದದ ಭಂಜನೆಯನ್ನು ಬಯಲಾಗಿಸಿದ್ದರಿಂದ ತಣ್ಣಗಾದ ಆ ವಾದವು ಈಗ ಕೆಲವು ಅಸ್ಮಿತೆಪೀಡಿತರನ್ನು ಬಳಸಿಕೊಂಡು ಮತ್ತೆ ಧರ್ಮಭಂಜನೆಗೆ ಅನುವಾಗಿದೆ. ತಮ್ಮ ಭಂಜನೋದ್ದೇಶಕ್ಕಾಗಿ ಈ ಧರ್ಮಭಂಜಕ ಮಾಫಿಯಾ ಎಂತಹ ಕೆಳಮಟ್ಟಕ್ಕೂ ಇಳಿಯಬಲ್ಲದು ಎಂಬುದು ಈಗ ಜಗಜ್ಜಾಹೀರಾಗಿದೆ! ಇದಕ್ಕಾಗಿ ಈ ಗುಂಪು ಪ್ರಮುಖವಾಗಿ ಜ್ಯೋತಿಷ್ಯ ಹೇಳುವ, ದೆವ್ವ ಬಿಡಿಸುವ ಉದ್ಯೋಗ ಮಾಡಿಕೊಂಡಿರುವ ಬಹು ಪೂರ್ವಪ್ರತ್ಯಯಗಳ ಚಂದ್ರಕಾಂತ ಬಿಜ್ಜರಗಿ ಎಂಬುವವರಿಗೆ ಸಾಕಷ್ಟು ಪ್ರಚಾರ ಕೊಟ್ಟು ಮುನ್ನೆಲೆಗೆ ತಂದಿತು. ಈ ಮುನ್ನೆಲೆಗೆ ವಡ್ಡಗೆರೆ ನಾಗರಾಜಯ್ಯನವರಿಗಿಂತ ಬಹಳಷ್ಟು ಮೊದಲೇ ಬಿಜ್ಜರಗಿಯವರು, ರೇವಣಸಿದ್ಧರು ಕುರುಬರು. ಇವರನ್ನು ವೀರಶೈವರು ಹೈಜಾಕ್ ಮಾಡಿದ್ದಾರೆ ಎಂದು ಹೇಳುತ್ತಿದ್ದುದು. ಇದನ್ನು ಶ್ರೀಯುತರು ಇತ್ತೀಚೆಗಲ್ಲದೆ ಕಳೆದ ಒಂದು ದಶಕದಿಂದಲೂ ಹೇಳುತ್ತಿದ್ದಾರೆ. ಆಗೆಲ್ಲ ಇವರನ್ನು ಹಾಲುಮತಸ್ಥರಲ್ಲಿಯೇ ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಏಕೆಂದರೆ ಅವರ ವಾದದಲ್ಲಿ ಅಂತಹ ಗಂಭೀರ ಸಾಕ್ಷಿಗಳಾಗಲಿ ತರ್ಕವಾಗಲಿ ಇರಲಿಲ್ಲ. ಆದರೆ, ಯಾವಾಗ ಲಿಂಗಾಹತರ ಭಂಜಕವಾದಗಳು ಬೀಳುತ್ತಾ ಸಾಗಿದವೋ ಆಗ ಉರುಳುವವನಿಗೆ ಹುಲ್ಲುಕಡ್ಡಿ ಆಸರೆ ಎಂಬಂತೆ ಈ ಬಿಜ್ಜರಗಿಯವರ ವಾದವನ್ನು

ಭಂಜಕವಾದಗಳು ಹಿಡಿದು ಕೊಂಡವು.

ಆಸರೆಗಾಗಿ ಹಿಡಿದ ಈ ಹುಲ್ಲುಕಡ್ಡಿ ಶೃಂಗಾರಗೊಂಡು ವಿವಿಧ ರಂಜನೀಯ ವೇಷಭೂಷಣಗಳಲ್ಲಿ ಉಕ್ಕಿನ ಸರಪಳಿಯಂತೆ ಕಂಗೊಳಿಸಲಾರಂಭಿಸಿತು. ಆದರೆ ತನ್ನನ್ನು ತಾನು ಸಂಶೋಧಕ ಎಂದುಕೊಳ್ಳುತ್ತಿದ್ದ ಶ್ರೀ ಬಿಜ್ಜರಗಿಯವರು ಅದರಿಂದ ನಿರೀಕ್ಷಿತ ಫಲ ಕಾಣದೆ ಪ್ರೇತಾತ್ಮಗಳೊಂದಿಗೆ ಸಂಭಾಷಿಸಿ ದೆವ್ವಗಳನ್ನು ಬಿಡಿಸುವ, ಅವುಗಳಿಗೆ ಪುನರ್‌ವಸತಿ ಕಲ್ಪಿಸಿಕೊಡುವ ದಂಧೆಯನ್ನು ಆರಂಭಿಸಿ ಗುರೂಜಿಗಳಾಗಿ ಹೋಗಿದ್ದರು. ಅಷ್ಟೇ ಅಲ್ಲದೆ ತಮ್ಮ ದೆವ್ವ ಬಿಡಿಸುವ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಾಕಿಕೊಳ್ಳುವ ಅಸಾಧಾರಣ ಧಾಷ್ಟ್ರ್ಯವನ್ನೂ ಮೆರೆದಿದ್ದಾರೆ.

ಈ ಧಾಷ್ಟ್ರ್ಯಕ್ಕೆ ತಕ್ಕಂತೆ ಲಿಂಗಾಹತರ ಬೆಂಬಲದಿಂದ ಮೌಢ್ಯ ನಿಷೇಧ ಜಾರಿಗೊಳಿಸುವ ಜನನಾಯಕರು ಈ ಓರ್ವ ದೆವ್ವ ಬಿಡಿಸುವ, ವಶೀಕರಣ ಮಾಡುವನೆನ್ನುವ, ಜ್ಯೋತಿಷಿ/ಸಮ್ಮೋಹನ ಪಂಡಿತ ಎಂಬ ಪೂರ್ವಪ್ರತ್ಯಯಗಳನ್ನು ಹೊಂದಿರುವ ಬಿಜ್ಜರಗಿ ಎಂಬ ಮೌಢ್ಯದ ಪ್ರತಿರೂಪಕ್ಕೆ ವಶೀಕರಣಗೊಂಡು ಸಮ್ಮೋಹದಿಂದ ಮತ್ತು ಅಷ್ಟೇ ಧಾಷ್ಟ್ರ್ಯತೆಯಿಂದ 2025ನೇ ಸಾಲಿನ ಕನಕಶ್ರೀ ಎಂಬ ಸರಕಾರಿ ಪ್ರಶಸ್ತಿಯನ್ನೂ ನೀಡಿಬಿಟ್ಟರು. ಏಕೆ? ಅಂದ ಹಾಗೆ ವೀರಶೈವ ಲಿಂಗಾಯತ ಧರ್ಮ ಭಂಜನೆಗೆ ಚಾಲನೆ ನೀಡಿದ್ದವರು ಇದೇ ಜನನಾಯಕರು ಎಂಬುದನ್ನು ಇಡೀ ನಾಡೇ ಬಲ್ಲದು.

ಇಂತಹ ಮೌಢ್ಯದ ಪ್ರತಿರೂಪವನ್ನು ಕನಕ ಶ್ರೀ ಪ್ರಶಸ್ತಿಗೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರು ಕೆ. ಮರುಳಸಿದ್ದಪ್ಪ! ಅಂದ ಹಾಗೆ ಕೆ. ಮರುಳಸಿದ್ದಪ್ಪ ಅವರು ನಾಡಿನ ಕೆಲವೇ ಕೆಲವು ಪ್ರಗತಿಪರ, ಮೌಢ್ಯ ನಿಷೇಧ ಪ್ರವರ್ತಕ ಸಾಕ್ಷಿಪ್ರಜ್ಞೆಗಳಲ್ಲಿ ಒಬ್ಬರು! ಈ ಆಯ್ಕೆ ಸಮಿತಿ ಯಾವ ಖರ್ಚೂ ಇಲ್ಲದೆ ಸುಮ್ಮನೆ ಅಂತರ್‌ಜಾಲದಲ್ಲಿ ಬಿಜ್ಜರಗಿ ಎಂದು ಹುಡುಕಿದ್ದರೆ ಹಲವಾರು ದೆವ್ವ ಬಿಡಿಸುವ ವಿಡಿಯೊಗಳು ಸಿಗುತ್ತಿದ್ದವು. ಇಂತಹ ಒಂದು ಸಣ್ಣ ಹುಡುಕಾಟವನ್ನೂ ನಡೆಸಲಾಗದ ಕಾರ್ಯಕ್ಕೆ ಒಂದು ಸಮಿತಿಯನ್ನೇ ರಚಿಸಲಾಗಿದೆ ಎಂದರೆ ಸರಕಾರಿ ಹಣ ಅದೆಷ್ಟು ಪೋಲಾಯಿತು? ಅಂದ ಹಾಗೆ ಕೆ. ಮರುಳಸಿದ್ದಪ್ಪ ಅವರ ಆಪ್ತ ಬಳಗದ ಮೌಢ್ಯ ನಿಷೇಧ, ಜಾತಿ ವಿನಾಶದ ಬುದ್ಧಿಜೀವಿಗಳೇ ಮೇಲಿನ ಜನನಾಯಕರ ಸರಕಾರ ನೇಮಿಸಿದ್ದ ಧರ್ಮ ಭಂಜಕ ಲಿಂಗಾಯತ ಪ್ರತ್ಯೇಕ ಧರ್ಮ ಸಮಿತಿ ಅಧ್ಯಕ್ಷರು ಮತ್ತು ಸರ್ವಸದಸ್ಯರೂ ಆಗಿದ್ದರು! ಅಲ್ಲದೆ ವೀರಶೈವ ಬೇರೆ ಲಿಂಗಾಯತ ಬೇರೆ ಎನ್ನುವ ಧರ್ಮ ಭಂಜಕ ಬಳಗದ ಪ್ರಮುಖರಾದ ತೋಂಟದ ಜಗದ್ಗುರು ಶ್ರೀ ಸಿದ್ಧರಾಮ ಶ್ರೀಗಳು, ಫ.ಗು. ಹಳಕಟ್ಟಿಯವರ ನಂತರ ಸಂಶೋಧನಾ ಕ್ಷೇತ್ರದಲ್ಲಿ ಎದ್ದು ಕಾಣುವ ಹೆಸರು ನಿಮ್ಮದು ಎಂದು ಶ್ರೀ ಬಿಜ್ಜರಗಿಯವರಿಗೆ ಪ್ರಶಂಸನಾ ಪತ್ರವನ್ನೂ ಕೊಟ್ಟುಬಿಟ್ಟರು, ಏಕೆ?

ಏಕೆಂದರೆ ತೋಂಟದ ಜಗದ್ಗುರು ಶ್ರೀ ಸಿದ್ಧರಾಮ ಶ್ರೀಗಳಿಗೆ ತಾವು ದ್ವೇಷಿಸುವ ಮತ್ತು ವೀರಶೈವ ಲಿಂಗಾಯತ ಒಂದೇ ಎನ್ನುವ ಪಂಚಪೀಠಗಳ ಆರಾಧ್ಯ ದೈವ ರೇವಣಸಿದ್ಧನನ್ನು ಬಿಜ್ಜರಗಿಯವರು ಕುರುಬರು ಎಂದಿದ್ದು ಹಾಲು ಕುಡಿದಷ್ಟು ಸಂತೋಷವನ್ನುಂಟುಮಾಡಿ ಬಿಜ್ಜರಗಿಯವರ ದೆವ್ವ, ಭೂತ, ಪ್ರೇತಗಳನ್ನೆಲ್ಲ ಪ್ರೀತ್ಯರ್ಥವಾಗಿ ಸಿಬಿಟ್ಟವು. ಅಂದ ಹಾಗೆ ಈ ಜಗದ್ಗುರುಗಳು ಇವನಾರವ ಇವನಾರವ ಇವನಾರವ ಎನ್ನುತ್ತಾ ವೇದಗಳಿಗೆ ಒರೆಯ ಕಟ್ಟುತ್ತಿರುತ್ತಾರೆ. ಅದೇ ರೀತಿ ಲಿಂಗಾಹತರ ವಕ್ತಾರರಂತೆ ಅಂದು ಲಿಂಗಾಹತರ ಪರವಾಗಿ ಜನಪದ ತಜ್ಞ, ವಡ್ಡಗೆರೆಯವರು ಅಂದೂ ಸಂಕಥನಗಳನ್ನು ಹೊಸೆಯುತ್ತಿದ್ದರು. ಇಂದೂ ಅದರ ಮುಂದಿನ ಭಾಗವಾಗಿ ರೇವಣಸಿದ್ಧರ ಜನಪದ ಪುರಾಣವನ್ನು ಹೊಸೆಯುತ್ತಿದ್ದಾರಷ್ಟೇ. ಹೀಗೆ ಸಮಗ್ರವಾಗಿ ರೇವಣಸಿದ್ಧರು ಕುರುಬರು ಎಂಬ ಸೃಷ್ಟಿಗೂ, ಬಿಜ್ಜರಗಿಯವರ ಮೌಢ್ಯಕ್ಕೂ, ಲಿಂಗಾಯತ ಪ್ರತ್ಯೇಕ ಧರ್ಮ ಎಂಬ ಧರ್ಮಭಂಜನೆಗೂ, ಕುಲ ಕುಲ ಕುಲವೆಂದು ಹೊಡೆದಾಡದಿರಿ ಎಂಬ ಕನಕನ ಹೆಸರಿನ ಪ್ರಶಸ್ತಿಗೂ, ತೋಂಟದ ಶ್ರೀಗಳ ಪ್ರಶಂಸನಾ ಪತ್ರಕ್ಕೂ, ವಡ್ಡಗೆರೆಯವರ ಜನಪದ ಸಂಕಥನಕ್ಕೂ ಇರುವ ಸಂಬಂಧದ ನಡುವೆ ಏನಾದರೂ ಬಿಟ್ಟು ಹೋದ ಸ್ಥಳ ಉಳಿದಿದ್ದರೆ ಸ್ಪಷ್ಟವಾಗಿ ತುಂಬಿ ಕೊಳ್ಳಿ.

ಇನ್ನು ಶ್ರೀ ಬಿಜ್ಜರಗಿಯವರು ಕೇವಲ ರೇವಣಸಿದ್ಧರ ಬಗ್ಗೆ ಮಾತ್ರ ಸಂಶೋಧನೆ ನಡೆಸದೆ ಬಸವಣ್ಣನ ಬಗ್ಗೆ ಕೂಡ ಸಂಶೋಧನೆ ಮಾಡಿ ಬಸವಣ್ಣನನ್ನೂ ಕುರುಬರೆಂದು ಘೋಷಿಸಿದ್ದಾರೆ. ಬುದ್ಧಿಜೀವಿ ಕೆ. ಮರುಳಸಿದ್ದಪ್ಪನವರು ಹೇಗೆ ಆಯ್ಕೆಯ ಮಾನದಂಡಗಳನ್ನು ದಂಡ ಮಾಡಿ ಕನಕ ಶ್ರೀ ಪ್ರಶಸ್ತಿಗೆ ಬಿಜ್ಜರಗಿಯವರನ್ನು ಅನುಮೋದಿಸಿದ್ದರೋ ಅದೇ ರೀತಿ ತೋಂಟದ ಜಗದ್ಗುರು ಶ್ರೀ ಸಿದ್ಧರಾಮ ಶ್ರೀಗಳು ಬಿಜ್ಜರಗಿಯವರು ಬಸವಣ್ಣನ ಬಗ್ಗೆ ಏನು ಬರೆದಿದ್ದಾರೆ ಎಂದು ಗಮನಿಸದೆ ಅಥವಾ ಗಮನಿಸಿದ್ದರೂ ಉಪೇಕ್ಷಿಸಿ, ತಮ್ಮ ವೈರಿಗಳ ಆದ್ಯದೈವ ವೀರಶೈವನಲ್ಲ ಎಂದಿದ್ದಾರಲ್ಲ ಅಷ್ಟು ಸಾಕು. ಬಸವಣ್ಣನ ಬಗ್ಗೆ ಏನು ಬರೆದಿದ್ದರೇನು? ನನ್ನ ಎರಡೂ ಕಣ್ಣು ಹೋದರೂ ಚಿಂತೆಯಿಲ್ಲ. ನನ್ನ ವೈರಿಯ ಒಂದು ಕಣ್ಣು ಹೋಗಲಿ ಎಂದು ಹಿರಿಹಿರಿ ಹಿಗ್ಗಿ ಪ್ರಶಂಸನಾ ಪತ್ರವನ್ನು ಕೊಟ್ಟಿದ್ದಾರೆ.

ಪ್ರಸ್ತುತ

ಆಮೇಯ್ ಚಂದ್ರಶೇಖರ್

ಎಸ್‌ಐಆರ್‌ಗೆ ಅನಗತ್ಯ ವಿರೋಧ ಬೇಡ

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಎಂಬುದು ಕೇವಲ ರಾಜಕೀಯ ಸ್ಪರ್ಧೆಯಲ್ಲ; ಅದು ಜನರ ಸಾರ್ವಭೌಮಾಧಿಕಾರದ ಅಭಿವ್ಯಕ್ತಿ. ಆ ವ್ಯವಸ್ಥೆಯ ಮೂಲಾಧಾರವೇ ಶುದ್ಧ ಮತ್ತು ವಿಶ್ವಾಸಾರ್ಹ ಮತದಾರರ ಪಟ್ಟಿ. ಆದರೆ, ಈ ಹಿನ್ನೆಲೆಯಲ್ಲಿ ಭಾರತೀಯ ಚುನಾವಣಾ ಆಯೋಗ ಕೈಗೊಳ್ಳುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ (Special Intensive Revision & SIR) ಪ್ರಕ್ರಿಯೆಯನ್ನು ಕರ್ನಾಟಕ ಸರ್ಕಾರ ವಿರೋಧಿಸುತ್ತಿರುವುದು ಚಿಂತಾಜನಕ ಬೆಳವಣಿಗೆಯಾಗಿದೆ.

ರಾಜ್ಯ ಸರ್ಕಾರದ ವಾದವೇನೆಂದರೆ, ಈ ಪ್ರಕ್ರಿಯೆಯಿಂದ ಕೆಲವರ ಮತದಾನದ ಹಕ್ಕು ಕಸಿಯಲ್ಪಡಬಹುದು, ಹಿಂದುಳಿದ ವರ್ಗಗಳು ಮತ್ತು ಬಡವರ ಮೇಲೆ ಅನ್ಯಾಯವಾಗಬಹುದು ಎಂಬುದು. ಜನರ ಹಕ್ಕುಗಳ ಬಗ್ಗೆ ಸರ್ಕಾರ ಎಚ್ಚರಿಕೆ ವಹಿಸುವುದು ತಪ್ಪಲ್ಲ. ಆದರೆ, ಅದೇ ಸಂದರ್ಭದಲ್ಲಿ ಚುನಾವಣಾ ಆಯೋಗವು ಕೈಗೊಳ್ಳುತ್ತಿರುವ ಈ ಪರಿಷ್ಕರಣೆ ಪ್ರಕ್ರಿಯೆಯ ಉದ್ದೇಶ ಮತ್ತು ಸಂವಿಧಾನಾತ್ಮಕ ಮಹತ್ವವನ್ನು ಸಹ ಸಮತೋಲನದಿಂದ ನೋಡಬೇಕಾಗಿದೆ.

ಮತದಾರರ ಪಟ್ಟಿಯಲ್ಲಿ ಸತ್ತವರ ಹೆಸರು ಉಳಿಯುವುದು, ಒಂದೇ ವ್ಯಕ್ತಿಯ ಹೆಸರು ಎರಡು ಕಡೆ ಇರುವುದು, ಸ್ಥಳಾಂತರಗೊಂಡವರ ಹೆಸರು ಅಳಿಯದೆ ಉಳಿಯುವುದು, ಅಥವಾ ನಕಲಿ ನೋಂದಣಿಗಳು ನಡೆಯುವುದು – ಇವೆಲ್ಲವೂ ಚುನಾವಣಾ ಶುದ್ಧತೆಯನ್ನು ದುರ್ಬಲಗೊಳಿಸುವ ಸಂಗತಿಗಳು. ಇವುಗಳನ್ನು ಸರಿಪಡಿಸುವುದೇ ಎಸ್‌ಐಆರ್‌ನ ಮೂಲ ಉದ್ದೇಶ. ಇದು ಏಕಾಏಕಿ ಕಂಡುಹಿಡಿದ ವಿಧಾನವಲ್ಲ; ಹಲವು ದಶಕಗಳಿಂದ ಚುನಾವಣಾ ಆಯೋಗ ಅನುಸರಿಸುತ್ತಿರುವ ಒಂದು ವೈಜ್ಞಾನಿಕ ಮತ್ತು ಆಡಳಿತಾತ್ಮಕ ಪ್ರಕ್ರಿಯೆ.

ಪ್ರತಿ ಪ್ರಜಾಪ್ರಭುತ್ವದಲ್ಲಿಯೂ ಒಬ್ಬ ನಾಗರಿಕ – ಒಂದು ಮತ – ಒಂದು ನೋಂದಣಿ ಎಂಬ ತತ್ವ ಅತ್ಯಂತ ಪವಿತ್ರವಾದುದು. ಹೀಗಾಗಿ ಮತದಾರರ ಪಟ್ಟಿಯನ್ನು ಶುದ್ಧೀಕರಿಸುವ ಪ್ರಯತ್ನವನ್ನು ತಕ್ಷಣವೇ ಹಕ್ಕು ಕಸಿಯುವ ಕಾರ್ಯ ಎಂದು ಚಿತ್ರಿಸುವುದು ಜನರಲ್ಲಿ ಅನಗತ್ಯ ಅನುಮಾನ ಹುಟ್ಟಿಸಬಹುದು.

ಹೌದು, ಈ ಪ್ರಕ್ರಿಯೆಯಲ್ಲಿ ಕೆಲವೊಂದು ದೋಷಗಳು ಸಂಭವಿಸುವ ಸಾಧ್ಯತೆಗಳಿರಬಹುದು. ಅರ್ಹ ಮತದಾರರ ಹೆಸರು ತಪ್ಪಾಗಿ ಅಳಿಯದಂತೆ ಎಚ್ಚರಿಕೆ ಅಗತ್ಯ. ಆದರೆ ಅದಕ್ಕಾಗಿ ಸಂಪೂರ್ಣ ಪ್ರಕ್ರಿಯೆಯನ್ನೇ ತಡೆಯಲು ಮುಂದಾಗುವುದು ಸೂಕ್ತ ಪರಿಹಾರವಲ್ಲ. ಬದಲಾಗಿ, ಸರ್ಕಾರ ಮತ್ತು ಚುನಾವಣಾ ಆಯೋಗ ಪರಸ್ಪರ ಸಹಕಾರದಿಂದ ಪಾರದರ್ಶಕ ಹಾಗೂ ಜನಸ್ನೇಹಿ ವಿಧಾನಗಳನ್ನು ರೂಪಿಸಬೇಕು.

ಸುಪ್ರೀಂ ಕೋರ್ಟ್‌ಗೆ ಹೋಗುವುದು ಸರ್ಕಾರದ ಹಕ್ಕು. ಆದರೆ, ಅದೇ ಸಮಯದಲ್ಲಿ ಚುನಾವಣಾ ಆಯೋಗದಂತಹ ಸ್ವತಂತ್ರ ಸಂವಿಧಾನಾತ್ಮಕ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಬಗ್ಗೆ ಸಾರ್ವಜನಿಕರಲ್ಲಿ ಅನುಮಾನ ಮೂಡುವಂತಾಗಬಾರದು. ಪ್ರಜಾಪ್ರಭುತ್ವದ ಬಲವು ಕೇವಲ ಮತದಾನದ ಹಕ್ಕಿನಲ್ಲಿ ಮಾತ್ರವಲ್ಲ; ಶುದ್ಧ ಮತದಾರರ ಪಟ್ಟಿಯಲ್ಲಿಯೂ ಅಡಗಿದೆ ಎಂಬುದನ್ನು ಮರೆಯಬಾರದು.

ಎಸ್‌ಐಆರ್ ನಡೆಸಿದ ರಾಜ್ಯಗಳಲ್ಲಿ ಬಿಜೆಪಿಯನ್ನು ವಿರೋಧಿಸುವ ಅಲ್ಪಸಂಖ್ಯಾತರ ಮತದಾರರ ಹೆಸರನ್ನು ರದ್ದುಪಡಿಸಲಾಗಿದೆ, ಆ ಮೂಲಕ ಮತದಾರರ ಪಟ್ಟಿಯನ್ನು ತನಗೆ ಅನುಕೂಲವಾಗುವಂತೆ ಬಿಜೆಪಿ ತಿದ್ದಿಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ಆದರೆ ವಿಪಕ್ಷಗಳು ಆರೋಪಿಸಿದಂತೆಯೇ ಆಗಿದ್ದರೆ, ತಮಿಳುನಾಡು ಹಾಗೂ ಕೇರಳಗಳಲ್ಲೂ ಬಿಜೆಪಿ ಪರವಾದ ಫಲಿತಾಂಶವೇ ಬರಬೇಕಿತ್ತು. ಹಾಗಾಗಿಲ್ಲ. ಈ ಎರಡೂ ರಾಜ್ಯಗಳಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ನಡೆದಿದೆ. ಆದರೆ ಮೊನ್ನೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ತಮಿಳುನಾಡು ಹಾಗೂ ಕೇರಳಗಳಲ್ಲಿ ಕ್ರಮವಾಗಿ ಟಿವಿಕೆ ಹಾಗೂ ಯುಡಿಎಫ್ ಪಕ್ಷಗಳು ಅಧಿಕಾರ ಹಿಡಿದಿವೆ. ಈ ಪಕ್ಷಗಳು ಬಿಜೆಪಿಯ ಮಿತ್ರಪಕ್ಷಗಳಲ್ಲ ಎಂಬುದನ್ನು ಗಮನಿಸಬೇಕು. ಪಶ್ಚಿಮ ಬಂಗಾಳದಲ್ಲಿ ಭಾರತೀಯ ಜನತಾ ಪಕ್ಷ ಅಧಿಕಾರ ಹಿಡಿದಿದೆ ಎಂದ ಮಾತ್ರಕ್ಕೆ ಎಲ್ಲ ಕಡೆಯೂ ಹಾಗಾಗುತ್ತದೆ ಅನ್ನುವಂತಿಲ್ಲ.

ಮತದಾರರ ಪಟ್ಟಿ ಪರಿಷ್ಕರಣೆಯಾಗಿ ದಶಕವೇ ಉರುಳಿದೆ. ಜವಾಬ್ದಾರಿಯುತ ಡೆಮಾಕ್ರಸಿಗಳು ಈ ಪಟ್ಟಿಯನ್ನು ಐದು ವರ್ಷಕ್ಕೊಮ್ಮೆಯಾದರೂ ಪರಿಷ್ಕರಿಸುತ್ತವೆ. ನಮ್ಮ ದೇಶವೂ ಹೊಣೆಯರಿತ ಪ್ರಜಾಪ್ರಭುತ್ವ ದೇಶ ಎನಿಸಬೇಕಾದರೆ ಚುನಾವಣೆ ಪ್ರಕ್ರಿಯೆ ಪಾರದರ್ಶಕ ಆಗಿರಬೇಕು. ಇಲ್ಲವಾದರೆ ಸತ್ತವರು ಬಂದು ಮತ ಚಲಾಯಿಸುವ ವ್ಯವಸ್ಥೆ ಉಳಿದುಕೊಳ್ಳುತ್ತದೆ. ನಮ್ಮ ನ್ಯಾಯಾಂಗದಂತೆ ಚುನಾವಣಾ ಆಯೋಗವನ್ನೂ ಮುಕ್ತವಾಗಿ ಕೆಲಸ ಮಾಡಲು ಬಿಡಬೇಕು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:127

ಸಮಾಚಾರ ಸಣ್ಣದಲ್ಲ

ನಟಿ ತ್ರಿಶಾ ಹತ್ಯೆ: ಪತಿ ಶರಣು, ವಿಚಾರಣೆ ಹೊಣೆ ಸಿಬಿಐಗೆ

ದೆಹಲಿ: ತ್ರಿಶಾ ಶರ್ಮಾ ಅವರ ಕುಟುಂಬಸ್ಥರು ಈ ಮೊದಲಿನಿಂದಲೂ ತಮ್ಮ ಮಗಳ ಸಾವಿನಲ್ಲಿ ಆಕೆಯ ಪತಿ ಸಮರ್ಥ್ ಸಿಂಗ್ ಅವರದ್ದೇ ವ್ಯವಸ್ಥಿತ ಸಂಚು

ಎಂದು ಆರೋಪಿಸುತ್ತಿದ್ದರು. ಕಳೆದ 10 ದಿನಗಳಿಂದ ಪೊಲೀಸರ ಕಣ್ಣಿಗೆ ಮಣ್ಣೆರಚಿ ತಲೆಮರೆಸಿಕೊಂಡಿದ್ದ ಸಮರ್ಥ್ ಸಿಂಗ್ ಶುಕ್ರವಾರ ಮಧ್ಯಪ್ರದೇಶದ ಸ್ಥಳೀಯ ನ್ಯಾಯಾಲಯಕ್ಕೆ ಶರಣಾಗಲು ಆಗಮಿಸಿದ್ದಾರೆ. ದೆಹಲಿ ಏಮ್ಸ್ ಮೂಲಕ ತ್ರಿಶಾ ಶರ್ಮಾ ಅವರ ಶವದ ಎರಡನೇ ಮರಣೋತ್ತರ ಪರೀಕ್ಷೆಗೆ ಕೋರ್ಟ್ ಆದೇಶ ನೀಡಿದ ಬೆನ್ನಲ್ಲೇ ಸಮರ್ಥ್ ಸಿಂಗ್ ಈ ನಿರ್ಧಾರಕ್ಕೆ ಬಂದಿದ್ದಾರೆ. ಈ ನಡುವೆ ತ್ರಿಶಾ ಹತ್ಯೆ ಪ್ರಕರಣವನ್ನು ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಸಿಬಿಐ ತನಿಖೆಗೆ ಒಪ್ಪಿಸಿದ್ದಾರೆ. ಪೊಲೀಸರು ಯಾವುದೇ ಕ್ಷಣದಲ್ಲೂ ತನ್ನನ್ನು ಬಂಧಿಸಬಹುದು ಮತ್ತು ಕಠಿಣ ಪೊಲೀಸ್ ವಿಚಾರಣೆಗೆ ಒಳಪಡಿಸಬಹುದು ಎಂಬುದನ್ನು ಅರಿತು, ಸಮರ್ಥ್ ಸಿಂಗ್ ಪೊಲೀಸ್ ಬಂಧನದಿಂದ ತಪ್ಪಿಸಿಕೊಳ್ಳಲು ನೇರವಾಗಿ ನ್ಯಾಯಾಲಯದ ಮುಂದೆ ಶರಣಾಗುವ ತಂತ್ರ ಹೂಡಿದ್ದಾರೆ.

ಮೋದಿಗೆ ಜಲ್ಮುರಿ ನೀಡಿದ್ದ ವ್ಯಾಪಾರಿಗೆ ಕೊಲೆ ಬೆದರಿಕೆ

ಕೋಲ್ಕತಾ: ಚುನಾವಣಾ ಪ್ರಚಾರದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಜನಪ್ರಿಯ ಬಂಗಾಳಿ ತಿನಿಸು ನೀಡಿ ಗಮನ ಸೆಳೆದಿದ್ದ ಪಶ್ಚಿಮ ಬಂಗಾಳದ ಜಲ್ಮುರಿ ಮಾರಾಟಗಾರನಿಗೆ ಪಾಕಿಸ್ತಾನ ಮತ್ತು ಬಾಂಗ್ಲಾದೇಶದಿಂದ ಬೆದರಿಕೆ ಕರೆಗಳು ಬರುತ್ತಿವೆ. ಜಲ್ಮುರಿ ಮಾರಾಟಗಾರ ಬಿಕ್ರಮ್ ಸೌಗೆ ಕಳೆದ ಕೆಲವು ದಿನಗಳಿಂದ ಕೊಲೆ ಬೆದರಿಕೆಗಳು ಬಂದಿವೆ. ಪದೇಪದೇ ಫೋನ್ ಮತ್ತು ವಿಡಿಯೋ ಕರೆಗಳ ಮೂಲಕ ಬೆದರಿಕೆ ಹಾಕಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಏಪ್ರಿಲ್ 19ರಂದು ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣಾ ಪ್ರಚಾರದ ಸಮಯದಲ್ಲಿ ಪ್ರಧಾನಿ ಮೋದಿ ಜಾರ್‌ಗ್ರಾಮ್‌ನಲ್ಲಿರುವ ರಸ್ತೆಬದಿಯ ಜಲ್ಮುರಿ ಅಂಗಡಿಯಲ್ಲಿ ಸ್ಥಳೀಯ ತಿನಿಸನ್ನು ಸವಿದಿದ್ದರು. ಮೋದಿಗೆ ಜಲ್ಮುರಿ ನೀಡಿದ್ದ ವ್ಯಾಪಾರಿ ಸೋಷಿಯಲ್ ಮೀಡಿಯಾದಲ್ಲಿ ಜನಪ್ರಿಯರಾದರು. ಬೆದರಿಕೆ ಕರೆಗಳು ನನ್ನನ್ನು ಮತ್ತು ಕುಟುಂಬದವರನ್ನು ತೀವ್ರ ಚಿಂತೆಗೀಡು ಮಾಡಿದೆ. ಈ ಸಂಬಂಧ ಪೊಲೀಸರಿಗೆ ದೂರು ನೀಡಲಾಗಿದೆ ಎಂದು ಬಿಕ್ರಮ್ ಸೌ ತಿಳಿಸಿದ್ದಾರೆ.

ಇನ್ನೂ 8 ವರ್ಷ ಬಿಜೆಪಿ ಗೆಲುವು ತಡೆಯಲಾಗಲ್ಲ: ಆಕ್ಸಿಸ್ ಇಂಡಿಯಾ ಸಮೀಕ್ಷೆ

ದೆಹಲಿ: ಚುನಾವಣೋತ್ತರ ಸಮೀಕ್ಷೆಯನ್ನು ಬಹುತೇಕ ಕರಾರುವಕ್ಕಾಗಿ ನೀಡುವಲ್ಲಿ ಹೆಸರುವಾಸಿಯಾಗಿರುವ ಆಕ್ಸಿಸ್ ಮೈ ಇಂಡಿಯಾದ ಸಮೀಕ್ಷಾ ವರದಿಯಲ್ಲಿ, ದೇಶದಲ್ಲಿ ಅದರಲ್ಲೂ ಪ್ರಮುಖವಾಗಿ ಕೇಂದ್ರದಲ್ಲಿ ಬಿಜೆಪಿಯ ಪ್ರಾಬಲ್ಯ ಇನ್ನೆಷ್ಟು ದಿನ ಮುಂದುವರಿಯಲಿದೆ ಎನ್ನುವ ಅಂಶ ಉಲ್ಲೇಖವಾಗಿದೆ. ಆಕ್ಸಿಸ್ ಮೈ ಇಂಡಿಯಾ ವರದಿಯ ಪ್ರಕಾರ, ಇನ್ನು ಎಂಟು ವರ್ಷ, ವಿಪಕ್ಷಗಳಿಗೆ ಸೋಲು ತಪ್ಪಿದ್ದಲ್ಲ ಎಂದು ಹೇಳಲಾಗಿದೆ. 2014ರಲ್ಲಿ ದೇಶಾದ್ಯಂತ ನರೇಂದ್ರ ಮೋದಿಯವರ ಹವಾ ಆರಂಭವಾಗಿತ್ತು. ಗುಜರಾತ್ ಮುಖ್ಯಮಂತ್ರಿಯಾಗಿದ್ದ ಮೋದಿ, ಪ್ರಧಾನಮಂತ್ರಿ ಹುದ್ದೆಗೆ ಆಯ್ಕೆಯಾದರು. ಅಲ್ಲಿಂದ ಸತತವಾಗಿ ಚುನಾವಣೆಯನ್ನು ಗೆದ್ದು ಬರುತ್ತಿರುವ ಬಿಜೆಪಿಗೆ, ಇನ್ನು ಎಂಟು ವರ್ಷಗಳ ಕಾಲ ಏನು ತೊಂದರೆಯಿಲ್ಲ. ಅಂದರೆ, 2034ರವರೆಗೆ ಬಿಜೆಪಿಯನ್ನು ಸೋಲಿಸಲು ವಿಪಕ್ಷಗಳಿಗೆ ಸಾಧ್ಯವಾಗುವುದಿಲ್ಲ ಎಂದು ಆಕ್ಸಿಸ್ ಮೈ ಇಂಡಿಯಾದ ಮುಖ್ಯಸ್ಥ ಮತ್ತು ಚುನಾವಣಾ ತಜ್ಞರೂ ಆಗಿರುವ ಪ್ರದೀಪ್ ಗುಪ್ತಾ ಭವಿಷ್ಯ ನುಡಿದಿದ್ದಾರೆ.

ಅಮೆರಿಕ 2 ಶೂಟೌಟ್, 25 ಮಂದಿ ಸಾವು

ವಾಷಿಂಗ್ಟನ್: ಅಮೆರಿಕದ ಹೊಂಡುರಾಸ್ ಮತ್ತು ಗ್ವಾಟೆಮಾಲಾದಲ್ಲಿ ಗುರುವಾರ ನಡೆದ 2 ಪ್ರತ್ಯೇಕ ಶೂಟೌಟ್‌ಗಳಲ್ಲಿ 25 ಮಂದಿ ಬಲಿಯಾಗಿದ್ದಾರೆ. ಇದರಲ್ಲಿ 6 ಪೊಲೀಸ್ ಅಧಿಕಾರಿಗಳೂ ಸೇರಿದ್ದಾರೆ. ಉತ್ತರ ಹೊಂಡುರಾಸ್‌ನ ಟ್ರುಜಿಲ್ಲೊ ಪುರಸಭೆಯಲ್ಲಿರುವ ಜಮೀನೊಂದರಲ್ಲಿ ಮೊದಲ ಗುಂಡಿನ ದಾಳಿ ನಡೆದಿದ್ದು, ಈ ಘಟನೆಯಲ್ಲಿ ಬಂದೂಕುಧಾರಿ ನಡೆಸಿದ ಶೂಟೌಟ್‌ನಲ್ಲಿ ಕನಿಷ್ಠ 19 ಜನರು ಬಲಿಯಾಗಿದ್ದಾರೆ. ಇನ್ನು 2ನೇ ಗುಂಡಿನ ದಾಳಿ ಗ್ವಾಟೆಮಾಲಾದ ಗಡಿಯ ಬಳಿಯ ಓಮೋವಾ ಪುರಸಭೆಯಲ್ಲಿ ನಡೆದಿದ್ದು, ಇಲ್ಲಿ ವಿಶೇಷ ಕಾರ್ಯಚರಣೆಯಲ್ಲಿ ತೊಡಗಿಸಿಕೊಂಡಿದ್ದ ಪೊಲೀಸ್ ಅಧಿಕಾರಿಗಳನ್ನು ಶಸ್ತ್ರಸಜ್ಜಿತ ದಾಳಿಕೋರರು ಗುರಿಯಾಗಿಸಿ ಶೂಟೌಟ್ ನಡೆಸಿದ್ದಾರೆ. ಕಮಾಂಡರ್ ಸೇರಿದಂತೆ ಅಧಿಕಾರಿಗಳ ಮೇಲೆ ಬಂದೂಕುಧಾರಿಗಳು ದಾಳಿ ನಡೆಸಿದ್ದು, 6 ಜನರು ಸಾವನ್ನಪ್ಪಿದ್ದಾರೆ.

{ಜಸ್ವಿಂದರ್ ಕೌರ್ }

ಭಾರತದ ಪೋಸ್ಟರ್‌ಗಳಲ್ಲೂ ಮಹಿಳೆಯರು ಸುರಕ್ಷಿತರಾಗಿಲ್ಲ! ಮುದುಕನೊಬ್ಬ ಪೋಸ್ಟರ್‌ನಲ್ಲಿರುವ ಹುಡುಗಿಯರು, ಪುಟ್ಟ ಬಾಲಕಿಯರ

ಚಿತ್ರಗಳನ್ನೂ ನೆಕ್ಕುತ್ತಿರುವುದನ್ನು ನೀವು ವಿಡಿಯೋ ಒಂದರಲ್ಲಿ ನೋಡಬಹುದು. ಇವರೆಲ್ಲ ಅತ್ಯಾಚಾರ ಮಾಡಬಲ್ಲ ವ್ಯಕ್ತಿಗಳು. ಅವಕಾಶ ಸಿಕ್ಕರೆ ಮೊದಲನೇ ಯತ್ನದಲ್ಲೇ ಪುಟ್ಟ ಬಾಲಕಿಯರ ಮೇಲೆ ಅತ್ಯಾಚಾರ ಮಾಡುತ್ತಾರೆ.

(ಬಿಹಾರದಲ್ಲಿ ಕಂಡುಬಂದ ಪೋಸ್ಟರ್ ಒಂದರಲ್ಲಿ ಕಂಡುಬಂದ ಹೆಣ್ಣುಮಕ್ಕಳ ಚಿತ್ರವನ್ನು ವ್ಯಕ್ತಿಯೊಬ್ಬನೊಬ್ಬ ನೆಕ್ಕುತ್ತಿರುವ ಚಿತ್ರವನ್ನು ನೋಡಿ ಪೋಸ್ಟ್ ಮಾಡಿದ್ದು)

ಖಾತೆ ಬಂದ್ ಮಾಡದಿದ್ದರೆ ಕೊಲೆ: ಬೆದರಿಕೆ ಮಾಹಿತಿ ನೀಡಿದ ಸಂಸ್ಥಾಪಕ ಅಭಿಜಿತ್ ದೀಪ್ಕೆ

ಭಾರತದಲ್ಲಿ ಕಾಕ್ರೋಚ್ ಜನತಾ ಪಾರ್ಟಿಯ ಎಕ್ಸ್ ಖಾತೆ ಬಂದ್, ವಿದೇಶದಲ್ಲಿ ಲಭ್ಯ

ಸಿಜೆಪಿ ಸಂಸ್ಥಾಪಕನಿಗೆ ಕೊಲೆ ಬೆದರಿಕೆ

ದೆಹಲಿ: 'ಕಾಕ್ರೋಚ್ ಜನತಾ ಪಾರ್ಟಿ' ಎಂಬ ಖಾತೆಯ ಸ್ಥಾಪಕ ಅಭಿಜಿತ್ ದೀಪ್ಕೆಗೆ ಕೊಲೆ ಬೆದರಿಕೆ ಬಂದಿದೆ. ಈ ಚಟುವಟಿಕೆ ನಿಲ್ಲಿಸದಿದ್ದರೆ ಕೊಲ್ಲುವುದಾಗಿ ಬಂದಿರುವ ಬೆದರಿಕೆ ಸಂದೇಶಗಳನ್ನು ದೀಪ್ಕೆ ಅವರೇ

ಸಾಮಾಜಿಕ ಜಾಲ ತಾಣದಲ್ಲಿ ಹಂಚಿಕೊಂಡಿದ್ದಾರೆ. 'ಖಾತೆ ಬಂದ್ ಮಾಡು, ಇಲ್ಲದಿದ್ದರೆ ನಿನ್ನನ್ನು ಮುಗಿಸಿಬಿಡುತ್ತೇವೆ' ಎಂದು ಬೆದರಿಕೆ ಹಾಕಲಾಗಿದೆ.

ಈ ಬೆಳವಣಿಗೆಯಿಂದ ದೀಪ್ಕೆ ಅವರ ಪೋಷಕರು ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಅತ್ತ, 'ಕಾಕ್ರೋಚ್ ಜನತಾ ಪಾರ್ಟಿ' ಹೆಸರಿನಲ್ಲಿ ಶುರುವಾದ ಈ ವಿಡಂಬನಾ ಖಾತೆಗಳು ದೇಶದ ಭದ್ರತೆಗೆ ಅಪಾಯಕಾರಿ ಎಂದು ಗುಪ್ತಚರ ಇಲಾಖೆ (ಐಬಿ) ಕೇಂದ್ರ ಸರಕಾರಕ್ಕೆ ವರದಿ ನೀಡಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿ, 'ಅರಾಜಕತೆಯಿಂದ ಪ್ರಜಾಪ್ರಭುತ್ವವನ್ನು ನಾಶ ಮಾಡಲು ಸಾಧ್ಯವಿಲ್ಲ' ಎಂದು ಹೇಳಿದೆ.

ಕಾಕ್ರೋಚ್ ಜನತಾ ಪಾರ್ಟಿಯ ಸೋಶಿಯಲ್ ಮೀಡಿಯಾ ಖಾತೆಗಳನ್ನು ಬಂದ್ ಮಾಡಿ. ನಿಮಗೆ ಹಣ ಸಿಗುತ್ತದೆ. ಬಿಜೆಪಿಗೆ ಸೇರಿಕೊಳ್ಳಿ. ಇಲ್ಲದಿದ್ದರೆ, ಅಮೆರಿಕದಲ್ಲಿ ನಿಮ್ಮನ್ನು ಕೊಲ್ಲಲಾಗುವುದು: ಇದು ಅಭಿಜಿತ್ ದೀಪ್ಕೆ ಅವರು 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಬೆದರಿಕೆ

ಸಂದೇಶಗಳಲ್ಲಿ ಒಂದು. ಈ ಪಾರ್ಟಿ ಶುರು ಮಾಡಿದಾಗಿನಿಂದ ಫೋನ್ ಕರೆಗಳು ಮತ್ತು ಸೋಶಿಯಲ್ ಮೀಡಿಯಾ ಮೂಲಕ ನಿರಂತರವಾಗಿ ಬೆದರಿಕೆಗಳು ಬರುತ್ತಿವೆ ಎಂದು ಅಭಿಜಿತ್ ಹೇಳಿದ್ದಾರೆ. ವಿಡಿಯೋ ರೂಪದಲ್ಲಿ ಬಂದಿದ್ದ ಬೆದರಿಕೆ ಸಂದೇಶವನ್ನೂ ಅವರು ಶೇರ್ ಮಾಡಿದ್ದಾರೆ.

ಮಗನ ಬಗ್ಗೆ ಕಳವಳ: ಮಧ್ಯಪ್ರದೇಶ ಮೂಲದವರಾದ ಅಭಿಜಿತ್ ಸದ್ಯ ಬೋಸ್ಟನ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದಾರೆ. ಅವರ ಪೋಷಕರಾದ ಭಗವಾನ್ ಮತ್ತು ಅನಿತಾ ದೀಪ್ಕೆ ಅವರು ಮಗನ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. 'ಮಗನ ಈ ಕೆಲಸ ಆತನನ್ನು ಸಂಕಷ್ಟಕ್ಕೆ ಸಿಲುಕಿಸಬಹುದು, ಅವನನ್ನು ಬಂಧಿಸಬಹುದು' ಎಂದು ಪೋಷಕರು ಆತಂಕಗೊಂಡಿದ್ದಾರೆ.

ರಾಷ್ಟ್ರೀಯ ಭದ್ರತಾ ಭೀತಿ: ಎಕ್ಸ್ ಖಾತೆಗೆ ನಿರ್ಬಂಧ

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಹೇಳಿಕೆಗೆ ವಿರೋಧವಾಗಿ ಕಳೆದವಾರ ಆರಂಭವಾದ ಕಾಕ್ರೋಚ್ ಜನತಾ ಪಾರ್ಟಿ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಸದ್ದು ಮಾಡುತ್ತಿದ್ದು, ಇದಕ್ಕೆ ಬ್ರೇಕ್ ಹಾಕಲು ಭಾರತದಲ್ಲಿ ಕಾಕ್ರೋಚ್ ಜನತಾ ಪಕ್ಷದ ಎಕ್ಸ್ ಖಾತೆಯನ್ನು ತಡೆಹಿಡಿಯಲಾಗಿತ್ತು. ಈ ಖಾತೆ ರಾಷ್ಟ್ರೀಯ ಭದ್ರತೆಗೆ ಬೆದರಿಕೆ ಎಂದು ಕೇಂದ್ರ ಸರಕಾರ ಆರೋಪಿಸಿದ ನಂತರ ಎಕ್ಸ್ ಖಾತೆಯನ್ನು ಗುರುವಾರ ಸ್ಥಗಿತಗೊಳಿಸಲಾಗಿತ್ತು. ಗುಪ್ತಚರ ಇಲಾಖೆಯಿಂದ ಮಾಹಿತಿಗಳನ್ನು ಪಡೆದ ನಂತರ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಮಾಹಿತಿ ತಂತ್ರಜ್ಞಾನ ಕಾಯ್ದೆ, 2000ರ ಸೆಕ್ಷನ್ 69ಎ ಅಡಿಯಲ್ಲಿ ಕಾಕ್ರೋಚ್ ಜನತಾ ಪಕ್ಷದ ಎಕ್ಸ್ ಖಾತೆಯನ್ನು ಸ್ಥಗಿತಗೊಳಿಸಲು ಎಕ್ಸ್‌ಗೆ ನಿರ್ದೇಶನ ನೀಡಿದೆ ಎಂದು ಹಿರಿಯ ಸರ್ಕಾರಿ ಅಧಿಕಾರಿಯೊಬ್ಬರು ದಿ ಇಂಡಿಯನ್ ಎಕ್ಸ್‌ಪ್ರೆಸ್ ಗೆ ತಿಳಿಸಿದ್ದಾರೆ. **ಕಳವಳಕ್ಕೆ ಕಾರಣವೇನು?:** ಈ ಖಾತೆಯು ಸಮಾಜದಲ್ಲಿ ಉದ್ರೇಕ ಉಂಟುಮಾಡುವಂತಹ ವಿಷಯಗಳನ್ನು ಪೋಸ್ಟ್ ಮಾಡುತ್ತಿದೆ. ಇದು ದೇಶದ ರಾಷ್ಟ್ರೀಯ ಭದ್ರತೆಯನ್ನು ಅಪಾಯಕ್ಕೆ ಸಿಲುಕಿಸಬಹುದು ಎಂದು ಐಬಿ ಹೇಳಿದೆ. ಈ ಖಾತೆಯ ವಿಡಂಬನಾತ್ಮಕ ಪೋಸ್ಟ್‌ಗಳು ದೇಶದ ಯುವಪೀಳಿಗೆಯಲ್ಲಿ ಅತ್ಯಂತ ವೇಗವಾಗಿ ಜನಪ್ರಿಯತೆ ಗಳಿಸುತ್ತಿರುವುದು ಸರ್ಕಾರದ ಕಳವಳವನ್ನು ಮತ್ತಷ್ಟು ಹೆಚ್ಚಿಸಿದೆ.

ಸಿಜೆಪಿಯಲ್ಲಿ ಇರುವವರು ಶೇ.80 ಬಾಂಗ್ಲಾ-ಪಾಕಿಸ್ತಾನದವರು?

ಸಿಜೆಪಿ ಇನ್ಸ್ಟಾ ಖಾತೆಯಲ್ಲಿ ಹತ್ತಿರಹತ್ತಿ 2 ಕೋಟಿ ಹಿಂಬಾಲಕರಿದ್ದಾರೆ. ಇದರಲ್ಲಿ ಶೇ.80 ಮಂದಿ ಬಾಂಗ್ಲಾದೇಶ, ಪಾಕಿಸ್ತಾನಕ್ಕೆ ಸೇರಿದವರು ಎಂದು ಹಲವರು ಹೇಳಿದ್ದಾರೆ. ಅದಕ್ಕೆ ಪೂರಕವಾಗಿ ಹಿಂಬಾಲಕರ ಖಾತೆಗಳ ಸ್ಕ್ರೀನ್‌ಶಾಟ್‌ಗಳನ್ನು ಹಾಕಿದ್ದಾರೆ. ಇದಕ್ಕೆ ಉತ್ತರ ನೀಡಿರುವ ಅಭಿಜಿತ್ ದೀಪ್ಕೆ, ಶೇ.94 ಮಂದಿ ಭಾರತೀಯರೇ ಇದರಲ್ಲಿದ್ದಾರೆ. ಬಾಕಿ ಕೆಲವರು ಮಾತ್ರ ಇತರೆ ದೇಶಗಳಿಗೆ ಸೇರಿದವರು ಎಂಬ ಉತ್ತರಿಸಿದ್ದಾರೆ.

ಕಾಕ್ರೋಚ್ ಜನತಾ ಪಾರ್ಟಿ ಹುಟ್ಟಿದ್ದೇಕೆ?

ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ನ್ಯಾಯಾಲಯದ ವಿಚಾರಣೆಯೊಂದರಲ್ಲಿ ದೇಶದ ನಿರುದ್ಯೋಗಿ ಯುವಕರನ್ನು ಜಿರಳೆಗಳಿಗೆ ಹೋಲಿಸಿ ವಿವಾದಾತ್ಮಕ ಹೇಳಿಕೆ ನೀಡಿದ್ದರು ಎನ್ನಲಾಗಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಮೇ 16ರಂದು ಈ ವೈರಲ್ ರಾಜಕೀಯ ವಿಡಂಬನಾ ಚಳುವಳಿ 'ಸಿಜೆಪಿ' ಆರಂಭವಾಯಿತು. ಅಮೆರಿಕದ ಬೋಸ್ಟನ್ ವಿಶ್ವವಿದ್ಯಾಲಯದಲ್ಲಿ ಸಾರ್ವಜನಿಕ ಸಂಪರ್ಕ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿರುವ 30 ವರ್ಷದ ಅಭಿಷೇಕ್ ದೀಪ್ಕೆ ಇದನ್ನು ಪ್ರಾರಂಭಿಸಿದರು.

ಈ ಘಟನೆ ನಡೆದ ನಂತರ ತಮಗೆ ನಿದ್ದೆಯೇ ಬರುತ್ತಿಲ್ಲ ಎಂದು ಸ್ಥಳೀಯ ಮಾಧ್ಯಮಗಳೊಂದಿಗೆ ಅವರು ಹೇಳಿಕೊಂಡಿದ್ದಾರೆ. ಇದೇ ವೇಳೆ, ಈ ಖಾತೆಗಳ ಹಿಂದೆ ಭಾರತವನ್ನು ಅಸ್ಥಿರಗೊಳಿಸುವ ಪ್ರಯತ್ನವಿದೆ ಎಂದು ಗುಪ್ತಚರ ಇಲಾಖೆ ಕೇಂದ್ರ ಸರಕಾರಕ್ಕೆ ಮಾಹಿತಿ ನೀಡಿದೆ ಎನ್ನಲಾಗಿದೆ. ಈ ವರದಿ ಆಧರಿಸಿ 'ಕಾಕ್ರೋಚ್ ಜನತಾ ಪಾರ್ಟಿ'ಯ ಎಕ್ಸ್ ಖಾತೆಯನ್ನು ನಿರ್ಬಂಧಿಸಲಾಗಿದೆ.

ಯುದ್ಧದ ಪರಿಣಾಮ ತಡೆಯಲು ಸಚಿವರಿಗೆ ಮೋದಿ ಆದೇಶ

ದೆಹಲಿ: ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆಯ ಪರಿಣಾಮ ಜನರ ಮೇಲೆ ಹೆಚ್ಚು ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಸಂಪುಟ ಸಚಿವರಿಗೆ ಕರೆ ನೀಡಿದ್ದಾರೆ. 5 ರಾಷ್ಟ್ರಗಳ ಪ್ರವಾಸ ಮುಗಿಸಿ ಭಾರತಕ್ಕೆ ಹಿಂದಿರುಗಿದ ಬೆನ್ನಲ್ಲೇ ಗುರುವಾರ ಸಂಜೆ ಸೇವಾ ತೀರ್ಥದಲ್ಲಿ ತಮ್ಮ ಮಂತ್ರಿಮಂಡಲದ ಎಲ್ಲಾ ಸಚಿವರೊಂದಿಗೆ ಸುದೀರ್ಘ ಸಭೆ ನಡೆಸಿದರು. ಈ ಸಭೆಯಲ್ಲಿ ಮಧ್ಯಪ್ರಾಚ್ಯದ ಬಿಕ್ಕಟ್ಟಿನಿಂದ ಜನಸಮೂಹದ ಮೇಲೆ ಬೀರುತ್ತಿರುವ ಸಂಭಾವ್ಯ ಪರಿಣಾಮ ಹಾಗೂ ವಿಕಸಿತ ಭಾರತ ನಿರ್ಮಾಣಕ್ಕೆ ಇರುವ ಸವಾಲುಗಳು ಸೇರಿದಂತೆ ಅನೇಕ ವಿಷಯಗಳ ಕುರಿತು ಚರ್ಚೆ ನಡೆಸಿದ್ದಾರೆ.

ಕೇಂದ್ರ ಸರ್ಕಾರದ 2047ರ ವಿಕಸಿತ ಭಾರತ ನಿರ್ಮಾಣ ಗುರಿ ಸಾಧಿಸಲು ಬಾಕಿಯಿರುವ ಕೆಲಸಗಳನ್ನು ಆದಷ್ಟು ಬೇಗ ಮುಗಿಸಬೇಕು ಎಂದು ಪ್ರಧಾನಿ ತಮ್ಮ ಮಂತ್ರಿಮಂಡಲದ ಎಲ್ಲಾ ಸಚಿವರಿಗೆ ಸೂಚಿಸಿದ್ದಾರೆ. ವಿಕಸಿತ ಭಾರತ ಎನ್ನುವುದು ಕೇವಲ ಘೋಷಣೆಯಾಗಬಾರದು, 2047ರ ವಿಕಸಿತ ಭಾರತ ಗುರಿ ತಲುಪಲು ಬಾಕಿಯಿರುವ ಎಲ್ಲಾ ಕೆಲಸಗಳನ್ನು ಬೇಗ ಮುಗಿಸಬೇಕು ಎಂದಿದ್ದಾರೆ. ಮಧ್ಯಪ್ರಾಚ್ಯದ ಯುದ್ಧದ ಕುರಿತು ಮಾತನಾಡಿರುವ ಮೋದಿ, ಈ ಸಂಕಷ್ಟದ ಸಮಯವನ್ನು ಹೇಗೆ ನಿಭಾಯಿಸಬೇಕು, ತೈಲ ಆಮದು ಮಾಡಿಕೊಳ್ಳಲು ಯಾವ ಪರ್ಯಾಯ ವ್ಯವಸ್ಥೆ ಕಂಡುಕೊಳ್ಳಬೇಕು ಹಾಗೂ ಯುದ್ಧದ ಪರಿಣಾಮ ಜನರ ಮೇಲೆ ಬೀರದಂತೆ ನೋಡಿಕೊಳ್ಳಬೇಕು ಎಂದಿದ್ದಾರೆ. ಸಭೆಯಲ್ಲಿ 6ಕ್ಕೂ ಸಚಿವಾಲಯಗಳು ವರದಿ ನೀಡಿವೆ.

ಸರ್ವೋಚ್ಚ ನ್ಯಾಯಪೀಠಕ್ಕೆ ದೆಹಲಿ ಪೊಲೀಸ್ ಪರ ವಕೀಲ ರಾಜು ಪ್ರಶ್ನೆ

ವಿಚಾರಣೆ ವಿಳಂಬವಾದರೆ ಜಾಮೀನು ನೀಡಬಹುದು: ತೀರ್ಪಿಗೆ ವಿರೋಧ

ವಿಚಾರಣೆ ವಿಳಂಬವಾದರೆ ಕಸಬ್, ಹಫೀಜ್‌ಗೂ ಜಾಮೀನು ಸಿಗುತ್ತಾ?

ದೆಹಲಿ: 2020ರ ದೆಹಲಿ ಗಲಭೆಗೆ ಸಂಬಂಧಿಸಿದಂತೆ ತಸ್ಲೀಮ್ ಅಹ್ಮದ್ ಮತ್ತು ಖಾಲಿದ್ ಸೈಫಿ ಎಂಬಿಬ್ಬರು ಆರೋಪಿಗಳಿಗೆ ಸರ್ವೋಚ್ಚ ನ್ಯಾಯಾಲಯ ಮಧ್ಯಂತರ ಜಾಮೀನು ನೀಡಿದೆ. ಇದೇ ವೇಳೆ ಯುಎಪಿಎ (ಕಾನೂನುಬಾಹಿರ ಚಟುವಟಿಕೆಗಳ ತಡೆ) ಕಾಯ್ದೆಯಡಿ ಬಂಧಿತರಾದವರಿಗೂ, ವಿಚಾರಣೆ ತಡವಾಯಿತು ಎಂಬ ಕಾರಣಕ್ಕೆ ಜಾಮೀನು ನೀಡಬಹುದೇ ಎಂಬ ಪ್ರಶ್ನೆಯನ್ನು ನ್ಯಾ.ಅರವಿಂದ್ ಕುಮಾರ್-ನ್ಯಾ.ಪಿ.ಬಿ.ವರಲೆ ಅವರ ಪೀಠವು ವಿಸ್ತೃತಪೀಠಕ್ಕೆ ವರ್ಗಾಯಿಸಿದೆ. ಸೋಮವಾರವಷ್ಟೇ ಮಾದಕವಸ್ತು ಸಾಗಣೆ ಪ್ರಕರಣದಲ್ಲಿ ಜಮ್ಮುಕಾಶ್ಮೀರದ ಸೈಯದ್ ಅಂದ್ರಾಬಿಗೆ ನ್ಯಾ.ಬಿ.ವಿ.ನಾಗರತ್ನ, ಉಜ್ಜಲ್ ಭುಯಾನ್ ಅವರಿದ್ದ ಪೀಠವು ಜಾಮೀನು ನೀಡಿತ್ತು. ಈ ವೇಳೆ ವಿಚಾರಣೆ ತಡವಾದರೆ ಯುಎಪಿಎ ಕಾಯ್ದೆಯಡಿಯೂ ಆರೋಪಿಗಳಿಗೆ ಜಾಮೀನು ನೀಡಬಹುದು, ಇದು ನಾಗರಿಕನ ಹಕ್ಕಿನ ಪ್ರಶ್ನೆ ಎಂದು ಪೀಠ ಹೇಳಿತ್ತು.

ಪೀಠದ ಈ ಹೇಳಿಕೆ ಈಗ ಭಾರೀ ಚರ್ಚೆಗೆ ಕಾರಣವಾಗಿದೆ. ದೀರ್ಘಕಾಲದ ಸೆರೆವಾಸ ಅಥವಾ ವಿಚಾರಣೆಯಲ್ಲಿ ವಿಳಂಬವಾಗಿದೆ ಎಂಬ ಕಾರಣದಿಂದ ಯುಎಪಿಎ ಕಾಯ್ದೆಯಡಿಯಲ್ಲಿ ಜಾಮೀನು

ಪಡೆಯಲು ಅವಕಾಶ ನೀಡಲಾಗಲ್ಲ ಎಂದು ದೆಹಲಿ ಪೊಲೀಸರ ಪರ ವಕೀಲ ರಾಜು ವಾದಿಸಿದರು. 26/11 ಮುಂಬೈ ಭಯೋತ್ಪಾದಕ ದಾಳಿಯ ಅಪರಾಧಿ, ಉಗ್ರ ಅಜ್ಮಲ್ ಕಸಬ್ ಅಥವಾ ಪಾಕಿಸ್ತಾನ ಮೂಲದ ಲಷ್ಕರ್-ಎ-ತೊಯ್ಬಾ ಭಯೋತ್ಪಾದಕ ಹಫೀಜ್ ಸಯೀದ್‌ರಂತಹ ವ್ಯಕ್ತಿಗಳು ಸಹ ಇದೇ ರೀತಿಯ ಆಧಾರದ ಮೇಲೆ ಜಾಮೀನು ಪಡೆಯಲು ಸಾಧ್ಯವಿದೆಯೇ ಎಂದು ಪ್ರಶ್ನಿಸಿದರು.

ಯುಎಪಿಎ ಅಡಿಯಲ್ಲಿ ಕಟ್ಟಾ ಅಪರಾಧಿಗಳಿಗೆ ಜಾಮೀನು ನಿರಾಕರಣೆಯನ್ನು ಈ ನ್ಯಾಯಾಲಯವು ಹಲವಾರು ತೀರ್ಪುಗಳಲ್ಲಿ ಎತ್ತಿಹಿಡಿದಿದೆ. ಈ ಪ್ರಕರಣಗಳನ್ನೆಲ್ಲ ಸಾಮಾನ್ಯ ನಿಯಮಗಳಡಿ ನೋಡಲು ಸಾಧ್ಯವಿಲ್ಲ. ಪ್ರತಿಯೊಂದನ್ನೂ ಪ್ರತ್ಯೇಕವಾಗಿಯೇ ಗಮನಿಸಬೇಕು ಎಂದು ವಕೀಲ ಎಎಸ್‌ಜಿ ರಾಜು ವಾದಿಸಿದರು.

ಪಾಕ್‌ಗೆ ಮಾಹಿತಿ: ವ್ಯಕ್ತಿ ಬಂಧನ

ಚಂಡೀಗಢ: ಪಂಜಾಬ್‌ನ ಪಠಾಣ್‌ಕೋಟ್‌ನ ಪೊಲೀಸರು ಶಂಕಿತ ಬೇಹುಗಾರಿಕೆ ಜಾಲವನ್ನು ಭೇದಿಸಿದ್ದಾರೆ. ಭಾರತೀಯ ಸೇನೆ ಮತ್ತು ಅರೆಸೈನಿಕ ಪಡೆಗಳ ಚಲನವಲನಗಳ ಬಗ್ಗೆ ಸೂಕ್ಷ್ಮ ಮಾಹಿತಿಯನ್ನು ಪಾಕಿಸ್ತಾನದ ಹ್ಯಾಂಡ್ಲರ್‌ಗಳೊಂದಿಗೆ ಹಂಚಿಕೊಳ್ಳುತ್ತಿದ್ದ ವ್ಯಕ್ತಿಯನ್ನು ಬಂಧಿಸಿದ್ದಾರೆ. ಚಕ್ ಧಾರಿವಾಲ್ ಗ್ರಾಮದ ನಿವಾಸಿ ಬಲ್ಜೀತ್ ಸಿಂಗ್ ಅಲಿಯಾಸ್ ಬಿಟ್ಟು ಬಂಧಿತ ಆರೋಪಿ. ಸೇನೆ ಮತ್ತು ಅರೆಸೈನಿಕ ಪಡೆಗಳ ಚಲನವಲನಗಳ ಮೇಲೆ ಕಣ್ಣಿಡಲು ರಾಷ್ಟ್ರೀಯ ಹೆದ್ದಾರಿ -44ರ ಪಠಾಣ್‌ಕೋಟ್-ಜಮ್ಮು ಪ್ರದೇಶದ ಸೇತುವೆಯ ಬಳಿಯ ಅಂಗಡಿಯೊಂದರಲ್ಲಿ ಸಿಸಿಟಿವಿ ಕ್ಯಾಮೆರಾವನ್ನು ಈತ ಅಳವಡಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಪಾಕಿಸ್ತಾನದಲ್ಲಿರುವ ವ್ಯಕ್ತಿಗಳಿಗೆ ಎಲೆಕ್ಟ್ರಾನಿಕ್ ರೂಪದಲ್ಲಿ ಮಾಹಿತಿಯನ್ನು ರವಾನಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ದಲ್ಜಿಂದರ್ ಸಿಂಗ್ ಧಿಲ್ಲೋನ್ ತಿಳಿಸಿದ್ದಾರೆ. ವಿಚಾರಣೆಯ ಸಮಯದಲ್ಲಿ, ಸಿಂಗ್ ಜನವರಿಯಲ್ಲಿ ಸುಜನ್ಪುರ ಬಳಿಯ ಹೆದ್ದಾರಿಯಲ್ಲಿರುವ ಅಂಗಡಿಯಲ್ಲಿ ಇಂಟರ್ನೆಟ್ ಆಧಾರಿತ ಸಿಸಿಟಿವಿ ಕ್ಯಾಮೆರಾವನ್ನು ಅಳವಡಿಸಿದ್ದಾಗಿ ಒಪ್ಪಿಕೊಂಡಿದ್ದಾನೆ.

ಬಂಗಾಳದಲ್ಲಿ ನುಸುಳುಕೋರರನ್ನು ನ್ಯಾಯಾಲಯಕ್ಕೆ ಒಪ್ಪಿಸಲ್ಲ: ಸುವೇಂದು

ನುಸುಳುಕೋರರು ನೇರ ಗಡಿಪಾರು

ಕೋಲ್ಕತಾ: ಪ.ಬಂಗಾಳದಲ್ಲಿ ಬಂಧನಕ್ಕೊಳಗಾಗುವ ಬಾಂಗ್ಲಾದೇಶದ ನುಸುಳುಕೋರರನ್ನು ಇನ್ನು ಮುಂದೆ ನ್ಯಾಯಾಲಯಕ್ಕೆ ಹಾಜರುಪಡಿಸುವ ಬದಲಾಗಿ, ಗಡಿಪಾರು ಮಾಡಲು ನೇರವಾಗಿ ಗಡಿಭದ್ರತಾ ಪಡೆಗೆ ಹಸ್ತಾಂತರಿಸಲಾಗುವುದು ಎಂದು ಪಶ್ಚಿಮ ಬಂಗಾಳ

ಮುಖ್ಯಮಂತ್ರಿ ಸುವೇಂದು ಅಧಿಕಾರಿ ಗುರುವಾರ (ಮೇ 21) ತಿಳಿಸಿದ್ದಾರೆ. ರಾಜ್ಯದಲ್ಲಿ ಬುಧವಾರದಿಂದಲೇ ಜಾರಿಗೆ ಬಂದಿರುವ ನೂತನ ನಿಯಮದ ಅನ್ವಯ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಹೌರಾ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪ್ರಮುಖ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಗಳು, ಈ ಕುರಿತು ಈಗಾಗಲೇ ಪೊಲೀಸ್ ಕಮಿಷನರ್ ಮತ್ತು ರೈಲ್ವೆ ರಕ್ಷಣಾ ಪಡೆಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ ಎಂದರು.

'ಪತ್ತೆ ಹಚ್ಚಿ, ಅಳಿಸಿ, ಗಡೀಪಾರು ಮಾಡಿ': ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪತ್ತೆ ಹಚ್ಚಿ, ಹೆಸರನ್ನು ಅಳಿಸಿ ಮತ್ತು ಗಡಿಪಾರು ಮಾಡಿ ವಿಶೇಷ ಕಾರ್ಯವಿಧಾನದ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸುವೇಂದು ಅಧಿಕಾರಿ ವಿವರಿಸಿದ್ದಾರೆ. ಇದು ದೇಶಕ್ಕೆ ಸರಿಯಾದ ದಾಖಲೆಗಳಿಲ್ಲದೆ ಪ್ರವೇಶಿಸುವ ವಿದೇಶಿ ಪ್ರಜೆಗಳ ವಿರುದ್ಧ ಇದುವರೆಗೆ ಅನುಸರಿಸಲಾಗುತ್ತಿದ್ದ ಸಾಂಪ್ರದಾಯಿಕ ಕಾನೂನು ಪ್ರಕ್ರಿಯೆಯಿಂದ ದೊಡ್ಡ ಮಟ್ಟದ ಬದಲಾವಣೆಯಾಗಿದೆ. ಹೊಸ ನಿಯಮದ ಪ್ರಕಾರ, ಅಕ್ರಮ ವಲಸಿಗರನ್ನು ನ್ಯಾಯಾಲಯಕ್ಕೆ ಕಳುಹಿಸುವುದಿಲ್ಲ. ಬದಲಿಗೆ ಬಾಂಗ್ಲಾದೇಶ ಗಡಿಯಲ್ಲಿರುವ ಬಿಎಸ್‌ಎಫ್ ಚೌಕಿಗಳಿಗೆ ನೇರವಾಗಿ ಒಪ್ಪಿಸಲಾಗುವುದು, ಎಂದು ಸುವೇಂದು ಅಧಿಕಾರಿ ಹೇಳಿದರು.

ಸಾಮಾನ್ಯವಾಗಿ ವಿದೇಶಿ ನಾಗರಿಕರು ಮಾನ್ಯ ದಾಖಲೆಗಳಿಲ್ಲದೆ ಭಾರತಕ್ಕೆ ಪ್ರವೇಶಿಸಿದರೆ, ಅವರನ್ನು ವಿದೇಶೀಯರ ಕಾಯ್ದೆ 1946ರ ಸೆಕ್ಷನ್ 14(ಎ) ಅಡಿಯಲ್ಲಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುತ್ತದೆ. ಆದರೆ ಹೊಸ ಕ್ರಮದಲ್ಲಿ ಈ ಪ್ರಕ್ರಿಯೆಯನ್ನು ಬಿಟ್ಟು ನೇರ ಹಸ್ತಾಂತರಕ್ಕೆ ಆದ್ಯತೆ ನೀಡಲಾಗಿದೆ.

ಅಸ್ಸಾಂನಲ್ಲೂ ಇದೇ ಮಾದರಿ: ಪಕ್ಕದ ಅಸ್ಸಾಂ ರಾಜ್ಯದಲ್ಲೂ ಇದೇ ರೀತಿಯ ಕಠಿಣ ನೀತಿಯನ್ನು ಅನುಸರಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ತಿಳಿಸಿದ್ದು, ವಿದೇಶಿಗರೆಂದು ಘೋಷಿಸಲ್ಪಟ್ಟವರನ್ನು ದೀರ್ಘಕಾಲ ಬಂಧನ ಕೇಂದ್ರಗಳಲ್ಲಿ ಇಡುವ ಬದಲು ನೇರವಾಗಿ ಗಡಿಪಾರು ಮಾಡುವ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ಮಾರುಕಟ್ಟೆ ದುರುಪಯೋಗ ಮಾಡುತ್ತಿದ್ದಾರಾ ಟ್ರಂಪ್?

ಆರಂಭದಲ್ಲಿ ಜಾಗತಿಕ ಸುಂಕ ಸಮರ, ಆ ಬಳಿಕ ಯುದ್ಧದ ಆತಂಕಕಾರಿ ನಿರ್ಧಾರಗಳು, ಇವೆಲ್ಲದರ ನಡುವೆ ತಮ್ಮದೇ 'ಟ್ರುಥ್ ಸೋಷಿಯಲ್' ಜಾಲತಾಣದಲ್ಲಿ ಮಾಡುವ ಒಂದೊಂದು ಪೋಸ್ಟ್‌ಗಳು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜಾಗತಿಕ ಮಾರುಕಟ್ಟೆಯೊಂದಿಗೆ ಆಟವಾಡುತ್ತಿದ್ದಾರಾ ಎಂಬ ಅನುಮಾನಗಳಿಗೆ ಕಾರಣವಾಗಿದೆ. ಎರಡನೇ ಬಾರಿಗೆ ಶ್ವೇತಭವನದ ಗದ್ದುಗೆ ಏರಿದ ಬೆನ್ನಲ್ಲೇ ಟ್ರಂಪ್ ಅವರ ವೈಯಕ್ತಿಕ ಹೂಡಿಕೆಗಳು ಮತ್ತು ಸಾರ್ವಜನಿಕ ಹೇಳಿಕೆಗಳು ಇನ್‌ಸೈಡರ್ ಟ್ರೇಡಿಂಗ್ ಹಾಗೂ ಮಾರುಕಟ್ಟೆ ದುರುಪಯೋಗದ ವಿವಾದಕ್ಕೊಳಗಾಗಿವೆ.

ಏನಿದು ಇನ್‌ಸೈಡರ್ ಟ್ರೇಡಿಂಗ್?

ಕಂಪನಿಯೊಂದರ ಅಥವಾ ಸರಕಾರದ ಅತ್ಯಂತ ಗೌಪ್ಯ ಹಾಗೂ ಆಂತರಿಕ ನಿರ್ಧಾರಗಳು ಸಾರ್ವಜನಿಕರಿಗೆ ತಿಳಿಯುವ ಮುನ್ನವೇ, ಆ ರಹಸ್ಯ ಮಾಹಿತಿಯನ್ನು ಬಳಸಿಕೊಂಡು ಷೇರುಗಳನ್ನು ಖರೀದಿಸುವುದು ಅಥವಾ ಮಾರಾಟ ಮಾಡುವುದೇ ಇನ್‌ಸೈಡರ್ ಟ್ರೇಡಿಂಗ್. ಇದು ಜಾಗತಿಕವಾಗಿ ಸಂಪೂರ್ಣ ಕಾನೂನುಬಾಹಿರ. ಅಧಿಕಾರ ಅಥವಾ ಪ್ರಭಾವ ಬಳಸಿ ಕೃತಕವಾಗಿ ಷೇರುಗಳ ಬೆಲೆಯನ್ನು ಏರಿಸುವುದು ಅಥವಾ ಇಳಿಸುವುದು ಮಾರುಕಟ್ಟೆಯ ದುರುಪಯೋಗ ಎನಿಸಿಕೊಳ್ಳುತ್ತದೆ. ಟ್ರಂಪ್ ತಮ್ಮ ಹೇಳಿಕೆಗಳ ಮೂಲಕ ಇದನ್ನೇ ಮಾಡುತ್ತಿದ್ದಾರೆ ಎಂಬುದು ಸದ್ಯದ ಗಂಭೀರ ಆರೋಪ.

ಟ್ರಂಪ್ ಮಾಡುತ್ತಿರುವುದೇನು?

ಮೇ 2026ರಲ್ಲಿ ಬಿಡುಗಡೆಯಾದ ಅಧಿಕೃತ ಯುಎಸ್ ಎಥಿಕ್ ವರದಿಯ ಪ್ರಕಾರ, ಟ್ರಂಪ್ ಅವರ ಹೆಸರಿನಲ್ಲಿರುವ ಖಾತೆಗಳು 2026ರ ಮೊದಲ ಮೂರೇ ತಿಂಗಳಲ್ಲಿ (ಜನವರಿ - ಮಾರ್ಚ್) ಬರೋಬ್ಬರಿ 3,642 ಕ್ಕೂ ಹೆಚ್ಚು ಷೇರು ವಹಿವಾಟುಗಳನ್ನು ನಡೆಸಿವೆ. ಈ ವಹಿವಾಟಿನ ಒಟ್ಟು ಮೌಲ್ಯ ಸುಮಾರು 220 ಮಿಲಿಯನ್ ಡಾಲರ್‌ನಿಂದ (2,115 ಕೋಟಿ ರು.) 750 ಮಿಲಿಯನ್ ಡಾಲರ್ (7,212 ಕೋಟಿ ರು.) ಇರಬಹುದು ಎಂದು ಅಂದಾಜಿಸಲಾಗಿದೆ. ಸರಕಾರದ ನೀತಿಗಳಿಂದ ನೇರ ಲಾಭ ಪಡೆಯುವ ಎನ್‌ವಿಡಿಯಾ, ಆ್ಯಪಲ್, ಮೈಕ್ರೋಸಾಫ್ಟ್, ಅಮೇಜಾನ್, ಬೋಯಿಂಗ್, ಎಲಿ ಲಿಲ್ಲಿಯಂತಹ ಕಂಪನಿಗಳ ಷೇರುಗಳನ್ನು ಟ್ರಂಪ್ ಪೋರ್ಟ್‌ಫೋಲಿಯೋ ಭಾರೀ ಪ್ರಮಾಣದಲ್ಲಿ ಖರೀದಿ-ಮಾರಾಟ ಮಾಡಿದೆ.

ಲಾಭ ಮಾಡಿಕೊಂಡಿದ್ದು ಹೇಗೆ?

1. ಇರಾನ್ ದಾಳಿ ಮುಂದೂಡಿಕೆ ಮತ್ತು ತೈಲ ಬೆಟ್ಟಿಂಗ್

ಇರಾನ್ ದೇಶದ ಇಂಧನ ಮೂಲಗಳ ಮೇಲಿನ ಜಂಟಿ ದಾಳಿಯನ್ನು ಮುಂದೂಡುತ್ತಿರುವುದಾಗಿ ಟ್ರಂಪ್ ಟ್ರುಥ್ ಸೋಶಿಯಲ್‌ನಲ್ಲಿ ಪೋಸ್ಟ್ ಮಾಡುವ ಕೆಲವೇ ನಿಮಿಷಗಳ ಮೊದಲು ತೈಲ ಮಾರುಕಟ್ಟೆಯಲ್ಲಿ ಭಾರೀ ಪ್ರಮಾಣದ ಬೆಟ್ಟಿಂಗ್ ನಡೆದಿತ್ತು. ಈ ಮುಂಚಿತ ಮಾಹಿತಿ ಸೋರಿಕೆಯಿಂದ ಕೆಲವು ಆಪ್ತ ಟ್ರೇಡಿಂಗ್ ಸಂಸ್ಥೆಗಳು ಕೋಟ್ಯಂತರ ಡಾಲರ್ ಲಾಭ ಮಾಡಿಕೊಂಡಿವೆ. ಸದ್ಯ ಯುಎಸ್ ಮಾರುಕಟ್ಟೆ ನಿಯಂತ್ರಕ ಸಂಸ್ಥೆ (ಸಿಎಫ್‌ಟಿಸಿ) ಇದರ ತನಿಖೆ ನಡೆಸುತ್ತಿದೆ.

2. ಖರೀದಿಸಲು ಇದು ಸೂಕ್ತ ಸಮಯ!

ಜಾಗತಿಕ ಸುಂಕಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸುವ ಪ್ರಮುಖ ನಿರ್ಧಾರವನ್ನು ಪ್ರಕಟಿಸುವ ಕೆಲವೇ ಗಂಟೆಗಳ ಮೊದಲು, ಟ್ರಂಪ್ ಇದು ಖರೀದಿಸಲು ಅತ್ಯುತ್ತಮ ಸಮಯ ಎಂದು ಪೋಸ್ಟ್ ಮಾಡಿದ್ದರು. ನಿರ್ಧಾರ ಹೊರಬಿದ್ದ ತಕ್ಷಣ ಜಾಗತಿಕ ಷೇರು ಮಾರುಕಟ್ಟೆಗಳು ಶೇ.10ರಷ್ಟು ಏರಿದ್ದವು.

3. ಯುದ್ಧದ ಸಮಯದಲ್ಲೂ ಲಾಭ!

ಮಾರ್ಚ್ 2026ರಲ್ಲಿ ಇರಾನ್ ಯುದ್ಧದ ಆರಂಭದ ಸಮಯದಲ್ಲಿ ಜಾಗತಿಕ ಷೇರು ಮಾರುಕಟ್ಟೆ ಶೇ.8ರಷ್ಟು ಕುಸಿದಾಗ, ಟ್ರಂಪ್ ಖಾತೆಗಳು ಅಗ್ಗದ ಬೆಲೆಗೆ ಷೇರುಗಳನ್ನು ಬಾಚಿಕೊಂಡವು. ನಂತರ ಮಾರುಕಟ್ಟೆ ಶೇ.19 ರಷ್ಟು ಜಿಗಿದಾಗ ಭಾರಿ ಲಾಭಕ್ಕೆ ಮಾರಿಕೊಂಡವು. ಅಮೆರಿಕ ಸರ್ಕಾರವು ಎನ್ವಿಡಿಯಾ ಚಿಪ್‌ಗಳನ್ನು ಚೀನಾಕ್ಕೆ ರಫ್ತು ಮಾಡಲು ಅನುಮೋದನೆ ನೀಡುವ ಕೇವಲ ಒಂದು ವಾರ ಮೊದಲು ಟ್ರಂಪ್ ಖಾತೆಯು 1 ಮಿಲಿಯನ್ ಡಾಲರ್ ಮೌಲ್ಯದ ಎನ್ವಿಡಿಯಾ ಷೇರು ಖರೀದಿಸಿತ್ತು. ನಿರ್ಧಾರ ಪ್ರಕಟವಾದ ತಕ್ಷಣ ಷೇರು ಶರವೇಗದಲ್ಲಿ ಜಿಗಿಯಿತು.

4. ರಕ್ಷಣಾ ವಲಯದ ಹೂಡಿಕೆ: ಅಮೆರಿಕದ ರಕ್ಷಣಾ ಬಜೆಟ್ ಹೆಚ್ಚಳ ಮತ್ತು ಹೊಸ ಯುದ್ಧ ವಿಮಾನಗಳ ಖರೀದಿ ಒಪ್ಪಂದಕ್ಕೆ ಸಹಿ ಹಾಕುವ ಮುನ್ನವೇ ರಕ್ಷಣಾ ವಲಯದ ದೈತ್ಯ ಕಂಪನಿಗಳಾದ ಲಾಕ್ಹೀಡ್ ಮಾರ್ಟಿನ್ ಮತ್ತು ಬೋಯಿಂಗ್ ಕಂಪನಿಗಳಲ್ಲಿ ಟ್ರಂಪ್ ಹೂಡಿಕೆ ಮಾಡಿದ್ದರು.

5. ಡೆಲ್ ಕಂಪ್ಯೂಟರ್ ವಿವಾದ: ಮೇ 2026ರ ಆರಂಭದಲ್ಲಿ ಶ್ವೇತಭವನದಲ್ಲಿ ನಡೆದ ಅಧಿಕೃತ ಕಾರ್ಯಕ್ರಮವೊಂದರಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಡೆಲ್ ಕಂಪನಿಯನ್ನು ಬಹಿರಂಗವಾಗಿ ಹೊಗಳಿದ್ದರು. ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುತ್ತಾ ಟ್ರಂಪ್, ಎಲ್ಲರೂ ಹೊರಗೆ ಹೋಗಿ ಡೆಲ್ ಕಂಪ್ಯೂಟರ್‌ಗಳನ್ನು ಖರೀದಿಸಿ, ಅವು ಅತ್ಯುತ್ತಮವಾಗಿವೆ ಎಂದು ಕರೆ ನೀಡಿದ್ದರು. ದೇಶದ ಅಧ್ಯಕ್ಷರಿಂದಲೇ ಇಂತಹ ಹೇಳಿಕೆ ಹೊರಬಿದ್ದ ತಕ್ಷಣ ಹೂಡಿಕೆದಾರರಲ್ಲಿ ಭಾರಿ ಉತ್ಸಾಹ ಕಂಡುಬಂದು, ಡೆಲ್ ಷೇರು ಒಂದೇ ದಿನದಲ್ಲಿ ಶೇ.13ರಿಂದ 14ಕ್ಕಿಂತ ಹೆಚ್ಚು ಜಿಗಿತ ಕಂಡಿತು. ಷೇರು ಬೆಲೆ ಏರಿಕೆ ಆದ ಬೆನ್ನಲ್ಲೇ ಮತ್ತೊಂದು ಸುದ್ದಿ ಹೊರಬಂತು. ಡೆಲ್ ಕಂಪನಿಯ ಸಂಸ್ಥಾಪಕ ಮೈಕೆಲ್ ಡೆಲ್ ಮತ್ತು ಅವರ ಕುಟುಂಬವು ಟ್ರಂಪ್ ಅವರ ಮಹತ್ವಾಕಾಂಕ್ಷೆಯ 'ಇನ್ವೆಸ್ಟ್ ಅಮೆರಿಕ' (ಹೊಸದಾಗಿ ಹುಟ್ಟುವ ಮಕ್ಕಳಿಗೆ ನೆರವು ನೀಡುವ ಯೋಜನೆ) ನಿಧಿಗೆ 6.25 ಬಿಲಿಯನ್ ಡಾಲರ್ (ಸುಮಾರು 52 ಸಾವಿರ ಕೋಟಿ ರು.) ಮೌಲ್ಯದ ಷೇರುಗಳನ್ನು ದೇಣಿಗೆಯಾಗಿ ನೀಡಿದ್ದಾರೆ. ಈ ದೇಣಿಗೆ ನೀಡಿದ ಬೆನ್ನಲ್ಲೇ ಟ್ರಂಪ್ ಅವರು ಕಂಪನಿಯನ್ನು ಸಾರ್ವಜನಿಕವಾಗಿ ಪ್ರಚಾರ ಮಾಡಿದ್ದರಿಂದ ಇದು ಹಿತಾಸಕ್ತಿ ಸಂಘರ್ಷ ಮತ್ತು ಷೇರು ದುರುಪಯೋಗ ಆಪಾದನೆಗಳಿಗೆ ಕಾರಣವಾಗಿದೆ. ಟ್ರಂಪ್ ಅವರು ಹೀಗೆ ಪ್ರಶಂಸಿಸುವ ಕೇವಲ 9 ದಿನಗಳ ಮುಂಚೆಯಷ್ಟೇ ತಮ್ಮ ವೈಯಕ್ತಿಕ ಪೋರ್ಟ್‌ಫೋಲಿಯೋ ಮೂಲಕ ಕನಿಷ್ಠ 10 ಲಕ್ಷ ಡಾಲರ್ (ಅಂದಾಜು 9.55 ಕೋಟಿ ರು.) ಮೌಲ್ಯದ ಡೆಲ್ ಷೇರುಗಳನ್ನು ಖರೀದಿಸಿದ್ದರು. ಇದು ವಿವಾದಕ್ಕೆ ಕಾರಣವಾಗಿದೆ.

ಟ್ರಂಪ್ ವಿರುದ್ಧ ಕಾನೂನು ಕ್ರಮ ಸಾಧ್ಯವೇ?

ಅಮೆರಿಕದ ಕಾನೂನಿನಲ್ಲಿ ದೇಶದ ಅಧ್ಯಕ್ಷರಿಗೆ ಅಧಿಕಾರಾವಧಿಯಲ್ಲಿ ಷೇರು ವ್ಯವಹಾರ ನಡೆಸಲು ಸಂಪೂರ್ಣ ನಿಷೇಧವಿಲ್ಲ. ಆದರೆ ಹಿತಾಸಕ್ತಿ ಸಂಘರ್ಷ ತಡೆಯಲು ಕಳೆದ 70 ವರ್ಷಗಳಿಂದ ಹಿಂದಿನ ಎಲ್ಲಾ ಅಧ್ಯಕ್ಷರುಗಳು ತಮ್ಮ ಆಸ್ತಿಯನ್ನು ಇಂತಹ ವ್ಯವಹಾರಗಳಿಂದ ದೂರ ಇಡುತ್ತಿದ್ದರು. ಟ್ರಂಪ್ ಈ 70 ವರ್ಷಗಳ ಸಂಪ್ರದಾಯವನ್ನು ಮುರಿದಿದ್ದಾರೆ. ಸದ್ಯ ಅಮೆರಿಕದ ಮಾರುಕಟ್ಟೆ ನಿಯಂತ್ರಕ ಸಂಸ್ಥೆಗಳ ಮೇಲೆ ಈ ವಹಿವಾಟುಗಳ ತನಿಖೆ ನಡೆಸಲು ಭಾರೀ ಒತ್ತಡವಿದೆ. ಆದರೆ ಟ್ರಂಪ್ ಅವರೇ ದೇಶದ ಸರ್ವೋಚ್ಚ ಅಧಿಕಾರಿಯಾಗಿರುವುದರಿಂದ ಈ ತನಿಖಾ ಸಂಸ್ಥೆಗಳು ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು ಸವಾಲಿನ ಕೆಲಸವಾಗಿದೆ. ಅಮೆರಿಕದಲ್ಲಿ ಜನಪ್ರತಿನಿಧಿಗಳು ಇನ್‌ಸೈಡ್ ಟ್ರೇಡಿಂಗ್ ಮಾಡುವುದನ್ನು ತಡೆಯಲು ಸ್ಟಾಕ್ ಆ್ಯಕ್ಟ್ ಎಂಬ ಕಾನೂನಿದೆ. ಆದರೆ ಟ್ರಂಪ್ ಅವರ ವಿಷಯದಲ್ಲಿ ಇದು ಸಂಪೂರ್ಣವಾಗಿ ವಿಫಲವಾಗಿದೆ. ಈ ಕಾಯ್ದೆಯು ಸಂಸದರಿಗೆ ಕಠಿಣವಾಗಿದೆ, ಆದರೆ ಅಧ್ಯಕ್ಷರ ಹುದ್ದೆಗೆ ಕೆಲವು ತಾಂತ್ರಿಕ ವಿನಾಯಿತಿಗಳಿವೆ. ಟ್ರಂಪ್ ಅವರ ಒಂದೊಂದು ಪೋಸ್ಟ್ ಜಾಗತಿಕ ಮಾರುಕಟ್ಟೆಯನ್ನು ನಡುಗಿಸುವ ಶಕ್ತಿ ಹೊಂದಿದೆ. ಇಂತಹ ಸಂದರ್ಭದಲ್ಲಿ ಅವರ ಅಧಿಕೃತ ನಿರ್ಧಾರಗಳು ಪ್ರಕಟವಾಗುವ ಕೆಲವೇ ನಿಮಿಷಗಳ ಮೊದಲು ಅವರ ಹೆಸರಿನಲ್ಲೇ ಕೋಟ್ಯಂತರ ರೂಪಾಯಿ ಟ್ರೇಡಿಂಗ್ ಆಗುತ್ತಿರುವುದು ವಿಶ್ವದ ಇತಿಹಾಸದಲ್ಲೇ ಅತಿದೊಡ್ಡ ಅಧಿಕಾರ ದುರುಪಯೋಗದ ಆರ್ಥಿಕ ಹಗರಣದ ಅನುಮಾನಗಳಿಗೆ ದಾರಿ ಮಾಡಿಕೊಟ್ಟಿದೆ.

ಮಾರುಕಟ್ಟೆಯ ಕೃತಕ ದುರುಪಯೋಗ ಹೇಗೆ ನಡೆಯುತ್ತದೆ?

ಈ ಹಗರಣದಲ್ಲಿ ಟ್ರಂಪ್ ಅವರ ಸ್ವಂತ ಜಾಲತಾಣವಾದ 'ಟ್ರುಥ್ ಸೋಶಿಯಲ್' ಒಂದು ಪ್ರಮುಖ ಅಸ್ತ್ರವಾಗಿದೆ. ಟ್ರಂಪ್ ಯಾವುದೇ ಅಧಿಕೃತ ಪ್ರಕಟಣೆಯನ್ನು ಶ್ವೇತಭವನದ ಮಾಧ್ಯಮಗೋಷ್ಠಿಗಿಂತ ಮೊದಲು ತಮ್ಮ ಸೋಷಿಯಲ್ ಮೀಡಿಯಾದಲ್ಲಿ ಹಾಕುತ್ತಾರೆ. ದಿನವೊಂದರಲ್ಲಿ ಅವರು ಮಾಡುವ ಪೋಸ್ಟ್‌ನ ಲೆಕ್ಕಾಚಾರ ಹೀಗಿದೆ...

ಬೆಳಗ್ಗೆ 6:40 - ಸಾರ್ವಜನಿಕರಿಗೆ ಯಾವುದೇ ಮಾಹಿತಿ ಇರುವುದಿಲ್ಲ.

ಬೆಳಗ್ಗೆ 6:49 - ಮಾರುಕಟ್ಟೆಯಲ್ಲಿ ಹಠಾತ್ ಆಗಿ ಅತಿದೊಡ್ಡ ಪ್ರಮಾಣದ ವ್ಯಾಪಾರ ಆರಂಭವಾಗುತ್ತದೆ.

ಬೆಳಗ್ಗೆ 7:05 - ಟ್ರಂಪ್ ತಮ್ಮ ಟ್ರುಥ್ ಸೋಶಿಯಲ್‌ನಲ್ಲಿ ಜಾಗತಿಕ ಮಾರುಕಟ್ಟೆಯನ್ನು ಬದಲಿಸುವ ಪೋಸ್ಟ್ ಪ್ರಕಟಿಸುತ್ತಾರೆ.

ಬೆಳಗ್ಗೆ 7:10 - ನಿಮಿಷಗಳಲ್ಲೇ ಮಾರುಕಟ್ಟೆ ಜಿಗಿಯುತ್ತದೆ, ರಹಸ್ಯ ಟ್ರೇಡರ್‌ಗಳು ಸಾವಿರಾರು ಕೋಟಿ ರು. ಲಾಭದೊಂದಿಗೆ ಎಕ್ಸಿಟ್ ಆಗುತ್ತಾರೆ. ಇದು ಮಾರುಕಟ್ಟೆಯ ನಿಯಮಗಳ ಪ್ರಕಾರ ಮುಂಚಿತವಾಗಿಯೇ ಮಾಹಿತಿ ಸೋರಿಕೆಯಾಗಿದೆ ಎಂಬುದಕ್ಕೆ ಸಾಕ್ಷಿ ಎಂದು ಕಾನೂನು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಷೇರು ಮಾರುಕಟ್ಟೆ ಮಾತ್ರವಲ್ಲದೆ, ಈ ಹಗರಣದ ಕೊಂಡಿಗಳು ಪಾಲಿಮಾರ್ಕೆಟ್ ಮತ್ತು ಕಾಲ್ಶಿನಂತಹ ಕ್ರಿಪ್ಟೋ ಆಧಾರಿತ ಊಹಾ ಮಾರುಕಟ್ಟೆ (ಭವಿಷ್ಯದ ವಿದ್ಯಮಾನಗಳ ಮೇಲೆ ಬೆಟ್ಟಿಂಗ್ ಕಟ್ಟುವ ಜಾಲತಾಣಗಳು)ವರೆಗೂ ಹರಡಿವೆ. ಏಪ್ರಿಲ್ 7, 2026ರಂದು ಟ್ರಂಪ್ ಅವರು ಇರಾನ್ ಜೊತೆಗಿನ ಕದನ ವಿರಾಮವನ್ನು ಘೋಷಿಸುವ ಕೇವಲ ಕೆಲವು ಗಂಟೆಗಳ ಮೊದಲು ಹಲವಾರು ನಿಗೂಢ ಕ್ರಿಪ್ಟೋ ಖಾತೆಗಳು ತೈಲ ಬೆಲೆ ಕುಸಿಯುತ್ತದೆ ಎಂದು ಬರೋಬ್ಬರಿ 950 ಮಿಲಿಯನ್ (ಸುಮಾರು 8,000 ಕೋಟಿ ರು.ಗೂ ಹೆಚ್ಚು) ಬೆಟ್ಟಿಂಗ್ ಮಾಡಿದ್ದವು. ಟ್ರಂಪ್ ಪೋಸ್ಟ್ ಪ್ರಕಟಿಸುತ್ತಿದ್ದಂತೆ ತೈಲ ಬೆಲೆ ಶೇ.15ರಷ್ಟು ಕುಸಿದು, ಈ ಖಾತೆದಾರರು ಭಾರೀ ಲಾಭ ಮಾಡಿಕೊಂಡಿದ್ದಾರೆ. ಇದರ ಹಿಂದೆ ಶ್ವೇತಭವನದ ಅತ್ಯಂತ ಒಳಗಿನ ವ್ಯಕ್ತಿಗಳ ಕೈವಾಡವಿದೆ ಎಂಬ ಗಂಭೀರ ಆರೋಪವಿದೆ.

ಟ್ರಂಪ್ ತಂಡದ ಸಮರ್ಥನೆ ಏನು?: ಈ ಭಾರೀ ವಿವಾದಕ್ಕೆ ಸಂಬಂಧಿಸಿದಂತೆ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಮತ್ತು ಟ್ರಂಪ್ ಕುಟುಂಬದವರು ವಿಭಿನ್ನ ಸಮರ್ಥನೆ ನೀಡಿದ್ದಾರೆ. ಟ್ರಂಪ್ ಅವರು ತಮ್ಮ ಬ್ಲೈಂಡ್ ಟ್ರಸ್ಟ್ ಸಂಪತ್ತನ್ನು ಸ್ವತಃ ನಿರ್ವಹಿಸುತ್ತಿಲ್ಲ. ಅದು ಸ್ವತಂತ್ರ ಹಣಕಾಸು ಸಲಹೆಗಾರರ ಮೂಲಕ ನಿರ್ವಹಿಸಲ್ಪಡುತ್ತಿದೆ. ಟ್ರಂಪ್ ಓವಲ್ ಆಫೀಸ್‌ನಲ್ಲಿ ಕುಳಿತು ವೈಯಕ್ತಿಕವಾಗಿ ಷೇರು ಟ್ರೇಡಿಂಗ್ ಮಾಡುತ್ತಿಲ್ಲ ಎನ್ನುವುದು ಅವರ ವಾದ. ಬ್ಲೈಂಡ್ ಟ್ರಸ್ಟ್ ಎಂದು ಹೇಳಲಾಗುತ್ತಿದ್ದರೂ, ಆ ಟ್ರಸ್ಟ್ ಅನ್ನು ಮುನ್ನಡೆಸುತ್ತಿರುವುದು ಟ್ರಂಪ್ ಅವರ ಸ್ವಂತ ಕುಟುಂಬದ ಸದಸ್ಯರು ಮತ್ತು ಅತ್ಯಂತ ಆಪ್ತರು. ಹೀಗಾಗಿ ಶ್ವೇತಭವನದ ರಹಸ್ಯಗಳು ಟ್ರಸ್ಟ್‌ಗೆ ತಲುಪುವುದು ತೀರಾ ಸುಲಭ ಎಂಬುದು ವಿಪಕ್ಷಗಳ ಆರೋಪ.

- ಮುಂದಿನ ನಿರ್ಧಾರಗಳ ಬಗ್ಗೆ ಮುಂಚಿತವಾಗಿ ಮಾಹಿತಿ ಸೋರಿಕೆ, ಸಾವಿರಾರು ಕೋಟಿ ರು.ಲಾಭ
- ಪ್ರಮುಖ ಒಪ್ಪಂದಕ್ಕೂ ಮುನ್ನವೇ ಟ್ರಂಪ್ ಖಾತೆಗಳಿಂದಲೇ ನಿರ್ದಿಷ್ಟ ಕಂಪನಿಯ ಷೇರು ಖರೀದಿ!-ಮುಂದಿನ ನಿರ್ಧಾರಗಳ ಬಗ್ಗೆ ಮುಂಚಿತವಾಗಿ ಮಾಹಿತಿ ಸೋರಿಕೆ, ಸಾವಿರಾರು ಕೋಟಿ ರು. ಲಾಭ
- ಪ್ರಮುಖ ಒಪ್ಪಂದಕ್ಕೂ ಮುನ್ನವೇ ಟ್ರಂಪ್ ಖಾತೆಗಳಿಂದಲೇ ನಿರ್ದಿಷ್ಟ ಕಂಪನಿಯ ಷೇರು ಖರೀದಿ!

ಸಮಾಚಾರ ಸಣ್ಣದಲ್ಲ

ಶಾಸಕ ಅಶ್ರಫ್‌ಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ

ಬೆಂಗಳೂರು: ಕೇರಳ ರಾಜ್ಯದ ಮಂಜೇಶ್ವರ ವಿಧಾನ ಸಭಾ ಕ್ಷೇತ್ರದ ಶಾಸಕ ಅಶ್ರಫ್ ಅವರು ಕೇರಳ ವಿಧಾನ ಸಭೆಯಲ್ಲಿ ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕರಿಸಿರುವುದನ್ನು ಗಡಿಭಾಗದ ಕನ್ನಡಿಗರ ಗೌರವದ ಸಂಗತಿಯಾಗಿದೆ. ಹಾಗಾಗಿ ಈ ವರ್ಷದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡುವಂತೆ ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾದಿಕಾರದ ಅಧ್ಯಕ್ಷ ಡಾ. ಸಿ.ಸೋಮಶೇಖರ, ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಮಂಜೇಶ್ವರ ಕ್ಷೇತ್ರದಿಂದ ಆಯ್ಕೆಯಾಗಿರುವ ಶಾಸಕ ಅಶ್ರಫ್ ಅವರು 2021ರಲ್ಲಿಯೂ ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸಿದ್ದರು. ಇದು ಅವರ ಕನ್ನಡಾಭಿಮಾನ ಮತ್ತು ಗಡಿನಾಡಿನ ಕನ್ನಡಿಗರ ಮೇಲಿನ ಬದ್ಧತೆ ತೋರಿಸುತ್ತದೆ. ಕಾಸರಗೋಡು ಭಾಗದ ಕನ್ನಡಿಗರ ಸಮಸ್ಯೆಗಳಿಗೆ ಶಾಸಕ ಅಶ್ರಫ್ ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದರು. ಕನ್ನಡಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಅವರು ನಿರರ್ಗಳವಾಗಿ ಕನ್ನಡದಲ್ಲಿ ಮಾತನಾಡುತ್ತಿದ್ದು, ಗಡಿಭಾಗದ ಕನ್ನಡಿಗರ ಹಕ್ಕುಗಳ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ. ಕನ್ನಡ ಭಾಷೆ, ಸಂಸ್ಕೃತಿ ಮತ್ತು ಗಡಿನಾಡಿನ ಕನ್ನಡಿಗರ ಹಿತಾಸಕ್ತಿಗಾಗಿ ಕಾರ್ಯನಿರ್ವಹಿಸುತ್ತಿರುವ ಅಶ್ರಫ್ ಅವರಿಗೆ ಕರ್ನಾಟಕ ಸರಕಾರ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಬೇಕು ಎಂದು ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಡಾ. ಸೋಮಶೇಖರ ತಿಳಿಸಿದರು.

ಅಹವಾಲುಗಳಿಗೆ ತ್ವರಿತವಾಗಿ ಸ್ಪಂದಿಸಿ

ಬೆಂಗಳೂರು: ನಾಗರಿಕರಿಂದ ಬಂದ ದೂರುಗಳು ಮತ್ತು ಅಹವಾಲುಗಳಿಗೆ ತ್ವರಿತವಾಗಿ ಸ್ಪಂದಿಸಿ ಸಮಸ್ಯೆಗಳನ್ನು ಬಗೆಹರಿಸುವಂತೆ ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ತಿಳಿಸಿದರು. ನಗರ ಪಾಲಿಕೆ ವ್ಯಾಪ್ತಿಯ ನಾಗರಿಕರ ಸಮಸ್ಯೆ ಆಲಿಸಿ ಪರಿಹಾರ ಕಲ್ಪಿಸುವ ಉದ್ದೇಶದಿಂದ ಅಮೃತಹಳ್ಳಿ ಮುಖ್ಯ ರಸ್ತೆಯಲ್ಲಿರುವ ಆಯುಕ್ತರ ಕಚೇರಿಯಲ್ಲಿ ಶುಕ್ರವಾರ ನಡೆದ ಫೋನ್-ಇನ್ ಕಾರ್ಯ ಕ್ರಮದಲ್ಲಿ ಅವರು ಸಾರ್ವಜನಿಕರಿಂದ ನೇರ ವಾಗಿ ಅಹವಾಲುಗಳನ್ನು ಸ್ವೀಕರಿಸಿ ಮಾತನಾ ಡಿದ ಅವರು, ಕಾರ್ಯಕ್ರಮದಲ್ಲಿ ವಿವಿಧ ವಾರ್ಡ್‌ಗಳಿಂದ ರಸ್ತೆ ನಿರ್ವಹಣೆ, ಘನತ್ಯಾಜ್ಯ ವಿಲೇವಾರಿ, ಅರಣ್ಯ, ಇ-ಖಾತಾ ಸೇವೆ, ವಿದ್ಯುತ್ ಹಾಗೂ ಉದ್ಯಾನಗಳಿಗೆ ಸಂಬಂಧಿಸಿ ದಂತೆ ಒಟ್ಟು 56 ಕರೆಗಳ ಮೂಲಕ 83 ಅಹವಾ ಲುಗಳು ದಾಖಲಾಗಿವೆ. ರಸ್ತೆ ಮತ್ತು ಘನತ್ಯಾಜ್ಯ ಸಮಸ್ಯೆಗಳ ಕುರಿತು ಹೆಚ್ಚಿನ ದೂರುಗಳು ಕೇಳಿಬಂದಿದ್ದು, ಅವುಗಳನ್ನು ತಕ್ಷಣ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಪಾಲಿಕೆಯಲ್ಲಿ 2026 ರ ಸೆಪ್ಟೆಂಬರ್ 26ರಿಂದ ಆರಂಭಗೊಂಡಿರುವ ಫೋನ್-ಇನ್ ಕಾರ್ಯಕ್ರಮದಲ್ಲಿ ಕಳೆದ 34 ವಾರಗಳಲ್ಲಿ ಒಟ್ಟು 1537 ಕರೆಗಳು ಸ್ವೀಕರಿ ಸಲ್ಪಟ್ಟು 1969 ಅಹವಾಲುಗಳು ದಾಖಲಾಗಿವೆ. ಅವುಗಳಲ್ಲಿ 1408 ಅಹವಾಲುಗಳಿಗೆ ಈಗಾಗಲೇ ಪರಿಹಾರ ಕಲ್ಪಿಸಲಾಗಿದ್ದು, 403 ಅಹವಾಲುಗಳು ಬಾಕಿ ಇವೆ. ದೀರ್ಘಾವಧಿ ಪರಿಹಾರ ಅಗತ್ಯವಿರುವ ಸಮಸ್ಯೆಗಳಿಗೂ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಪ್ರತಿ ಶುಕ್ರವಾರ ಆಯೋಜಿಸಲಾಗುತ್ತಿರುವ ಈ ಕಾರ್ಯಕ್ರಮಕ್ಕೆ ಸಾರ್ವ ಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದ್ದು, ನಾಗರಿಕರ ಕುಂದುಕೊರತೆಗಳಿಗೆ ತ್ವರಿತ ಸ್ಪಂದನೆ ನೀಡುವ ಉದ್ದೇಶದಿಂದ ಮುಂದುವರಿಸಲಾಗುವುದು. ಕಾರ್ಯಕ್ರಮದಲ್ಲಿ ಮುಖ್ಯ ಅಭಿಯಂತರ ರಾಘವೇಂದ್ರ ಪ್ರಸಾದ್ ಸೇರಿದಂತೆ ಅಧೀಕ್ಷಕ ಹಾಗೂ ಕಾರ್ಯಪಾಲಕ ಅಭಿಯಂತರರು ಮತ್ತು ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗೆ ವೇಗ

ಬೆಂಗಳೂರು: ಮಳೆಗಾಲದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ತೊಂದರೆ ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಬೆಂಗಳೂರು ಕೇಂದ್ರ ನಗರ ಪಾಲಿಕೆ ಅಧಿಕಾರಿಗಳಿಗೆ ಆಯುಕ್ತ ರಾಜೇಂದ್ರ ಚೋಳನ್ ಕಟ್ಟುನಿಟ್ಟಿನ ಸೂಚನೆ ನೀಡಿದರು. ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳೊಂದಿಗೆ ನಡೆದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆಯಡಿ ನಡೆಯುತ್ತಿರುವ ಚರಂಡಿ ಹೂಳೆತ್ತುವಿಕೆ, ಪಾದಚಾರಿ ಮಾರ್ಗ ಅಭಿವೃದ್ಧಿ ಹಾಗೂ ರಸ್ತೆ ಡಾಂಬರೀಕರಣ ಕಾಮಗಾರಿ ಶೀಘ್ರ ಪೂರ್ಣಗೊಳಿಸುವಂತೆ ಸೂಚಿಸಿದರು. ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿದು ಹೋಗಲು ರಸ್ತೆ ಬದಿಯ ಚರಂಡಿಗಳಲ್ಲಿ ಶೇಖರಣೆಯಾಗಿರುವ ಹೂಳನ್ನು ತೆರವುಗೊಳಿಸುವ ಕಾರ್ಯಕ್ಕೆ ಹೆಚ್ಚಿನ ವೇಗ ನೀಡಬೇಕು. ಈಗಾಗಲೇ ಪ್ರಗತಿಯಲ್ಲಿರುವ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಿ ಜಲಾವೃತ ಸಮಸ್ಯೆ ತಡೆಯಲು ಕ್ರಮ ಕೈಗೊಳ್ಳಬೇಕು ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್‌ಗೆ ಸನ್ಮಾನ

ಸ್ಥಳೀಯ ಪತ್ರಿಕೆಗಳು ಮುಖ್ಯಮಂತ್ರಿಗಳ ಮೊದಲ ಆದ್ಯತೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಾಧ್ಯಮ ಸಲಹೆಗಾರ ಹೊಣೆಗಾರಿಕೆ ಸವಾಲಿನದ್ದಾಗಿದ್ದು, ಸದಾ ಎಚ್ಚರದ ಸ್ಥಿತಿಯಲ್ಲಿ ಗಮನಿಸಬೇಕಾಗುತ್ತದೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ತಿಳಿಸಿದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿ ಮೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಬಳಿಕ ಮಾತನಾಡಿದ ಅವರು, ಮಾಧ್ಯಮ ಸಲಹೆಗಾರ ಹುದ್ದೆ ಪ್ರತಿ ದಿನ ಸವಾಲಿನದ್ದು, ಬೆಳಗ್ಗೆ ಎದ್ದು ಪತ್ರಿಕೆಗಳನ್ನು ತಿರುವಿ ಹಾಕುವವರೆಗೂ ನನಗೆ ದುಗುಡ ಇದ್ದೇ ಇರುತ್ತದೆ. ಈ ಸವಾಲುಗಳನ್ನು ಪ್ರತಿದಿನ ನಿರ್ವಹಿಸುತ್ತಿದ್ದೇನೆ ಎನ್ನುವ ಸಮಾಧಾನ ಕೂಡ ಇದೆ. ಆದರೆ, ನನಗೆ ಒದಗಿ ಬಂದಿರುವ ಹೊಣೆಗಾರಿಕೆ ಬಗ್ಗೆ ನನಗೆ ಯಾವತ್ತೂ ಭ್ರಮನಿರಸನ ಆಗಿಲ್ಲ ಎಂದರು.

ಇವತ್ತಿನವರೆಗೂ ಮುಖ್ಯಮಂತ್ರಿಗಳು ಒಂದು ದಿನ ಕೂಡ ತಮ್ಮ ವಿರುದ್ಧ ಇಂತಹ ಚಾನಲ್‌ನಲ್ಲಿ ಸುದ್ದಿ ಬಂದಿದೆ ನೋಡು ಎನ್ನುವ ಒಂದು ಮಾತನ್ನೂ ಹೇಳಿಲ್ಲ. ಮಾಧ್ಯಮ ಸ್ವಾತಂತ್ರ್ಯಕ್ಕೆ ಮುಖ್ಯಮಂತ್ರಿಗಳು ಯಾವತ್ತೂ ಧಕ್ಕೆ ಆಗದಂತೆ ನೋಡಿಕೊಂಡಿದ್ದಾರೆ.

ಸಿಎಂ ಮಾಧ್ಯಮ ಸಲಹೆಗಾರರಾಗಿ 3 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕೆ.ವಿ.ಪ್ರಭಾಕರ್ ಅವರಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಸನ್ಮಾನ ಮಾಡಿ ಗೌರವಿಸಲಾಯಿತು. ಈ ವೇಳೆ ಕೆಯುಡಬ್ಲ್ಯೂಜೆ ಅಧ್ಯಕ್ಷ ಶಿವಾನಂದ ತಗಡೂರು, ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯಿಷಾ ಖಾನಂ, ರಾಜ್ಯ ಪದಾಧಿಕಾರಿಗಳಾದ ಸೋಮಶೇಖರ್ ಕೆರಗೋಡು, ವಾಸುದೇವ ಹೊಳ್ಳ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು.

ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡಲು ವಿಧಿಸಿರುವ ಕಠಿಣವಾದ ಎರಡು ಷರತ್ತುಗಳನ್ನು ಸಡಿಲಗೊಳಿಸಲು ಸಭೆ ಮಾಡಿ ತೀರ್ಮಾನಿಸಲಾಗಿದೆ. ಇದರಿಂದ ಆರು ಸಾವಿರಕ್ಕೂ ಹೆಚ್ಚಿನ ಪತ್ರಕರ್ತರಿಗೆ ಸವಲತ್ತು ಸಿಗುವ ಸಾಧ್ಯತೆಗಳಿವೆ ಎಂದರು.

ಜಾಹೀರಾತು ನೀಡಿಕೆಯಲ್ಲಿನ ತಾರತಮ್ಯ

ನಿವಾರಣೆಗೆ ಕ್ರಮ: ಮಾಧ್ಯಮ ಸಂಸ್ಥೆಗಳು, ಪತ್ರಕರ್ತರ ಸಂಘಟನೆಗಳು ಮತ್ತು ಪತ್ರಕರ್ತ ಸಮುದಾಯದ ಒತ್ತಡದಿಂದಲೇ ರಾಜ್ಯದಲ್ಲಿ ಜಾಹೀರಾತು ನೀತಿ ತರಲಾಗಿದೆ. ವೃತ್ತಿಪರವಾಗಿ ಕಷ್ಟಪಟ್ಟು ಪತ್ರಿಕೆ ಮಾಡುವವರಿಗೆ ನೆರವಾಗಬೇಕು ಎನ್ನುವ ಕಾಳಜಿ ಜಾಹೀರಾತು ನೀತಿಯ ಹಿಂದಿದೆ. ಜಾಹೀರಾತು ದರ ಪರಿಷ್ಕರಣೆ ಕೂಡ ಚರ್ಚೆಯಲ್ಲಿದೆ. ಪತ್ರಿಕೆಗಳಿಗೆ ಜಾಹೀರಾತು ನೀಡುವ ವಿಚಾರದಲ್ಲಿ ಕೆಲವು ಸಮುದಾಯಗಳಿಗೆ ಮಾತ್ರ ಕೆನೆಪದರದ ಮಿತಿ ಹಾಕಿದ್ದು, ಒಂದು ಸಮುದಾಯಕ್ಕೆ ಮಾತ್ರ ಕೆನೆಪದರ ಇಲ್ಲದಿರುವುದರಿಂದ ಬಹುತೇಕ ಸಮುದಾಯಗಳ ಮಾಲೀಕರು, ಸಂಪಾದಕರು ವಿಪರೀತ ನಷ್ಟ ಅನುಭವಿಸಿದ್ದಾರೆ. ಈ ಕುರಿತು ಲೋಪಗಳ ಬಗ್ಗೆ ಸಭೆ ನಡೆಸಿ ಚರ್ಚಿಸಲಾಗಿದೆ ಎಂದರು.

ಓದಿದ ಶಾಲೆಗೆ ನೆರವಾಗಿದ್ದು ಸಮಾಧಾನ ತಂದಿದೆ

ಪತ್ರಕರ್ತ ಸಮುದಾಯಕ್ಕೆ, ಪತ್ರಿಕಾ ವಿತರಕ ಸಮುದಾಯಕ್ಕೆ ನೆರವಾಗುವ ಜತೆಗೆ ನೂರಾರು ರೀತಿಯ ನೆರವು ಸರಕಾರದಿಂದ ಒದಗಿಸಲಾಗಿದೆ. ಇವುಗಳ ಆಚೆಗೆ ನಾನು ಓದಿದ ಶಾಲೆಗೆ ಸರಕಾರದ ನೆರವು ಒದಗಿಸಲು ಸಾಧ್ಯವಾಗಿದ್ದು, ಈ ಸರಕಾರಿ ಶಾಲೆಗೆ ಮರುಜೀವ ಬಂದು ವಿದ್ಯಾರ್ಥಿಗಳ ಸಂಖ್ಯೆ 100ರ ಗಡಿ ದಾಟಿರುವುದು ಸಮಾಧಾನ ತಂದಿದೆ. ನನಗೆ ಸಿಗುವ ಸಾರ್ವಜನಿಕ ಸನ್ಮಾನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಕೋಲಾರದ ಪತ್ರಕರ್ತರು ಮತ್ತು ರಾಜ್ಯದ ಪತ್ರಕರ್ತ ಸಮುದಾಯಕ್ಕೆ ಅರ್ಪಿಸುತ್ತೇನೆ, ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಕೆ.ವಿ.ಪ್ರಭಾಕರ್ ತಿಳಿಸಿದರು.

> **ಜಾಹೀರಾತು ನೀತಿಯಲ್ಲಿ ಬಹುತೇಕ ಸಮಸ್ಯೆಗಳು ಬಗೆಹರಿದಿವೆ. ಸ್ಥಳೀಯ ಪತ್ರಿಕೆಗಳು ಮುಖ್ಯಮಂತ್ರಿಗಳ ಮೊದಲ ಆದ್ಯತೆಯಾಗಿದೆ. ಸ್ಥಳೀಯ ಮತ್ತು ಸಣ್ಣ ಪತ್ರಿಕೆಗಳಿಗೆ ಜಾಹೀರಾತಿನಲ್ಲಿ ತೊಂದರೆ ಆಗಬಾರದು ಎನ್ನುವ ನಿಲುವು ಮುಖ್ಯಮಂತ್ರಿಗಳದ್ದೂ ಆಗಿದೆ, ನನ್ನದೂ ಆಗಿದೆ.**
>
> **-ಕೆ.ವಿ.ಪ್ರಭಾಕರ್**
> **ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ**

ಐದು ಪಾಲಿಕೆಗಳಿಗೂ ಪ್ರತ್ಯೇಕ ತಂಡ | ಶೀಘ್ರವೇ ಕರಡು ಪ್ರಣಾಳಿಕೆ ಸಿದ್ಧಪಡಿಸಿ ಕೆಪಿಸಿಸಿಗೆ ನೀಡಲು ಸೂಚನೆ

ಜಿಬಿಎ ಪ್ರಣಾಳಿಕಾ ತಂಡ ಸಿದ್ಧಪಡಿಸಿದ ಕೈ

ಬೆಂಗಳೂರು ಪೂರ್ವ
ಶರತ್ ಬಚ್ಚೇಗೌಡ, ಅಧ್ಯಕ್ಷ
ಮನ್ಸೂರ್ ಅಲಿ ಖಾನ್, ಸಹ-ಅಧ್ಯಕ್ಷರು
ಎಂ. ನಾರಾಯಣಸ್ವಾಮಿ, ಸಂಚಾಲಕರು
ಸದಸ್ಯರು : ಡಿ.ಕೆ. ಮೋಹನ್ ಬಾಬು, ಸುಧಾಮ್ ದಾಸ್, ಪೂರ್ಣಿಮಾ ಶ್ರೀನಿವಾಸ್, ಲಕ್ಷ್ಮಿ ವೆಂಕಟೇಶ್, ಶಿಲ್ಪಾ

ಬೆಂಗಳೂರು ದಕ್ಷಿಣ
ವಿ.ಎಸ್. ಉಗ್ರಪ್ಪ, ಅಧ್ಯಕ್ಷ
ಸೌಮ್ಯ ರೆಡ್ಡಿ, ಸಹ-ಅಧ್ಯಕ್ಷರು
ಮಂಜುನಾಥ ರೆಡ್ಡಿ, ಸಂಚಾಲಕರು
ಸದಸ್ಯರು : ಎಲ್. ಶ್ರೀನಿವಾಸ್, ಗಂಗಾಂಬಿಕೆ ಮಲ್ಲಿಕಾರ್ಜುನ್, ಎಂ. ರಿಜ್ವಾನ್ ನವಾಬ್, ಕೃಷ್ಣರಾಜು, ಎಂ. ಉದಯ್ ಶಂಕರ್, ಓ. ಮಂಜುನಾಥ್, ಉಮಾ ಶ್ರೀನಿವಾಸ್ ರೆಡ್ಡಿ

ಬೆಂಗಳೂರು ಕೇಂದ್ರ
ರಿಜ್ವಾನ್ ಅರ್ಷದ್, ಅಧ್ಯಕ್ಷ
ಪಿ.ಆರ್.ರಮೇಶ್, ಸಹ-ಅಧ್ಯಕ್ಷರು
ಆರ್.ಎಸ್.ಸತ್ಯನಾರಾಯಣ, ಸಂಚಾಲಕರು
ಸದಸ್ಯರು : ರಾಮಚಂದ್ರಪ್ಪ, ಸಂಪತ್ ರಾಜ್, ಬಿ.ಟಿ. ಶ್ರೀನಿವಾಸ ಮೂರ್ತಿ, ಕೆ.ನಂದಕುಮಾರ್, ನಲಪಾಡ್, ಜೆ.ಸರವಣನ್, ಮಮ್ರಾಜ್, ವನಿತಾ ನರೇಂದ್ರ

ಬೆಂಗಳೂರು ಉತ್ತರ
ವಿ.ಆರ್.ಸುದರ್ಶನ್, ಅಧ್ಯಕ್ಷ
ರಕ್ಷಾ ರಾಮಯ್ಯ, ಸಹ-ಅಧ್ಯಕ್ಷರು
ಆರ್.ವಿ. ವೆಂಕಟೇಶ್, ಸಂಚಾಲಕರು
ಸದಸ್ಯರು : ನಾಗರಾಜ್ ಯಾದವ್, ಅಬ್ದುಲ್ ವಾಜಿದ್, ಆರ್. ಮಂಜುನಾಥ್, ಎಂ. ರಾಜ್‌ಕುಮಾರ್, ಕೀರ್ತಿ ಗಣೇಶ್, ಪುಟ್ಟಸ್ವಾಮಿಗೌಡ, ಲಾವಣ್ಯ, ಶಿವಕುಮಾರ್, ಪದ್ಮಾವತಿ

ಬೆಂಗಳೂರು ಪಶ್ಚಿಮ
ಪ್ರೊ. ರಾಜೀಗೌಡ, ಅಧ್ಯಕ್ಷ
ಕುಸುಮಾ ಎಚ್, ಸಹ-ಅಧ್ಯಕ್ಷರು
ಹುಚ್ಚಪ್ಪ, ಸಂಚಾಲಕರು
ಸದಸ್ಯರು : ಹನುಮಂತರಾಯಪ್ಪ, ಮಂಜುನಾಥ್ ಎಚ್. ಎಸ್, ಪದ್ಮಾವತಿ, ಜಿ. ಕೃಷ್ಣಪ್ಪ, ನಟರಾಜ್ ಗೌಡ, ಶಿವರಾಜ್, ಎಸ್. ಪಲ್ಲವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆ ಆಗಸ್ಟ್ ಅಂತ್ಯಕ್ಕೆ ಮುಗಿಸುವಂತೆ ಸುಪ್ರೀಂ ಕೋರ್ಟ್ ಸೂಚನೆಯ ಹೊರತಾಗಿಯೂ, ಅನೇಕರು ಈಗಲೂ ಚುನಾವಣೆ ನಡೆಯುವುದು ಅನುಮಾನ ಎನ್ನುವ ಮಾತನ್ನಾಡುತ್ತಿದ್ದಾರೆ. ಈ ನಡುವೆಯೇ ಕಾಂಗ್ರೆಸ್ ಜಿಬಿಎ ಚುನಾವಣೆಗೆ ಸಿದ್ಧತೆ ಆರಂಭಿಸಿದೆ.

ಜಿಬಿಎ ವ್ಯಾಪ್ತಿ ಐದು ನಗರ ಪಾಲಿಕೆಗೆ ಪ್ರತ್ಯೇಕ ಪ್ರಣಾಳಿಕೆ ಹಾಗೂ ಸಮಗ್ರ ಬೆಂಗಳೂರಿನ ಅಭಿವೃದ್ಧಿಗೆ ಪ್ರಣಾಳಿಕೆ ಸಿದ್ಧಪಡಿಸಲು ತೀರ್ಮಾನಿಸಿರುವ ಕಾಂಗ್ರೆಸ್, ಇದೀಗ ಪ್ರಣಾಳಿಕೆ ಸಿದ್ಧಪಡಿಸಲು ಪ್ರತ್ಯೇಕ ಐದು ತಂಡಗಳನ್ನು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರು ರಚಿಸಿ ಆದೇಶ ಹೊರಡಿಸಿದ್ದಾರೆ. ಪ್ರಣಾಳಿಕೆ ಸಮಿತಿಯಲ್ಲಿ ಬೆಂಗಳೂರು ಪ್ರಭಾಗ, ಕೇಂದ್ರ, ಉತ್ತರ, ದಕ್ಷಿಣ ಮತ್ತು ಪಶ್ಚಿಮ ನಗರಪಾಲಿಕೆಗಳಿಗೆ ಪ್ರತ್ಯೇಕ ಸಮಿತಿಗಳನ್ನು ನೇಮಿಸಲಾಗಿದೆ. ವಿವಿಧ ಕ್ಷೇತ್ರಗಳ ಹಿರಿಯ ನಾಯಕರು, ಮಾಜಿ ಶಾಸಕರು, ಸಂಸದರು ಹಾಗೂ ಪಕ್ಷದ ಪದಾಧಿಕಾರಿಗಳಿಗೆ ಸಮಿತಿಯಲ್ಲಿ ಸ್ಥಾನ ನೀಡಲಾಗಿದೆ.

ನಗರದ ಮೂಲಸೌಕರ್ಯ, ಸಂಚಾರ ದಟ್ಟಣೆ, ಕುಡಿಯುವ ನೀರು, ತ್ಯಾಜ್ಯ ನಿರ್ವಹಣೆ, ಆರೋಗ್ಯ, ಶಿಕ್ಷಣ ಹಾಗೂ ನಾಗರಿಕ ಸೌಲಭ್ಯಗಳ ಕುರಿತಂತೆ ಜನಪರ ಭರವಸೆಗಳನ್ನು ಒಳಗೊಂಡ ಪ್ರಣಾಳಿಕೆ ರೂಪಿಸುವ ಹೊಣೆಗಾರಿಕೆ ಈ ಸಮಿತಿಗಿದೆ. ಬಿಬಿಎಂಪಿ ಚುನಾವಣೆಗೆ ಕಾಂಗ್ರೆಸ್ ಈಗಾಗಲೇ ಸಿದ್ಧತೆ ಆರಂಭಿಸಿದ್ದು, ಜನರ ಸಮಸ್ಯೆಗಳನ್ನು ಆಧರಿಸಿ ಸಮಗ್ರ ಪ್ರಣಾಳಿಕೆ ರೂಪಿಸುವ ಮೂಲಕ ಮತದಾರರನ್ನು ಸೆಳೆಯಲು ಪಕ್ಷ ಮುಂದಾಗಿದೆ.

ಎಂಸಿಯು ವಿತ್ತಾಧಿಕಾರಿ ವಿರುದ್ಧ ಧರಣಿ 25ಕ್ಕೆ

ಬೆಂಗಳೂರು: ಮಹಾರಾಣಿ ಕ್ಲಸ್ಟರ್ ವಿವಿನಲ್ಲಿ ಆಡಳಿತಾತ್ಮಕ ದ್ವೇಷ ರಾಜಕಾರಣ, ಆರ್ಥಿಕ ಭ್ರಷ್ಟಾಚಾರ ಹಾಗೂ ಮಹಿಳಾ ಸಿಬ್ಬಂದಿ ಮೇಲಿನ ಮಾನಸಿಕ ಕಿರುಕುಳದ ಆರೋಪಗಳು ಕೇಳಿಬಂದಿದ್ದು, ವಿವಿ ವಿತ್ತಾಧಿಕಾರಿ ಎಂ.ಎಸ್.ಚೇತನ್ ಕುಮಾರ್ ವಿರುದ್ಧ ವಿದ್ಯಾರ್ಥಿ ಹಾಗೂ ಪ್ರಗತಿಪರ ಸಂಘಟನೆಗಳು ಮೇ 25ರಂದು ಕುಲಪತಿಗಳ ಕಚೇರಿ ಮುಂಭಾಗ ಧರಣಿ ಹಮ್ಮಿಕೊಂಡಿದೆ.

ವಿದ್ಯಾರ್ಥಿನಿಯರ ಕ್ಷೇಮಾಭಿವೃದ್ಧಿ ಒಕ್ಕೂಟ ಹಾಗೂ ರಾಷ್ಟ್ರೀಯ ಅಂಬೇಡ್ಕರ್ ಸೇನೆ ಜಂಟಿಯಾಗಿ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ, ವಿತ್ತಾಧಿಕಾರಿಯನ್ನು ತಕ್ಷಣ ಅಮಾನತುಗೊಳಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ಮಹಿಳಾ ಅತಿಥಿ ಉಪನ್ಯಾಸಕಿಯರಾದ ಅನುಷಾ ಹಾಗೂ ಪ್ರಿಯಾಂಕಾ ಅವರಿಗೆ ಕಳೆದ ಆರು ತಿಂಗಳಿನಿಂದ ನಿರಂತರ ಕಿರುಕುಳ ನೀಡಲಾಗುತ್ತಿದೆ. ಮಹಿಳಾ ಸಿಬ್ಬಂದಿಯನ್ನು ಚೇಂಬರ್‌ಗೆ ಒಂಟಿಯಾಗಿ ಕರೆಸಿಕೊಂಡು ಅಸಭ್ಯವಾಗಿ ವರ್ತಿಸುವುದು, ಮಾನಸಿಕ ಒತ್ತಡ ಹೇರುವುದು ನಡೆಯುತ್ತಿದೆ ಎಂದು ಸಂಘಟನೆಗಳ ಪದಾಧಿಕಾರಿಗಳು ದೂರಿದ್ದಾರೆ. ಅತಿಥಿ ಉಪನ್ಯಾಸಕರ ಸಂಬಳದ ಬಿಲ್ ಪಾಸ್ ಮಾಡಲು ಲಂಚದ ಬೇಡಿಕೆ ಇಡಲಾಗಿದೆ ಎಂಬ ಆರೋಪವೂ ಕೇಳಿಬಂದಿದೆ. ಈ ಕುರಿತು ರಾಜ್ಯ ಮಹಿಳಾ ಆಯೋಗಕ್ಕೂ ದೂರು ಸಲ್ಲಿಸಲಾಗಿದೆ ಎಂದು ಸಂಘಟನೆಗಳು ತಿಳಿಸಿವೆ.

ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್
ಸ್ವಾಧೀನತೆಯ ಪ್ರಕಟಣೆ
ಅನುಬಂಧ IV (ನಿಯಮ 8(1)ರ ಸರ್ಫೇಸಿ ಕಾಯಿದೆ (ಸ್ಥಿರ ಆಸ್ತಿಗಳಿಗೆ)

ಕೆಳಸಹಿದಾರರಾದರು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಇದರ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ ನಿಯಮ 2002ರ ಅನ್ವಯ ಸೆಕ್ಷನ್ 13(12) ರ ನಿಯಮ 3ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರ ಅನ್ವಯ ಈ ಕೆಳಗಿನ ಸಾಲಗಾರರಿಗೆ 13.01.2026 ರಂದು ತಗಾದೆ ಸೂಚನೆಯನ್ನು ನೀಡಿದ್ದರು. ಸಾಲಗಾರರಾದ 1. ಶ್ರೀ ನೆಪೋಲಿಯನ್ ಪದ್ಮನಾಭನ್ 2. ಶ್ರೀಮತಿ ಪ್ರತಿಮ ಜಯರಾಮನ್ ಇವರುಗಳು ಈ ನೋಟೀಸಿನಲ್ಲಿ ತಿಳಿಸಿರುವಂತೆ 12.01.2026 ರವರೆಗೆ ರೂ.9,52,516.25/- (ಒಂಭತ್ತು ಲಕ್ಷ ಐವತ್ತೆರಡು ಸಾವಿರದ ಐನೂರ ಹದಿನಾರು ರೂಪಾಯಿಗಳು ಮತ್ತು ಪೈಸೆ ಇಪ್ಪತ್ತೈದು ಮಾತ್ರ) ವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಮರುಪಾವತಿಸುವಂತೆ ಸೂಚಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆಳಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 4 ರ ಸೆಕ್ಷನ್ 13 ರ ಕಾಯಿದೆ ನಿಯಮ 8ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 19ನೇ ಮೇ2026ರಂದು ಸ್ವಾಧೀನ ಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಸ್ವತ್ತುಗಳ ಬಗ್ಗೆ ಯಾರೂ ವ್ಯವಹರಿಸಕೂಡದು, ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಇಲ್ಲಿಗೆ ಬರಬೇಕಾದ ಬಾಕಿ ಹಣ ರೂ.10,19,445.25/-(ಹತ್ತು ಲಕ್ಷ ಹತ್ತೊಂಭತ್ತು ಸಾವಿರದ ನಾನ್ನೂರ ನಲವತ್ತೈದು ರೂಪಾಯಿಗಳು ಹಾಗೂ ಪೈಸೆ ಇಪ್ಪತ್ತೈದು ಮಾತ್ರ) ಹಾಗೂ 18.05.2026 ರಿಂದ ನಂತರದ ಬಡ್ಡಿ ಹಾಗು ವೆಚ್ಚವನ್ನುಪಾವತಿಸಬೇಕಾಗುವುದು

ಸಾಲಗಾರರ ಗಮನಕ್ಕೆ ತರುವುದೇನೆಂದರೆ, ಸೆಕ್ಷನ್ 13 ರ ಸಬ್-ಸೆಕ್ಷನ್ 8 ರ ಕಾಯಿದೆಯಂತೆ ಬಾಕಿ ಉಳಿದ ಸಮಯಾವಕಾಶದಲ್ಲಿ ನೀವು ಭದ್ರತಾ ಆಸ್ತಿಗಳನ್ನು ಮರು ಪಡೆದುಕೊಳ್ಳಬಹುದಾಗಿದೆ.

ಸ್ಥಿರ ಆಸ್ತಿಯ ವಿವರ :-
ಷೆಡ್ಯೂಲ್ ಎ

ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ವಾಸಯೋಗ್ಯ ಖಾಲಿ ನಿವೇಶನ ನಂ. 312/ಡಿ , ಹಿಂದಿನ ಪರಿವರ್ತಿತ ಸರ್ವೆ ನಂ. 84/2, ರಿಲಯೇಬಲ್ ಲೇಕ್ ಡ್ಯೂ ರೆಸಿಡೆನ್ಸಿ, ಹಂತ 3, ಹರಳೂರು ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು, ಕರ್ನಾಟಕ-560102 ಇಲ್ಲಿದ್ದು ಶ್ರೀ ನಪೋಲಿಯನ್ ಪದ್ಮನಾಭನ್ ಮತ್ತು ಶ್ರೀಮತಿ ಪ್ರತಿಮ ಜಯರಾಮನ್ ರವರ ಮಾಲೀಕತ್ವದಲ್ಲಿದೆ ಮತ್ತು ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 50 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 30 ಅಡಿ ಮತ್ತು ಚಕ್ಕುಬಂದಿ ಈ ರೀತಿಯಾಗಿದೆ :
ಪೂರ್ವಕ್ಕೆ: ಸೈಟ್ ನಂ. 328ಬಿ ಪಶ್ಚಿಮಕ್ಕೆ: ರಸ್ತೆ
ಉತ್ತರಕ್ಕೆ: ಸೈಟ್ ನಂ. 312ಇ ದಕ್ಷಿಣಕ್ಕೆ: ಸೈಟ್ ನಂ. 312ಸಿ

ದಿನಾಂಕ: : 19.05.2026
ಸ್ಥಳ : ಬೆಂಗಳೂರು

ಸಹಿ/
ಅಧಿಕೃತ ಅಧಿಕಾರಿ
ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್

56 ಸಾವಿರ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟ

ಪರೀಕ್ಷೆ ಮುಗಿದ 10 ನಿಮಿಷದಲ್ಲಿ ಫಲಿತಾಂಶ ಪ್ರಕಟಿಸಿದ ವಿಟಿಯು

ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಅಂತಿಮ ಸೆಮಿಸ್ಟರ್ ಎಂಜಿನಿಯರಿಂಗ್ ಪರೀಕ್ಷೆ ಮುಗಿದ ಕೇವಲ 10 ನಿಮಿಷದೊಳಗೆ ಫಲಿತಾಂಶ ಪ್ರಕಟಿಸುವ ಮೂಲಕ ಹೊಸ ಇತಿಹಾಸ ನಿರ್ಮಿಸಿದೆ.ಫಲಿತಾಂಶವನ್ನು ವಿಟಿಯು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಹಾಗೂ ಕುಲಸಚಿವ (ಮೌಲ್ಯಮಾಪನ) ಪ್ರೊ.ಯು.ಜೆ.ಉಜ್ವಲ್ ಜಂಟಿಯಾಗಿ ಬಿಡುಗಡೆ ಮಾಡಿದರು.

ಬಿ.ಇ. ಮತ್ತು ಬಿ.ಟೆಕ್ ಅಂತಿಮ ಸೆಮಿಸ್ಟರ್ ಪರೀಕ್ಷೆಗೆ 56,192 ವಿದ್ಯಾರ್ಥಿಗಳು ಹಾಜರಾಗಿದ್ದರು. ಶುಕ್ರವಾರ ಸಂಜೆ 5.30ಕ್ಕೆ ಪರೀಕ್ಷೆ ಅಂತ್ಯವಾಗಿದ್ದು, 5.40ಕ್ಕೆ ಫಲಿತಾಂಶವನ್ನು ಬಿಡುಗಡೆ ಮಾಡಿದೆ. ಶೇಕಡ 99.98 ಫಲಿತಾಂಶ ಸಾಧಿಸಿದೆ.

ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೆ, ಸಂಪೂರ್ಣ ಮೌಲ್ಯಮಾಪನ ಪ್ರಕ್ರಿಯೆಯನ್ನು 8 ದಿನಗಳ ಮುಂಚಿತವಾಗಿಯೇ ಮುಗಿಸಿದೆ. ಆ ಮೂಲಕ ಈ ಹಿಂದೆ ದಾಖಲೆಗಳನ್ನು ಮುರಿದಿದೆ. ಈ ಹಿಂದೆ ಪರೀಕ್ಷೆ ಮುಗಿದ ಒಂದು ಗಂಟೆಯೊಳಗೆ ಫಲಿತಾಂಶವನ್ನು ಪ್ರಕಟಿಸಿತ್ತು.

ಫಲಿತಾಂಶವನ್ನು ವಿದ್ಯಾರ್ಥಿಗಳ ಮೊಬೈಲ್ ಸಂಖ್ಯೆಗೆ ನೇರವಾಗಿ ಕಳುಹಿಸಲಾಗಿದೆ. ಈ ಕುರಿತು ಮಾತನಾಡಿದ ವಿಟಿಯು ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್, ವಿಟಿಯು ತಂತ್ರಜ್ಞಾನ ಅಳವಡಿಕೆಯಲ್ಲಿ ಸದಾ ಮುಂದಿದೆ. ವಿದ್ಯಾರ್ಥಿಗಳ ಸ್ನೇಹಿಯಾಗಿದೆ ಎಂಬುದಕ್ಕೆ ಈ ಫಲಿತಾಂಶವೇ ಸಾಕ್ಷಿ. ಪರೀಕ್ಷೆ ಮುಗಿದ ಕೇವಲ 10 ನಿಮಿಷದಲ್ಲಿ ಫಲಿತಾಂಶ ನೀಡುವುದು ಸುಲಭದ ವಿಷಯವಲ್ಲ. ಇದಕ್ಕೆ ಸಹಕಾರ ನೀಡಿದ ವಿಟಿಯು ಆಡಳಿತ ಸಿಬ್ಬಂದಿ, ಪರೀಕ್ಷಾ ವಿಭಾಗದ ಸಿಬ್ಬಂದಿ ಮತ್ತು ಸಂಯೋಜಿತ ಕಾಲೇಜುಗಳ ಸಿಬ್ಬಂದಿಗೆ ಅಭಿನಂದನೆ ತಿಳಿಸುತ್ತೇನೆ ಎಂದರು.

> **ನಾವು ಉತ್ತರ ಪತ್ರಿಕೆಗಳನ್ನು ಡಿಜಿಟಲ್ ಮೌಲ್ಯಮಾಪನ ಮಾಡಲಿದ್ದು, ಫಲಿತಾಂಶ ಶೀಘ್ರವಾಗಿ ಪ್ರಕಟಿಸಲು ಸಿದ್ಧತೆ ನಡೆಸಲಾಗಿತ್ತು. ಎಲ್ಲರ ಸಹಕಾರದಿಂದ ಇದು ಸಾಧ್ಯವಾಗಿದೆ. ವಿದ್ಯಾರ್ಥಿಗಳು** https://results.vtu.ac.in/ **ವೆಬ್‌ಸೈಟ್ ಗೆ ಭೇಟಿ ನೀಡುವ ಮೂಲಕ ಫಲಿತಾಂಶವನ್ನು ಪಡೆದುಕೊಳ್ಳಬಹುದು.**
>
> **- ಪ್ರೊ.ಯು.ಜೆ.ಉಜ್ವಲ್**, ವಿಟಿಯು ಕುಲಸಚಿವ (ಮೌಲ್ಯಮಾಪನ)

ವಾಣಿಜ್ಯ ಸಂಕೀರ್ಣ ನವೀಕರಣಕ್ಕೆ ವೇಗ

ಬೆಂಗಳೂರು: ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಪ್ರಮುಖ ವಾಣಿಜ್ಯ ಕೇಂದ್ರವಾದ ಜಯನಗರ ವಾಣಿಜ್ಯ ಸಂಕೀರ್ಣದ ಸಮಗ್ರ ಅಭಿವೃದ್ಧಿ ಹಾಗೂ ಸುಸಜ್ಜಿತ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಶುಕ್ರವಾರ ಸ್ಥಳ ಪರಿಶೀಲನೆ ನಡೆಸಿದರು. ಈ ಕುರಿತು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಮಾತನಾಡಿ, ಸಂಕೀರ್ಣದ ನವೀಕರಣ, ಪಾರ್ಕಿಂಗ್ ವ್ಯವಸ್ಥೆ ಸುಧಾರಣೆ ಹಾಗೂ ಆಡಳಿತಾತ್ಮಕ ಸೌಲಭ್ಯಗಳ ವಿಸ್ತರಣೆಗೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗಿದೆ. ಸಾರ್ವಜನಿಕರಿಗೆ ಎದುರಾಗುತ್ತಿರುವ ವಾಹನ ನಿಲುಗಡೆ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿದೆ.

ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್

ಸೆಕ್ಷನ್ 13(2) ರ ಸರ್ಫೇಸಿ ಕಾಯಿದೆ, 2002ರ ಅಡಿ (ಕಾಯಿದೆ) ತಗಾದೆ ಸೂಚನೆ

ಕ್ರ. ಸಂ.	ಸಾಲಗಾರ(ರ) ಹೆಸರು ಮತ್ತು ವಿಳಾಸ	ಸಾಲದ ಮೊತ್ತ (ರೂ)	ಸಾಲದ ಖಾತಾ ಸಂಖ್ಯೆ	ಅಡಮಾನ ಮಾಡಿರುವ ಆಸ್ತಿಯ ವಿವರ	ಬರಬೇಕಾದ ಬಾಕಿ ಮೊತ್ತ (ರೂ)	ಎನ್‌ಪಿಎ ದಿನಾಂಕ
	(ಎ)	(ಬಿ)	(ಸಿ)	(ಡಿ)	(ಇ)	(ಎಫ್)
1.	1) ಮೆ॥ ವಿಭೂತಿ ಟ್ರೇಡಿಂಗ್ 2) ಮೆ॥ ಬಿಎನ್‌ಹೆಚ್ ಇನ್ಫ್ರಾ ಪ್ರಾಜೆಕ್ಟ್ಸ್ (ಇಂಡಿಯ) ಪ್ರೈವೇಟ್ ಲಿಮಿಟೆಡ್ 3) ಶ್ರೀಮತಿ ಶಿಲ್ಪ ಬಸವರಾಜ್ 4) ಶ್ರೀ ಗೌರವ್ ಶರ್ಮ	ರೂ.6,90,00,000/- ರೂ.50,00,000/-	53142128 54452295	ವಾಸಯೋಗ್ಯ ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿಯ ಮುನ್ಸಿಪಲ್ ನಂ. 29/2ಎ, ಪಿಐಡಿ ನಂ. 70-46-29/ಎ, ಕೆಂಗಲ್ ಹನುಮಂತಯ್ಯ ರಸ್ತೆ (ಡಬ್ಬಲ್ ರಸ್ತೆ), ಶಾಂತಿ ನಗರ, ಬೆಂಗಳೂರು ಇಲ್ಲಿದ್ದು, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಗೆ ಒಳಪಟ್ಟಿದೆ ಮತ್ತು ಚಕ್ಕುಬಂದಿ ಈ ರೀತಿಯಾಗಿದೆ : ಪೂರ್ವಕ್ಕೆ: ಸೈಟ್ ನಂ. 29, ಕೆ ಹೆಚ್ ರಸ್ತೆ, ಪಶ್ಚಿಮಕ್ಕೆ: ಡಬ್ಬಲ್‌ರಸ್ತೆ / ಕೆಹೆಚ್ ರಸ್ತೆ, ಉತ್ತರಕ್ಕೆ: ಸಾಮಾನ್ಯ ಪ್ಯಾಸೇಜ್, ದಕ್ಷಿಣಕ್ಕೆ: ಕೆಎಸ್‌ಆರ್‌ಟಿಸಿ ಕಾರ್ಪೊರೇಟ್ ಕಚೇರಿ. ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 50 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ ; 80 ಅಡಿ ಜೊತೆಗೆ ಆರ್‌ಸಿಸಿ ಮೇಲ್ಛಾವಣಿಯ ಕಟ್ಟಡವಿದ್ದು ನೆಲ. ಮೊದಲ, ಎರಡನೇ ಮತ್ತು ಮೂರನೆಯ ಮಹಡಿಗಳನ್ನು ಒಳಗೊಂಡ ಕಟ್ಟಡವಿದ್ದು, ಎಲ್ಲ ಮಹಡಿಗಳು ನಾಗರೀಕ ಸೌಲಭ್ಯಗಳನ್ನು ಒಳಗೊಂಡಿದೆ.	ರೂ.80253610.86	01.01.2025
2.	1) ಶ್ರೀಮತಿ ಫರ್ಜಾನ ಬೇಗಂ 2) ಶ್ರೀ ಮುಜೀಬ್ ಅಬ್ದುಲ್ ರಜಾಕ್	ರೂ.35,00,000/-	50278932	ವಾಸಯೋಗ್ಯ ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿಯ ನಂ.40, ಸೈಂಟ್ ಜಾನ್ಸ್ ರಸ್ತೆ, ಸಿವಿಲ್ ಸ್ಟೇಷನ್, ಬೆಂಗಳೂರು-560 042 ಇಲ್ಲಿದ್ದು, ವಿಸ್ತೀರ್ಣ 21156 ಚದರ ಅಡಿಗಳು ಮತ್ತು ಚಕ್ಕುಬಂದಿ ಈ ರೀತಿಯಾಗಿದೆ : ಪೂರ್ವಕ್ಕೆ: ಶೆಟ್ಟಿ ಗ್ಯಾರೇಜ್ ಮತ್ತು ಅಜಂತ ಚಿತ್ರಮಂದಿರ, ಪಶ್ಚಿಮಕ್ಕೆ ; ಲಕ್ಷ್ಮಿ ಚಿತ್ರಮಂದಿರ, ಉತ್ತರಕ್ಕೆ: ತೊಪ್ಪ ಮೊದಲಿಯಾರ್ ಚಾರಿಟೀಸ್ ಕಡೆಗೆ ಪ್ಯಾಸೇಜ್, ದಕ್ಷಿಣಕ್ಕೆ: ಅಣ್ಣಸ್ವಾಮಿ ಮೊದಲಿಯಾರ್ ರಸ್ತೆ. ಷೆಡ್ಯೂಲ್ ಬಿ : (ಡೀಡ್ ನ ಅಡಿ ಆಸ್ತಿಯನ್ನು ಇಲ್ಲಿ ವಿವರಿಸಲಾಗಿದೆ): 2.76% ಅಥವಾ 503.74 ಚದರ ಅಡಿಗಳ ಭಾಗ ಮಾಡಲಾಗದ ಪಾಲು, ಹಕ್ಕು, ಟೈಟಲ್ ಮತ್ತು ಹಿತಾಸಕ್ತಿಗಳು ಈ ಮೇಲಿನ ಷೆಡ್ಯೂಲ್ 'ಎ' ಆಸ್ತಿಯಲ್ಲಿದೆ. ಷೆಡ್ಯೂಲ್ ಸಿ : (ಡೀಡ್ ನ ಅಡಿ ಆಸ್ತಿಯನ್ನು ಇಲ್ಲಿ ವಿವರಿಸಲಾಗಿದೆ): ಅಪಾರ್ಟ್‌ಮೆಂಟ್ ನ ಫ್ಲ್ಯಾಟ್ ನಂ. 304 [ಪಿ.ಐ.ಡಿ ನಂ. 81-14-40/24, ವಾರ್ಡ್ ನಂ. 81/ಹಲಸೂರು], ಆಗಿದ್ದು, ವಿಸ್ತೀರ್ಣ 120 0ಚದರ ಅಡಿಗಳ ಸುಪರ್ ಬಿಲ್ಟಪ್ ಪ್ರದೇಶವು ಹಾಲ್, ಮೆಟ್ಟಿಲುಗಳು, ಲಿಫ್ಟ್ ಇತ್ಯಾದಿಗಳನ್ನು ಒಳಗೊಂಡಿದ್ದು, ನಾಲ್ಕನೇ ಮಹಡಿಯಲ್ಲಿದ್ದು, ಅಪಾರ್ಟ್‌ಮೆಂಟ್ ಸಂಕೀರ್ಣವನ್ನು "ಗ್ರೀನ್ ಕ್ಯಾಸಲ್" ಎಂದು ಕರೆಯಲಾಗುತ್ತಿದ್ದು, ಆರ್‌ಸಿಸಿ ಮೇಲ್ಛಾವಣಿ ಮತ್ತು ಮೊಸಾಯಿಕ್ ನೆಲಹಾಸು ಗಳಿಂದ ಈ ಮೇಲೆ ವಿವರಿಸಲಾದ ಷೆಡ್ಯೂಲ್ 'ಎ' ಆಸ್ತಿಯಲ್ಲಿ ನಿರ್ಮಿಸಲಾಗಿದ್ದು, ಒಟ್ಟಾಗಿ ಒಂದು ಕಾರು ನಿಲುಗಡೆಗೆ ಆವೃತ್ತವಾದ ಸ್ಥಳಾವಕಾಶವು ಈ ಮೇಲೆ ಹೇಳಲಾದ ಕಟ್ಟಡದ ತಳಮಹಡಿಯಲ್ಲಿ ಒದಗಿಸಲಾಗಿದೆ.	ರೂ.1003921.86	05.04.2026

ಕೆಳಸಹಿದಾರರು, ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಯಾಗಿದ್ದು, ತನ್ನ ವ್ಯವಹಾರವನ್ನು ನಂ. 26, 2ನೇ ಮಹಡಿ, ಪೂರ್ವ ವಿಂಗ್, ರಹೇಜ ಟವರ್ಸ್, ಎಂ ಜಿ ರಸ್ತೆ, ಬೆಂಗಳೂರು-560001 (ಇನ್ನು ಮುಂದೆ ಬ್ಯಾಂಕ್ ಎಂದು ಕರೆಯಲಾಗುವುದು) ಇಲ್ಲಿ ಹೊಂದಿದ್ದು, ಈ ಮೇಲೆ ಅಂಕಣ ಎ ಯಲ್ಲಿ ಹೆಸರಿಸಿರುವ ಸಾಲಗಾರ(ರು) ಬಿ ಅಂಕಣದಲ್ಲಿ ಹೆಸರಿಸಿರುವಂತೆ ಬೇರೆಯೆ ಸಾಲಸೌಲಭ್ಯಗಳನ್ನು ಖಾತಾ ಸಂಖ್ಯೆಯಲ್ಲಿ ಪಡೆದುಕೊಂಡಿದ್ದು, ಸಿ ಅಂಕಣದಲ್ಲಿ ಸಾಲದ ಮೊತ್ತವನ್ನು ಪ್ರತೀ ಸಾಲಗಾರರ ಹೆಸರಿನ ಎದುರು ಕ್ರಮ ಸಂ.1 ರಿಂದ 7ರವರೆಗೆ ನಮೂದಿಸಲಾಗಿದೆ.

ಮೇಲೆ ಹೇಳಲ್ಪಟ್ಟ ಸಾಲಸೌಲಭ್ಯಗಳನ್ನು ಅಂಕಣ ಡಿ ಯಲ್ಲಿ ಹೆಸರಿಸಿರುವ ಆಸ್ತಿಗಳನ್ನು ಅಡಮಾನ ಮಾಡುವ ಮೂಲಕ ಪ್ರತೀ ಸಾಲಗಾರರು (ಇನ್ನು ಮುಂದಕ್ಕೆ ಸಾಲಗಾರರು ಎನ್ನಲಾಗುವುದು)ಭದ್ರತೆಯಾಗಿ ಇಟ್ಟಿರುತ್ತಾರೆ

ಮೇಲೆ ಹೆಸರಿಸಿರುವ ಸಾಲಗಾರ(ರು) ಸಾಲದ ಖಾತೆಯ ಹಣವನ್ನು ಬುಕ್ಸ್ ಆಫ್ ಅಕೌಂಟ್ಸ್ ಪ್ರಕಾರ ಮರುಪಾವತಿ ಮಾಡಲು ವಿಫಲರಾಗಿದ್ದು, ಅದನ್ನು ಬ್ಯಾಂಕಿಂಗ್ ವ್ಯಾವಹಾರಿಕ ನಿಯಮಗಳನ್ವಯ ಅದು ಬಾಕಿ ಮೊತ್ತವಾಗಿ ಉಳಿದಿದ್ದು, ಅದನ್ನು ಅಂಕಣ ಇ ಯಲ್ಲಿ ಪ್ರತೀ ಸಾಲಗಾರರ ಹೆಸರಿನ ಮುಂದೆ ಉಲ್ಲೇಖಿಸಲಾಗಿದೆ.

ಪ್ರತೀ ಸಾಲಗಾರರ ಸಾಲದ ಖಾತೆಯ ಮುಂದೆ ಹೆಸರಿಸಲಾದ ಮೊತ್ತವನ್ನು, ಈ ಮೇಲಿನ ಸಾಲಗಾರರು ಮರುಪಾವತಿ ಮಾಡದೆ ಇರುವುದರಿಂದ ಬ್ಯಾಂಕ್ ಅದನ್ನು ಅಂಕಣ ಎಫ್ ನಲ್ಲಿ ಹೆಸರಿಸಿದ ದಿನಾಂಕದಂದು ಎನ್‌ಪಿಎ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಮಗಳನ್ವಯ ವರ್ಗೀಕರಿಸಿದೆ. ಇ ಪ್ರಕಾರ ಸೆಕ್ಷನ್ 13(2)ರ ಕಾಯ್ದೆ ಅನ್ವಯ ನೋಟೀಸನ್ನು ನೀಡಲಾಗಿದ್ದು, ಅದು ಅವರಿಂದ ಸ್ವೀಕೃತವಾಗದೆ ಬ್ಯಾಂಕ್‌ಗೆ ಹಿಂತಿರುಗಲ್ಪಟ್ಟಿದೆ.

ಈ ಮೇಲಿನ ಸುಸ್ತಿಯ ಅನ್ವಯ ಬ್ಯಾಂಕ್ ಈ ಮೇಲಿನ ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಮೇಲಿನ ಬಾಕಿ ಹಣವನ್ನು ಅಂಕಣ ಇಯಲ್ಲಿ ಹೆಸರಿಸಿರುವಂತೆ ಸಂಪೂರ್ಣವಾಗಿ ಬಡ್ಡಿ ಸಹಿತ ಈ ಸೂಚನೆ ಪ್ರಕಟವಾದ 60 ದಿನಗಳ ಒಳಗೆ ಮರುಪಾವತಿ ಮಾಡದೆ ಇದ್ದಲ್ಲಿ, ಬ್ಯಾಂಕ್ ತನ್ನಲ್ಲಿರುವ ಕಾನೂನಿನ ಅನ್ವಯ ಭದ್ರತಾ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲಿದೆ.

ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ, ಈ ಮೇಲೆ ಹೆಸರಿಸಿರುವ ಸಾಲಗಾರರು ಭದ್ರತಾ ಆಸ್ತಿಗಳನ್ನು ಬ್ಯಾಂಕಿನ ಲಿಖಿತ ಪೂರ್ವಾನುಮತಿ ಇಲ್ಲದೆ ಪರಭಾರೆ (ವರ್ಗಾವಣೆ, ಮಾರಾಟ, ಭೋಗ್ಯ ಅಥವಾ ಇನ್ನಿತರೆ ಯಾವುದೇ ರೂಪದಲ್ಲಿ ಸೇರಿದಂತೆ) ಮಾಡುವಂತಿಲ್ಲ. ಒಂದು ವೇಳೆ ಇಂತಹ ಯಾವುದೇ ಘಟನೆಗಳು ಸಂಭವಿಸಿದಲ್ಲಿ ಅದು ಜೈಲುಶಿಕ್ಷೆಯಂತಹ ಅಥವಾ ದಂಡ ಇಲ್ಲವೆ ಇವೆರಡನ್ನೂ ಅನುಭವಿಸಬೇಕಾಗುವಂತಹ ಅಪರಾಧವಾಗಲಿದೆ.

ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಉಪ ನಿಯಮ (8) ರ ಸೆಕ್ಷನ 13 ರಸರ್ಫೇಸಿ ಕಾಯಿದೆ ಅನ್ವಯ ನೀವು ಬಾಕಿ ಹಣವನ್ನು ಸಂಪೂರ್ಣವಾಗಿ ನಿಗದಿತ ಕಾಲಮಿತಿಯೊಳಗೆ ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಮರುಪಡೆದುಕೊಳ್ಳಬಹುದಾಗಿದೆ. ಅದರೊಂದಿಗೆ ನಿಮಗೆ ತಿಳಿಯಪಡಿಸುವುದೇನೆಂದರೆ, ನೀವು ಭದ್ರತಾ ಆಸ್ತಿಗಳನ್ನು ಮರುಪಡೆಯಲು ಬಡ್ಡಿ ಹಾಗೂ ಸಂಪೂರ್ಣ ವೆಚ್ಚ, ದರಗಳನ್ನು ಪಾವತಿಸಿ ಪಡೆದುಕೊಳ್ಳಬಹುದು, ಇಲ್ಲವಾದಲ್ಲಿ, ಬ್ಯಾಂಕ್ ಸಾರ್ವಜನಿಕ ಸೂಚನೆಯ ಮೂಲಕ / ಇ-ಹರಾಜು, ದರ ಪಟ್ಟಿ ಆಹ್ವಾನ, ಸಾರ್ವಜನಿಕರಿಂದ ಟೆಂಡರ್ ಆಹ್ವಾನ, ಖಾಸಗಿ ಟ್ರೀಟಿ ಇತ್ಯಾದಿಗಳ ಮೂಲಕ ಅವುಗಳನ್ನು ಮಾರಾಟ ನಡೆಸಿ ಬ್ಯಾಂಕ್‌ಗೆ ಬರಬೇಕಾದ ಸಂಪೂರ್ಣ ಹಣವನ್ನು ವಸೂಲಾತಿ ಮಾಡಿಕೊಳ್ಳಲಿದೆ.

ದಯವಿಟ್ಟು ಗಮನಿಸಿಕೊಳ್ಳಬೇಕಾದುದೇನೆಂದರೆ, ಸೆಕ್ಷನ್ 13(2)ರ ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್ 2002ರ ಅನ್ವಯ ಈ ನೋಟೀಸನ್ನು ನೀಡಲಾಗಿದೆ, ಬ್ಯಾಂಕ್ ತನ್ನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೇಲಿನ ಸಾಲಗಾರರಿಗೆ ಅವರ ಹೆಸರಿನೊಂದಿಗೆ ಇರುವ ವಿಳಾಸಕ್ಕೆ ನೋಟೀಸನ್ನು ನೀಡಿದ್ದು, ಅದು ಸಾಲಗಾರರ ಅಪಾಯ, ಜವಾಬ್ದಾರಿ ಮತ್ತು ವೆಚ್ಚಕ್ಕೆ ಬದ್ಧವಾಗಿರುತ್ತದೆ.

ದಿನಾಂಕ: 23.05.2026
ಸ್ಥಳ: ಬೆಂಗಳೂರು

ಸಹಿ/-
ಅಧಿಕೃತ ಅಧಿಕಾರಿಗಳು
ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್

10 ಮಹಿಳೆಯರಿಗೆ ಇವಿ ಆಟೋ ವಿತರಣೆ

ಬೆಂಗಳೂರು: ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮತ್ತು ಪರಿಸರ ಸ್ನೇಹಿ ನಗರ ಸಾರಿಗೆಗೆ ಉತ್ತೇಜನ ನೀಡುವ ಉದ್ದೇಶದಿಂದ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ನಗರದ ಕೋರಮಂಗಲ ಕಚೇರಿಯಲ್ಲಿ 10 ಮಹಿಳೆಯರಿಗೆ ಎಲೆಕ್ಟ್ರಿಕ್ ಆಟೋಗಳ ವಿತರಣೆ ಜತಗೆ ಪ್ರತಿ ವ್ಯಕ್ತಿಗೂ ಒಂದು ಲಕ್ಷ ರು. ಮುಂಗಡ ಹಣದ ಸಹಾಯಧನ ನೀಡಿದರು.

ಈ ಕುರಿತು ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ಮಾತನಾಡಿ, ಸ್ವಯಂ ಉದ್ಯೋಗದ ಮೂಲಕ ಗೌರವಯುತವಾಗಿ ಬದುಕು ಕಟ್ಟಿಕೊಳ್ಳಲು ಈ ಯೋಜನೆ ನೆರವಾಗಲಿದೆ. ಈ ಯೋಜನೆ ಮಹಿಳಾ ಸಬಲೀಕರಣದ ಜತೆಗೆ ಹಸಿರು ಸಾರಿಗೆ ವ್ಯವಸ್ಥೆ ನಿರ್ಮಾಣದ ಮಹತ್ವದ ಹೆಜ್ಜೆಯಾಗಿದೆ. ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಪರಿಸರ ಸ್ನೇಹಿ ಉದ್ಯೋಗಾವಕಾಶ ಒದಗಿಸುವ ಮೂಲಕ ನಗರ ಮಾಲಿನ್ಯ ನಿಯಂತ್ರಣಕ್ಕೂ ಯೋಜನೆ ಸಹಕಾರಿಯಾಗಲಿದೆ ಎಂದರು.

ರೋಗಿಗಳಿಗೆ ಸಿ.ಜಿ.ಐ.ಎಸ್.ಆರ್. ನೆರವಿನಡಿ ಬಿ.ಪಿ.ಎ.ಸಿ ಹಾಗೂ ಪೀಸ್ ಆಟೋಯೂನಿಯನ್ ಸಂಸ್ಥೆಯಲ್ಲಿ ವಿಶೇಷ ತರಬೇತಿ ನೀಡಲಾಗಿದೆ. ಆಯ್ಕೆಯಾದ ಮಹಿಳೆಯರೆಲ್ಲರೂ ಮಾನ್ಯ ಚಾಲನಾ ಪರವಾನಗಿ ಹೊಂದಿದ್ದು, ಇವಿ ಆಟೋಗಳನ್ನು ಸುರಕ್ಷಿತ ಮತ್ತು ವೃತ್ತಿಪರ ರೀತಿಯಲ್ಲಿ ಮಾಡಲು ಅಗತ್ಯ ತರಬೇತಿ ಪಡೆದಿದ್ದಾರೆ. ಯೋಜನೆಯಲ್ಲಿ ವಿಧವೆಯರು, ಏಕಪೋಷಕ ಮಹಿಳೆಯರು ಹಾಗೂ ಕುಟುಂಬದ ಬೆಂಬಲವಿಲ್ಲದ ಮಹಿಳೆಯರಿಗೆ ಆದ್ಯತೆ ನೀಡಲಾಗಿದೆ. ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಹಾಗೂ ಸಾಮಾಜಿಕ ಗೌರವದ ಬದುಕು ರೂಪಿಸುವ ಯೋಜನೆ ಪ್ರಮುಖ ಉದ್ದೇಶವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಪೀಸ್ ಆಟೋ ರಾಜ್ಯಾಧ್ಯಕ್ಷ ರಘು ನಾರಾಯಣ ಗೌಡ, ಬಿ.ಪ್ಯಾಕ್ ಕಾರ್ಯಕ್ರಮದ ಮುಖ್ಯಸ್ಥ ರಾಘವೇಂದ್ರ, ಪೂಜಾರಿ ಎಚ್.ಎಸ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ 10 ಮಹಿಳೆಯರಿಗೆ ಎಲೆಕ್ಟ್ರಿಕ್ ಆಟೋ ವಿತರಣೆ ಮಾಡಿದರು. ಈ ವೇಳೆ ಪೀಸ್ ಆಟೋ ರಾಜ್ಯಾಧ್ಯಕ್ಷ ರಘು ನಾರಾಯಣ ಗೌಡ, ಬಿ.ಪ್ಯಾಕ್ ಕಾರ್ಯಕ್ರಮದ ಮುಖ್ಯಸ್ಥ ರಾಘವೇಂದ್ರ, ಪೂಜಾರಿ ಎಚ್.ಎಸ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಮೋದಿ ತೈಲ ಉಳಿಕೆ ನೀತಿಗೆ ನಟ ಕಮಲ್ ಹಾಸನ್ ಬೆಂಬಲ

ದೆಹಲಿ: ಇರಾನ್ ಮತ್ತು ಅಮೆರಿಕ ನಡುವಿನ ಯುದ್ಧದಿಂದಾಗಿ, ಪೆಟ್ರೋಲ್ ಮತ್ತು ಇಂಧನ ಕೊರತೆಯು ವಿಶ್ವಾದ್ಯಂತ ಕಂಡುಬಂದಿದೆ. ನಡೆಯುತ್ತಿರುವ ಬಿಕ್ಕಟ್ಟಿನ ನಡುವೆ ಪ್ರಧಾನಿ ನರೇಂದ್ರ ಮೋದಿ ಇತ್ತೀಚೆಗೆ ರಾಷ್ಟ್ರಕ್ಕೆ ವಿಶೇಷ ಮನವಿ ಮಾಡಿದ್ದಾರೆ. ಪ್ರಧಾನಿ ಮೋದಿ ನಾಗರಿಕರು ಇಂಧನವನ್ನು ಸಂರಕ್ಷಿಸುವಂತೆ ಸಲಹೆ ನೀಡಿದರು. ಕಡಿಮೆ ಚಿನ್ನವನ್ನು ಖರೀದಿಸುವಂತೆ ಮತ್ತು ವಿದೇಶಿ ಪ್ರಯಾಣವನ್ನು ತಪ್ಪಿಸುವಂತೆ ಅವರು ಒತ್ತಾಯಿಸಿದರು. ಕಮಲ್ ಹಾಸನ್ ಈಗ ಪ್ರಧಾನಿ ಮೋದಿ ಅವರ ನಿರ್ಧಾರವನ್ನು ಶ್ಲಾಘಿಸಿದ್ದಾರೆ. ಎಂಎನ್‌ಎಂ ಅಧ್ಯಕ್ಷ ಮತ್ತು ಸಂಸದ ಕಮಲ್ ಹಾಸನ್, ಪ್ರಧಾನಿ ಮೋದಿ ಅವರ ಇಂಧನ ಸಂರಕ್ಷಣೆಯ ಕರೆಯನ್ನು ಬೆಂಬಲಿಸಿದರು. ರಾಷ್ಟ್ರೀಯ ಜವಾಬ್ದಾರಿಯು, ಪಕ್ಷ ರಾಜಕೀಯಗಳನ್ನೆಲ್ಲ ಮೀರಿದೆ ಎಂದು ಹೇಳಿದರು. ಭಾರತವು ಈ ಹಿಂದೆ ಏಕತೆಯಿಂದ, ತ್ಯಾಗದಿಂದ ಯುದ್ಧಗಳು, ಕೊರತೆಗಳು ಮತ್ತು ಜಾಗತಿಕ ಬಿಕ್ಕಟ್ಟುಗಳನ್ನು ಎದುರಿಸಿದೆ. ಅದೇ ರಾಷ್ಟ್ರೀಯ ಮನೋಭಾವವು ಈಗ ಅಗತ್ಯವಿದೆ ಎಂದು ಅವರು ಹೇಳಿದರು. 60ಕ್ಕೂ ಹೆಚ್ಚು ದೇಶಗಳು ಈಗಾಗಲೇ ಇಂಧನ ಉಳಿತಾಯ ನಿಯಮಗಳನ್ನು ಜಾರಿಗೆ ತಂದಿವೆ. ಪ್ರಧಾನಿ ಮೋದಿ ಎಲ್ಲರೂ ಇಂಧನವನ್ನು ಸಂರಕ್ಷಿಸು ವಂತೆ ಒತ್ತಾಯಿಸಿದ್ದಾರೆ. ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ಕಳೆದ ದಶಕದಲ್ಲಿ ಭಾರತದ ಸೌರ ಮತ್ತು ಪವನ ವಿದ್ಯುತ್ ಸಾಮರ್ಥ್ಯ ಹೆಚ್ಚಾಗಿದೆ ಎಂದರು.

ಸರಸ್ವತಿ, ಸದಾಶಿವಯ್ಯಗೆ ಕನ್ನಡ ಸಂಘರ್ಷ ಪ್ರಶಸ್ತಿ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ಪ್ರಶಸ್ತಿಗಳಿಗೆ ದು.ಸರಸ್ವತಿ ಹಾಗೂ ಆರ್ ಸದಾಶಿವಯ್ಯ ಜರಗನಹಳ್ಳಿ ಅವರನ್ನು ಆಯ್ಕೆ ಮಾಡಲಾಗಿದೆ.

ಕನ್ನಡ ಸಂಘರ್ಷ ಸಮಿತಿ 2026ನೇ ಸಾಲಿಗೆ ಕೊಡಮಾಡುವ ಡಾ.ಅನುಪಮಾ ನಿರಂಜನ ಪ್ರಶಸ್ತಿಗೆ ಬರಹಗಾರ್ತಿ ಹಾಗೂ ಸಾಮಾಜಿಕ ಕಾರ್ಯಕರ್ತೆ ದು.ಸರಸ್ವತಿ ಅವರನ್ನು ಹಾಗೂ ಡಾ. ಕೋ.ವೆಂ. ರಾ. ಕನ್ನಡ ಪರಿಚಾರಕ ಪ್ರಶಸ್ತಿಗೆ ಕನ್ನಡ ಕಾರ್ಯಕರ್ತ ಆರ್. ಸದಾಶಿವಯ್ಯ ಜರಗನಹಳ್ಳಿ ಅವರನ್ನು ಕಾರ್ಯಕಾರಿ ಸಮಿತಿ ಆಯ್ಕೆ ಮಾಡಿದೆ. ಪ್ರಶಸ್ತಿಯು ತಲಾ ಐದು ಸಾವಿರ ನಗದು, ಪ್ರಶಸ್ತಿ ಪತ್ರ ಹಾಗೂ ಫಲಕ ಒಳಗೊಂಡಿದೆ. ಜೂನ್14 ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಜರುಗಲಿರುವ ಡಾ. ಅನುಪಮಾ ನಿರಂಜನ ಹಾಗೂ ಡಾ.ಕೋ.ವೆಂ. ರಾಮಕೃಷ್ಣೇಗೌಡ ಅವರ ಹುಟ್ಟು ಹಬ್ಬದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಅವರು ಕಾರ್ಯಕ್ರಮ ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕರ್ನಾಟಕ ಲೇಖಕಿಯರ ಸಂಘದ ಮಾಜಿ ಅಧ್ಯಕ್ಷೆ ಎಚ್.ಎಲ್.ಪುಷ್ಪ, ಹಿರಿಯ ಪತ್ರಕರ್ತ ರಾಮಣ್ಣ ಎಚ್.ಕೋಡಿಹೊಸಹಳ್ಳಿ, ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ಉಪಸ್ಥಿತರಿರಲಿದ್ದಾರೆ.

ಪುಲ್ವಾಮಾ ದಾಳಿ ಸೂತ್ರಧಾರಿ ಹಮ್ಜಾ ಬುರ್ಹಾನ್ ಹತ್ಯೆ

ದೆಹಲಿ: 40 ಭಾರತೀಯ ಯೋಧರ ಸಾವಿಗೆ ಕಾರಣವಾಗಿದ್ದ ಭೀಕರ ಪುಲ್ವಾಮಾ ಉಗ್ರ ದಾಳಿಯ ಪ್ರಮುಖ ರೂವಾರಿಗಳಲ್ಲಿ ಒಬ್ಬನಾಗಿದ್ದ ಹಮ್ಜಾ ಬುರ್ಹಾನ್, ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಅಜ್ಞಾತ ಬಂದೂಕುಧಾರಿಗಳಿಂದ ಹತ್ಯೆಯಾಗಿದ್ದಾನೆ. ಮೂಲಗಳ ಪ್ರಕಾರ, ಪಾಕಿಸ್ತಾನದ ಮುಜಫರಾಬಾದ್‌ನಲ್ಲಿ ಅಪರಿಚಿತ ದುಷ್ಕರ್ಮಿಗಳು ಹಮ್ಜಾ ಬುರ್ಹಾನ್ ಮೇಲೆ ಗುಂಡಿನ ಸುರಿಮಳೆಗೈದಿದ್ದು, ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಕೇಂದ್ರ ಸರ್ಕಾರವು 2022ರಲ್ಲಿ ಹಮ್ಜಾ ಬುರ್ಹಾನ್‌ನನ್ನು 'ಉಗ್ರ' ಎಂದು ಘೋಷಿಸಿತ್ತು. ಸರ್ಕಾರದ ಅಧಿಕೃತ ಅಧಿಸೂಚನೆಯ ಪ್ರಕಾರ, ಈತನ ಮೂಲ ಹೆಸರು ಅರ್ಜುಮಂಡ್ ಗುಲ್ಜಾರ್ ದಾರ್. ಈತನನ್ನು ಹಮ್ಜಾ ಬುರ್ಹಾನ್ ಮತ್ತು 'ಡಾಕ್ಟರ್' ಎಂಬ ಅಡ್ಡ ಹೆಸರುಗಳಿಂದಲೂ ಕರೆಯಲಾಗುತ್ತಿತ್ತು. ಜಮ್ಮು-ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ರತ್ನಪೋರಾದ ಖರ್ಬತ್ಪೋರಾ ನಿವಾಸಿಯಾಗಿದ್ದ ಈತ, ಯುಎಪಿಎ ಕಾಯ್ದೆಯಡಿ ನಿಷೇಧಿತ ಭಯೋತ್ಪಾದಕ ಸಂಘಟನೆಯಾದ 'ಅಲ್ ಬದ್ರ್'ನ ಸಕ್ರಿಯ ಸದಸ್ಯನಾಗಿದ್ದನು. 2019ರಲ್ಲಿ ಜಮ್ಮು-ಶ್ರೀನಗರ ಹೆದ್ದಾರಿಯ ಪುಲ್ವಾಮಾ ಜಿಲ್ಲೆಯ ಲೆಥ್‌ಪೋರಾ ಬಳಿ ಭದ್ರತಾ ಸಿಬ್ಬಂದಿಯ ವಾಹನಗಳ ಸಾಲಿನ ಮೇಲೆ ಭೀಕರ ದಾಳಿ ನಡೆದಿತ್ತು. ಜೈಶ್ ಉಗ್ರ ಸಂಘಟನೆಯ ಅದೀಲ್ ಅಹ್ಮದ್ ದಾರ್ ಎಂಬಾತ ಸ್ಫೋಟಕ ತುಂಬಿದ್ದ ವಾಹನವನ್ನು ಸಿಆರ್‌ಪಿಎಫ್ ಯೋಧರ ವಾಹನಕ್ಕೆ ನುಗ್ಗಿಸಿ ಆತ್ಮಾಹುತಿ ದಾಳಿ ನಡೆಸಿದ್ದನು.

ಟಿವಿಕೆ ಸಂಪುಟ: ಮುಸ್ಲಿಂ ಲೀಗ್, ವಿಸಿಕೆಗೆ ಮಂತ್ರಿಗಿರಿ

ಚೆನ್ನೈ: ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಸರ್ಕಾರದಲ್ಲಿ ಮತ್ತೊಮ್ಮೆ ಸಚಿವ ಸಂಪುಟ ವಿಸ್ತರಣೆಯಾಗಿದೆ. ಶುಕ್ರವಾರ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಮತ್ತು ವಿದುಥಲೈ ಚಿರುತೈಗಲ್ ಕಚ್ಚಿ ಪಕ್ಷಗಳ ತಲಾ ಒಬ್ಬರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಚೆನ್ನೈನ ಲೋಕಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ನಾಯಕ ಪಾಪನಾಶಂ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ಎ.ಎಂ. ಶಾಹಜಹಾನ್, ವಿಸಿಕೆ ಪಕ್ಷದ ನಾಯಕ, ಟಿಂಡಿವನಂ ಕ್ಷೇತ್ರದ ಶಾಸಕ ವನ್ನಿ ಅರಸು ಅವರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಎ.ಎಂ. ಶಾಹಜಹಾನ್ ಅವರಿಗೆ ಅಲ್ಪ ಸಂಖ್ಯಾತ ಸಮುದಾಯಗಳ ಕಲ್ಯಾಣ ಖಾತೆ ನೀಡಿದ್ದು ವಕ್ಫ್ ಬೋರ್ಡ್ ಅನ್ನೂ ನೋಡಿಕೊಳ್ಳಲಿದ್ದಾರೆ. ವನ್ನಿ ಅರಸು ಅವರಿಗೆ ಸಾಮಾಜಿಕ ನ್ಯಾಯ ಖಾತೆ ನೀಡಲಾಗಿದೆ.

ಮಂತ್ರಿಗಳಿಂದ ವರಿಷ್ಠರ ಮೊರೆ | ಸ್ಥಾನ ರಕ್ಷಣೆಗೆ ಕಸರತ್ತು | ಸಿಎಂ ಆಪ್ತರಲ್ಲೂ ಆತಂಕ | ದೆಹಲಿ ದಂಡಯಾತ್ರೆಯಲ್ಲಿ ಸಿದ್ದು ಆಪ್ತರೇ ಹೆಚ್ಚು

ಪುನಾರಚನೆ ಭೀತಿ: ಸಚಿವರಲ್ಲಿ ಹೆಚ್ಚಿದ ಕುರ್ಚಿ ಪ್ರೀತಿ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ರಾಜ್ಯ ಕಾಂಗ್ರೆಸ್ ಸರಕಾರದಲ್ಲಿ ನಾಯಕತ್ವ ಬದಲಾವಣೆ ಕುರಿತಾದ ಅಸ್ಪಷ್ಟತೆಗಳಿಂದ ಸಚಿವರಲ್ಲಿ ಆತಂಕ ಶುರುವಾಗಿದೆ. ಒಂದು ಕಡೆ ನಾಯಕತ್ವದ ಬಗ್ಗೆ ಪಕ್ಷದ ವರಿಷ್ಠರು ಸ್ಪಷ್ಟವಾಗಿ ಏನನ್ನು ಹೇಳುತ್ತಿಲ್ಲ. ಇದರಿಂದ ಗೊಂದಲಕ್ಕೀಡಾಗಿರುವ ಅನೇಕ ಸಚಿವರು ವರಿಷ್ಠರ ಭೇಟಿಗಾಗಿ ದಿಢೀರ್ ದೆಹಲಿ ದಂಡಯಾತ್ರೆ ಆರಂಭಿಸಿದ್ದಾರೆ. ತಮ್ಮ ಸಚಿವ ಸ್ಥಾನದ ಭದ್ರತೆ ಬಗ್ಗೆ ವಿಶ್ವಾಸವಿಲ್ಲದ ಸಚಿವರು ಒಬ್ಬರಾದ ಮೇಲೆ ಒಬ್ಬರಂತೆ ತಮ್ಮ ಪೋಷಕ ವರಿಷ್ಠ ನಾಯಕರನ್ನು ಭೇಟಿಯಾಗುತ್ತಿದ್ದಾರೆ, ಅಷ್ಟೇ ಅಲ್ಲದೆ ಸಂಪುಟ ಪುನಾರಚನೆ ವೇಳೆ ತಮ್ಮನ್ನು ಮುಂದುವರಿಸಿ ಎಂದು ವಿನಂತಿಸುತ್ತಿದ್ದಾರೆ.

ಅದರಲ್ಲೂ ಕೆಲವು ಸಚಿವರು ಪಕ್ಷದ ವರಿಷ್ಠರಾದ ಮಲ್ಲಿಕಾರ್ಜುನ ಖರ್ಗೆ, ರಣದೀಪ್ ಸಿಂಗ್ ಸುರ್ಜೆವಾಲಾ ಹಾಗೂ ಕೆ.ಸಿ.ವೇಣುಗೋಪಾಲ್ ಸೇರಿದಂತೆ ಅನೇಕ ಹಿರಿಯ ನಾಯಕರನ್ನು ಭೇಟಿಯಾಗಿ ಮಂತ್ರಿ ಸ್ಥಾನ ಉಳಿಸಿಕೊಳ್ಳಲು ನಾನಾ ರೀತಿಯ ಮನವರಿಕೆ ಕಸರತ್ತು ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹಾಗೆ ನೋಡಿದರೆ ಸಚಿವ ಸಂಪುಟ ಪುನಾರಚನೆಯಾಗಲಿ, ನಾಯಕತ್ವ ಬದಲಾವಣೆಯಾಗಲಿ ಯಾವುದೇ ವಿಷಯದ ಬಗ್ಗೆಯೂ ಪಕ್ಷದ ವರಿಷ್ಠರು ಅಧಿಕೃತ ಮಾಹಿತಿಯನ್ನೇ ಪ್ರಕಟಿಸಿಲ್ಲ. ಹಾಗಿದ್ದರೂ ಸಚಿವರಲ್ಲಿ ತಮ್ಮ ಸ್ಥಾನದ ಅಳಿವು ಉಳಿವಿನ ಬಗ್ಗೆ ಆತಂಕ ಶುರುವಾಗಿದ್ದು, ಇದು ಮುಂದೆ ಪಕ್ಷ ಹಾಗೂ ಸರಕಾರದಲ್ಲಿ ನಡೆಯಬಹುದಾದ ಬದಲಾವಣೆಯನ್ನು ಸೂಚಿಸುತ್ತದೆ ಎಂದು ಪಕ್ಷದ ಹಿರಿಯ ನಾಯಕರು ಅಭಿಪ್ರಾಯಪಟ್ಟಿದ್ದಾರೆ.

ಅಷ್ಟಕ್ಕೂ ಸದ್ಯ ಸಂಪುಟದಲ್ಲಿ ಇರುವ ಸಚಿವರ ಪೈಕಿ ಈಗಾಗಲೇ ಸಾಕಷ್ಟು (ಕಳೆದ ಬಾರಿಯೂ) ಬಾರಿ ಮಂತ್ರಿ ಸ್ಥಾನದ ಅಧಿಕಾರ ಅನುಭವಿಸಿ ಬಂದವರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಆದ್ದರಿಂದ ಈಗ ಏನಾದರೂ ಸಂಪುಟ ಪುನಾರಚನ ನಡೆದರೆ, ತಮ್ಮನ್ನು ಬದಲಾವಣೆ ಮಾಡುವುದು ಖಚಿತ ಎನ್ನುವುದು ಅನೇಕ ಸಚಿವರಿಗೆ ಮನವರಿಕೆಯಾಗಿದೆ ಎನ್ನಲಾಗಿದೆ. ಹೀಗಾಗಿ ಅನೇಕ ಸಚಿವರು ತಮ್ಮದೇ 'ಗಾಡ್ ಫಾದರ್ ನಾಯಕ'ರ ಭೇಟಿಗಾಗಿ ಪದೇ ಪದೇ ದೆಹಲಿಗೆ ಹೋಗಿ ಬರುತ್ತಿದ್ದಾರೆ ಎನ್ನಲಾಗಿದೆ.

ಈ ಮಧ್ಯೆ ಒಂದು ಕಡೆ ಸಚಿವ ಆಕಾಂಕ್ಷಿಗಳು ಗುಂಪು ಗುಂಪಾಗಿ ಬೆಂಗಳೂರಿನಲ್ಲಿ ಸಭೆ ನಡೆಸಿ, ನಂತರ ದೆಹಲಿಯಲ್ಲಿ ವರಿಷ್ಠರನ್ನು ಭೇಟಿಯಾಗಲು ಯತ್ನಿಸುತ್ತಿದ್ದರೆ, ಅತ್ತ ಮಂತ್ರಿಗಳು ಪಕ್ಷದ ದೆಹಲಿ ನಾಯಕರನ್ನು ನಾಯಕರನ್ನು ಅಧಿಕೃತವಲ್ಲದ ಭೇಟಿಯಲ್ಲಿ ಮಾತನಾಡಿಸಿ ಬರುತ್ತಿದ್ದಾರೆ ಎನ್ನಲಾಗಿದೆ. ಇದರಿಂದ ಎಐಸಿಸಿ ಅಧ್ಯಕ್ಷರು ಬೇಸರ ಗೊಂಡಿದ್ದು, ಸಚಿವರು ಪದೇ ಪದೇ ದೆಹಲಿಗೆ ಬಂದು ತಮ್ಮ ರಕ್ಷಣೆಗೆ ಒತ್ತಡ ಹಾಕುವುದು ಬೇಡ ಎನ್ನುವ ಪರೋಕ್ಷ ಸಂದೇಶವನ್ನೂ ರವಾನಿಸಿದ್ದಾರೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

ವಿಶೇಷವೆಂದರೆ ದೆಹಲಿ ದಂಡಯಾತ್ರೆ ನಡೆಸುತ್ತಿರುವ ಸಚಿವರ ಪೈಕಿ ಮುಖ್ಯಮಂತ್ರಿ ಅವರ ಆಪ್ತ ಸಚಿವರೇ ಹೆಚ್ಚಾಗಿದ್ದಾರೆ ಎನ್ನಲಾಗಿದೆ. ಈ ಬೆಳವಣಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಬೇಸರ ತಂದಿದ್ದು, ಈ ಬಗ್ಗೆ ಪರೋಕ್ಷ ಸೂಚನೆಗಳನ್ನು ನೀಡಿದ್ದಾರೆ ಎನ್ನಲಾಗಿದೆ.

ಈ ಮಧ್ಯೆ ಸಚಿವ ಸ್ಥಾನ ಆಕಾಂಕ್ಷಿ ಶಾಸಕರು ವರಿಷ್ಠರ ಮೇಲೆ ಒತ್ತಡ ಹೇರಲು ಗುಂಪು ಗುಂಪಾಗಿ ದೆಹಲಿಗೆ ತೆರಳುತ್ತಿರುವ ಬಗ್ಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೇಸರ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದ್ದು, ಇದರಿಂದ ಪಕ್ಷದ ಬಗ್ಗೆ ಕೆಟ್ಟ ಸಂದೇಶ ರವಾನೆ ಆಗುತ್ತದೆ ಎಂಬ ಎಚ್ಚರಿಕೆ ನೀಡಿದ್ದಾರೆ ಎಂದು ಕೆಲವು ಶಾಸಕರು ಹೇಳಿದ್ದಾರೆ. ಹೀಗಾಗಿ ಶುಕ್ರವಾರ ರಿಜ್ವಾನ್ ಹರ್ಷದ್, ಕನೀಜ್ ಫಾತಿಮಾ, ಯಾಸಿರ್ ಖಾನ್ ಸೇರಿದಂತೆ ಕೆಲವು ಅಲ್ಪಸಂಖ್ಯಾತ ಶಾಸಕರು ದೆಹಲಿಗೆ ತೆರಳಿ ಪಕ್ಷದ ಹಿರಿಯರನ್ನು ಭೇಟಿ ಮಾಡಿದ್ದಾರೆ.

ಒಟ್ಟಾರೆ ರಾಜ್ಯ ಸರಕಾರದಲ್ಲಿ ಸದ್ಯ ಯಾವುದೇ ಬೆಳವಣಿಗೆ ನಡೆಯದಿದ್ದರೂ ಸಚಿವರಲ್ಲಿ ತಮ್ಮ ಕುರ್ಚಿಗೆ ಬಗ್ಗೆ ಆತಂಕ ಹೆಚ್ಚಾಗುತ್ತಿರುವುದು ಅಚ್ಚರಿಗೆ ಕಾರಣವಾಗಿದೆ.

25 ಸಚಿವರ ಕುರ್ಚಿಗೆ ಕುತ್ತು?

ಎಐಸಿಸಿ ಮೂಲಗಳ ಪ್ರಕಾರ ಸಚಿವ ಸಂಪುಟ ಪುನಾರಚನೆ ನಡೆದರೆ ಅದು ಜುಲೈ ಅಂತದ ವೇಳೆಗೆ ನಡೆಯುವ ಸಾಧ್ಯತೆ ಇದೆ. ಆ ಸಂದರ್ಭದಲ್ಲಿ ರಾಜ್ಯ ಸಂಪುಟದಲ್ಲಿರುವ ಸುಮಾರು 25ಕ್ಕೂ ಹೆಚ್ಚು ಸಚಿವರನ್ನು ಬದಲಿಸುವ ಆಲೋಚನೆ ಪಕ್ಷದ ಹಿರಿಯ ನಾಯಕರದ್ದಾಗಿದೆ, ಅಷ್ಟೇ ಅಲ್ಲ ಸಚಿವ ಸ್ಥಾನದ ಅಧಿಕಾರವನ್ನು ಹೆಚ್ಚಿನ ಅವಧಿ ಅನುಭವಿಸಿದವರಿಗೆ ಪಕ್ಷ ಸಂಘಟನೆಯ ಬೇರೆ ಬೇರೆ ಹೊಣೆಗಾರಿಕೆಗಳನ್ನು ವಹಿಸಿಕೊಡಬೇಕೆನ್ನುವ ಚಿಂತನೆಯೂ ಪಕ್ಷದ ವರಿಷ್ಠರದಾಗಿದೆ. ಈ ಮೂಲಕ ಯುವಕರು, ನೂತನ ಶಾಸಕರು ಸೇರಿದಂತೆ ಹೊಸ ತಲೆಮಾರಿನ ರಾಜಕಾರಣಕ್ಕೆ ಅವಕಾಶ ಮಾಡಿಕೊಡಬೇಕೆನ್ನುವುದು ಪಕ್ಷದ ಹಿರಿಯ ನಾಯಕರ ಲೆಕ್ಕಾಚಾರ ಎನ್ನಲಾಗಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುಮಾರು 10ರಿಂದ 12 ಸಚಿವರನ್ನು ಮಾತ್ರ ಬದಲಾವಣೆ ಮಾಡಬೇಕೆನ್ನುವ ನಿಟ್ಟಿನಲ್ಲಿ ಚರ್ಚೆ ನಡೆಸಿದ್ದು, ಈ ವಿಷಯದಲ್ಲಿ ಮುಖ್ಯಮಂತ್ರಿಯವರು ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಹೇಗೆ ಮನವರಿಕೆ ಮಾಡಿಕೊಡುತ್ತಾರೆ ಎನ್ನುವುದನ್ನು ಕಾದು ನೋಡಬೇಕಿದೆ.

ದೇಶದಲ್ಲೇ ಮೊದಲ ಬಾರಿಗೆ ಜಾನುವಾರುಗಳಿಗೆ ಬಯೋಮೆಟ್ರಿಕ್ ಆಧಾರಿತ ಗುರುತಿಗೆ ಮುಂದಾದ ರಾಜ್ಯ ಸರಕಾರ

ರಾಜ್ಯದ ಜಾನುವಾರುಗಳಿಗೆ ಆಧಾರ್ ಭಾಗ್ಯ

ಬೆಂಗಳೂರು: ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ರೈತರ ಜೀವನಾಡಿಯಾಗಿರುವ ಜಾನುವಾರುಗಳಿಗೂ ಆಧಾರ್ ಮಾದರಿಯ ಬಯೋಮೆಟ್ರಿಕ್ ಗುರುತಿನ ವ್ಯವಸ್ಥೆಯನ್ನು ಜಾರಿಗೆ ತರಲು ರಾಜ್ಯ ಸರಕಾರ ಮಹತ್ವದ ಹೆಜ್ಜೆ ಇಟ್ಟಿದೆ.

ಈ ಹೊಸ ವ್ಯವಸ್ಥೆಯಲ್ಲಿ ಜಾನುವಾರುಗಳ ಮೂಗಿನ ಭಾಗದ ವೈಶಿಷ್ಟ್ಯಪೂರ್ಣ ಗುರುತುಗಳನ್ನು ಆಧರಿಸಿ ಬಯೋಮೆಟ್ರಿಕ್ ಗುರುತಿನ ಚೀಟಿ ಸೃಷ್ಟಿಸಲಾಗುತ್ತದೆ.

ಭಾರತದಲ್ಲೇ ಮೊದಲ ಬಾರಿಗೆ ಜಾರಿಗೆ ಬರುತ್ತಿರುವ ಈ ಯೋಜನೆ, ಸಾಂಪ್ರದಾಯಿಕ ಕಿವಿ ಚುಚ್ಚುವ ಟ್ಯಾಗ್ ವ್ಯವಸ್ಥೆಗೆ ಪರ್ಯಾಯವಾಗಲಿದೆ. ಜಾನುವಾರುಗಳ ಮೂಗಿನ ಮೇಲಿನ ರೇಖೆಗಳು, ಮಡಚುಗಳು ಮತ್ತು ಗುರುತುಗಳು ಮಾನವರ ಬೆರಳಚ್ಚಿನಂತೆಯೇ ವಿಶಿಷ್ಟವಾಗಿರುವುದರಿಂದ, ಅದನ್ನು ಡಿಜಿಟಲ್ ಗುರುತಾಗಿ ಬಳಸಲಾಗುತ್ತಿದೆ.

ರಾಜ್ಯದ ಇ-ಆಡಳಿತ ಕೇಂದ್ರ ಮತ್ತು ಕೃತಕ ಬುದ್ಧಿಮತ್ತೆ ವಿಭಾಗದ ಸಹಯೋಗದಲ್ಲಿ ಈ ಯೋಜನೆ ರೂಪುಗೊಂಡಿದ್ದು, ಪ್ರಾಯೋಗಿಕವಾಗಿ ಜಾರಿಗೆ ತರಲು ಸಿದ್ಧತೆಗಳು ನಡೆಯುತ್ತಿವೆ. ಈ ಡಿಜಿಟಲ್ ವ್ಯವಸ್ಥೆಯ ಮೂಲಕ ಜಾನುವಾರುಗಳ ಲಸಿಕೆ ವಿವರ, ಆರೋಗ್ಯ ಸ್ಥಿತಿ, ವಿಮೆ ಮಾಹಿತಿ ಹಾಗೂ ಸಾವಿನ ಪರಿಹಾರ ಅರ್ಜಿಗಳನ್ನು ಸುಲಭವಾಗಿ ಟ್ರ್ಯಾಕ್ ಮಾಡಬಹುದಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ) ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ ಅವರು ಮಾತನಾಡಿ, 'ಈ ಯೋಜನೆ ಜಾನುವಾರುಗಳ ನಿಖರ ಗುರುತನ್ನು ಖಚಿತಪಡಿಸುವುದರ ಜತೆಗೆ ಪಶುಸಂಗೋಪನಾ ಯೋಜನೆಗಳಲ್ಲಿ ನಡೆಯುವ ವಂಚನೆ ತಡೆಯಲು ಸಹಾಯಕವಾಗಲಿದೆ' ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಪ್ರಸ್ತುತ ಒಂದು ಕೋಟಿಗೂ ಹೆಚ್ಚು ಜಾನುವಾರುಗಳಿದ್ದು, ಪ್ರತಿವರ್ಷ ಸುಮಾರು 10 ಲಕ್ಷದಷ್ಟು ಜಾನುವಾರುಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಇಷ್ಟು ದೊಡ್ಡ ಸಂಖ್ಯೆಯ ಜಾನುವಾರುಗಳನ್ನು ನಿರ್ವಹಿಸಲು ಎಐ ಆಧಾರಿತ ಡಿಜಿಟಲ್ ವ್ಯವಸ್ಥೆ ಪರಿಣಾಮಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕೃತಕ ಬುದ್ಧಿಮತ್ತೆ ವಿಭಾಗದ ಯೋಜನಾ ನಿರ್ದೇಶಕ ಶ್ರೀವ್ಯಾಸ್ ಎಚ್‌ಎಂ ಮಾತನಾಡಿ, 'ಪ್ರಸ್ತುತ ಜಾನುವಾರುಗಳ ಗುರುತಿಗಾಗಿ ಕಿವಿ ಚುಚ್ಚುವ ವಿಧಾನ ಬಳಸಲಾಗುತ್ತಿದೆ. ಆದರೆ ಎಐ ಆಧಾರಿತ ಮೂಗು ಗುರುತು ವ್ಯವಸ್ಥೆಯಿಂದ ಸುಲಭ ಹಾಗೂ ವೇಗವಾದ ಗುರುತು ಸಾಧ್ಯವಾಗಲಿದೆ' ಎಂದು ಹೇಳಿದ್ದಾರೆ.

ಯೋಜನೆಯ ವೈಶಿಷ್ಟ್ಯಗಳೇನು?

ಜಾನುವಾರು ಆಧಾರ್ ಮಾಡಿಸಿದ ರೈತರಿಗೆ ಲಸಿಕೆ ದಿನಾಂಕಗಳ ಬಗ್ಗೆ ಎಸ್‌ಎಂಎಸ್ ಮೂಲಕ ಮುಂಚಿತ ಮಾಹಿತಿ ನೀಡಲಾಗುತ್ತದೆ. ಹೊಸದಾಗಿ ಹುಟ್ಟುವ ಕರುಗಳಿಗೂ ಡಿಜಿಟಲ್ ದಾಖಲೆ ಸೃಷ್ಟಿಸಬಹುದು. ಮುಂದಿನ ದಿನಗಳಲ್ಲಿ ಜಾನುವಾರುಗಳ ಮೂಗಿನ ಫೋಟೋ ಸ್ಕ್ಯಾನ್ ಮೂಲಕ ಆರೋಗ್ಯ ಮೌಲ್ಯಮಾಪನ ಮಾಡಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎಐ ಆಧಾರಿತ ವ್ಯವಸ್ಥೆ ಪಶುಸಂಗೋಪನಾ ಇಲಾಖೆಯಲ್ಲಿ ಡಿಜಿಟಲ್ ಆಡಳಿತ ಬಲಪಡಿಸುವುದರ ಜತೆಗೆ ಜಾನುವಾರುಗಳ ಗುರುತು ಮತ್ತು ದಾಖಲೆ ನಿರ್ವಹಣೆಯಲ್ಲಿ ಹೆಚ್ಚಿನ ಪಾರದರ್ಶಕತೆ ಆಗುವ ನಿರೀಕ್ಷೆಯಿದೆ.

ಸ್ಫೋಟಕ ಸಂಚು: 31 ಬಾಂಬ್ ಪತ್ತೆ

ಕೋಲ್ಕತ್ತಾ: ಒಟ್ಟಿಗೆ ಜೋಡಿಸಲಾದ 31 ಜೀವಂತ ಬಾಂಬ್‌ಗಳು ಪತ್ತೆಯಾಗಿರುವ ಘಟನೆ ಪಶ್ಚಿಮ ಬಂಗಾಳದಲ್ಲಿ ನಡೆದಿದೆ. ಬಂಗಾಳದ ಬಿರ್ಭುಮ್ ಪ್ರದೇಶದಲ್ಲಿ ಶುಕ್ರವಾರ ಬೆಳಗ್ಗೆ ಬಾಂಬ್ ಅನ್ನು ನೋಡಿದ ಸ್ಥಳೀಯರು ಈ ಕುರಿತು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಜೀವಂತ ಬಾಂಬ್‌ಗಳನ್ನು ನೋಡಿದ ಸ್ಥಳೀಯರಲ್ಲಿ ಆತಂಕ ಹೆಚ್ಚಾಗಿದ್ದು, ತಕ್ಷಣವೇ ಬಾಂಬ್ ನಿಷ್ಕ್ರಿಯ ದಳಕ್ಕೆ ಮಾಹಿತಿ ನೀಡಿದ ಪೊಲೀಸರು ಪ್ರದೇಶವನ್ನು ಸೀಲ್ ಮಾಡಿ ತನಿಖೆ ಪ್ರಾರಂಭಿಸಿದ್ದಾರೆ.

ಬಿರ್ಭುಮ್ ಪ್ರದೇಶದ ಕೆರೆಯ ದಂಡೆಯ ಬಳಿ ಜೀವಂತ ಬಾಂಬ್‌ಗಳಿದ್ದವು. ಇದನ್ನು ನೋಡಿದ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದರು. ತಕ್ಷಣವೇ ಸ್ಥಳಕ್ಕೆ ಆಗಮಿಸಿದ ದೊಡ್ಡ ಪೊಲೀಸ್ ತುಕಡಿಯು ಪ್ರದೇಶವನ್ನು ಸುತ್ತುವರಿದಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಭದ್ರತಾ ಕ್ರಮಗಳನ್ನು ಪ್ರಾರಂಭಿಸಿತು. ಒಟ್ಟು ಸುಮಾರು 31 ಜೀವಂತ ಬಾಂಬ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಪ್ರದೇಶ ಸುರಕ್ಷಿತವಾಗಿದೆ ಎಂದು ದೃಢಪಡಿಸಲಾಗಿದೆ. ನಾಗರಿಕರ ಸುರಕ್ಷತೆಗಾಗಿ ಸಂಪೂರ್ಣ ಪ್ರದೇಶವನ್ನು ಸೀಲ್ ಮಾಡಲಾಗಿದೆ. ಸ್ಫೋಟಕಗಳನ್ನು ನಿಷ್ಕ್ರಿಯಗೊಳಿಸಲು ಬಾಂಬ್ ನಿಷ್ಕ್ರಿಯ ದಳವನ್ನು ಕೂಡ ಕರೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ಸಂಘ ಕತಾರ್ ಪದಾಧಿಕಾರಿಗಳ ಆಯ್ಕೆ

ಕರ್ನಾಟಕ ಸಂಘ ಕತಾರ್‌ನ ನೂತನ ಪದಾಧಿಕಾರಿಗಳು.

ದೋಹಾ: ಭಾರತೀಯ ಸಾಂಸ್ಕೃತಿಕ ಕೇಂದ್ರ (ಐಸಿಸಿ) ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಮುಖ ಭಾರತೀಯ ಸಂಘಟನೆ ಗಳಲ್ಲೊಂದಾದ ಕರ್ನಾಟಕ ಸಂಘ ಕತಾರ್‌ನ 2026-28ನೇ ಸಾಲಿನ ನೂತನ ಆಡಳಿತ ಸಮಿತಿಯನ್ನು ಮೇ 15ರಂದು ಐಸಿಸಿ ಸಭಾಂಗಣದಲ್ಲಿ ನಡೆದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯಲ್ಲಿ ಆಯ್ಕೆ ಮಾಡಲಾಯಿತು.

ಸಂಘದ 15ನೇ ಅಧ್ಯಕ್ಷರಾಗಿ ಸುಬ್ರಮಣ್ಯ ಹೆಬ್ಬಾಗಿಲು ಅವರು ಅವಿರೋಧವಾಗಿ ಆಯ್ಕೆ ಯಾಗಿದ್ದಾರೆ. ಕುಂದಾಪುರ ತಾಲ್ಲೂಕಿನ ಬೈಂದೂರಿನವರಾದ ಅವರು ಭಾರತೀಯ ಸಮುದಾಯದಲ್ಲಿ ಸಾಮಾಜಿಕ ಮತ್ತು ಸಮುದಾಯ ಸೇವಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಅವರು ಹಲವು ವರ್ಷ ಗಳಿಂದ ಮಾನವೀಯ, ಸಾಂಸ್ಕೃತಿಕ ಹಾಗೂ ಸೇವಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು, ಸಮುದಾಯದ ಗೌರವಾನ್ವಿತ ನಾಯಕರಾಗಿ ಗುರುತಿಸಿಕೊಂಡಿದ್ದಾರೆ.

ಈ ಹಿಂದೆ ಭಾರತೀಯ ಸಾಂಸ್ಕೃತಿಕ ಕೇಂದ್ರದ ಉಪಾಧ್ಯಕ್ಷರಾಗಿ, ಭಾರತೀಯ ಕ್ರೀಡಾ ಕೇಂದ್ರದ ಸಲಹಾ ಮಂಡಳಿ ಸದಸ್ಯರಾಗಿ ಹಾಗೂ ಭಾರತೀಯ ಸಮುದಾಯ ಹಿತಚಿಂತಕ ವೇದಿಕೆಯ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

ಸಂಘದ ನೂತನ ಆಡಳಿತ ಸಮಿತಿಯಲ್ಲಿ ಅನಿಲ ಭಾಸಗಿ ಉಪಾಧ್ಯಕ್ಷರಾಗಿ, ಸುಜಿತ ಕುಮಾರ ಹೊಸದುರ್ಗ ಪ್ರಧಾನ ಕಾರ್ಯ ದರ್ಶಿಯಾಗಿ, ಮಂಜೋತ ಸುರೇಶ ಖಜಾಂಚಿಯಾಗಿ, ಭಾವನಾ ನವೀನ ಸಾಂಸ್ಕೃತಿಕ ಕಾರ್ಯ ದರ್ಶಿಯಾಗಿ, ಶಶಿಧರ ಹೆಚ್.ಬಿ. ಜಂಟಿ ಸಾಂಸ್ಕೃತಿಕ ಹಾಗೂ ಕನ್ನಡ ಚಟುವಟಿಕೆಗಳ ಕಾರ್ಯದರ್ಶಿಯಾಗಿ, ಎಲ್.ಜಿ. ಪಾಟೀಲ ಕ್ರೀಡಾ ಕಾರ್ಯದರ್ಶಿ ಯಾಗಿ, ಪ್ರಶಾಂತ ಹಿರೇಮಠ ಮಾಧ್ಯಮ, ಸಾರ್ವಜನಿಕ ಸಂಪರ್ಕ ಹಾಗೂ ಹಿತಚಿಂತಕ ಕಾರ್ಯದರ್ಶಿಯಾಗಿ, ಪ್ರಭುರಾಜು ಜಗಲೂರು ಇವೆಂಟ್ ಮತ್ತು ಲಾಜಿಸ್ಟಿಕ್ಸ್ ಕಾರ್ಯದರ್ಶಿಯಾಗಿ, ಶುಭಾ ಆರ್. ರಾವ್ ಮಹಿಳಾ ಮತ್ತು ಮಕ್ಕಳ ಚಟುವಟಿಕೆಗಳ ಕಾರ್ಯದರ್ಶಿಯಾಗಿ, ದಾಕ್ಷಾಯಿಣಿ ಜಿ. ಜಂಟಿ ಕ್ರೀಡಾ ಕಾರ್ಯದರ್ಶಿಯಾಗಿ, ಗುರು ಪ್ರಸಾದ್ ಬಿ.ಕೆ. ಪರಿಸರ ಮತ್ತು ಸದಸ್ಯತ್ವ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಸಂಘದ ನಿಕಟ ಪೂರ್ವಾಧ್ಯಕ್ಷರಾದ ಎಂ. ರವಿ ಶೆಟ್ಟಿಯವರು ಸಲಹಾ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಲಿದ್ದಾರೆ. ನಿರ್ಗಮಿತ ಅಧ್ಯಕ್ಷರಾದ ಎಂ. ರವಿ ಶೆಟ್ಟಿ ಅವರು 2024-25ರ ಅವಧಿಯಲ್ಲಿ ಸಹಕರಿಸಿದ ಎಲ್ಲಾ ಸದಸ್ಯರು ಹಾಗೂ ಪದಾಧಿಕಾರಿ ಗಳಿಗೆ ಧನ್ಯವಾದ ಸಲ್ಲಿಸಿದರು. ಸಲಹಾ ಸಮಿತಿ ಸದಸ್ಯರಾದ ಅರುಣ್ ಕುಮಾರ್, ವಿ.ಎಸ್. ಮನ್ನಂಗಿ, ದೀಪಕ ಶೆಟ್ಟಿ, ಡಾ. ಸಂಜಯ ಕುದರಿ, ಮಹೇಶ ಗೌಡ ಹಾಗೂ ಐಸಿಸಿ ಮಾಜಿ ಅಧ್ಯಕ್ಷೆ ಮಿಲನ್ ಅರುಣ್ ಅವರು ನೂತನ ಸಮಿತಿಗೆ ಅಭಿನಂದನೆ ಸಲ್ಲಿಸಿ, ಶುಭ ಹಾರೈಸಿದರು.

ಮುಂದಿನ ವಾರದಿಂದ ವಿಚಾರಣೆ, ಪೋಷಕರ ಪರ ರೋಹಟಗಿ ವಾದ

ಸಿಬಿಎಸ್‌ಇ ತ್ರಿಭಾಷಾ ನೀತಿ: ಸುಪ್ರೀಂಗೆ ಪೋಷಕರ ಅರ್ಜಿ

ದೆಹಲಿ: 9ನೇ ತರಗತಿಯ ವಿದ್ಯಾರ್ಥಿಗಳಿಗೆ ಮೂರು ಭಾಷೆಗಳನ್ನು ಕಡ್ಡಾಯಗೊಳಿಸುವ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) ಹೊಸ ನೀತಿಯನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿದೆ. ವಿದ್ಯಾರ್ಥಿಗಳು ಮತ್ತು ಪೋಷಕರು ಸಲ್ಲಿಸಿದ್ದ ಅರ್ಜಿಯನ್ನು ಹಿರಿಯ ವಕೀಲ ಮುಕುಲ್ ರೋಹಟಗಿ ಅವರು ಸಿಜೆಐ ಸೂರ್ಯಕಾಂತ್ ನೇತೃತ್ವದ ತ್ರಿಸದಸ್ಯ ಪೀಠದ ಮುಂದೆ ಪ್ರಸ್ತಾಪಿಸಿದರು.

9ನೇ ತರಗತಿಯಲ್ಲಿ ದಿಢೀರನೆ ಹೆಚ್ಚುವರಿ ಹೆಚ್ಚುವರಿ ಭಾಷೆಯನ್ನು ಕಲಿಯುವ ಅನಿವಾರ್ಯತೆಯು 10ನೇ ತರಗತಿಯ ಬೋರ್ಡ್ ಪರೀಕ್ಷೆಗಳ ತಯಾರಿಗೆ ಅಡ್ಡಿಯಾಗುತ್ತದೆ. ವಿದ್ಯಾರ್ಥಿಗಳ ಮೇಲೆ ಅನಗತ್ಯವಾಗಿ ಹೊರೆಯನ್ನು ಹೇರುತ್ತದೆ ಎಂದು ರೋಹಟಗಿ ವಾದಿಸಿದರು. ಹೊಸ ಭಾಷೆಯೊಂದನ್ನು ಇದ್ದಕ್ಕಿದ್ದಂತೆ ಕಲಿತು 10ನೇ ತರಗತಿಯಲ್ಲಿ ಕಾಣಿಸಿಕೊಳ್ಳುವುದು ಹೇಗೆ? ಇದು ಅವ್ಯವಸ್ಥೆಯನ್ನು ಸೃಷ್ಟಿಸುತ್ತದೆ ಎಂದು ರೋಹಟಗಿ ವಾದಿಸಿದರು. ವಾದ ಆಲಿಸಿದ ಬಳಿಕ ಪೀಠವು, ಮುಂದಿನ ವಾರ ವಿಚಾರಣೆಗೆ ಈ ವಿಷಯವನ್ನು ಪಟ್ಟಿ ಮಾಡುವುದಾಗಿ ಹೇಳಿದೆ.

ತ್ರಿಭಾಷಾ ಸೂತ್ರಕ್ಕೆ ಒತ್ತು ನೀಡುವ ರಾಷ್ಟ್ರೀಯ ಶಿಕ್ಷಣ ನೀತಿ-2020ಕ್ಕೆ ಪೂರಕವಾಗಿ ಸಿಬಿಎಸ್‌ಇ ವಿಶಾಲ ಬದಲಾವಣೆಯ ಭಾಗವಾಗಿದೆ. ಈ ನೀತಿಯು ವಿದ್ಯಾರ್ಥಿಗಳು ಕನಿಷ್ಠ ಎರಡು ಭಾರತೀಯ ಭಾಷೆಗಳನ್ನು ಒಳಗೊಂಡಂತೆ ಬಹುಭಾಷೆಗಳನ್ನು ಕಲಿಯಲು ಪ್ರೋತ್ಸಾಹಿಸುತ್ತದೆ. ರಾಜ್ಯಗಳು ಮತ್ತು ಶಾಲೆಗಳಿಗೆ ಆದ್ಯತೆ ಬಿಡಲಾಗಿದೆ. ಆದರೆ 3ನೇ ಭಾಷೆಯನ್ನು ಅಂಕಪಟ್ಟಿಗೆ ಸೇರಿಸುವುದಿಲ್ಲ. ಆದರೆ ಅದನ್ನು ಆಂತರಿಕವಾಗಿ ಮಾತ್ರ ಮೌಲ್ಯಮಾಪನ ಮಾಡಲಾಗುತ್ತದೆ. ಸಿಬಿಎಸ್‌ಇ ವಿದ್ಯಾರ್ಥಿಗಳು ಇದುವರೆಗೆ 10ನೇ ತರಗತಿಯವರೆಗೆ ಎರಡು ಭಾಷೆಗಳನ್ನು ಅಧ್ಯಯನ ಮಾಡುತ್ತಿದ್ದರು.

ರಾಷ್ಟ್ರ ರಾಜಕಾರಣದಲ್ಲಿ ಹೊಸ ರಾಜಕೀಯ ಸಮೀಕರಣ: ಡಿಎಂಕೆ ಜತೆ ಮೈತ್ರಿಗೆ ಕಮಲ ಪಕ್ಷ ಒಲವು

ಕಾಂಗ್ರೆಸ್-ಡಿಎಂಕೆ ವಿಚ್ಛೇದನ: 2ನೇ ಮದುವೆಗೆ ಬಿಜೆಪಿ ಕಣ್ಣು



ದೆಹಲಿ: ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಕಾಂಗ್ರೆಸ್ ನಡುವಿನ ಮೈತ್ರಿ ಮುರಿದು ಬಿದ್ದಿರುವುದು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಹೊಸ ರಾಜಕೀಯ ಸಮೀಕರಣ ಗಳಿಗೆ ದಾರಿ ಮಾಡಿಕೊಟ್ಟಿದೆ. ತಮಿಳು ನಾಡಿನ ರಾಜಕೀಯ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಆಡಳಿತಾ ರೂಢ ಬಿಜೆಪಿ, ಸಂಸತ್ತಿನಲ್ಲಿ ತನ್ನ ಬಲವನ್ನು ಹೆಚ್ಚಿಸಿಕೊಳ್ಳಲು ಇದೊಂದು ಸುವರ್ಣಾವಕಾಶ ಎಂದು ಭಾವಿಸಿದೆ. ರಾಷ್ಟ್ರೀಯ ವಿಷಯಗಳಲ್ಲಿ ಡಿಎಂಕೆ ಪಕ್ಷವು ತನ್ನೊಂದಿಗೆ ಕೈಜೋಡಿಸುವಂತೆ ಮಾಡಲು ಬಿಜೆಪಿ ತೆರೆಮರೆಯ ಪ್ರಯತ್ನಗಳನ್ನು ಆರಂಭಿಸಿದೆ ಎಂದು ಮೂಲಗಳು ತಿಳಿಸಿವೆ.

ತಮಿಳುನಾಡಿನಲ್ಲಿ ಕಾಂಗ್ರೆಸ್ ಪಕ್ಷವು ಡಿಎಂಕೆಯನ್ನು ಬಿಟ್ಟು, ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷವನ್ನು ಬೆಂಬಲಿಸಲು ನಿರ್ಧರಿಸಿದಾಗಿನಿಂದ ಡಿಎಂಕೆ ತೀವ್ರ ಅಸಮಾಧಾನಗೊಂಡಿದೆ. ಕಾಂಗ್ರೆಸ್ ಬೆನ್ನಿಗೆ ಇರಿದಿದೆ ಎಂದು ಬಹಿರಂಗವಾಗಿಯೇ ಟೀಕಿಸುತ್ತಿರುವ ಡಿಎಂಕೆ, ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದು ಸಂಸತ್ತಿನಲ್ಲಿ ಕಾಂಗ್ರೆಸ್ ಸಂಸದರ ಜೊತೆ ತಮಗೆ ಆಸನ ಬೇಡ, ಪ್ರತ್ಯೇಕ ಆಸನದ ವ್ಯವಸ್ಥೆ ಮಾಡಿ ಎಂದು ಮನವಿ ಮಾಡಿದೆ. ಈ ಕಹಿ ವಾತಾವರಣವು ತಮಗೆ ಪೂರಕವಾಗಬಹುದು ಎಂಬುದು ಬಿಜೆಪಿಯ ಲೆಕ್ಕಾಚಾರ.

ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ನಟ ವಿಜಯ್ ಅವರ ಟಿವಿಕೆ ಪಕ್ಷವು ಭರ್ಜರಿ ಜಯ ಸಾಧಿಸುವ ಮೂಲಕ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳ ಆರು ದಶಕಗಳ ದ್ವಿಪಕ್ಷೀಯ ಆಧಿಪತ್ಯವನ್ನು ಕೊನೆಗಾಣಿಸಿದೆ. ಈ ಹೀನಾಯ ಸೋಲಿನಿಂದ ಡಿಎಂಕೆ ರಾಜಕೀಯವಾಗಿ ಕೊಂಚ ದುರ್ಬಲಗೊಂಡಿದೆ. ರಾಜಕೀಯ ವಿಶ್ಲೇಷಕರ ಪ್ರಕಾರ, ಪ್ರಾದೇಶಿಕ ಪಕ್ಷವೊಂದು ರಾಜ್ಯ ಮತ್ತು ಕೇಂದ್ರ ಎರಡೂ ಕಡೆ ವಿರೋಧ ಪಕ್ಷದಲ್ಲಿ ಇರುವುದು ಕಷ್ಟ. ಈ ಹಿನ್ನೆಲೆಯಲ್ಲಿ ಡಿಎಂಕೆ ಕೇಂದ್ರ ಸರಕಾರ ದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಸಾಧ್ಯತೆ ಹೆಚ್ಚಿದೆ.

ಹಳೆಯ ಸ್ನೇಹದ ನೆನಪು: ಡಿಎಂಕೆಗೆ ಬಿಜೆಪಿ ನಂಟು ಹೊಸದೇನಲ್ಲ. ಹಿಂದೆ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಎನ್‌ಡಿಎ ಮೈತ್ರಿಕೂಟದಲ್ಲಿ ಮತ್ತು ಸರಕಾರ ದಲ್ಲಿ ಡಿಎಂಕೆ ಭಾಗವಾಗಿತ್ತು. ಹಾಗಾಗಿ, ಹಳೆಯ ಸಂಬಂಧವನ್ನು ಮತ್ತೆ ಚಿಗುರಿಸುವುದು ಅಸಾಧ್ಯವೇನಲ್ಲ ಎಂಬುದು ಬಿಜೆಪಿ ನಾಯಕರ ಆಶಯವಾಗಿದೆ. ಆದರೆ ಡಿಎಂಕೆ ಮತ್ತು ಬಿಜೆಪಿ ಹತ್ತಿರ ವಾಗಲು ಬಯಸಿದರೂ ಅವರ ನಡುವೆ ಎರಡು ದೊಡ್ಡ ಸಿದ್ಧಾಂತಿಕ ಸವಾಲುಗಳಿವೆ. ಮುಖ್ಯವಾಗಿ ಕ್ಷೇತ್ರ ಮರುವಿಂಗಡಣೆ ಯೋಜನೆಯನ್ನು ಡಿಎಂಕೆ ತೀವ್ರವಾಗಿ ವಿರೋಧಿಸುತ್ತಾ ಬಂದಿದೆ. ದಕ್ಷಿಣ ಭಾರತದ ರಾಜ್ಯಗಳ ಪ್ರಾತಿನಿಧ್ಯವನ್ನು ಬಿಜೆಪಿ ಕಸಿದು ಕೊಳ್ಳುತ್ತಿದೆ ಎಂದು ಡಿಎಂಕೆ ಚುನಾವಣೆ ಯಲ್ಲಿ ದೊಡ್ಡ ಮಟ್ಟದ ಪ್ರಚಾರ ಮಾಡಿತ್ತು. ಡಿಎಂಕೆ ಸಂಸದರು ಕಪ್ಪು ಬಟ್ಟೆ ಧರಿಸಿ ಪ್ರತಿಭಟಿಸಿದ್ದಲ್ಲದೆ, ಮರುವಿಂಗಡಣೆ ಮಸೂದೆಯ ಪ್ರತಿಗಳನ್ನು ಸುಟ್ಟುಹಾಕಿದ್ದರು. ಈ ನಿಲುವಿನಿಂದ ಹಿಂದೆ ಸರಿಯುವುದು ಡಿಎಂಕೆಗೆ ಸುಲಭವಲ್ಲ. ಡಿಎಂಕೆ ನಾಯಕ ಮತ್ತು ಮಾಜಿ ಉಪಮುಖ್ಯ ಮಂತ್ರಿ ಉದಯನಿಧಿ ಸ್ಟಾಲಿನ್ ಅವರು ಸನಾತನ ಧರ್ಮದ ವಿರುದ್ಧ ನೀಡಿದ್ದ ಹೇಳಿಕೆಗಳು ಬಿಜೆಪಿ ಮತ್ತು ಡಿಎಂಕೆ ನಡುವೆ ದೊಡ್ಡ ಕಂದಕ ಸೃಷ್ಟಿಸಿವೆ. ಈ ಸೈದ್ಧಾಂತಿಕ ಭಿನ್ನಾಭಿಪ್ರಾಯವನ್ನು ಎರಡೂ ಪಕ್ಷಗಳು ಹೇಗೆ ನಿಭಾಯಿಸುತ್ತವೆ ಎಂಬುದು ಕುತೂಹಲಕಾರಿಯಾಗಿದೆ.

ಲೋಕಸಭೆಯಲ್ಲಿ ಬಲ ನಿರೀಕ್ಷೆ: ಬಿಜೆಪಿಗೆ ಸದ್ಯ ಸಂಸತ್ತಿನಲ್ಲಿ ಮೂರನೇ ಎರಡರಷ್ಟು (2/3) ಬಹುಮತ ಇಲ್ಲ. ಇತ್ತೀಚೆಗೆ ನಡೆದ ಕ್ಷೇತ್ರ ಮರುವಿಂಗಡಣೆ ಮಸೂದೆಯ ಮತದಾನದ ವೇಳೆ ಎನ್‌ಡಿಎ ಮೈತ್ರಿಕೂಟಕ್ಕೆ ಮೂರನೇ ಎರಡರಷ್ಟು ಬಹುಮತಕ್ಕೆ (352 ಮತಗಳು) 54 ಮತಗಳ ಕೊರತೆ ಎದುರಾಗಿತ್ತು. ಹಾಜರಿದ್ದ 528 ಸಂಸದರಲ್ಲಿ ಎನ್‌ಡಿಎ ಪರ 298 ಮತಗಳು ಬಿದ್ದರೆ, ವಿರುದ್ಧವಾಗಿ 230 ಮತಗಳು ಬಿದ್ದಿದ್ದವು. ಆಗ ಡಿಎಂಕೆಯ 22 ಸಂಸದರು ಮಸೂದೆಯ ವಿರುದ್ಧ ಮತ ಚಲಾಯಿಸಿದ್ದರು. ಮುಂದಿನ ದಿನಗಳಲ್ಲಿ ಇಂತಹ ಪ್ರಮುಖ ಮಸೂದೆ ಗಳನ್ನು ಪಾಸ್ ಮಾಡಲು ಬಿಜೆಪಿಗೆ ಡಿಎಂಕೆಯ 22 ಸಂಸದರ ಬೆಂಬಲ ಅತ್ಯಂತ ನಿರ್ಣಾಯಕವಾಗಿದೆ. ಒಡಿಶಾದ ಬಿಜೆಡಿ, ಆಂಧ್ರದ ವೈಎಸ್‌ಆರ್ ಕಾಂಗ್ರೆಸ್, ಮತ್ತು ತೆಲಂಗಾಣದ ಬಿಆರ್‌ಎಸ್ ಪಕ್ಷಗಳಂತೆ, ಡಿಎಂಕೆ ಕೂಡ ಎನ್‌ಡಿಎ ಮೈತ್ರಿಕೂಟಕ್ಕೆ ಸೇರದೆ ಹೊರಗಿ ನಿಂದಲೇ ವಿಷಯಾಧಾರಿತ ಬೆಂಬಲ ನೀಡಲಿ ಎಂಬುದು ಬಿಜೆಪಿಯ ಲೆಕ್ಕಾಚಾರವಾಗಿದೆ. ಮುಂದಿನ ವರ್ಷ ನಡೆಯಲಿರುವ ರಾಷ್ಟ್ರಪತಿ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ಗೆಲುವಿನ ನಂತರ ಬಿಜೆಪಿ ಬಲ ವೃದ್ಧಿಸಿದೆ. ಡಿಎಂಕೆಯ ಬೆಂಬಲ ಸಿಕ್ಕರೆ ರಾಷ್ಟ್ರಪತಿ ಅಭ್ಯರ್ಥಿಯ ಗೆಲುವು ಮತ್ತಷ್ಟು ಸುಲಭವಾಗುತ್ತದೆ ಎಂಬುದು ಬಿಜೆಪಿಯ ಎಣಿಕೆ.

ಎಐಎಡಿಎಂಕೆ ಹೋಳು ಬಿಜೆಪಿಗೆ ಆಹಾರ

ತಮಿಳುನಾಡಿನಲ್ಲಿ ಬಿಜೆಪಿಯ ಹಳೆಯ ಮಿತ್ರಪಕ್ಷವಾದ ಎಐಎಡಿಎಂಕೆಯಲ್ಲಿ ಈಗ ಆಂತರಿಕ ಬಂಡಾಯ ಶುರುವಾಗಿದೆ. ಚುನಾವಣೆ ಸೋಲಿನ ನಂತರ ಆ ಪಕ್ಷ ಇಬ್ಭಾಗವಾಗುವ ಹಂತ ತಲುಪಿದೆ. ಇಂತಹ ಪರಿಸ್ಥಿತಿಯಲ್ಲಿ ಎಐಎಡಿಎಂಕೆಯ ಎರಡೂ ಬಣಗಳು ತಮ್ಮ ರಾಜಕೀಯ ಉಳಿವಿಗಾಗಿ ಕೇಂದ್ರದ (ಬಿಜೆಪಿಯ) ಬೆಂಬಲವನ್ನು ಯಾಚಿಸಬೇಕಾಗುತ್ತದೆ. ಇದರಿಂದಾಗಿ ತಮಿಳುನಾಡಿನಲ್ಲಿ ಬಿಜೆಪಿಯ ಹತೋಟಿ ಹೆಚ್ಚಲಿದ್ದು, ಡಿಎಂಕೆಯೊಂದಿಗೆ ಮಾತುಕತೆ ನಡೆಸುವುದು ಬಿಜೆಪಿಗೆ ಮತ್ತಷ್ಟು ಸುಲಭವಾಗಲಿದೆ. ಡಿಎಂಕೆ ಕೇಂದ್ರದೊಂದಿಗೆ ಕೈಜೋಡಿಸಿದರೆ ಅದು ಬಿಜೆಪಿಗೆ ಕೇವಲ ಸಂಸತ್ತಿನಲ್ಲಿ ಬಲ ನೀಡುವುದಷ್ಟೇ ಅಲ್ಲದೆ, ರಾಷ್ಟ್ರಮಟ್ಟದಲ್ಲಿ ವಿರೋಧ ಪಕ್ಷಗಳ ಒಕ್ಕೂಟದಲ್ಲಿ ಬಿರುಕು ಮೂಡಿದೆ ಎಂಬುದನ್ನು ತೋರಿಸಲು ಉತ್ತಮ ರಾಜಕೀಯ ಅಸ್ತ್ರವಾಗಲಿದೆ.

ಮಾದರಿ ಶಾಲೆ

ಗ್ರಾಮೀಣ ಪ್ರದೇಶದಲ್ಲಿ ಶೈಕ್ಷಣಿಕ ಕ್ರಾಂತಿ
ಹಲಗೇರಿಯ ಶ್ರೀ ರಾಜರಾಜೇಶ್ವರಿ ಶಿಕ್ಷಣ ಸಂಸ್ಥೆ

ಕೊಪ್ಪಳ ಜಿಲ್ಲೆಯ ಹಲಗೇರಿ ಗ್ರಾಮದ ಶ್ರೀ ರಾಜರಾಜೇಶ್ವರಿ ಶಿಕ್ಷಣ ಸಂಸ್ಥೆ ಗ್ರಾಮೀಣ ಪ್ರದೇಶದ ಸಾವಿರಾರು ಮಕ್ಕಳ ಬಾಳಿಗೆ ಬೆಳಕಾಗಿದೆ. ಇದರ ಹಿಂದೆ ಶಾಲೆಯ ಸಂಸ್ಥಾಪಕ ವೀರಣ್ಣ ಕಂಬಳಿಯವರ ಶ್ರಮ ಹಾಗೂ ಸಮರ್ಪಣಾ ಮನೋಭಾವ ಅಪಾರವಾಗಿದೆ.

● ಕುಬೇರ ಮಜ್ಜಿಗಿ, ಕೊಪ್ಪಳ

ಹಲಗೇರಿಯು ಒಂದು ಪುಟ್ಟ ಗ್ರಾಮ; ಹಿಂದುಳಿದ ಪ್ರದೇಶ ಎಂದೇ ಹೇಳಬಹುದು. ಇಲ್ಲಿ, 2007 ರಲ್ಲಿ ಗ್ರಾಮದ ಶಾಂಭವಿ ದೇವಸ್ಥಾನದ ಪಕ್ಕದಲ್ಲಿ ತಟ್ಟಿಯಲ್ಲಿ ಆರಂಭವಾದ ಶಾಲೆ ಇಂದು ಎರಡು ಎಕರೆ ವಿಶಾಲವಾದ ಜಾಗದಲ್ಲಿ ಸುಸಜ್ಜಿತ ಕಟ್ಟಡದೊಂದಿಗೆ ವಸತಿ ಶಾಲೆ ಬೆಳೆದು ನಿಂತಿದೆ. 4 ಮತ್ತು 5ನೇ ತರಗತಿ ಮಕ್ಕಳಿಗೆ ನವೋದಯ ಸೇರಿದಂತೆ ಇತರೆ ವಸತಿ ಶಾಲೆಗಳಿಗೆ ನಡೆಯುವ ಪ್ರವೇಶ ಪರೀಕ್ಷೆಗೆ ತರಬೇತಿ ನೀಡುವುದು ಇವರ ಮುಖ್ಯ ಉದ್ದೇಶವಾಗಿದೆ. ಇಲ್ಲಿ ತರಬೇತಿ ಪಡೆದ ಮಕ್ಕಳು ಅಧಿಕ ಸಂಖ್ಯೆಯಲ್ಲಿ ಪ್ರತಿ ವರ್ಷ ವಿವಿಧ ವಸತಿ ಶಾಲೆಗಳಿಗೆ ಆಯ್ಕೆಯಾಗುತ್ತಿರುವುದು ವಿಶೇಷ. ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಸಂಸ್ಥೆ ಕಟ್ಟಿ ಎತ್ತರಕ್ಕೆ ಬೆಳೆಸುವುದು ಸುಲಭದ ಮಾತಲ್ಲ. ಇಲ್ಲಿ ಸಾಕಷ್ಟು ಸವಾಲುಗಳಿರುತ್ತವೆ. ಕಷ್ಟ-ನಷ್ಟಗಳು ಇರುತ್ತವೆ. ಆದರೆ, ಇವುಗಳನ್ನೆಲ್ಲ ಮೆಟ್ಟಿನಿಂತು ದೊಡ್ಡ ಶಿಕ್ಷಣ ಸಂಸ್ಥೆಯನ್ನಾಗಿ ಬೆಳೆಸಿರುವುದು ಪವಾಡವೇ ಸರಿ. ಇದೆಲ್ಲ ಸಾಧ್ಯವಾಗುವುದು ವೀರಣ್ಣ ಕಂಬಳಿ ಅವರಂತಹ ಛಲದಂಕ ಮಲ್ಲರಿಂದ ಮಾತ್ರ ಸಾಧ್ಯ.

ಮೂಲಭೂತ ಸೌಕರ್ಯಗಳು

ಶ್ರೀ ರಾಜರಾಜೇಶ್ವರಿ ವಸತಿ ಶಾಲೆಯಲ್ಲಿ ಮೂಲಭೂತ ಸೌಕರ್ಯಗಳಿಗೆ ಕೊರತೆ ಇಲ್ಲ. 25ಕ್ಕೂ ಹೆಚ್ಚು ಕೊಠಡಿಗಳಿವೆ. ವಿಶಾಲವಾದ ಫಂಕ್ಷನ್ ಹಾಲ್ ಮತ್ತು ಊಟದ ಹಾಲ್ ಇದೆ. ಬಾಲಕ, ಬಾಲಕಿಯರಿಗೆ ಸಾಕಷ್ಟು ಸ್ನಾನ ಗೃಹ ಹಾಗೂ ಶೌಚಾಲಯಗಳಿವೆ. ಸ್ನಾನಕ್ಕೆ ಬಿಸಿ ನೀರಿನ ವ್ಯವಸ್ಥೆ ಮಾಡಲಾಗಿದೆ. ಶುದ್ಧ ಕುಡಿಯುವ ನೀರು ವ್ಯವಸ್ಥೆ ಇದೆ. ಮೆನು ಪ್ರಕಾರ ಶುಚಿ-ರುಚಿಯಾದ ಊಟ ಹಾಗೂ ಉಪಹಾರ ಕೊಡಲಾಗುತ್ತದೆ. ಸಾಯಂಕಾಲ ಸ್ನಾಕ್ಸ್ ಕೊಡಲಾಗುತ್ತದೆ. ನುರಿತ ಹಾಗೂ ಅನುಭವಿ ಶಿಕ್ಷಕರಿಂದ ಪಾಠ ಬೋಧನೆ ಮಾಡಲಾಗುತ್ತದೆ. ಪ್ರತಿದಿನ ವಿದ್ಯಾರ್ಥಿಗಳಿಗೆ ವೈದ್ಯಕೀಯ ತಪಾಸಣೆ ಮಾಡಲಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗಳ ವೈಯಕ್ತಿಕ ಕಾಳಜಿ ಮಾಡಲಾಗುತ್ತದೆ.

ಗುಣಮಟ್ಟದ ಶಿಕ್ಷಣ

ಎಲ್‌ಕೆಜಿಯಿಂದ 10ನೇ ತರಗತಿವರೆಗೆ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮದಲ್ಲಿ ಬೋಧನೆ ಮಾಡಲಾಗುತ್ತದೆ. ಸ್ಮಾರ್ಟ್ ಬೋರ್ಡ್ ಪ್ರೊಜೆಕ್ಟರ್ ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನ ಬಳಕೆ ಮಾಡಿ ಪಾಠ ಮಾಡಲಾಗುತ್ತದೆ. ಕ್ರಿಯಾಶೀಲ ಅನುಭವಿ ಹಾಗೂ ಅರ್ಹತೆ ಹೊಂದಿದ ವಿಷಯವಾರು 30 ಜನ ಶಿಕ್ಷಕರ ತಂಡ ಇದೆ. ಬೇರೆ ಬೇರೆ ಭಾಗದಿಂದ ಮಕ್ಕಳನ್ನು ಕರೆ ತರಲು ಏಳು ಬಸ್ಸುಗಳಿವೆ.

ನಾಗಾಲ್ಯಾಂಡ್ ಶಿಕ್ಷಕಿಯರು

ಗ್ರಾಮೀಣ ಪ್ರದೇಶದ ತಮ್ಮ ವಿದ್ಯಾರ್ಥಿಗಳು ಕೂಡ ಸುಲಲಿತವಾಗಿ ಇಂಗ್ಲಿಷ್ ಕಲಿಯಬೇಕು ಎಂಬ ಉದ್ದೇಶದಿಂದ 3 ಜನ ನಾಗಾಲ್ಯಾಂಡ್ ಶಿಕ್ಷಕಿಯರನ್ನು ಕರೆ ತರಲಾಗಿದೆ. ಗ್ರಾಮೀಣ ಪ್ರದೇಶದ ಮಕ್ಕಳು

ಇಂಗ್ಲಿಷ್ ಭಾಷೆಯನ್ನು ಸರಳವಾಗಿ ಕಲಿಯಬಹುದು ಎಂಬ ಉದ್ದೇಶದಿಂದ ನಾಗಾಲ್ಯಾಂಡ್ ಶಿಕ್ಷಕಿಯರನ್ನು ನೇಮಕ ಮಾಡಿಕೊಳ್ಳಲಾಗಿದೆ.

ರಾಜರಾಜೇಶ್ವರಿ ಶಿಕ್ಷಣ ಸಂಸ್ಥೆಯಲ್ಲಿ ತರಬೇತಿ ಪಡೆದು ನವೋದಯ ಸೈನಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಹಲವಾರು ವಿದ್ಯಾರ್ಥಿಗಳು ಇಂದು ಉತ್ತಮ ಸ್ಥಾನಮಾನದಲ್ಲಿದ್ದಾರೆ. ನೂರಾರು ವಿದ್ಯಾರ್ಥಿಗಳು ಎಂಬಿಬಿಎಸ್, ಎಂಜಿನಿಯರಿಂಗ್, ಐಐಟಿಯಲ್ಲಿ ಓದುತ್ತಿದ್ದಾರೆ. ಕೆಲವರು ಸರಕಾರದ ಅತ್ಯುನ್ನತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕೆಲವರು ವಿದೇಶದಲ್ಲಿ ಕೆಲಸ ಮಾಡುತ್ತಿರುವುದು ಶಿಕ್ಷಣ ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ.

ಲೋಕಧ್ವನಿ ಪ್ರಶಸ್ತಿ

ಶೈಕ್ಷಣಿಕ ಕ್ಷೇತ್ರದಲ್ಲಿ ವೀರಣ್ಣ ಕಂಬಳಿ ಅವರ ಸಾಧನೆಯನ್ನು ಗುರುತಿಸಿ, 'ಲೋಕಧ್ವನಿ' ದಿನಪತ್ರಿಕೆ ಕೊಡಮಾಡುವ 'ನಮ್ಮ ಸಾಧಕರು' ಪ್ರಶಸ್ತಿ ನೀಡಿ ಗೌರವಿಸಿದೆ. ಈ ಪ್ರಶಸ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿದ್ದು ವಿಶೇಷ. ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಹಾಗೂ ವಿಶ್ವವಾಣಿ ದಿನಪತ್ರಿಕೆ ಸಂಪಾದಕ ವಿಶ್ವೇಶ್ವರ ಭಟ್ ಸೇರಿದಂತೆ ಹಲವು ಮಹನೀಯರ ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ನವೋದಯ ಕೋಚಿಂಗ್

ನವೋದಯ, ಕಿತ್ತೂರು, ಸೈನಿಕ, ಮೊರಾರ್ಜಿ, ಆದರ್ಶ, ಅಳಿಕೆ, ಮುದ್ದೇನಹಳ್ಳಿ, ಸೈನಿಕ ಸ್ಕೂಲ್ ಸೇರಿದಂತೆ ಅನೇಕ ವಸತಿ ಶಾಲೆಗಳಿಗೆ ನಡೆಯುವ ಪ್ರವೇಶ ಪರೀಕ್ಷೆಗೆ ಇಲ್ಲಿ ತರಬೇತಿ ನೀಡಲಾಗುತ್ತದೆ. ಈ ಶಾಲೆಯಲ್ಲಿ ತರಬೇತಿ ಪಡೆದ ಮಕ್ಕಳು ಹೆಚ್ಚು ಹೆಚ್ಚು ನವೋದಯ ಸೇರಿದಂತೆ ಇತರೆ ಶಾಲೆಗಳಿಗೆ ಆಯ್ಕೆಯಾಗುತ್ತಿರುವುದು ವಿಶೇಷವಾಗಿದೆ. ಪ್ರತಿ ವರ್ಷ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕೋಚಿಂಗ್ ಪಡೆಯುತ್ತಿದ್ದಾರೆ. ಮುಂದಿನ ಶೈಕ್ಷಣಿಕ ವರ್ಷದಿಂದ ಐದನೇ ತರಗತಿಯ 100 ವಿದ್ಯಾರ್ಥಿಗಳು ಹಾಗೂ ನಾಲ್ಕನೇ ತರಗತಿಯ 50 ವಿದ್ಯಾರ್ಥಿಗಳಿಗೆ ಮಾತ್ರ ತರಬೇತಿ ನೀಡಲಾಗುವುದು ಎಂದು ಸಂಸ್ಥಾಪಕ ಅಧ್ಯಕ್ಷ ವೀರಣ್ಣ ಕಂಬಳಿ ತಿಳಿಸಿದ್ದಾರೆ.

ಗ್ರಾಮೀಣ ಮಕ್ಕಳ ಭವಿಷ್ಯ ಉಜ್ವಲ ಮಾಡುವುದು ನಮ್ಮ ಗುರಿ. ಅದಕ್ಕಾಗಿ ನಾನು ಸೇರಿದಂತೆ ನಮ್ಮ ತಂಡ ಸಾಕಷ್ಟು ಶ್ರಮಿಸುತ್ತಿದೆ. ಶಿಕ್ಷಣ ಸಂಸ್ಥೆ ಇಷ್ಟು ಎತ್ತರಕ್ಕೆ ಬೆಳೆಯಲು ಹಲಗೇರಿ ಗ್ರಾಮಸ್ಥರು, ಹಲವಾರು ಸ್ನೇಹಿತರು ಸೇರಿದಂತೆ ಸಾಕಷ್ಟು ಜನರ ಸಹಾಯ ಸಹಕಾರವಿದೆ. ಸಮಸ್ಯೆಗಳು ಸಂಕಷ್ಟಗಳು ಸಾಕಷ್ಟು ಬರುತ್ತವೆ ಅವುಗಳನ್ನು ಸವರಾಗಿ ಸ್ವೀಕರಿಸಿ ಮುಂದೆ ಸಾಗಿದರೆ ಯಶಸ್ಸು ಸಾಧ್ಯ. ನಮ್ಮಲ್ಲಿ ಕಲಿತ ಸಾಕಷ್ಟು ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಇದು ಸಂಸ್ಥೆಗೆ ಹೆಮ್ಮೆಯ ವಿಷಯ. ನಮ್ಮನ್ನು ನಂಬಿ ಬಂದ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವುದು ನಮ್ಮ ಆದ್ಯ ಕರ್ತವ್ಯ. ಆ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇವೆ. ನಮ್ಮಲ್ಲಿಯ ಶಿಕ್ಷಣದ ಗುಣಮಟ್ಟ ಕಂಡು ಬೇರೆ ಬೇರೆ ಜಿಲ್ಲೆಗಳಿಂದ ಮಕ್ಕಳನ್ನು ಕಳಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮ ಶಿಕ್ಷಣ ನೀಡುವ ಸಂಕಲ್ಪ ಮಾಡುತ್ತೇವೆ.

-ವೀರಣ್ಣ ಕಂಬಳಿ, ಸಂಸ್ಥಾಪಕ, ಶ್ರೀ ರಾಜರಾಜೇಶ್ವರಿ ಶಿಕ್ಷಣ ಸಂಸ್ಥೆ ಹಲಗೇರಿ

ಅಪ್ರತಿಮ ಸಾಧಕಿ ಸ್ಕ್ವಾಡ್ರನ್ ಲೀಡರ್ ಸಾನ್ಯಾ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಕೆಲವರು ಫೈಟರ್ ಜೇಟ್‌ಗಳನ್ನು ಹಾರಿಸುತ್ತಾರೆ. ಆದರೆ ಇನ್ನು ಕೆಲವರು, ನಾಳೆ ಆ ಜೇಟ್‌ಗಳನ್ನು ಹಾರಿಸಲಿರುವ ಧೀರರನ್ನು ರೂಪಿಸುತ್ತಾರೆ. ಭಾರತೀಯ ವಾಯುಪಡೆಯ (IAF) ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ಹೆಸರು ಸ್ಕ್ವಾಡ್ರನ್ ಲೀಡರ್ ಸಾನ್ಯಾ ಅವರದ್ದು. ಭಾರತೀಯ ವಾಯುಪಡೆಯಲ್ಲಿ ಅತ್ಯುನ್ನತ ಮತ್ತು ಅತ್ಯಂತ ಪ್ರತಿಷ್ಠಿತ ಬೋಧನಾ ಶ್ರೇಣಿಯಾದ ಕ್ಯಾಟ್-ಎ (Cat-A) ಕ್ವಾಲಿಫೈಡ್ ಫ್ಲೈಯಿಂಗ್ ಇನ್‌ಸ್ಟ್ರಕ್ಟರ್ ಪಟ್ಟವನ್ನು ಮುಡಿಗೇರಿಸಿಕೊಂಡ ಭಾರತದ ಮೊದಲ ಮಹಿಳಾ ಅಧಿಕಾರಿ ಎಂಬ ಹೆಗ್ಗಳಿಕೆಗೆ ಸಾನ್ಯಾ ಪಾತ್ರರಾಗಿದ್ದಾರೆ. ಇದು ಕೇವಲ ಒಂದು ಪ್ರಚಾರ ಅಥವಾ ಬಡ್ತಿಯಲ್ಲ; ಇದು ಭಾರತೀಯ ಸೈನಿಕ ಇತಿಹಾಸದ ಒಂದು ಐತಿಹಾಸಿಕ ಮೈಲಿಗಲ್ಲು.

2015ರಲ್ಲಿ ಭಾರತೀಯ ವಾಯುಪಡೆಯ ಫ್ಲೈಯಿಂಗ್ ಬ್ರಾಂಚ್‌ಗೆ ನಿಯೋಜನೆಗೊಂಡ ಸಾನ್ಯಾ ಅವರಿಗೆ, ಆಕಾಶವೇ ಆಕೆಯ ಪ್ರೌಢಿಮೆಯನ್ನು ಸ್ಥಾಪಿಸುವ ಅಂಗಳವಾಗಿತ್ತು. ಬಾಲ್ಯದಲ್ಲಿ ನೀಲಿ ಆಕಾಶದಲ್ಲಿ ಹಾರುವ ಫೈಟರ್ ಜೇಟ್‌ಗಳನ್ನು ನೋಡಿ ಕಣ್ಣು ಅರಳಿಸುತ್ತಿದ್ದ ಕೋಟ್ಯಂತರ ಭಾರತೀಯ ಹೆಣ್ಣುಮಕ್ಕಳಲ್ಲಿ ಸಾನ್ಯಾ ಕೂಡ ಒಬ್ಬರಾಗಿದ್ದರು. ಆದರೆ, ಸಾನ್ಯಾ ಕೇವಲ ಕನಸು ಕಾಣಲಿಲ್ಲ; ಆ ಕನಸಿಗೆ ಕಠಿಣ ಪರಿಶ್ರಮದ ರೆಕ್ಕೆಗಳನ್ನು ಕಟ್ಟಿ ಹಾರಲು ಹೊರಟರು. ವಾಯುಪಡೆಯಲ್ಲಿ 'ಕ್ಯಾಟ್-ಎ' ಇನ್‌ಸ್ಟ್ರಕ್ಟರ್ ಆಗುವುದು ಎಂದರೆ ಸಾಮಾನ್ಯ

ವಿಷಯವಲ್ಲ. ಇದು ಅತ್ಯಂತ ಕಠಿಣವಾದ ತಾಂತ್ರಿಕ ಪರೀಕ್ಷೆಗಳು, ಅತ್ಯುನ್ನತ ಮಟ್ಟದ ಹಾರಾಟ ಕೌಶಲ್ಯ ಮತ್ತು ಒತ್ತಡದ ಸಂದರ್ಭಗಳಲ್ಲಿಯೂ ಅಚಲವಾಗಿ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವನ್ನು ಬೇಡುತ್ತದೆ. ವರ್ಷಗಳ ಕಾಲ ನಿರಂತರ ಶ್ರಮ, ಅಪ್ರತಿಮ ತಾಂತ್ರಿಕ ಶ್ರೇಷ್ಠತೆ ಮತ್ತು ತೀವ್ರ ಒತ್ತಡದ ನಡುವೆಯೂ ಶಾಂತವಾಗಿ ಕಾರ್ಯನಿರ್ವಹಿಸುವ ಅದ್ಭುತ ಗುಣ ಸಾನ್ಯಾ ಅವರನ್ನ ಈ ಸಾಧನೆಯ ಶಿಖರಕ್ಕೆ ತಂದು ನಿಲ್ಲಿಸಿದೆ.

'ಕ್ಯಾಟ್-ಎ' ಇನ್‌ಸ್ಟ್ರಕ್ಟರ್ ಆಗಿ ಸಾನ್ಯಾ ಅವರ ಹೆಗಲ ಮೇಲಿರುವ ಜವಾಬ್ದಾರಿ ಅಪಾರವಾದದ್ದು. ಅವರು ಕೇವಲ ವಿಮಾನ ಹಾರಿಸುವುದನ್ನು ಕಲಿಸುವುದಿಲ್ಲ; ಬದಲಿಗೆ ಭಾರತದ ಭವಿಷ್ಯದ ಫೈಟರ್ ಪೈಲಟ್‌ಗಳನ್ನು ಸಿದ್ಧಪಡಿಸುತ್ತಾರೆ. ಇತರ ಫ್ಲೈಯಿಂಗ್ ಇನ್‌ಸ್ಟ್ರಕ್ಟರ್‌ಗಳಿಗೆ ಮಾರ್ಗದರ್ಶನ ನೀಡುವ ಮಹತ್ತರ ಜವಾಬ್ದಾರಿ ಇವರ ಮೇಲಿರುತ್ತದೆ.

ಯುದ್ಧದ ತೀವ್ರ ಒತ್ತಡದ ಪರಿಸ್ಥಿತಿಯಲ್ಲಿ, ಪ್ರತಿ ಸೆಕೆಂಡ್ ಜೀವನ್ಮರಣದ ಹೋರಾಟವಾಗಿರುವಾಗ ಅತ್ಯಂತ ನಿಖರವಾಗಿ ನಿರ್ಧಾರ ಕೈಗೊಳ್ಳುವುದನ್ನು ಇವರು ಯುವ ಪೈಲಟ್‌ಗಳಿಗೆ ಕಲಿಸಿಕೊಡುತ್ತಾರೆ. ಅವರು ಕೇವಲ ಹಾರಾಟದ ತಂತ್ರಗಳನ್ನು ಕಲಿಸುವುದಿಲ್ಲ; ಬದಲಾಗಿ ದೇಶದ ರಕ್ಷಣೆಗೆ ನಿಲ್ಲುವ ವೀರರಲ್ಲಿ ಆತ್ಮವಿಶ್ವಾಸ, ಶಿಸ್ತು ಮತ್ತು ಸಮಯಪ್ರಜ್ಞೆಯನ್ನು ಬಿತ್ತುತ್ತಿದ್ದಾರೆ. ಇಂದು ಸಾನ್ಯಾ ಕೇವಲ ದೇಶಕ್ಕಾಗಿ ಹಾರುತ್ತಿಲ್ಲ, ಬದಲಿಗೆ ಭಾರತದ ಮುಂದಿನ ತಲೆಮಾರಿನ 'ಆಕಾಶ ಯೋಧರನ್ನು' (Air Warriors) ರೂಪಿಸುತ್ತಿದ್ದಾರೆ.

ಸ್ಕ್ವಾಡ್ರನ್ ಲೀಡರ್ ಸಾನ್ಯಾ ಅವರ ಈ ಯಶೋಗಾಥೆ ಕೇವಲ ವಾಯುಪಡೆಗೆ ಸೀಮಿತವಾಗಿಲ್ಲ; ಇದು ಇಡೀ ಭಾರತ ಹೆಮ್ಮೆ ಪಡುವಂತಹ ಕ್ಷಣ. ಭಾರತದ ಹೆಣ್ಣುಮಗಳೊಬ್ಬಳು ಆಕಾಶದ ಎತ್ತರಕ್ಕೆ ಬೆಳೆದು ನಿಂತು ದೇಶದ ಹೆಮ್ಮೆಯ ರಕ್ಷಕರನ್ನು ಸಜ್ಜುಗೊಳಿಸುತ್ತಿರುವುದು ನಾರಿ ಶಕ್ತಿಯ ಅಪ್ರತಿಮ ಉದಾಹರಣೆ. ಭಾರತೀಯ ವಾಯುಪಡೆಯ ಈ ಸಾಧಕಿ ಇಡೀ ಭಾರತದ ಹೆಣ್ಣುಮಕ್ಕಳಿಗೆ ಹೊಸ ಆಕಾಶವನ್ನೇ ತೆರೆದಿದ್ದಾರೆ. ಮದುವೆಯಾದ ಸ್ವಲ್ಪವೇ ಸಮಯಕ್ಕೆ ವರದಕ್ಷಣೆಗಾಗಿ ಅಥವಾ ಮತ್ಯಾವುದೋ ವಿಷಯಕ್ಕಾಗಿ ಹಲ್ಲೆಗೊಳಗಾಗುವ ಪ್ರಾಣವನ್ನೇ ಕಳೆದುಕೊಳ್ಳುವ ಹೆಣ್ಣು ಮಕ್ಕಳ ಬಗ್ಗೆ ಸುದ್ದಿ ಪತ್ರಿಕೆಗಳಲ್ಲಿ ಓದುವಾಗ ಎದೆ ಒಡೆಯುತ್ತದೆ. ಕಷ್ಟಪಟ್ಟು ವಿದ್ಯೆ-ಬುದ್ಧಿ ಕಲಿಸಿ ನಮ್ಮ ಮನೆಯ ಹೆಣ್ಣು ಮಕ್ಕಳನ್ನು ಸ್ವಾವಲಂಬಿಗಳಾಗಿ ಮಾಡಿ ಆತ್ಮವಿಶ್ವಾಸದಿಂದ ಬದುಕುವ ಧೈರ್ಯವನ್ನು ತುಂಬುವ ಕೆಲಸ ನಮ್ಮದು. ಪರಿಸ್ಥಿತಿ ಕೈ ಮೀರಿದರೆ ಸ್ವತಂತ್ರವಾಗಿ ಬದುಕಿ ಜೀವನ ನಡೆಸುವ ಆತ್ಮಸ್ಥೈರ್ಯ ಈ ಹೆಣ್ಣು ಮಕ್ಕಳಲ್ಲಿ ನಾವೇ ತುಂಬಬೇಕು. ಬರಿ ವಿದ್ಯೆ-ಬುದ್ಧಿ ಇದ್ದರೆ ಸಾಲದು, ಬದುಕುವ ಛಲ ಪರಿಸ್ಥಿತಿಗಳು ಕೈ ಮೀರಿದರೆ ತಮ್ಮ ಯೋಗಕ್ಷೇಮವನ್ನು ಆರಿಸಿಕೊಂಡು ಬದುಕಿ ತೋರಿಸುವ ಧೈರ್ಯ ಈ ಹೆಣ್ಣು ಮಕ್ಕಳಿಗೆ ಇರಬೇಕು. ಪ್ರತಿ ಮನೆಯಲ್ಲೂ ಇಂತಹ ಹೆಣ್ಣು ಮಕ್ಕಳನ್ನು ಬೆಳೆಸೋಣ.

ನಾಲ್ಕು ದಿನಗಳ ಆ ನೋವಿಗೆ ಕಾರಣ ಹದಿನಾಲ್ಕು

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ. ಸಾಧನಶ್ರೀ
vveditoped@gmail.com

ಇಂದಿನ ಕಾಲದಲ್ಲಿ ಮಹಿಳೆಯರ ಆರೋಗ್ಯವು ನಿಧಾನವಾಗಿ ಆತಂಕಕಾರಿ ದಿಕ್ಕಿನತ್ತ ಸಾಗುತ್ತಿದೆ. ಹಿಂದೆ ಅಪರೂಪವಾಗಿದ್ದ ಮುಟ್ಟಿನ ತೊಂದರೆಗಳು ಇಂದು ಬಹುತೇಕ ಪ್ರತಿಯೊಬ್ಬ ಮಹಿಳೆಯ ಜೀವನದ ಭಾಗವಾಗಿಬಿಟ್ಟಿವೆ. ವಿಷಮ ಋತುಚಕ್ರ, ಹೊಟ್ಟೆನೋವು, ಅಧಿಕ ಅಥವಾ ಕಡಿಮೆ ಸ್ರಾವ, PCOD, ಹಾರ್ಮೋನಲ್ ಅಸಮತೋಲನ, ಮನಸ್ಥಿತಿ ಬದಲಾವಣೆ, ದೌರ್ಬಲ್ಯ- ಇವುಗಳೆಲ್ಲ ದಿನೇದಿನೆ ಹೆಚ್ಚುತ್ತಿವೆ. ಆಧುನಿಕ ಜೀವನಶೈಲಿ, ಅಸಮತೋಲನ ಆಹಾರ ಪದ್ಧತಿ, ನಿದ್ರಾಭಾವ, ಮಾನಸಿಕ ಒತ್ತಡ ಮತ್ತು ಪ್ರಕೃತಿ ವಿರುದ್ಧ ಆಚರಣೆಗಳು ಮಹಿಳೆಯ ದೇಹದ ಸಹಜ ಚಕ್ರದ ಮೇಲೆಯೇ ಪರಿಣಾಮ ಬೀರುತ್ತಿವೆ. ಆಯುರ್ವೇದದ ಪ್ರಕಾರ, ಮುಟ್ಟು ಎಂಬುದು ಕೇವಲ ಮಾಸಿಕ ಸ್ರಾವವಲ್ಲ; ಅದು ಮಹಿಳೆಯ ಸಮಗ್ರ ಆರೋಗ್ಯದ ಪ್ರತಿಬಿಂಬ. ಆದ್ದರಿಂದ, ಈ ಸಮಸ್ಯೆಗಳ ಮೂಲವನ್ನು ಅರಿತು ಜೀವನಶೈಲಿಯಲ್ಲಿ ಬದಲಾವಣೆ ತರುವುದು ಅತ್ಯಗತ್ಯ.

ಮೊದಲು, ಆಯುರ್ವೇದದ ದೃಷ್ಟಿಕೋನದಲ್ಲಿ ಮುಟ್ಟಿನ ಸ್ರಾವವು ದೇಹದಲ್ಲಿ ಹೇಗೆ ಉತ್ಪತ್ತಿಯಾಗುತ್ತದೆ ಎಂಬುದನ್ನು ತಿಳಿದುಕೊಳ್ಳೋಣ: ನಾವು ಪ್ರತಿನಿತ್ಯ ಸೇವಿಸುವ ಆಹಾರವು ಜೀರ್ಣಗೊಂಡ ನಂತರ ಅದರ ಸಾರಭಾಗವು ದೇಹದಲ್ಲಿರುವ ಅಗ್ನಿಯ ಪ್ರಭಾವದಿಂದ ರಸಧಾತುವಾಗಿ ಪರಿವರ್ತನೆಗೊಳ್ಳುತ್ತದೆ. ಈ ರಸಧಾತುವು ಕ್ರಮೇಣ ರಕ್ತವರ್ಣವನ್ನು ಪಡೆದು ಗರ್ಭಾಶಯದ ಕಡೆಗೆ ಹರಿಯುತ್ತದೆ. ಗರ್ಭಾಶಯದಲ್ಲಿ ಈ ರಕ್ತವು ನಿಧಾನವಾಗಿ ಸಂಗ್ರಹಗೊಂಡು, ತಿಂಗಳ ಅಂತ್ಯದಲ್ಲಿ ಆರ್ತವ ಅಥವಾ ಮುಟ್ಟಿನ ರಕ್ತದ ರೂಪದಲ್ಲಿ ದೇಹದಿಂದ ಸ್ರಾವವಾಗುತ್ತದೆ. ಇಲ್ಲಿ ನಾವು ಗಮನಿಸ ಬೇಕಾದ ಅತ್ಯಂತ ಮಹತ್ವದ ವಿಷಯವೆಂದರೆ ಮುಟ್ಟಿನ ಆ ನಾಲ್ಕು ಅಥವಾ ಐದು ದಿನಗಳಲ್ಲಿ ಸ್ರಾವವಾಗುವ ರಕ್ತವು ಕೇವಲ ಆ ದಿನಗಳ ವಿಷಯವಲ್ಲ, ಅದು ಇಡೀ ತಿಂಗಳ ಕಾಲ ನಾವು ಅನುಸರಿಸಿದ ಆಹಾರ, ಜೀವನಶೈಲಿ, ನಿದ್ರೆ, ಮನಸ್ಥಿತಿ ಮತ್ತು ದಿನಚರ್ಯದ ಪ್ರತಿಬಿಂಬ. ಆದ್ದರಿಂದ, ಒಂದು ಋತು ಚಕ್ರವು ಯಾವುದೇ ಅಡಚಣೆ, ಅಸ್ವಸ್ಥತೆ ಅಥವಾ ನೋವಿಲ್ಲದೆ ಸರಾಗವಾಗಿ ನಡೆಯಬೇಕೆಂದರೆ, ಅದರ ಆರೈಕೆ ಕೇವಲ ಆ ನಾಲ್ಕು ದಿನಗಳಲ್ಲಿ ಅಲ್ಲ; ಪ್ರತಿದಿನವೂ ನಮ್ಮ ಆಹಾರ-ವಿಹಾರ-ವಿಚಾರಗಳ ಬಗ್ಗೆ ಜಾಗರೂಕತೆ ವಹಿಸುವುದು ಅತ್ಯಗತ್ಯ.

ಸಾಮಾನ್ಯವಾಗಿ ಯಾವುದೇ ಔಷಧಿ ಅಥವಾ ಕೃತಕ ಹಸ್ತಕ್ಷೇಪಗಳ ಅಗತ್ಯವಿಲ್ಲದೆ ಮುಟ್ಟು ಪ್ರತಿ ತಿಂಗಳು ಸಹಜವಾಗಿ ಆಗ ಬೇಕು. ಮುಟ್ಟು ಆರಂಭವಾಗುವುದೂ, ನಾಲ್ಕು ರಿಂದ ಐದು ದಿನಗಳ ಕಾಲ ಯಾವುದೇ ವಿಶೇಷ ತೊಂದರೆ ನೀಡದೆ ಸರಾಗವಾಗಿ ಸ್ರಾವ ವಾಗಿ, ನಂತರ ಸ್ವಾಭಾವಿಕವಾಗಿ ನಿಲ್ಲುವುದೂ ಆರೋಗ್ಯದ ಪ್ರಮುಖ ಸೂಚಕವಾಗಿದೆ. ಮುಟ್ಟಿನ ರಕ್ತದ ವರ್ಣವು ಸಹಜವಾಗಿ ರಕ್ತದ ವರ್ಣದಂತೆಯೇ ಇರಬೇಕು. ಬಿಳಿ ಬಟ್ಟೆಯ ಮೇಲೆ ಶಾಶ್ವತ ಕಲೆ ಉಳಿಸದೆ, ನೀರಿನಿಂದ ತೊಳೆದಾಗ ಶುದ್ಧವಾಗುವುದು ಆರೋಗ್ಯಕರ ಆರ್ತವದ ಲಕ್ಷಣ. ದುರ್ಗಂಧ, ಲೋಳೆ ಯಂತಿರುವ ದಪ್ಪತನ ಅಥವಾ ಅಸ್ವಾಭಾವಿಕ ವಾಸನೆಗಳಿಲ್ಲದೆ, ಯಾವುದೇ ಹೆಚ್ಚಿನ ತೊಂದರೆ ನೀಡದೆ ಸರಾಗವಾಗಿ ಸ್ರಾವವಾಗಿ ನಿಲ್ಲುವ ಮುಟ್ಟು ಸ್ವಾಸ್ಥ್ಯದ ಸಂಕೇತವಾಗಿದೆ.

ಇದಕ್ಕೆ ವಿರುದ್ಧವಾಗಿ, ಮುಟ್ಟಿನ ಮೊದಲು ಅಥವಾ ಮುಟ್ಟಾಗುವ ಸಮಯದಲ್ಲಿ ತೀವ್ರ ನೋವು ಕಾಣಿಸಿಕೊಳ್ಳುವುದು ಸಾಮಾನ್ಯವಾಗಿ ವಾತದೋಷದ ಪ್ರಕೋಪದ ಸೂಚಕವಾಗಿದೆ. ತಿಂಗಳಿಗಿಂತ ಮೊದಲೇ ರಕ್ತಸ್ರಾವವಾಗುವುದು ಅಥವಾ ಅತಿಯಾಗಿ ರಕ್ತ ಹರಿಯುವುದು ಪಿತ್ತದೋಷದ ಅಸಮತೋಲನದಿಂದ ಉಂಟಾಗುತ್ತದೆ. ಹಾಗೆಯೇ, ತಿಂಗಳು ಕಳೆದರೂ ಮುಟ್ಟು ಬಾರದಿರುವುದು, ಮುಂದೂಡಲ್ಪಡುವುದು ಅಥವಾ ಅತಿ ಕಡಿಮೆ ಪ್ರಮಾಣದಲ್ಲಿ ಸ್ರಾವವಾಗುವುದು ಸಾಮಾನ್ಯವಾಗಿ ಕಫದೋಷದ ಅಸಮತೋಲನದ ಪರಿಣಾಮವೆಂದು ಆಯುರ್ವೇದ ವಿವರಿಸುತ್ತದೆ.

ಬನ್ನಿ, ಆ ನಾಲ್ಕು ದಿನಗಳ ತೊಂದರೆಯ ಹಿಂದೆ ಅಡಗಿರುವ ಹದಿನಾಲ್ಕು ಪ್ರಮುಖ ಕಾರಣಗಳನ್ನು ಈಗ ಒಂದೊಂದಾಗಿ ತಿಳಿದುಕೊಳ್ಳೋಣ.

1 ಜಿಡ್ಡಿಲ್ಲದ ಹಾಗೂ ಅತಿಯಾಗಿ ಒಣಗಿಸುವ ಆಹಾರಗಳ ಸೇವನೆ

ಒಣ ಸ್ವಭಾವದ ಆಹಾರಗಳನ್ನು ನಿರಂತರ ವಾಗಿ ಸೇವಿಸುವುದು ವಾತದೋಷವನ್ನು ಹೆಚ್ಚಿಸುವ ಪ್ರಮುಖ ಕಾರಣವಾಗಿದೆ. ವಿಶೇಷವಾಗಿ ಮೊಳಕೆಕಾಳು, ಬಟಾಣಿ, ಹುರಿ ಗಾಳು, ಕಡ್ಲೆಪೂರಿ, ವಿವಿಧ ಕಂದಮೂಲಗಳು, ಹಸಿ ತರಕಾರಿಗಳು ಹಾಗೂ ಹಾಗಲಕಾಯಿ ಮೊದಲಾದ ಅತಿಯಾದ ಕಹಿ ಪದಾರ್ಥಗಳ ಸೇವನೆ ದೇಹದಲ್ಲಿ ರೂಕ್ಷ ಮತ್ತು ಶೀತ ಗುಣಗಳನ್ನು ಹೆಚ್ಚಿಸುತ್ತದೆ.

ಈ ರೀತಿಯ ಆಹಾರ ಪದ್ಧತಿ ಅಪಾನ ವಾಯುವಿನ ಚಲನೆಯಲ್ಲಿ ಅಸಮತೋಲನ ಉಂಟುಮಾಡಿ, ಮುಟ್ಟಿನ ಸಮಯದಲ್ಲಿ ಹೊಟ್ಟೆನೋವು, ಬೆನ್ನುನೋವು, ಮುಟ್ಟಿನ ಅಡಚಣೆ ಹಾಗೂ ಕಡಿಮೆ ಸ್ರಾವದಂತಹ ಸಮಸ್ಯೆಗಳಿಗೆ ಕಾರಣವಾಗುತ್ತದೆ.

2 ಚೋದಕ ಪಾನೀಯಗಳ ಅತಿಯಾದ ಸೇವನೆ

ಅತಿಯಾಗಿ ಕಾಫಿ, ಗ್ರೀನ್ ಟೀ, ಕೂಲ್‌ಡ್ರಿಂಕ್ಸ್, ಎನರ್ಜಿ ಡ್ರಿಂಕ್ಸ್ ಹಾಗೂ ಇತರೆ ಕಾರ್ಬೊನೇಟೆಡ್ ಪಾನೀಯಗಳನ್ನು ಸೇವಿಸುವುದು ದೇಹದಲ್ಲಿ ಪಿತ್ತ ಮತ್ತು ವಾತದ ಅಸಮತೋಲನವನ್ನು ಉಂಟುಮಾಡುತ್ತದೆ. ಇಂತಹ ಪಾನೀಯಗಳು ದೇಹದ ಸ್ವಾಭಾವಿಕ ಚಕ್ರವನ್ನು ಉದ್ರೇಕಗೊಳಿಸಿ, ಅಪಾನವಾಯುವಿನ ಗತಿಯಲ್ಲಿಯೂ ವ್ಯತ್ಯಯ ಉಂಟುಮಾಡುತ್ತವೆ. ಇದರ ಪರಿಣಾಮವಾಗಿ ಮುಟ್ಟು ಸಮಯಕ್ಕಿಂತ ಮೊದಲೇ ಕಾಣಿಸಿ ಕೊಳ್ಳುವುದು, ಅತಿಯಾದ ರಕ್ತಸ್ರಾವ, ದೇಹ ದಲ್ಲಿ ಉಷ್ಣತೆಯ ಹೆಚ್ಚಳ, ಕಿರಿಕಿರಿ ಹಾಗೂ ದೌರ್ಬಲ್ಯದಂತಹ ಸಮಸ್ಯೆಗಳು ಕಾಣಿಸಿ ಕೊಳ್ಳಬಹುದು.

3 ಅತಿಯಾದ ಉಪ್ಪು, ಹುಳಿ, ಖಾರ ಹಾಗೂ ಮಸಾಲೆಯುಕ್ತ ಆಹಾರಗಳ ಸೇವನೆ

ವಿಪರೀತವಾಗಿ ಉಪ್ಪು, ಹುಳಿ, ಖಾರ ಮತ್ತು ಕ್ಷಾರಯುಕ್ತ ಪದಾರ್ಥಗಳನ್ನು ಸೇವಿಸುವುದು ದೇಹದಲ್ಲಿ ಪಿತ್ತದೋಷವನ್ನು ಹೆಚ್ಚಿಸುತ್ತದೆ. ವಿಶೇಷವಾಗಿ ಮಸಾಲೆ ಹಾಕಿದ ಉಪ್ಪಿನಕಾಯಿಗಳು, ಮಂಚೂರಿಯನ್, ಚಿಪ್ಸ್, ಫಾಸ್ಟ್ ಫುಡ್ ಹಾಗೂ ಅತಿಯಾಗಿ ಸಂಸ್ಕರಿಸಲಾದ ಆಹಾರಗಳು ದೇಹದಲ್ಲಿ ಉಷ್ಣತೆಯನ್ನು ಹೆಚ್ಚಿಸಿ ರಕ್ತವನ್ನು ದೂಷಿತಗೊಳಿಸುತ್ತವೆ.

ಇದರ ಪರಿಣಾಮವಾಗಿ ಮುಟ್ಟು ಸಮಯಕ್ಕಿಂತ ಮೊದಲೇ ಕಾಣಿಸಿಕೊಳ್ಳು ವುದು, ಅತಿಯಾದ ರಕ್ತಸ್ರಾವ, ಉರಿಯೂತ, ಕಿರಿಕಿರಿ ಹಾಗೂ ದೇಹದ ದೌರ್ಬಲ್ಯದಂತಹ ಸಮಸ್ಯೆಗಳು ಉಂಟಾಗಬಹುದು.

4 ಅತಿಯಾದ ಶೀತಲ ಆಹಾರಗಳ ಸೇವನೆ

ಐಸ್ಕ್ರೀಮ್, ಕೇಕ್, ಪೇಸ್ಟ್ರೀಸ್, ಬೇಕರಿ ತಿನಿಸುಗಳು ಹಾಗೂ ಫ್ರಿಡ್ಜ್‌ನಲ್ಲಿಟ್ಟ ಶೀತಲ ಆಹಾರಗಳನ್ನು ಅತಿಯಾಗಿ ಸೇವಿಸುವುದು ದೇಹದಲ್ಲಿ ಕಫದೋಷವನ್ನು ಹೆಚ್ಚಿಸುತ್ತದೆ. ಇದರ ಪರಿಣಾಮವಾಗಿ ಅಪಾನವಾಯುವಿನ ಸಹಜ ಗತಿ ನಿಧಾನಗೊಂಡು, ಮುಟ್ಟು ಮುಂದೂಡಲ್ಪಡುವುದು, ಸರಿಯಾಗಿ ಆಗದೆ ಇರುವುದು ಅಥವಾ ಅತಿ ಕಡಿಮೆ ಪ್ರಮಾಣದಲ್ಲಿ ಸ್ರಾವವಾಗುವಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ.



5 ಔಷಧಿಗಳ ಅತಿಯಾದ ಹಾಗೂ ಅನಿಯಂತ್ರಿತ ಬಳಕೆ

ಹಾರ್ಮೋನಲ್ ಪಿಲ್ಸ್, ಓರಲ್ ಕಾಂಟ್ರಾಸೆಪ್ಟಿವ್ಸ್, ತೀಕ್ಷ್ಣ ಸ್ವಭಾವದ ಔಷಧಿಗಳು, ಅತಿಯಾದ ಆಂಟಿಬಯೋಟಿಕ್ಸ್, ಸ್ಟೀರಾಯ್ಡ್ಸ್ ಹಾಗೂ ಪದೇಪದೆ ಪೇನ್‌ಕಿಲ್ಲರ್‌ಗಳ ಬಳಕೆ ದೇಹದ ಸಹಜ ಹಾರ್ಮೋನಲ್ ಸಮತೋಲನದ ಮೇಲೆ ಪರಿಣಾಮ ಬೀರುತ್ತವೆ.

ಆರಂಭದಲ್ಲಿ ಇವು ತಾತ್ಕಾಲಿಕ ಪರಿಹಾರ ನೀಡಿದಂತೆಯೇ ಕಾಣಿಸಿದರೂ, ದೀರ್ಘಕಾಲದಲ್ಲಿ ದೇಹದ ಸ್ವಾಭಾವಿಕ ಋತುಚಕ್ರವನ್ನು ಅಸ್ತವ್ಯಸ್ತಗೊಳಿಸುವ ಸಾಧ್ಯತೆ ಇದೆ.

6 ಅಸಮರ್ಪಕ ಆಹಾರ ಸೇವನೆಯ ಅಭ್ಯಾಸಗಳು

ಬಾಯಾರಿಕೆ ಇಲ್ಲದಿದ್ದರೂ ಅತಿಯಾಗಿ ನೀರು ಅಥವಾ ದ್ರವಾಹಾರಗಳನ್ನು ಸೇವಿಸುವುದು, ಹಸಿವು ಇಲ್ಲದಿದ್ದರೂ ಪದೇಪದೆ ತಿನ್ನುವುದು, ಹಸಿವಿನ ಮಿತಿಯನ್ನು ಲೆಕ್ಕಿಸದೆ ಅತಿಯಾಗಿ ಆಹಾರ ಸೇವಿಸುವುದು ಹಾಗೂ ಸಮಯವಲ್ಲದ ಸಮಯದಲ್ಲಿ ಊಟ ಮಾಡುವ ಅಭ್ಯಾಸಗಳು ಮುಟ್ಟಿನ ಸಮಸ್ಯೆಗೆ ಮೂಲ ಕಾರಣ.

7 ದಿವಾಸ್ವಪ್ನ - ಹಗಲಿನ ನಿದ್ರೆಯ ಅಭ್ಯಾಸ

ಆಹಾರ ಸೇವಿಸಿದ ತಕ್ಷಣ ಮಲಗುವುದು ಅಥವಾ ಹಗಲಿನ ಯಾವುದೇ ಸಮಯದಲ್ಲಿ ಪದೇಪದೆ ಮಲಗುವ ಅಭ್ಯಾಸವನ್ನು ಆಯುರ್ವೇದದಲ್ಲಿ ದಿವಾಸ್ವಪ್ನ ಎಂದು ಕರೆಯಲಾಗುತ್ತದೆ. ಆಯುರ್ವೇದದ ಪ್ರಕಾರ, ದಿವಾಸ್ವಪ್ನವನ್ನು ಸಾಧ್ಯವಾದಷ್ಟು ವರ್ಜ್ಯ ಮಾಡಬೇಕೆಂದು ಹೇಳಲಾಗಿದೆ. ಕಫದಿಂದಾಗುವ ಮುಟ್ಟಿನ ಸಮಸ್ಯೆಗೆ ಇದು ಕಾರಣವಾಗಬಹುದು.

8 ರಾತ್ರಿ ಜಾಗರಣೆ

ರಾತ್ರಿ ಸಮಯದಲ್ಲಿ ಜಾಗರಣೆ ಮಾಡುವ ಅಭ್ಯಾಸ ದೇಹದ ಸಹಜ ಜೈವಿಕ ಗತಿಯನ್ನೇ ಅಸ್ತವ್ಯಸ್ತಗೊಳಿಸುತ್ತದೆ. ಆಯುರ್ವೇದದ ಪ್ರಕಾರ, ರಾತ್ರಿ ನಿದ್ರಾ ಭಾವವು ಮುಖ್ಯವಾಗಿ ವಾತದೋಷವನ್ನು ಅತ್ಯಂತ ವೇಗವಾಗಿ ಪ್ರಚೋದಿಸುತ್ತದೆ.

ವಾತದ ಪ್ರಕೋಪದಿಂದ ಅಪಾನ ವಾಯುವಿನ ಸಹಜ ಚಲನೆ ವ್ಯತ್ಯಯಗೊಂಡು, ಮುಟ್ಟು ಸರಿಯಾಗಿ ಆಗದೆ ಇರುವುದು, ಅತಿ ಕಡಿಮೆ ಪ್ರಮಾಣದಲ್ಲಿ ರಕ್ತಸ್ರಾವವಾಗುವುದು ಅಥವಾ ಕೆಲವೊಮ್ಮೆ ರಕ್ತವೇ ಹರಿಯದ ಸ್ಥಿತಿಯೂ ಉಂಟಾಗಬಹುದು.

9 ಶಾರೀರಿಕ ವೇಗಗಳನ್ನು ತಡೆಹಿಡಿಯುವುದು

ಹಸಿವು, ನಿದ್ರೆ, ಮಲ, ಮೂತ್ರ ಮೊದಲಾದ ದೇಹದ ಸಹಜ ವೇಗಗಳನ್ನು ತಡೆಹಿಡಿಯುವ ಅಭ್ಯಾಸವು ದೇಹದ ಸಹಜ ಸಮತೋಲನ ವನ್ನು ಭಂಗಪಡಿಸುತ್ತದೆ. ವಿಶೇಷವಾಗಿ ಮಹಿಳೆಯರು ತಮ್ಮ ಆರೋಗ್ಯವನ್ನು ಕಡೆಗಣಿಸಿ ಪದೇಪದೆ ಉಪವಾಸ ಮಾಡು ವುದು, ಸರಿಯಾದ ಸಮಯಕ್ಕೆ ಆಹಾರ ಸೇವಿಸದೇ ಇರುವುದು ಅಥವಾ ಆಹಾರ- ಪಾನವನ್ನು ಬಿಟ್ಟು ದೇಹವನ್ನು ದಣಿವಿಗೆ ಒಳಪಡಿಸುವುದು ಅಪಾನವಾಯುವಿನ ಗತಿಯಲ್ಲಿ ವ್ಯತ್ಯಯ ಉಂಟುಮಾಡುತ್ತದೆ. ಆಯುರ್ವೇದದ ಪ್ರಕಾರ, ದೇಹದ ಸಹಜ ಅಗತ್ಯಗಳನ್ನು ನಿರ್ಲಕ್ಷಿಸುವುದು ನಿಧಾನವಾಗಿ ಅನೇಕ ಸ್ತ್ರೀರೋಗಗಳಿಗೆ ಮೂಲ ಕಾರಣವಾಗುತ್ತದೆ.

10 ಅತಿಯಾದ ದೈಹಿಕ ಶ್ರಮ ಮತ್ತು ವಿಶ್ರಾಂತಿಯ ಅಭಾವ

ಅತ್ಯಧಿಕ ದೈಹಿಕ ಶ್ರಮ, ವಿಶ್ರಾಂತಿ ಇಲ್ಲದೆ ನಿರಂತರ ದುಡಿಯುವುದು, ಅತಿಯಾದ ಪ್ರಯಾಣ, ತಮ್ಮ ದೇಹಶಕ್ತಿಯನ್ನು ಮೀರಿದ ವ್ಯಾಯಾಮ, ನೃತ್ಯ ಅಥವಾ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವುದು ದೇಹದಲ್ಲಿ ವಾತ ದೋಷವನ್ನು ಹೆಚ್ಚಿಸುತ್ತದೆ. ಅದರಲ್ಲೂ ಆಹಾರದಲ್ಲಿ ಅಗತ್ಯವಾದ ಜಿಡ್ಡಿನ ಅಂಶ ಗಳನ್ನು ಸೇವಿಸದೇ ಮಾಡುವ ಅತಿಯಾದ ವ್ಯಾಯಾಮ ದೇಹದಲ್ಲಿ ರೂಕ್ಷತೆ ಹೆಚ್ಚಿಸಿ ತೀವ್ರ ವಾತದುಷ್ಟಿಗೆ ಕಾರಣವಾಗುತ್ತದೆ. ಇದು ನಿಧಾನವಾಗಿ ಇಡೀ ಋತುಚಕ್ರದ ಸಮ ತೋಲನವನ್ನು ಹಾಳುಮಾಡುವ ಸಾಧ್ಯತೆಯಿದೆ.

11 ವ್ಯಾಯಾಮರಹಿತ ಜೀವನಶೈಲಿ ಮತ್ತು ಸುಖಪ್ರವೃತ್ತಿ

ಹಾಗೆಯೇ, ದೈಹಿಕ ಚಟುವಟಿಕೆಗಳಿಲ್ಲದ ಸುಖಪ್ರವೃತ್ತಿ, ಸದಾ ಒಂದೇ ಸ್ಥಳದಲ್ಲಿ ಕೂತು ಕೆಲಸ ಮಾಡುವ ಅಭ್ಯಾಸ, ದೇಹಕ್ಕೆ ಶ್ರಮವಿಲ್ಲದ ಜೀವನಶೈಲಿ ಹಾಗೂ ಚಲನೆಯ ಕೊರತೆ ದೇಹದಲ್ಲಿ ಕಫದೋಷವನ್ನು ಹೆಚ್ಚಿಸು ತ್ತದೆ. ಆಯುರ್ವೇದದ ಪ್ರಕಾರ, ಸಮತೋಲನಯುತ ದೈಹಿಕ ಚಟುವಟಿಕೆ ಮಹಿಳೆಯ ಋತುಚಕ್ರವನ್ನು ಸರಾಗವಾಗಿ ಕಾಯ್ದುಕೊಳ್ಳಲು ಅತ್ಯಗತ್ಯವಾಗಿದೆ.

12 ಆರ್ತವಕಾಲದಲ್ಲಿ ಪಾಲಿಸಬೇಕಾದ ನಿಯಮಗಳನ್ನು ನಿರ್ಲಕ್ಷಿಸುವುದು

ಆಯುರ್ವೇದದಲ್ಲಿ ದಿನಚರ್ಯೆ ಮತ್ತು ಋತುಚರ್ಯೆಯಂತೆ, ಆರ್ತವಕಾಲದಲ್ಲಿಯೂ ಪಾಲಿಸಬೇಕಾದ ಕೆಲವು ವಿಶೇಷ ನಿಯಮಗಳನ್ನು ವಿವರಿಸಲಾಗಿದೆ. ಈ ಸಮಯದಲ್ಲಿ ಅತಿಯಾದ ವ್ಯಾಯಾಮವನ್ನು ತಪ್ಪಿಸುವುದು, ಸಾತ್ವಿಕ ಹಾಗೂ ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಸೇವಿಸು ವುದು, ಉಪ್ಪು-ಖಾರ-ಹುಳಿ ಪದಾರ್ಥ ಗಳನ್ನು ಮಿತಿಗೊಳಿಸುವುದು ಹಾಗೂ ಮನಸ್ಸನ್ನು ಶಾಂತವಾಗಿಟ್ಟುಕೊಳ್ಳುವುದು ಅತ್ಯಂತ ಮುಖ್ಯವೆಂದು ಹೇಳಲಾಗಿದೆ. ಆದರೆ, ಇಂದಿನ ಜೀವನಶೈಲಿಯಲ್ಲಿ ಈ ನಿಯಮಗಳನ್ನು ಕಡೆಗಣಿಸಿ, ದೇಹದ ಸ್ಥಿತಿಯನ್ನು ಲೆಕ್ಕಿಸದೆ ಅತಿಯಾದ ಚಟುವಟಿಕೆ, ಅಸಮರ್ಪಕ ಆಹಾರ ಮತ್ತು ಅಶಾಂತ ಮನ ಸ್ಥಿತಿಯೊಂದಿಗೆ ಆರ್ತವಕಾಲವನ್ನು ಕಳೆಯು ವುದು ಸಾಮಾನ್ಯವಾಗಿದೆ. ಇಂತಹ ಅನಿಯ ಮಿತ ನಡೆನುಡಿಗಳು ನಿಧಾನವಾಗಿ ದೋಷಗಳ ಅಸಮತೋಲನಕ್ಕೆ ಕಾರಣವಾಗಿ ಮುಟ್ಟಿನ ತೊಂದರೆಗಳಿಗೆ ಕಾರಣವಾಗಬಹುದು.

13 ಮಾನಸಿಕ ಒತ್ತಡ ಮತ್ತು ಭಾವನಾತ್ಮಕ ಅಸ್ಥಿರತೆ

ಇಂದಿನ ನಿತ್ಯ ಜೀವನದಲ್ಲಿ ಅತಿಯಾದ ಉದ್ಯೋಗದ ಒತ್ತಡ, ನಿರಂತರ ಮಾನಸಿಕ ತಳಮಳ, ಚಿಂತೆ, ದುಃಖ, ಕೋಪ, ಭಯ ಹಾಗೂ ಅಶಾಂತಿಯಂತಹ ಭಾವನೆಗಳು ಮಹಿಳೆಯ ಆರೋಗ್ಯದ ಮೇಲೆ ಆಳವಾದ ಪರಿಣಾಮ ಬೀರುತ್ತಿವೆ. ಆಯುರ್ವೇದದ ಪ್ರಕಾರ, ಮನಸ್ಸು ಮತ್ತು ದೇಹವು ಪರಸ್ಪರ ಅವಿನಾಭಾವ ಸಂಬಂಧ ಹೊಂದಿರುವುದರಿಂದ, ಮಾನಸಿಕ ಅಸಮತೋಲನವು ನೇರವಾಗಿ ಆರ್ತವದ ಮೇಲೂ ಪರಿಣಾಮ ಬೀರುತ್ತದೆ.ಆದ್ದರಿಂದ, ಆರ್ತವದ ಆರೋಗ್ಯವನ್ನು ಕಾಪಾಡಲು ಮನಸ್ಸಿನ ಶಾಂತಿಯೂ ಆಹಾರ-ವಿಹಾರದಷ್ಟೇ ಮಹತ್ವದ್ದಾಗಿದೆ.

14 ಅತಿಯಾದ ಹಾಗೂ ಅಸಮರ್ಪಕ ಮೈಥುನಾಚಾರ

ಆಯುರ್ವೇದದ ಪ್ರಕಾರ, ಮೈಥುನ ಕ್ರಿಯೆಯೂ ಒಂದು ನಿಯಮ ಮತ್ತು ಕ್ರಮದೊಳಗೆ ನಡೆಯಬೇಕಾದ ಸಹಜ ಚಟುವಟಿಕೆಯಾಗಿದೆ. ಋತು, ವಯಸ್ಸು, ದೈಹಿಕ ಕ್ಷಮತೆ ಹಾಗೂ ಆಹಾರ-ವಿಹಾರದ ಸ್ಥಿತಿಯನ್ನು ಅನುಸರಿಸಿ ಮೈಥುನಾಚಾರವನ್ನು ನಿಯಂತ್ರಿಸಬೇಕೆಂದು ಆಯುರ್ವೇದ ತಿಳಿಸುತ್ತದೆ. ಆದರೆ, ದೇಹದ ಶಕ್ತಿಯನ್ನು ಲೆಕ್ಕಿಸದೇ, ಅಗತ್ಯ ವಾದ ಪೋಷಕ ಆಹಾರ ವನ್ನು ಸೇವಿಸದೇ ಅಥವಾ ಅತಿಯಾದ ಮೈಥುನಾಚಾರದಲ್ಲಿ ತೊಡಗಿಸಿಕೊಳ್ಳುವುದು ಧಾತುಕ್ಷಯಕ್ಕೆ ಹಾಗೂ ವಾತ-ಪಿತ್ತದ ಅಸಮತೋಲನಕ್ಕೆ ಕಾರಣವಾಗುತ್ತದೆ. ಇದರ ಪರಿಣಾಮವಾಗಿ ಅತಿಯಾದ ರಕ್ತಸ್ರಾವ, ಸಮಯಕ್ಕಿಂತ ಮೊದಲೇ ಮುಟ್ಟು ಕಾಣಿಸಿ ಕೊಳ್ಳುವುದು, ದೌರ್ಬಲ್ಯ ಹಾಗೂ ದೇಹದ ಶಿಥಿಲತೆ ಮೊದಲಾದ ಸಮಸ್ಯೆಗಳು ಉಂಟಾಗಬಹುದು.

ಸ್ನೇಹಿತರೆ, ಮುಟ್ಟು ಎಂಬುದು ಕೇವಲ ಪ್ರತಿ ತಿಂಗಳ ಸ್ರಾವವಲ್ಲ - ಅದು ಮಹಿಳೆಯ ದೇಹ, ಮನಸ್ಸು ಮತ್ತು ಜೀವನಶೈಲಿಯ ಸಮತೋಲನದ ಪ್ರತಿಬಿಂಬವಾಗಿದೆ. ಆ ನಾಲ್ಕು ದಿನಗಳ ನೋವು ಅಥವಾ ಅಸ್ವಸ್ಥತೆಯ ಹಿಂದೆ ದೇಹವು ತಿಂಗಳ ಪೂರ್ತಿ ಅನುಭವಿಸಿದ ಆಹಾರ, ವಿಹಾರ ಮತ್ತು ಮಾನಸಿಕ ಅಸಮತೋಲನಗಳು ಅಡಗಿವೆ. ಇಂದಿನ ಜೀವನಶೈಲಿಯಲ್ಲಿ ನಾವು ಸಹಜತೆಯಿಂದ ಎಷ್ಟು ದೂರ ಸಾಗುತ್ತಿದ್ದೇವೋ, ಅಷ್ಟೇ ಋತುಚಕ್ರವೂ ತನ್ನ ಸಹಜ ಗತಿಯನ್ನು ಕಳೆದುಕೊಳ್ಳುತ್ತಿದೆ.

ಆಯುರ್ವೇದವು ಮುಟ್ಟನ್ನು ಒಂದು ಸಮಸ್ಯೆಯಾಗಿ ನೋಡುವುದಿಲ್ಲ; ಅದು ಮಹಿಳೆಯ ಆರೋಗ್ಯದ ಕನ್ನಡಿಯೆಂದು ಪರಿಗಣಿಸುತ್ತದೆ. ಆದ್ದರಿಂದ ತಾತ್ಕಾಲಿಕ ಪರಿಹಾರಗಳ ಹಿಂದೆ ಓಡುವುದಕ್ಕಿಂತ, ಮೂಲ ಕಾರಣಗಳನ್ನು ಅರಿತು ಜೀವನಶೈಲಿಯನ್ನು ಸರಿಪಡಿಸುವುದು ಅತ್ಯಗತ್ಯ. ಸರಿಯಾದ ಆಹಾರ, ಸಮತೋಲನಯುತ ಚಟುವಟಿಕೆ, ಮನಶಾಂತಿ ಮತ್ತು ಪ್ರಕೃತಿಗೆ ಅನುಗುಣವಾದ ಬದುಕು - ಇವೇ ಆರೋಗ್ಯಕರ ಋತುಚಕ್ರದ ನಿಜವಾದ ಆಧಾರಗಳು.

ಆರೆಂಜ್ ಕ್ಯಾಪ್
ಸಾಯಿ ಸುದರ್ಶನ್
ಗುಜರಾತ್

ಪರ್ಪಲ್ ಕ್ಯಾಪ್
ಭುವನೇಶ್ವರ್ ಕುಮಾರ್
ಆರ್‌ಸಿಬಿ

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
Q ಬೆಂಗಳೂರು	14	9	5	18
Q ಗುಜರಾತ್	14	9	5	18
Q ಹೈದರಾಬಾದ್	14	9	5	18
ರಾಜಸ್ಥಾನ್	13	7	6	14
ಪಂಜಾಬ್	13	6	6	13
ಕೋಲ್ಕತಾ	13	6	6	13
ಚೆನ್ನೈ	14	6	8	12
ಡೆಲ್ಲಿ	13	6	7	12
ಮುಂಬೈ	12	4	9	8
ಲಖನೌ	13	4	9	8

ಮಂಗಳವಾರ ಆರ್‌ಸಿಬಿ-ಗುಜರಾತ್ ಪಂದ್ಯ | ಗೆದ್ದರೆ ಪಾಟೀದಾರ್ ಪಡೆ ಫೈನಲ್‌ಗೆ, ಸೋತರೆ ಮೇ 29ಕ್ಕೆ ಇನ್ನೊಂದು ಅವಕಾಶ

ಅಗ್ರಸ್ಥಾನಿ ಆರ್‌ಸಿಬಿ ಕ್ವಾಲಿಫೈಯರ್-1ಕ್ಕೆ

ಆರ್‌ಸಿಬಿ ವಿರುದ್ಧ ಹೈದರಾಬಾದ್‌ಗೆ 55 ರನ್ ಜಯ | ಗೆದ್ದರೂ 3ನೇ ಸ್ಥಾನ, ಮೇ 27ಕ್ಕೆ ಎಲಿಮಿನೇಟರ್‌ನಲ್ಲಿ ಆಟ, ಸೋತರೆ ನಿರ್ಗಮನ

ಹೈದರಾಬಾದ್: ಸನ್‌ರೈಸರ್ಸ್ ಹೈದರಾಬಾದ್ ಎದುರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 55 ರನ್ ಗಳಿಂದ ಸೋಲು ಅನುಭವಿಸಿದರೂ ಅಂಕಪಟ್ಟಿಯಲ್ಲಿ ಅಗ್ರಸ್ಥಾನಿಯಾಗಿ ಐಪಿಎಲ್ ಪ್ಲೇ ಆಫ್‌ನ ಕ್ವಾಲಿಫೈಯರ್ ತಂಡ ಎನಿಸಿಕೊಂಡಿತು.

ಕ್ವಾಲಿಫೈಯರ್ ಪಂದ್ಯದಲ್ಲಿ ಶುಭಮನ್ ಗಿಲ್ ನಾಯಕತ್ವದ ಗುಜರಾತ್ ಟೈಟನ್ಸ್ ಎದುರು ಮೇ 26ರಂದು ಧರ್ಮಶಾಲಾದಲ್ಲಿ ಕಾದಾಟ ನಡೆಸಲಿದೆ. ಈ ಪಂದ್ಯವನ್ನು ಗೆದ್ದರೂ ಪ್ಯಾಟ್ ಕಮಿನ್ಸ್ ನಾಯಕತ್ವದ ಹೈದರಾಬಾದ್ ತಂಡ ಅಂಕಪಟ್ಟಿಯಲ್ಲಿ 3ನೇ ಸ್ಥಾನದಲ್ಲಿ ಉಳಿಯುವ ಮೂಲಕ ಎಲಿಮಿನೇಟರ್ ಪಂದ್ಯವನ್ನು ಆಡಲಿದೆ. ಶುಕ್ರವಾರದಂದು ಹೈದರಾಬಾದ್ ನೀಡಿದ್ದ 256 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಆರ್‌ಸಿಬಿ ತಂಡ, ಪವರ್‌ಪ್ಲೇನಲ್ಲಿ ಆಕ್ರಮಣಕಾರಿ ಆಟವನ್ನು ಆಡಿತು. ವೆಂಕಟೇಶ್ ಅಯ್ಯರ್ (44 ರನ್), ವಿರಾಟ್ ಕೊಹ್ಲಿ (15) ಹಾಗೂ ದೇವದತ್ ಪಡಿಕ್ಕಲ್ (21) ವಿಕೆಟ್

ಇಶಾನ್ ಕಿಶನ್

ಒಪ್ಪಿಸಿದ ಬಳಿಕ ಆರ್‌ಸಿಬಿ ಲೆಕ್ಕಾಚಾರದ ಪ್ರಕಾರ ಬ್ಯಾಟ್ ಮಾಡಿತು. ಅಗ್ರ ಎರಡು ಸ್ಥಾನಗಳನ್ನು ಉಳಿಸಿಕೊಳ್ಳಲು ಆರ್‌ಸಿಬಿ 166 ರನ್‌ಗಳನ್ನು ಕಲೆ ಹಾಕಬೇಕಿತ್ತು, ಆದರೆ ಹೈದರಾಬಾದ್‌ಗೆ ಅಗ್ರ ಎರಡಕ್ಕೆ ಪ್ರವೇಶಿಸಲು 90 ರನ್ ಗಳ ಅಂತರದಲ್ಲಿ ಗೆಲುವು ಪಡೆಯಬೇಕಾಗಿತ್ತು.

ಈ ಲೆಕ್ಕಾಚಾರ ಗಮನದಲ್ಲಿಟ್ಟುಕೊಂಡು ನಾಯಕ ರಜತ್ ಪಾಟಿದಾರ್ ಹಾಗೂ ಕೃಣಾಲ್ ಪಾಂಡ್ಯ ಅಪಾಯಕಾರಿ ಬ್ಯಾಟಿಂಗ್‌ಗೆ ಕೈ ಹಾಕಲಿಲ್ಲ. ಇಬ್ಬರೂ 57 ಎಸೆತಗಳಲ್ಲಿ 84 ರನ್ ಗಳಿಸಿದರು. ಪಾಟೀದಾರ್ 39 ಎಸೆತಗಳಲ್ಲಿ 56 ರನ್ ಗಳಿಸಿದ ಬಳಿಕ ಔಟ್ ಆದರು. ಕೊನೆಯವರೆಗೂ ಅಜೇಯರಾಗಿ ಉಳಿದ ಕೃಣಾಲ್ ಪಾಂಡ್ಯ 31 ಎಸೆತಗಳಲ್ಲಿ 41 ರನ್ ಗಳಿಸಿದರು. ಕೊನೆಯಲ್ಲಿ ಟಿಮ್ ಡೇವಿಡ್ 7 ಎಸೆತಗಳಲ್ಲಿ ಅಜೇಯ15 ರನ್ ಗಳಿಸಿದರು. ಅಂತಿಮವಾಗಿ ಆರ್‌ಸಿಬಿ 20 ಓವರ್ ಗಳಿಗೆ 4 ವಿಕೆಟ್‌ಗಳಿಗೆ 200 ರನ್‌ಗಳನ್ನು ಕಲೆ ಹಾಕಿತು.

ಹೈದರಾಬಾದ್ 255 ರನ್: ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಹೈದರಾಬಾದ್ ತಂಡವು ಸ್ಫೋಟಕ ಬ್ಯಾಟಿಂಗ್ ಪ್ರದರ್ಶನವನ್ನು ತೋರಿತು. ಅಭಿಷೇಕ್ ಶರ್ಮಾ, ಹೆನ್ರಿಚ್ ಕ್ಲಾಸೆನ್ ಹಾಗೂ ಇಶಾನ್ ಕಿಶನ್ ಅವರ ಅರ್ಧಶತಕಗಳ ಬಲದಿಂದ 20 ಓವರ್‌ಗಳಿಗೆ 4 ವಿಕೆಟ್‌ಗಳ ನಷ್ಟಕ್ಕೆ 255 ರನ್‌ಗಳ ಬೃಹತ್ ಮೊತ್ತವನ್ನು ಕಲೆ ಹಾಕಿ, ಆರ್‌ಸಿಬಿಗೆ 256 ರನ್‌ಗಳ ಬೃಹತ್ ಗುರಿಯನ್ನು ನೀಡಿತು.

ಇನಿಂಗ್ಸ್ ಆರಂಭಿಸಿದ ಅಭಿಷೇಕ್ ಶರ್ಮಾ ಹಾಗೂ ಟ್ರಾವಿಸ್ ಹೆಡ್ ಮೊದಲನೇ ವಿಕೆಟ್‌ಗೆ 45 ರನ್‌ಗಳನ್ನು ಕಲೆ ಹಾಕಿದರು. 16 ಎಸೆತಗಳಲ್ಲಿ 26 ರನ್ ಗಳಿಸಿದ ಬಳಿಕ ಟ್ರಾವಿಸ್ ಹೆಡ್, ರಸಿಖ್ ಸಲಾಮ್ ಎಸೆತದಲ್ಲಿ ಕ್ಲೀನ್ ಬೌಲ್ಡ್ ಆದರು, ಆದರೆ ಒಂದು ತುದಿಯಲ್ಲಿ ಸ್ವಲ್ಪ ಸಮಯ ಸ್ಫೋಟಕ ಬ್ಯಾಟ್ ಮಾಡಿದ ಅಭಿಷೇಕ್ ಶರ್ಮಾ ಕೇವಲ 22 ಎಸೆತಗಳಲ್ಲಿ 56 ರನ್‌ಗಳನ್ನು (5 ಸಿಕ್ಸರ್, 4 ಬೌಂಡರಿ) ಸಿಡಿಸಿದರು, ನಂತರ ಸುಯಶ್ ಶರ್ಮಾಗೆ ಔಟ್ ಆದರು. 4ನೇ ಕ್ರಮಾಂಕದಲ್ಲಿ ಅಬ್ಬರಿಸಿದ ಹೆನ್ರಿಚ್ ಕ್ಲಾಸೆನ್ ಕೇವಲ 24 ಎಸೆತಗಳಲ್ಲಿ 51 ರನ್ ಸಿಡಿಸಿ ತಂಡದ ರನ್ ವೇಗವನ್ನು ಹೆಚ್ಚಿಸಿ ವಿಕೆಟ್ ಒಪ್ಪಿಸಿದರು. **ಇಶಾನ್ ಕಿಶನ್ ಅಬ್ಬರ:** 3ನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದು ಕೊನೆಯವರೆಗೂ ಬ್ಯಾಟ್ ಮಾಡಿದ ಇಶಾನ್ ಕಿಶನ್, ತಮ್ಮ ಬ್ಯಾಟಿಂಗ್‌ನಲ್ಲಿ ಅಬ್ಬರಿಸಿ ಬೊಬ್ಬಿರಿದರು. ಅವರು ಆಡಿದ 46 ಎಸೆತಗಳಲ್ಲಿ 3 ಸಿಕ್ಸರ್ ಹಾಗೂ 8 ಬೌಂಡರಿಗಳೊಂದಿಗೆ 79 ರನ್‌ಗಳನ್ನು ಚಚ್ಚಿದರು. ಕೊನೆಯಲ್ಲಿ ನಿತೀಶ್‌ಕುಮಾರ್ ರೆಡ್ಡಿ 12 ಎಸೆತಗಳಲ್ಲಿ 29 ರನ್‌ಗಳನ್ನು ಗಳಿಸಿದರು.

ಸ್ಕೋರ್ ಬೋರ್ಡ್

ಹೈದರಾಬಾದ್ 255/4 20 ಓವರ್

		ರನ್	ಎಸೆತ	4s	6s
ಅಭಿಷೇಕ್ ಶರ್ಮಾ	ಸಿ (ಸಬ್-ಕಾಕ್ಸ್), ಬಿ ಶರ್ಮಾ	56	22	4	5
ಟ್ರಾವಿಸ್ ಹೆಡ್	ಬಿ ರಾಸಿಖ್ ಸಲಾಮ್	26	16	5	0
ಇಶಾನ್ ಕಿಶನ್	ಸಿ ಪಡಿಕ್ಕಲ್, ಬಿ ಸಲಾಮ್ ದಾರ್	79	46	8	3
ಹೆನ್ರಿಕ್ ಕ್ಲಾಸೆನ್	ಸಿ ಅಯ್ಯರ್, ಬಿ ಪಾಂಡ್ಯ	51	24	2	5
ನಿತೀಶ್ ರೆಡ್ಡಿ	ನಾಟೌಟ್	29	12	1	3

ಬೆಂಗಳೂರು ಬೌಲಿಂಗ್

	ಓವರ್	ಮೇಡನ್	ರನ್	ವಿಕೆಟ್
ಭುವನೇಶ್ವರ್	4	0	51	0
ಹೇಜಲ್‌ವುಡ್	4	0	55	0
ರಾಸಿಖ್ ಸಲಾಮ್	4	0	52	2
ಸುಯಶ್ ಶರ್ಮಾ	3	0	36	1
ರೊಮಾರಿಯೊ ಶೆಫರ್ಡ್	3	0	37	0
ಕೃನಾಲ್ ಪಾಂಡ್ಯ	2	0	24	1

ವಿಕೆಟ್ ಪತನ: 1/45, 2/97, 3/210, 4/255

ಆರ್‌ಸಿಬಿ 200/4 20 ಓವರ್

	ರನ್	ಎಸೆತ	4s	6s
ವೆಂಕಟೇಶ್ ಅಯ್ಯರ್ ಸಿ ಶರ್ಮಾ, ಬಿ ಮಾಲಿಂಗ	44	19	4	4
ವಿರಾಟ್ ಕೊಹ್ಲಿ ಸಿ ರವಿಚಂದ್ರನ್, ಬಿ ಸಾಕಿಬ್	15	11	2	0
ಪಡಿಕ್ಕಲ್ ಸಿ ಶರ್ಮಾ, ಬಿ ಮಾಲಿಂಗ	21	14	2	1
ಪಾಟೀದಾರ್ ಸಿ ರವಿಚಂದ್ರನ್, ಬಿ ಹೆಡ್	56	39	6	1
ಕೃಣಾಲ್ ಪಾಂಡ್ಯ ನಾಟ್ ಔಟ್	41	31	5	0
ಟಿಮ್ ಡೇವಿಡ್ ನಾಟ್ ಔಟ್	15	7	1	1

ಹೈದರಾಬಾದ್ ಬೌಲಿಂಗ್

	ಓವರ್	ಮೇಡನ್	ರನ್	ವಿಕೆಟ್
ಕಮ್ಮಿನ್ಸ್	4	0	48	1
ಈಶಾನ್ ಮಾಲಿಂಗ	4	0	33	2
ಶಿವಂಗ್ ಕುಮಾರ್	2	0	32	0
ಸಾಕಿಬ್ ಹುಸೇನ್	4	0	31	1
ಹರ್ಷಲ್ ಪಟೇಲ್	4	0	37	0
ನಿತೀಶ್ ರೆಡ್ಡಿ	1	0	10	0
ಟ್ರಾವಿಸ್ ಹೆಡ್	1	0	7	1

ವಿಕೆಟ್ ಪತನ : 1/60, 2/72, 3/94, 4/178

ಪ್ಲೇಯರ್ ಆಫ್ ದಿ ಮ್ಯಾಚ್ ▶▶ ಇಶಾನ್ ಕಿಶನ್ (ಹೈದರಾಬಾದ್)

ಸಮಾಚಾರ ಸಣ್ಣದಲ್ಲ

ಐಪಿಎಲ್: ಗಾಯಕ್ವಾಡ್‌ಗೆ 24 ಲಕ್ಷ ರು. ದಂಡ

ಅಹಮದಾಬಾದ್: ಹಾಲಿ ಐಪಿಎಲ್ ಆವೃತ್ತಿಯಲ್ಲಿ 2ನೇ ಬಾರಿಗೆ ನಿಧಾನಗತಿಯ ಓವರ್ ಮಾಡಿದ ಕಾರಣ ಚೆನ್ನೈ ಸೂಪರ್‌ಕಿಂಗ್ಸ್ ತಂಡದ ನಾಯಕ ಋತುರಾಜ್ ಗಾಯಕ್ವಾಡ್ ಅವರಿಗೆ ಬಿಸಿಸಿಐ 24 ಲಕ್ಷ ರು. ದಂಡ ವಿಧಿಸಿದೆ. ಗುರುವಾರ ನಡೆದಿದ್ದ ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ ಸಿಎಸ್‌ಕೆ ತಂಡ ನಿಗದಿತ ಅವಧಿಯಲ್ಲಿ ಓವರುಗಳನ್ನು ಮುಗಿಸಲು ವಿಫಲವಾಗಿತ್ತು. ಈ ಋತುವಿನಲ್ಲಿ ಸಿಎಸ್‌ಕೆ ಓವರ್ ರೇಟ್ ನಿಯಮಗಳನ್ನು ಉಲ್ಲಂಘಿಸಿದ್ದು ಇದು ಎರಡನೇ ಬಾರಿಯಾಗಿದೆ. ಇಂಪ್ಯಾಕ್ಟ್ ಪ್ಲೇಯರ್ ಕಾರ್ತಿಕ್ ಶರ್ಮಾ ಸೇರಿದಂತೆ ತಂಡದ ಉಳಿದ ಎಲ್ಲ ಆಟಗಾರರಿಗೆ 6 ಲಕ್ಷ ರು. ಅಥವಾ ಅವರ ಪಂದ್ಯ ಶುಲ್ಕದ ಶೇಕಡಾ 25ರಷ್ಟು ದಂಡ ಪ್ರಕಟಿಸಲಾಯಿತು.

ಡಬ್ಲ್ಯುಎಫ್‌ಐಗೆ ದೆಹಲಿ ಹೈಕೋರ್ಟ್ ಛೀಮಾರಿ

ದೆಹಲಿ: ಏಷ್ಯನ್ ಗೇಮ್ಸ್‌ಗೂ ಮುನ್ನ ಕುಸ್ತಿಪಟು ವಿನೇಶ್ ಫೋಗಟ್ ಸ್ಪರ್ಧಾತ್ಮಕ ಕುಸ್ತಿಗೆ ಮರಳುವುದನ್ನು ತಡೆಯಲು ಪ್ರಯತ್ನಿಸಿದ್ದಕ್ಕಾಗಿ ದೆಹಲಿ ಹೈಕೋರ್ಟ್ ಶುಕ್ರವಾರ ಭಾರತೀಯ ಕುಸ್ತಿ ಒಕ್ಕೂಟವನ್ನು (ಡಬ್ಲ್ಯುಎಫ್‌ಐ) ತರಾಟೆಗೆ ತೆಗೆದುಕೊಂಡಿದೆ. ದೇಶೀಯ ಕಾರ್ಯಕ್ರಮಗಳಿಗೆ ಫೋಗಟ್ ಅನರ್ಹ ಎಂದು ಘೋಷಿಸಿದ ನಿರ್ಧಾರದ ಬಗ್ಗೆ ಒಕ್ಕೂಟವನ್ನು ತರಾಟೆಗೆ ತೆಗೆದುಕೊಂಡ ನ್ಯಾಯಾಲಯ, ಮುಂಬರುವ ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್‌ನಲ್ಲಿ ಪ್ರಶಸ್ತಿ ವಿಜೇತ ಕುಸ್ತಿಪಟು ಭಾಗವಹಿಸಲು ಅವಕಾಶ ನೀಡುವುದನ್ನು ಖಚಿತಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿತು. ವಿಚಾರಣೆಯ ಸಮಯದಲ್ಲಿ ವಿನೇಶ್ ಫೋಗಟ್ ಮತ್ತು ಫೆಡರೇಶನ್ ನಡುವಿನ ದೀರ್ಘಕಾಲದ ಸಂಘರ್ಷದಿಂದಾಗಿ ಭಾರತೀಯ ಕುಸ್ತಿ ಏಕೆ ಬಳಲುತ್ತಲೇ ಇರಬೇಕು ಎಂದು ಹೈಕೋರ್ಟ್ ಪ್ರಶ್ನಿಸಿತು.

ಈ ಸಲ ವಿಶ್ವಕಪ್ ಫುಟ್ಬಾಲ್‌ನಲ್ಲಿ ನಿಯಾಲ್, ತಹ್ಸಿನ್ ಮೊಹಮ್ಮದ್ ಮತ್ತು ಸಪ್ರೀತ್ ಸಿಂಗ್ ಭಾಗಿ

ಫಿಫಾ ವಿಶ್ವಕಪ್‌ನಲ್ಲಿ ಮೂವರು ಭಾರತೀಯ ಮೂಲದವರು

ದೆಹಲಿ: ಭಾರತ ತಂಡ ಫಿಫಾ ವಿಶ್ವಕಪ್‌ನಲ್ಲಿ ಆಡುವುದನ್ನು ನೋಡುವುದು ಬಹುದೂರದ ಕನಸಾಗಿಯೇ ಉಳಿದಿದ್ದರೂ, ಭಾರತೀಯ ಮೂಲದ ಮೂವರು ಆಟಗಾರರು ಈ ಸಲ ತಮ್ಮ ಕೌಶಲ್ಯವನ್ನು ಪ್ರದರ್ಶಿಸಲು ಸಿದ್ಧರಾಗಿದ್ದಾರೆ.

ನಿಯಾಲ್ ಮೇಸನ್ (ಕತಾರ್): 29 ವರ್ಷದ ನಿಯಾಲ್ ಮೇಸನ್ ಜನಿಸಿದ್ದು ಇಂಗ್ಲೆಂಡ್‌ನಲ್ಲಿ. ಅವರ ತಾಯಿ ಭಾರತೀಯ ಮೂಲದವರಾದರೆ, ತಂದೆ ಅಮೇರಿಕನ್. ಮೇಸನ್ ಬಾಲ್ಯದಿಂದಲೂ ಫುಟ್ಬಾಲ್ ಬಗ್ಗೆ ಉತ್ಸಾಹ ಹೊಂದಿದ್ದರು. ತಮ್ಮ ಬಾಲ್ಯದ ವೃತ್ತಿಜೀವನದ ಆರಂಭಿಕ ಸಮಯದಲ್ಲಿ, ಸ್ಪೇನ್, ಇಂಗ್ಲೆಂಡ್ ಮತ್ತು ಕತಾರ್‌ನಲ್ಲಿ ಫುಟ್ಬಾಲ್ ಆಡಿದ್ದಾರೆ. 2021ರಲ್ಲಿ ಕತಾರ್‌ಗೆ ತೆರಳಿದ ಅವರು ಅದ್ಭುತ ಪ್ರದರ್ಶನಗಳ ಬಲದಿಂದ ಹಿರಿಯರ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಗಳಿಸಿದ್ದು, ಇದೀಗ ವಿಶ್ವಕಪ್‌ನಲ್ಲೂ ಸ್ಥಾನ ಪಡೆದುಕೊಂಡಿದ್ದಾರೆ.

ತಹ್ಸಿನ್ ಮೊಹಮ್ಮದ್ (ಕತಾರ್): ಕೇರಳದ ಕಣ್ಣೂರಿನ ಪೋಷಕರಿಗೆ ದೋಹಾದಲ್ಲಿ ಹುಟ್ಟಿ ಬೆಳೆದ 19 ವರ್ಷದ ತಹ್ಸಿನ್ ಮೊಹಮ್ಮದ್ ಕತಾರ್ ತಂಡದ ಪರ ಫಿಫಾ ವಿಶ್ವಕಪ್ ಆಡಲಿದ್ದಾರೆ. ಕತಾರ್ ಸ್ಟಾರ್ಸ್ ಲೀಗ್‌ನಲ್ಲಿ ಆಡಿದ ಮೊದಲ ಭಾರತೀಯ ಮೂಲದ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದು, ಅಲ್ ದುಹೈಲ್ ಪರ ಕ್ಲಬ್ ಫುಟ್ಬಾಲ್ ಆಡುತ್ತಿದ್ದಾರೆ. ಅಫಘಾನಿಸ್ತಾನ ವಿರುದ್ಧದ ವಿಶ್ವಕಪ್ ಅರ್ಹತಾ ಪಂದ್ಯದಲ್ಲಿ ಅವರು ತಮ್ಮ ಹಿರಿಯರ ತಂಡಕ್ಕೆ ಚೊಚ್ಚಲ ಪ್ರವೇಶ ಮಾಡಿದರು.

ಸಪ್ರೀತ್ ಸಿಂಗ್ (ನ್ಯೂಜಿಲೆಂಡ್): ಸಪ್ರೀತ್ ಸಿಂಗ್ ಅವರ ಪೋಷಕರು ಪಂಜಾಬಿ ಮೂಲದವರು, ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ಜನಿಸಿದವರು. ಜರ್ಮನಿ, ಪೋರ್ಚುಗಲ್ ಮತ್ತು ಸರ್ಬಿಯಾ ದಾದ್ಯಂತ ಯುರೋಪ್‌ನಲ್ಲಿ ಸುಮಾರು ಏಳು ವರ್ಷಗಳ ಕಾಲ ಆಡಿದ್ದರು. ನ್ಯೂಜಿಲೆಂಡ್ ತಂಡಕ್ಕಾಗಿ ಮಿಡ್‌ಫೀಲ್ಡರ್ ಆಗಿ ಆಡಲಿದ್ದಾರೆ. ಇಲ್ಲಿಯ ವರೆಗೆ ಅವರು ತಂಡಕ್ಕಾಗಿ 26 ಪಂದ್ಯಗಳನ್ನು ಆಡಿದ್ದು, ಈ ವೇಳೆ 3 ಗೋಲುಗಳನ್ನು ಗಳಿಸಿದ್ದಾರೆ.

ಪಂದ್ಯ ಗೆದ್ದರೆ ಅಯ್ಯರ್ ತಂಡದ ಪ್ಲೇಆಫ್ ಆಸೆ ಜೀವಂತ | ಲಖನೌ ಪಾಲಿಗೆ ಔಪಚಾರಿಕ ಪಂದ್ಯ

ಇಂದು ಪಂಜಾಬ್ ಕಿಂಗ್ಸ್ ಲಖನೌ ಜೈಂಟ್ಸ್ ಹಣಾಹಣಿ

ಲಖನೌ: ಇಲ್ಲಿನ ಏಕನಾ ಕ್ರಿಕೆಟ್ ಸ್ಟೇಡಿಯಂನಲ್ಲಿ ಇಂದು ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಆತಿಥೇಯ ಲಖನೌ ಸೂಪರ್ ಜೈಂಟ್ಸ್ ತಂಡವು ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ಇಂದಿನ ಪಂದ್ಯವು ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ಪಾಲಿಗೆ ನಿರ್ಣಾಯಕವಾಗಿದ್ದು, ಪಂದ್ಯ ಗೆದ್ದರೆ ಅದರ ಪ್ಲೇ ಆಫ್ ಆಸೆ ಇನ್ನೂ ಜೀವಂತವಾಗಿರಲಿದೆ. ಈ ವರೆಗೆ 13 ಪಂದ್ಯಗಳನ್ನು ಆಡಿರುವ ಪಂಜಾಬ್, 6 ಪಂದ್ಯಗಳನ್ನು ಗೆದ್ದು, 6 ಪಂದ್ಯಗಳಲ್ಲಿ ಸೋತು ಮತ್ತು 1 ಪಂದ್ಯದಲ್ಲಿ ಮಳೆಯಿಂದಾಗಿ ಫಲಿತಾಂಶ ಪಡೆಯಲಾರದೆ 13 ಅಂಕಗಳನ್ನು ಸಂಪಾದಿಸಿದೆ. ಲಖನೌ ವಿರುದ್ಧದ ಇಂದಿನ ಪಂದ್ಯದಲ್ಲಿ ಪಂಜಾಬ್ ಗೆದ್ದು, ಭಾನುವಾರ ನಡೆಯಲಿರುವ ಮುಂಬೈ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನ ತಂಡ ಸೋತರೆ ಪಂಜಾಬ್‌ಗೆ ಪ್ಲೇಆಫ್ ಅವಕಾಶದ ಬಾಗಿಲು ಬಹಳ ಸುಲಭವಾಗಿ ತೆರೆಯಲಿದೆ.

ಆದರೆ ಶನಿವಾರ ನಡೆಯಲಿರುವ ಪಂದ್ಯವು ಲಖನೌ ಸೂಪರ್ ಜೈಂಟ್ಸ್ ಮಟ್ಟಿಗೆ ಬರೀ ಔಪಚಾರಿಕ ಎನಿಸಲಿದೆ. ಈಗಾಗಲೇ 13 ಪಂದ್ಯಗಳನ್ನು ಆಡಿರುವ ರಿಷಬ್ ಪಂತ್ ನಾಯಕತ್ವದ ಲಖನೌ ತಂಡವು ಕೇವಲ 4ರಲ್ಲಿ ಮಾತ್ರ ಗೆದ್ದು, 9ರಲ್ಲಿ ಸೋತು ಅಂಕಪಟ್ಟಿಯಲ್ಲಿ 8 ಅಂಕಗಳನ್ನಷ್ಟೇ ಗಳಿಸಲು ಸಾಧ್ಯವಾಗಿದೆ.

ಪಂಜಾಬ್ ತಂಡವು ಈ ಸಲದ ಆರಂಭದ ಪಂದ್ಯಗಳಲ್ಲಿ ಅಜೇಯವಾಗಿಯೇ ಮುನ್ನಡೆದಿತ್ತು. ಮೊದಲ 6 ಪಂದ್ಯಗಳನ್ನು ನಿರಂತರವಾಗಿ ಗೆದ್ದಿತ್ತು. ಆದರೆ ಆ ಬಳಿಕ 6 ಪಂದ್ಯಗಳನ್ನು ನಿರಂತರವಾಗಿ ಸೋತು ತನ್ನ ಆತ್ಮವಿಶ್ವಾಸವನ್ನೇ ಕಳೆದುಕೊಂಡ ಸ್ಥಿತಿಯನ್ನು ಇದೀಗ ಎದುರಿಸುತ್ತಿದೆ.

ಲಖನೌ ತಂಡ ತನ್ನ ಮೊದಲ ಪಂದ್ಯದಲ್ಲೇ ಆರ್‌ಸಿಬಿ ವಿರುದ್ಧ ಮುಗ್ಗರಿಸಿರುವುದೂ ಸೇರಿದಂತೆ ಹೆಚ್ಚಿನ ಗೆಲುವಿನ ಅವಕಾಶಗಳನ್ನು ಪಡೆಯಲು ಈ ಆವೃತ್ತಿಯ ಐಪಿಎಲ್‌ನಲ್ಲಿ ಅದಕ್ಕೆ ಸಾಧ್ಯವಾಗಲಿಲ್ಲ. ಆ ಕಾರಣಕ್ಕಾಗಿಯೇ ಅದು ಈ ಬಾರಿ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆಯುವಂತಾಯಿತ್ತಲ್ಲದೆ, ಭಾರೀ ಟೀಕೆಯನ್ನೂ ಎದುರಿಸುವಂತಾಯಿತು.

ಇಂದಿನ ಪಂದ್ಯ
ಪಂಜಾಬ್-ಲಖನೌ
ಸಮಯ: ರಾತ್ರಿ 7.30
ಸ್ಥಳ: ಏಕನಾ ಸ್ಟೇಡಿಯಂ, ಲಖನೌ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್: ಜಿಯೋ ಹಾಟ್‌ಸ್ಟಾರ್

ಆಸೀಸ್ ವಿರುದ್ಧದ ಸರಣಿಗೆ ಪಾಕಿಸ್ತಾನ ತಂಡ ಪ್ರಕಟ

ದೆಹಲಿ: ಆಸ್ಟ್ರೇಲಿಯಾ ವಿರುದ್ಧದ ಮುಂಬರುವ ಮೂರು ಪಂದ್ಯಗಳ ಏಕದಿನ ಸರಣಿಗೆ ಪಾಕಿಸ್ತಾನದ 15 ಸದಸ್ಯರ ತಂಡವನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಪ್ರಕಟಿಸಿದೆ. ತಂಡದ ನಾಯಕತ್ವವನ್ನು ಶಾಹೀನ್ ಅಫ್ರಿದಿಗೆ ವಹಿಸಲಾಗಿದೆ. ಆಸ್ಟ್ರೇಲಿಯಾ ವಿರುದ್ಧದ ಸರಣಿಗೆ ಹಲವು ಹಿರಿಯ ಆಟಗಾರರು ತಂಡಕ್ಕೆ ಮರಳಿದ್ದಾರೆ. ಬಾಬರ್ ಆಝಮ್, ಶದಾಬ್ ಖಾನ್, ನಸೀಮ್ ಶಾ ಮತ್ತು ಹ್ಯಾರಿಸ್ ರೌಫ್ ಅವರನ್ನು ತಂಡದಲ್ಲಿ ಸೇರಿಸಲಾಗಿದೆ.

ನೀಲ್ ವಿರುದ್ಧ ಮುನಿದ ಅಭಿಮಾನಿಗಳು

ಕೆಜಿಎಫ್, ಸಲಾರ್ ಬಳಿಕ ನಿರ್ದೇಶಕ ಪ್ರಶಾಂತ್ ನೀಲ್ ಡ್ರಾಗನ್ ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದಾರೆ. ಈ ಚಿತ್ರದಲ್ಲಿ ಜೂ.ಎನ್‌ಟಿಆರ್ ನಾಯಕಾಗಿ ನಟಿಸುತ್ತಿದ್ದು, ಹೊಸ ಅವತಾರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ತಾರಕ್ ಹುಟ್ಟುಹಬ್ಬದ ಪ್ರಯುಕ್ತ ಡ್ರಾಗನ್ ಸಿನಿಮಾದ ಗ್ಲಿಂಪ್ಸ್ ಬಿಡುಗಡೆಯಾಗಿತ್ತು. ಇದರಲ್ಲಿ ಡ್ರಾಗನ್ ಲೋಕದ ಅನಾವರಣವಾಗಿತ್ತು. ಕೆಜಿಎಫ್, ಸಲಾರ್ ಮೀರಿಸುವಂತೆ ಈ ಸಿನಿಮಾದ ಗ್ಲಿಂಪ್ಸ್ ಮೂಡಿಬಂದಿತ್ತು. ಡ್ರಾಗನ್ ಗ್ಲಿಂಪ್ಸ್ ನೋಡಿ ಅಭಿಮಾನಿಗಳು ಖುಷಿಯಾಗಿದ್ದರು. ಆದರೆ ತಮ್ಮ ನೆಚ್ಚಿನ ನಟನ ಅವತಾರ ನೋಡಿ ಬೇಸರ ಮಾಡಿಕೊಂಡಿದ್ದರು. ಅದಕ್ಕೆ ಕಾರಣ ಇಷ್ಟೇ, ತಾರಕ್ ಈ ಹಿಂದಿನ ಸಿನಿಮಾಗಳಲ್ಲಿ ಅದ್ದೂರಿಯಾಗಿ ಮಿಂಚಿದ್ದರು. ಆದರೆ ಡ್ರಾಗನ್‌ನಲ್ಲಿ ತಾರಕ್ ಹೊಸ ಅವತಾರದಲ್ಲಿ ಕಾಣಿಸಕೊಂಡಿದ್ದಾರೆ. ಈ ಚಿತ್ರದಲ್ಲಿ ತಾರಕ್ ಹಿಂದಿನ ಸಿನಿಮಾಗಳಿಂತ ಡಿಫರೆಂಟ್



ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಇದನ್ನು ನೋಡಿ ಕೆಲವರು ತಾರಕ್‌ಗೆ ಅನಾರೋಗ್ಯವೇ ಎಂದುಕೊಂಡಿದ್ದರು. ಆದರೆ ಜೂ.ಎನ್‌ಟಿಆರ್ ಸಿನಿಮಾದ ಪಾತ್ರಕ್ಕೆ ತಕ್ಕಂತೆ ತೂಕ ಇಳಿಸಿಕೊಂಡಿದ್ದು, ಹೊಸತಾಗಿ ಕಾಣಿಸಿಕೊಂಡಿದ್ದಾರೆ. ಡ್ರಾಗನ್‌ಗಾಗಿ ಪ್ರಶಾಂತ್ ನೀಲ್ ಹೊಸ ಸಾಮ್ರಾಜ್ಯವನ್ನೇ ಕಟ್ಟಿದ್ದಾರೆ. ಇದರಲ್ಲಿ ತಾರಕ್ ನಾಯಕ ಅನ್ನೋದಕ್ಕಿಂತ ವಿಲನ್ ಅನ್ನಬಹುದು. ಡ್ರಾಗನ್ ಸಾಮ್ರಾಜ್ಯದಲ್ಲಿ ನಡೆಯುವ ಆಗು ಹೋಗುಗಳಿಗೆ ಅವರೇ ಕಾರಣರಾಗುತ್ತಾರೆ. ಅದು ಯಾಕೆ ಎನ್ನವುವುದೇ ಸಿನಿಮಾದ ಕಥೆ.

ಧುರಂಧರ್ ಸ್ಫೂರ್ತಿ

ಡ್ರಾಗನ್‌ನಲ್ಲಿ ಕೆಜಿಎಫ್ ಹಾಗೂ ಸಲಾರ್ ಚಾಪು ಇದೆ. ಅದ್ದೂರಿ ಆ್ಯಕ್ಷನ್ ಕೂಡ ಬೆರೆತಿದೆ. ನಾಯಕ ತನ್ನ ವಿರುದ್ಧ ಸೆಟೆದು ನಿಲ್ಲುವ ದುರುಳರನ್ನು ಮುಲಾಜಿಲ್ಲದೆ ಯಮಪುರಿಗಟ್ಟುತ್ತಾರೆ. ಇದೆಲ್ಲವೂ ಗ್ಲಿಂಪ್ಸ್‌ನಲ್ಲಿದೆ. ಈಗ ನಾಯಕನಂತೆ ವಿಲನ್ ಪಾತ್ರಕ್ಕೂ ಸಾಮಕಷ್ಟು ಮಹತ್ವವಿದೆ. ಹಾಗಾಗಿ ಇಲ್ಲಿ ತಾರಕ್ ವಿಲನ್ ಪಾತ್ರ ನಿರ್ವಹಿಸಿದ್ದಾರೆ. ಇದಕ್ಕೆ ಧುರಂಧರ್ ಸಿನಿಮಾವೇ ಸ್ಫೂರ್ತಿ ಎನ್ನಲಾಗುತ್ತಿದೆ. ಯಾಕೆಂದರೆ ಧುರಂಧರ್‌ನಲ್ಲಿ ರಣವೀರ್ ಸಿಂಗ್ ನಿರ್ವಹಿಸಿದ ರೀತಿಯ ಪಾತ್ರವನ್ನು ಇಲ್ಲಿ ತಾರಕ್ ನಿರ್ವಹಿಸಿದ್ದಾರೆ ಎನ್ನಲಾ ಗುತ್ತಿದೆ.

ಪವರ್ ಫುಲ್ ರುಕ್ಕು

ಇಲ್ಲಿ ರುಕ್ಮಿಣಿ ವಸಂತ್ ಪವರ್ ಫುಲ್ ಪಾತ್ರ ನಿರ್ವಹಿಸಿ ದ್ದಾರೆ. ಕೆಜಿಎಫ್‌ನಲ್ಲಿ ಶ್ರೀನಿಧಿ ಶೆಟ್ಟಿ ನಿರ್ವಹಿಸಿದ್ದ ಪಾತ್ರದಂತೆ ಈ ಪಾತ್ರವೂ ಭಾಸವಾ ಗುತ್ತದೆ. ರುಕ್ಮಿಣಿ ವಸಂತ್ ನಾಯಕನ ಪೂರ್ವಪರವನ್ನು ವಿವರಿಸುವ ಸನ್ನಿವೇಶ ಗ್ಲಿಂಪ್ಸ್‌ನಲ್ಲಿ ಗಮನಸೆಳೆ ಯುತ್ತದೆ. ಒಟ್ಟಾರೆ ಡ್ರಾಗನ್ ಹೈವೋಲ್ಟೇಜ್ ಸಿನಿಮಾವಾಗಿದೆ ಎಂಬುದು ಗ್ಲಿಂಪ್ಸ್‌ನಲ್ಲಿ ತಿಳಿಯುತ್ತದೆ.

ಪೆದ್ದಿ ಜತೆ ಹೆಜ್ಜೆ ಹಾಕಿದ ಶ್ರುತಿ

ರಾಮ್ ಚರಣ್ ಅಭಿನಯದ ಪೆದ್ದಿ ಟೀಸರ್ ನಲ್ಲಿ ಸಖತ್ ಸದ್ದು ಮಾಡುತ್ತಿದೆ. ರಾಮ್ ಚರಣ್ ಅವತಾರ ನೋಡಿ ಸಿನಿಪ್ರಿಯರು ಖುಷಿಯಾಗಿದ್ದಾರೆ. ಈಗಾಗಲೇ ಪೆದ್ದಿಯ ಎರಡು ಹಾಡುಗಳು ಬಿಡುಗಡೆಯಾಗಿದ್ದು ಸೂಪರ್ ಹಿಟ್ ಆಗಿವೆ. ಈಗ ಮತ್ತೊಂದು ಹಾಡು ಬಿಡುಗಡೆಗೆ ರೆಡಿಯಾಗಿದೆ. ಹಲ್ಲಲ್ಲೋ... ಎಂಬ ಹಾಡು ಇದಾಗಿದ್ದು, ಎ.ಆರ್.ರೆಹಮಾನ್ ಸಂಗೀತ ಈ ಹಾಡಿಗೆ ಹೊಸತನ ತುಂಬಿದೆ. ರಾಮ್ ಚರಣ್, ಜತೆಯಾಗಿ ಶ್ರುತಿ ಹಾಸನ್ ಹಾಗೂ ಜಾನ್ವಿ ಕಪೂರ್ ಭರ್ಜರಿಯಾಗಿ ಹೆಜ್ಜೆ ಹಾಕಿದ್ದಾರೆ. ಶ್ರುತಿ ಹಾಗೂ ಜಾನ್ವಿ ಗ್ಲಾಮರಸ್ ಲುಕ್ ನಲ್ಲಿ ಮಿಂಚಿದ್ದಾರೆ.

ಸ್ಟೈಲಿಶ್ ಲುಕ್ ನಲ್ಲಿ ಮಿಂಚಿರುವ ರಾಮ್ ಚರಣ್ ಹಲವು ಸಹ ಕಲಾವಿದರ ಜತೆಗೆ ಡ್ಯಾನ್ಸ್ ಮಾಡಿದ್ದಾರೆ.

ಪೆದ್ದಿ ಗ್ರಾಮೀಣ ಭಾಗದ ಕಥೆಯನ್ನು ಒಳಗೊಂಡಿದ್ದು, ಕ್ರಿಕೆಟ್ ಜತೆಗೆ ಕುಸ್ತಿಯ ಕಥೆಯನ್ನು ಒಳಗೊಂಡಿದೆ. ರಾಮ್ ಚರಣ್ ಬ್ಯಾಟ್ ಹಿಡಿದು ಅಬ್ಬರಿಸಿದ್ದು ಪೈಲ್ವಾನ್ ಲುಕ್ ನಲ್ಲಿ ಕಂಗೊಳಿಸಿದ್ದಾರೆ. ಹ್ಯಾಟ್ರಿಕ್ ಹೀರೊ ಶಿವರಾಜ್‌ಕುಮಾರ್ ಗರಡಿ ಮನೆಯ ಉಸ್ತಾದು ಆಗಿ ಕಂಗೊಳಿಸಿದ್ದಾರೆ. ಬುಚ್ಚಿಬಾಬು ಸನಾ ನಿರ್ದೇಶನದ ಪೆದ್ದಿ ಅದ್ದೂರಿಯಾಗಿ ನಿರ್ಮಾಣವಾಗಿದೆ. ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಿರುವ ಪೆದ್ದಿ ಜೂನ್ 4 ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ.

ಲವ್ ಸೀಸನ್‌ನ ಪ್ರೀತಿಯಾನ

ನವಿರಾದ ಪ್ರೇಮಕತೆಯ ಲವ್ ಸೀಸನ್ಸ್ ಚಿತ್ರದ ಹಾಡು ಸೋಷಿಯಲ್ ಮಿಡಿಯಾದಲ್ಲಿ ಟ್ರೆಂಡ್ ಸೃಷ್ಟಿಸಿತ್ತು. ಈಗ ಈ ಚಿತ್ರದ ಮತ್ತೊಂದು ಹಾಡು ಬಿಡುಗಡೆಯಾಗಿದೆ. ಸಂಗೀತ ಪ್ರಿಯರು ಹಾಡು ಕೇಳಿ ಖುಷಿಯಾಗಿದ್ದಾರೆ. ಹೊಸದೊಂದು ಪ್ರೀತಿಯಾನ ಎಂಬ ಲಿರಿಕಲ್ ಸಾಂಗ್ ಇದಾಗಿದ್ದು, ಸಿನಿಪ್ರಿಯರ ಮನದಲ್ಲಿ ಗುನುಗನಿಸುವಂತಿದೆ. ಹೊಸದೊಂದು ಪ್ರೀತಿ ಯಾನ ಏನೆಂದರು ಚೆನ್ನ. ದಿನವೆಲ್ಲ ಮಾಡುತ್ತೀನಿ ನಾ ನಿನ್ನದೆ ಧ್ಯಾನ... ಎಂಬ ಸಾಲುಗಳಿರುವ ಈ ಗೀತೆಯನ್ನು ಧನಂಜಯ್ ರಂಜನ್ ಬರೆದಿದ್ದು, ವೀರ್ ಸಮರ್ಥ್ ಸಂಗೀತ ಸಂಯೋಜಿಸಿದ್ದಾರೆ. ಕೇಶವ್ ಆನಂದ್ ಕಂಠಸಿರಿಯಲ್ಲಿ ಹಾಡು ಮಧುರವಾಗಿ ಮೂಡಿಬಂಸದಿದೆ. ಮುಕುಂದ ರಾಮಸ್ವಾಮಿ ಮತ್ತು ಶ್ವೇತಾ ಕೊಗ್ಲೂರು ಈ ಹಾಡಿನಲ್ಲಿ ಮನ ಕಾಣಿಸಿಕೊಂಡಿದ್ದಾರೆ. ಲವಲವಿಕೆಯ ಧಾಟಿಯಲ್ಲಿ ಪ್ರೇಮದ ಭಾವಗಳನ್ನು ಕಟ್ಟಿ ಕೊಟ್ಟಂತಿರುವ ಈ ಗೀತೆ ಸೂಪರ್ ಹಿಟ್ ಗೀತೆಗಳ ಸಾಲಿಗೆ ಸೇರಲಿದೆ ಎಂಬ ಭರವಸೆ ಇದೆ.

ಮುಕುಂದ ರಾಮಸ್ವಾಮಿ ಚಿತ್ರ ನಾಯಕನಾಗಿ ನಟಿಸಿದ್ದು, ದಿಯಾ ಕೀರ್ತಿ, ಚಂದನಾ ಗೌಡ ಮತ್ತು ಶ್ವೇತಾ ಕೊಗ್ಲೂರು ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಮಂಡ್ಯ ರಮೇಶ್, ರಾಜೇಶ್ ನಟರಂಗ, ಸಂಗೀತಾ ಅನಿಲ್, ಜಯತೀರ್ಥ, ಚೇತನ್ ದುರ್ಗ, ಕಾಮಿಡಿ ಕಿಲಾಡಿ ಸದಾನಂದ, ಹುಲಿ ಕಾರ್ತಿಕ್, ಬೇಬಿ ರಿತು ಸಿಂಗ್ ಮುಂತಾದವರು ತಾರಾಗಣದಲ್ಲಿದ್ದಾರೆ.

ದೊಡ್ಮನ್ಸನ ಹೊಸ ಹಾಡು

ಶರತ್ ಕೃಷ್ಣ ನಿರ್ದೇಶನದಲ್ಲಿ ಸಿದ್ಧವಾಗಿರುವ ದೊಡ್ಮನ್ಸ ಚಿತ್ರದ ಪ್ರಣಯ ಗೀತೆ ರಿಲೀಸ್ ಆಗಿದೆ. ಆ ನೀರಿನ ಸದ್ದಲ್ಲಿ, ಪ್ರೇಮಿಗಳಿಬ್ಬರ ಗೀತೆ ಮನಸ್ಸಿಗೆ ಮುದ ನೀಡುವಂತಿದೆ. ಈ ಹಾಡಿನಲ್ಲಿ ಶರತ್ ಹಾಗೂ ರೇಷ್ಮಾ ಅದ್ಭುತವಾಗಿ ಕಂಗೊಳಿಸಿದ್ದಾರೆ. ಗುಜರಾತ್ ನಲ್ಲಿ ಹಾಡಿನ ಚಿತ್ರೀಕರಣ ನಡೆಸಲಾಗಿದೆ.

ದೊಡ್ಮನ್ಸ ಎಂಬ ಟೈಟಲ್ ನೋಡೋಕೆ ಖುಷಿಯಾಗುತ್ತೆ. ವಿಷ್ಣು ಸರ್ ನಟಿಸಬೇಕಿದ್ದ ಸಿನಿಮಾದ ಟೈಟಲ್ ನಮಗೆ ಸಿಕ್ಕಿದ್ದು ಬಹಳ ಖುಷಿಯಾಗಿದೆ. ನಾರಾಯಣ್ ಅವರೇ ಚಿತ್ರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ದೊಡ್ಡ ಮನ್ಸ, ದೊಡ್ಡ ಮನಸ್ಸಿದ್ದೋನೆ ದೊಡ್ಮನ್ಸ ಅನ್ನೋದನ್ನ ಹೇಳುವ ರೀತಿಯ ಕಥೆ ಇದು. ಎಲ್ಲಾ ಸೇರಿದಾಗ ಒಂದು ದೊಡ್ಮನ್ಸ ಸಿನಿಮಾ ಆಗುತ್ತದೆ ಎಂದು ನಿರ್ದೇಶಕ ಶರತ್ ಕೃಷ್ಣ ಹೇಳಿದರು.

ತುಂಬಾ ಇಷ್ಟಪಟ್ಟು, ತುಂಬಾ ಭರವಸೆಯನ್ನು ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇವೆ. ನಾವೂ ಕಂಡ ಕನಸನ್ನ ನನಸು ಮಾಡಿಕೊಳ್ಳುವುದಕ್ಕೆ ಅಡ್ಡಿಯಾಗುವುದೆಲ್ಲವನ್ನು ಮೀರಿ ಗೆಲ್ಲುವುದೇ ಜೀವನ. ನಾನು ಸ್ನೇಹಾ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಮಧ್ಯಮ ವರ್ಗದ ಹುಡುಗಿ ಆಟೋ ಡ್ರೈವರ್ ನ ಇಷ್ಟ ಪಟ್ಟಾಗ ಏನೆಲ್ಲಾ ಆಗುತ್ತೆ ಅನ್ನೋದನ್ನ ನನ್ನ ಪಾತ್ರದ ಮೂಲಕ ಹೇಳಲಾಗಿದೆ ಎಂದು ನಟಿ ರೇಷ್ಮಾ ಹೇಳಿದರು.

ಈ ಸಿನಿಮಾದಲ್ಲಿ ನನ್ನದು ಚಿಕ್ಕಪಾತ್ರವಾದರೂ ಬಹಳ ಪ್ರಾಮುಖ್ಯತೆ ಇದೆ ಎಂದು ನಟಿ ಶಿಲ್ಪಾ ಹೇಳಿದರು.

ದೊಡ್ಮನ್ಸ ಶೀರ್ಷಿಕೆಯಂತೆಯೇ ಸಿನಿಮಾ ಕೂಡ ದೊಡ್ಡದಾಗಿದೆ. ಒಳ್ಳೊಳ್ಳೆ ಕಂಟೆಂಟ್ ಜನರಿಗೆ ತಲುಪಬೇಕು ಅನ್ನೋದು ನಮ್ಮ ಆಸೆ. ಪ್ರತಿವೊಂದು ಹಂತದಲ್ಲೂ ಏನೇನು ಬೇಕೋ ಅದೆಲ್ಲವನ್ನು ನೀಡಿದ್ದೇವೆ ಎಂದು ವೇದಿಕ್ ವೀರ್ ತಿಳಿಸಿದರು.

ವೇದಿಕ್ ಕಾಸ್ಮೋಸ್ ಬ್ಯಾನರ್ ನಲ್ಲಿ ವೇದಿಕ್ ಚಿತ್ರ ನಿರ್ಮಾಣ ಮಾಡಿದ್ದಾರೆ.